ಸಂವಾದ

ಜೂನ್ ೨೦೦೫ ರೂ. ೨೦

ಶಬ್ದವಿಲ್ಲದ ಯುದ್ಧ

- ಬರಗೂರು



ಶೂನ್ಯ ಬಂಡವಾಳ-ಸಮೃದ್ಧ ಬೆಳೆ

ಪಾಳೇಕರರ ಜೀವಾಮೃತ

ಸಂವಾದ

ಮಾಸ ಪತ್ರಿಕೆ

ಸಂಪುಟ ೩ ಸಂಚಿಕೆ ೮

ಜೂನ್ ೨೦೦೫

ಸಂಪಾದಕ :

ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :

ಡಾ॥ ನಟರಾಜ್ ಹುಳಿಯಾರ್

ಪ್ರೊ॥ ರಹಮತ್ ತರೀಕೆರೆ

ಕೆ. ಪುಟ್ಟಸ್ವಾಮಿ

ಡಿ. ಡೊಮಿನಿಕ್

ಬಿ.ಯು. ಸುಮಾ

ಡಾ॥ ಜಿ. ಪಾಂಡುನಾಯಕ್

ಎನ್. ಕೆ. ಹನುಮಂತಯ್ಯ

ವಿಳಾಸ : ಸ್ಫೂರ್ತಿಧಾಮ

ಅಂಜನಾನಗರ, ಮಾಗಡಿರಸ್ತೆ

ವಿಶ್ವನೀಡಂ ಅಂಚೆ

ಬೆಂಗಳೂರು - ೫೬೦ ೦೯೧

✆ ೨೩೨೮೭೯೪೩ / ೯೪೪೮೦ ೪೮೩೦೬

ಇ-ಮೇಲ್ ವಿಳಾಸ : **samvaada@yahoo.co.in**

PRINTED AND PUBLISHED BY

S.R. GOVINDU

ON BEHALF OF SPOORTHIDHAMA

ANJANANAGAR, MAGADI ROAD

VISHWANEEDAM POST

BANGALORE - 560 091

✆ 080-23287943, 94480 48306

e- mail : samvaada@yahoo.co.in

EDITOR :

INDUDHARA HONNAPURA

ಒಳಪುಟಗಳಲ್ಲಿ...



❑ ಪತ್ರಗಳು ೩

❑ ವಿಶೇಷಾಂಕ ಪತ್ರಗಳು ೪

❑ ಅಂತರಂಗ ೫

❑ ಜಾತಿ ಗಣರಾಜ್ಯಗಳ ರಾಜಕಾರಣ : ಪ್ರತಿಕ್ರಿಯೆ ೬
○ ಎಚ್.ಎಸ್. ದೊರೆಸ್ವಾಮಿ

❑ ಪರ್ಯಾಯ ರಾಜಕಾರಣ
ಏಕೆ ? ಹೇಗೆ ? : ಪ್ರತಿಕ್ರಿಯೆ ೭
○ ಡಾ॥ ಮನೋಹರ ಯಾದವ

❑ ಶರ್ಮರ ಕಾವ್ಯತತ್ವ ಮತ್ತು ಆಚಾರ ೮
○ ರಾಮಲಿಂಗಪ್ಪ ಟಿ. ಬೇಗೂರು

❑ ಶಬ್ದವಿಲ್ಲದ ಯುದ್ಧ ೧೦
○ ಪ್ರೊ॥ ಬರಗೂರು ರಾಮಚಂದ್ರಪ್ಪ

❑ ಹೊಸ ಪುಸ್ತಕ ೧೫

❑ ಅದ್ವೈತದ ಸಮನ್ವಯ ೧೬
○ ಪದ್ಮಾಲಯಾ ನಾಗರಾಜ

❑ ಶೂನ್ಯ ಬಂಡವಾಳ - ಸಮೃದ್ಧ ಬೆಳೆ
ಪಾಳೇಕರರ ಜೀವಾಮೃತ ೨೨
○ ಸ್ವಾಮಿ ಆನಂದ್ .ಆರ್

❑ ಜಾಗತೀಕರಣ ಮತ್ತು ದೇಸೀದಂಗೆ ೨೮
○ ಡಾ॥ ಅರವಿಂದ ಮಾಲಗತ್ತಿ

❑ ದಲಿತ್ ಡೈರಿ :
ಹಿಂಸಾತ್ಮಕ ದಲಿತ ಪ್ರತಿಭಟನೆ ೩೨
○ ಚಂದ್ರಭಾನ್ ಪ್ರಸಾದ್

❑ ಕುಲಂ : ಜಾಗತೀಕರಣವನ್ನೂ
ನಾಚಿಸುವ ಕುಲದ ಅನುರಣನ ೩೬
○ ಡಾ॥ ಕಾ.ವೆಂ. ಶ್ರೀನಿವಾಸಮೂರ್ತಿ

❑ ಶಿಕ್ಷಣ ಮತ್ತು ಪ್ರಾದೇಶಿಕ ಅಸಮತೋಲನ ೩೮
○ ಶಿವರಾಜ ಬಿ.ಕೆ. ಮತ್ತು ವಿಠೋಬ ಭೀಮಣ್ಣ

❑ ಬುದ್ಧಾಯಣ : ಬಹುಜನರ ಹಿತಕ್ಕಾಗಿ,
ಸುಖಕ್ಕಾಗಿ ಬದುಕಿದಾತನೆ ಮಹಾತ್ಮ ೪೨
○ ಸಿ.ಎಚ್. ರಾಜಶೇಖರ್



ಕವನಗಳು : ❑ ಕಾಮ - ೬ ❑ ಸುತ್ತಿಗೆ ಸಪ್ಪಳ - ೧೪
❑ ಒಡಹುಟ್ಟುಗಳು - ೨೧ ❑ ರಿಯಾಯ್ತಿ - ೨೧

ಮುಖಪುಟ ಕಲೆ : ಬಿಹಾರದಲ್ಲಿ ದೊರೆಯುವ ಚಿನ್ನದ 'ಸಿಕ್ಕಿ' ಹುಲ್ಲಿನಿಂದ ತಯಾರಿಸಲಾದ ಬೊಂಬೆ. ಹುಲ್ಲನ್ನು ಸೀಳಿ ಬಣ್ಣ ಹಚ್ಚಿ ನಂತರ ಬೊಂಬೆಯನ್ನು ಹೆಣೆಯಲಾಗುತ್ತದೆ. ವಿನ್ಯಾಸ : ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಪತ್ರಾಗಾರ

ಗಂಡಸಾದರೆ ನಿನ್ನ ಬಲಿಕೊಡುವೆ ಏನು ?

ಮಾನ್ಯ ಸಂಪಾದಕರಲ್ಲಿ....

'ಸಂವಾದ'ವು ತಿಂಗಳಿಂದ ತಿಂಗಳಿಗೆ ಒಳ್ಳೆಯ ಗುಣಮಟ್ಟವನ್ನು ಕಾಪಾಡಿಕೊಂಡು ಬರುತ್ತಿರುವುದು ಸಂತೋಷದ ಸಂಗತಿ. ಅದರಲ್ಲೂ 'ಸಕಲ ಜೀವರಾಶಿಗೆ ಲೇಸ ಬಯಸುವ' ದಲಿತ ಮೌಲ್ಯದ ಪನ್ನತಿಕೆಯನ್ನು 'ಸಂವಾದ' ಪ್ರೀತಿಯಿಂದ ಕೈಗೆತ್ತಿಕೊಂಡಿದೆ. ಧನ್ಯವಾದಗಳು.

ಪ್ರಸ್ತುತ ಕ್ಷೇಮದಡದಲ್ಲಿ ನಿಂತು ಕೊಡಗಟ್ಟಲೆ ಮಾತು ಸುರಿಯುವ ಪರ್ಯಾಯ, ಜಾತ್ಯಾತೀತ ಮುಂತಾದ ರಾಜಕಾರಣಿಗಳ ಬಗ್ಗೆ ಹೆಚ್ಚಿಗೆ ಹೇಳುವುದೇನಿದೆ ? ಆದರೆ ಮೊಗಳ್ಳಿ ಗಣೇಶರ ಚಿಂತನೆ ಇದಕ್ಕೆ ಅಪವಾದವೆಂಬಂತೆ ಮೌಲ್ಯ ಭರಿತವಾಗಿದೆ. ಮೇ ೨೦೦೫ರಲ್ಲಿ ಬಂದಿರುವ ಅವರ 'ದಲಿತರು ಮತ್ತು ಪರ್ಯಾಯ ರಾಜಕಾರಣ : ಪರ್ಯಾಯ ರಾಜಕಾರಣದ ತಾತ್ವಿಕತೆ' ಎಂಬ ಅವರ ಲೇಖನವು ಮೊಗಳ್ಳಿಯವರ ಚಿಂತನಶೀಲತೆಗೆ ಒಂದು ಮೈಲಿಗಲ್ಲು. ದಲಿತರದು ಅಖಂಡವಾದ ಜರಾಸಂಧ ಸಂಸ್ಕೃತಿ. ಅಲ್ಲಿ ಸೀಳುವುದಕ್ಕೆ ಎಡೆಯಿಲ್ಲ. ಆದ್ದರಿಂದ ಪರ್ಯಾಯಕ್ಕೆ ಹೊರಟಿರುವ ರಾಜಕಾರಣಿಗಳು ಮೊದಲು ಒಗ್ಗೂಡಿ ಮುನ್ನಡಿ ಇಡಬೇಕು. ಸದ್ಯದ ರಾಜಕಾರಣ ಸಂತೆಯಲ್ಲಿ ಹರಾಜಾಗಿ ಹೋಗದೆ ತಮ್ಮ ಐಡೆಂಟಿಟಿಯನ್ನು ಅವರು ಕಾಪಾಡಿಕೊಳ್ಳಬೇಕು. ಅದಕ್ಕಾಗಿ ಬುದ್ಧ, ಬಸವ, ಮಾವೋ, ಗಾಂಧಿ, ಅಂಬೇಡ್ಕರ್ ಅವರ ಬೆಳಕಿನಲ್ಲಿ ಮುನ್ನಡೆಯಬೇಕು ಎಂಬುದರಲ್ಲಿ ಯಾರ ತಕರಾರೂ ಇಲ್ಲ. ಕಡೆಯಲ್ಲಿ ಮೊಗಳ್ಳಿಯವರು ಐದು ಸವಾಲುಗಳನ್ನು ಕೈಗೆತ್ತಿಕೊಂಡು ಪ್ರಯೋಗ ಮಾಡ ಬಹುದು ಎಂದೂ ಸೂಚಿಸಿದ್ದಾರೆ. ಆದರೆ ಉಳಿದ ನಾಲ್ಕು ಹಾಗಿರಲಿ, ಎರಡನೆಯ ಸವಾಲಾದ 'ಭೂ ಹಂಚಿಕೆ'ಯ ಮಾತು ಈ ರಾಷ್ಟ್ರದಲ್ಲಿ ಅಥವಾ ಯಾವುದೇ ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿಯಾದರೂ ಕಾರ್ಯಗತಗೊಳ್ಳುವ ಸಾಧ್ಯತೆ ಉಂಟೆ ? ಯಾಕೆಂದರೆ ಮನುಕುಲದ ಸರ್ವ ಸಮಸ್ಯೆಗಳಿಗೂ ಕಾರಣ ಈ ಭೂಮಿಯೇ. ಅದರ ಸುತ್ತಲೂ ನಮ್ಮೆಲ್ಲರ ಸಮಸ್ಯೆಗಳು ಗಿರಕಿ ಹೊಡೆಯುತ್ತಿರುತ್ತವೆ. ೩x೬ ಅಡಿ ಹೂಳಲು ಬೇಕಾದ ಭೂಮಿಯಿಂದ ಮೊದಲುಗೊಂಡು ಷಟ್ ಖಂಡಗಳನ್ನು ಗೆದ್ದು ಆಳುವ ಗರ್ವದವರೆಗೆ ಇದು ಭೂ ವ್ಯೋಮ ಪಾತಾಳಗಳನ್ನು ಆವರಿಸಿ ಮಿಕ್ಕು ಮೀರುತ್ತಿದೆ. ಕವಿವಾಣಿಯಲ್ಲಿ ಹೇಳುವುದಾರೆ ಈ ಸವಾಲು 'ಗಂಡಸಾದರೆ ನಿನ್ನ ಬಲಿ ಕೊಡುವೆ ಏನು ?' ಎಂದು ಬಲಿ ಬೇಡುತ್ತದೆ. ಆದ್ದರಿಂದ ಪರ್ಯಾಯ ರಾಜಕಾರಣಕ್ಕೆ ಹೊರಟವರು ಇಂಥ ತ್ಯಾಗ ಬಲಿದಾನಗಳಿಗೆ ಸಿದ್ಧವಾಗಿರಬೇಕು. ಆ ಮಾತಿರಲಿ. ಎರಡನೆಯದಾಗಿ ಮೊಗಳ್ಳಿಯವರು ಪರ್ಯಾಯ ರಾಜಕಾರಣದ ಬಗ್ಗೆ ಮಾತನಾಡುವಾಗ ಸಂಸ್ಕೃತಿ ಮರದ ತೊಗಟೆಯಂತಿರುವ ಆಯಾ ಭಾಷಾ ಬಳಕೆಯ ಬಗ್ಗೆ ಮಾತೆತ್ತದಿರುವುದು ಎದ್ದು ಕಾಣುವ ಕೊರತೆ ಎನಿಸುತ್ತದೆ.

ತಮ್ಮ ವಿಶ್ವಾಸಿ

ಪ್ರೊ|| ಶಿವರಾಮಯ್ಯ,
ಬೆಂಗಳೂರು

ಅವರ ಮಾತೆಲ್ಲ ಚಿನ್ನ - ಸ್ವಾಮಿ

ಶ್ರೀ ಇಂದೂಧರ ಹೊನ್ನಾಪುರ ಅವರಿಗೆ ನಮಸ್ಕಾರ.
ಶ್ರೀ ಚಿನ್ನಸ್ವಾಮಿಯವರ ಮೇಲಣ ಸಲಿಗೆ ಪ್ರೀತಿಯಿಂದ ಬರೆದೆ!

ಹೆಣ್ಣಲ್ಲದ ಗಂಡು
ಗಂಡಿಲ್ಲದ ಹೆಣ್ಣು
ಒಂದು ಮಹಾತ್ಮೆ - ದೊಡ್ಡ ಪವಾಡ!
ಈ ಪವಾಡ ನಿಜವಾದರೆ
ಹೆಣ್ಣು - ಗಂಡೆರಡರ ನಡುವಣ
ವ್ಯತ್ಯಾಸವಷ್ಟೇ ಅಲ್ಲ - ಸಂಬಂಧವೂ ಸುಳ್ಳು;
ಈ ಸಂಬಂಧ ಯಾವುದೂ ತನಗಿಲ್ಲ
ತಾನು ಸ್ವಯಂಭೂ(ತ)ವೆಂದು
ಆ ಸುಳ್ಳನ್ನೇ ನಿಜ ಮಾಡುವೆನೆಂದು
ತಲೆ ಬೋಳಿಸಿಕೊಂಡು
ಕಾವಿ ಉಟ್ಟುಕೊಂಡು
ಮೂಗು ಮುಚ್ಚಿಕೊಂಡು
ಓಂ ಓಮೆಂದು ಓ(ಂ)ಕರಿಸುತ್ತಿದ್ದರೆ-
ಆ ನಟನೆಯೆಲ್ಲಾ ಬಹಿರಂಗದ ಮೇಲೆಯೇ-
ಅಂತರಂಗದಲ್ಲಿ ರಾಸಲೀಲೆ!
ಹೀಗೆ
ಇರುವುದನ್ನು ಇಲ್ಲವೆನಿಸುವುದೊಂದು ಕೆಟ್ಟೇ ಕಾಂತ
ಇಲ್ಲದನ್ನು ಇರುವುದೆನಿಸುವುದೊಂದು ದುರಂತ!
ಈ ಏಕಾಂತ ದುರಂತವೊಂದೂ ಬೇಡ-
ಆಕಾಶದಲ್ಲೆಲ್ಲಾ ಹಾರಾಡಿ
ನಿಜಾಕಾಶದಲ್ಲಿ ಒಲುಮೆ ಮೂಡಿ
ಪ್ರಿಯತಮೆಯೊಡನೆ ಕೂಡಿ
ಚಿಗುರು ಹೂ ಹಣ್ಣಿನ ಮರದಲ್ಲಿ ಗೂಡು ಕಟ್ಟಿದರೆ
ಎಲ್ಲವೂ ಚಿನ್ನವೆಂದರು
ಕವಿ ಮೂಡ್ನಾಕೂಡು ಚಿನ್ನಸ್ವಾಮಿ! ಅವರ ಮಾತೆಲ್ಲ ಚಿನ್ನ - ಸ್ವಾಮಿ!

ನೋಡಿ 'ಸಂವಾದ' ಸಂಪುಟ ಮೂರು, ಸಂಚಿಕೆ ಏಳು.

ಡಾ|| ಎಲ್. ಬಸವರಾಜು, ಮೈಸೂರು.



ಚಂದಾ ವಿವರ

ಬಿಡಿ ಪ್ರತಿ ರೂ. ೨೦/-

೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ		
ರೂ. ೧೦೦/-	ರೂ. ೩೦೦/-	ರೂ. ೫೦೦/-
ನೌಕರರು ಮತ್ತು ವೃತ್ತಿಪರರಿಗೆ		
ರೂ. ೨೦೦/-	ರೂ. ೫೦೦/-	ರೂ. ೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ		
ರೂ. ೨೪೦/-	ರೂ. ೬೦೦/-	ರೂ. ೧೦೦೦/-
ವಿಶೇಷ ಹಿತೈಷಿ ಚಂದಾದಾರರಿಗೆ		
ರೂ.೫೦೦/-	ರೂ.೧೫೦೦/-	ರೂ.೨೫೦೦/-

ಅಜೀವ ಚಂದಾ ರೂ. ೫,೦೦೦/-
ಪೋಷಕ ಚಂದಾ ರೂ. ೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ. / ಡಿ.ಡಿ. ಮಾತ್ರ ಕಳುಹಿಸಬೇಕು.

ಮಾದರಿ ಅಂತರಂಗ

ಮಾನ್ಯ ಸಂಪಾದಕರಿಗೆ ವಂದನೆಗಳು.

ಜಾಗತೀಕರಣ, ಖಾಸಗೀಕರಣ, ಉದಾರೀಕರಣಗಳಿಗೆ ಪರಿಹಾರ ಉಪಾಯಗಳನ್ನು ಕಂಡುಕೊಳ್ಳದೇ 'ಉಚಿತ ಉಪದೇಶಗಳನ್ನು' ಹರಿಬಿಡುವ ವಿದ್ವಾಂಸ ಮಹಾಶಯರಿಗೆ ತಮ್ಮ ಮೇ ೨೦೦೫ರ ಸಂಚಿಕೆಯ ಸಂಪಾದಕೀಯ (ಅಂತರಂಗ) ಮಾದರಿಯಾಗಿತ್ತು.

ಸ್ಥಳೀಯ ಜ್ಞಾನ ನೆಲೆಗಳು, ಸಾಂಘಿಕ ಉತ್ಪಾದನಾ ವಿಧಾನಗಳು, ಸಹಕಾರಾತ್ಮಕ ಕೃಷಿ ಕಾರ್ಯಗಳು ನಮ್ಮ ಸಮಾಜದ ಸಾಂಪ್ರದಾಯಿಕ ಜೀವನ ವಿಧಾನಗಳಾಗಿವೆ. ಇವನ್ನು ದುರ್ಬಳಕೆ ಮಾಡಿಕೊಂಡು ಯಜಮಾನ ಸಂಸ್ಕೃತಿ, ಜಮೀನುದಾರೀ ಪದ್ಧತಿ, ಮಂತ್ರ-ವಾಮಾಚಾರಗಳು ಬೆಳೆದು ಬಂದಿದ್ದು ನಮ್ಮ ದೇಶದ ದುರಂತ. ಇವುಗಳನ್ನು ಪ್ರತ್ಯೇಕಿಸಿದರೆ ತ್ರಿಕರಣಗಳನ್ನು ಎದುರಿಸಬಹುದೇನೋ. ಇದಕ್ಕೆ ಒಂದು ಹೊಳಹು ಇದೇ ಸಂಚಿಕೆಯ ಸದಾನಂದ ಗಂಗನಬೀಡು ಅವರ ಪುರೋಹಿತಶಾಹಿಯ ಒಡಂಬಡಿಕೆ ಲೇಖನ.

ವಂದನೆಗಳು,

ಡಿ.ಎಂ. ನದಾಫ್, ಅಫಜಲಪುರ.

ದ್ವೇಷರಹಿತ ಸಂವಾದ

ಮಾನ್ಯರೇ,

ನಮಸ್ಕಾರಗಳು.

'ಸಂವಾದ' ಅತ್ಯುತ್ತಮವಾಗಿ ಮೂಡಿಬರುತ್ತಿದೆ. ಸಾಮಾಜಿಕ ತಿಳಿವಳಿಕೆಯನ್ನು ದ್ವೇಷರಹಿತವಾಗಿ ಹರಡುವ ಪ್ರಯತ್ನಗಳಿಗೆ ಇದು ಮಾದರಿಯಾಗಿದೆ. ನಿಮಗೆ ಎಲ್ಲ ಯಶಸ್ಸನ್ನು ಹಾರೈಸುತ್ತೇನೆ.

ಪ್ರೀತಿಯೊಂದಿಗೆ,

ಡಾ|| ಎಚ್.ಎಸ್. ರಾಘವೇಂದ್ರರಾವ್, ಬೆಂಗಳೂರು

ಏಕಲವ್ಯ ಪ್ರಜ್ಞೆ, ಭಗೀರಥ ತತ್ವ 'ಸಂವಾದ'ಕ್ಕಿದೆ

ಪ್ರೀತಿಯ ಇಂದೂಧರ ಅವರಿಗೆ,
ವಂದನೆಗಳು, ಕುಶಲವೆ?

ನಿಮ್ಮ ಪತ್ರ ತಲುಪಿತು. ಸಂಭಾವನೆ ಬಗ್ಗೆ ಸಂಕೋಚದಿಂದ ಬರೆದಿರುವಿರಿ. ನಿಮಗೆ ಇಂಥ ಸಂಕೋಚ ಇರಬಾರದು. 'ಸಂವಾದ' ಜೀವಂತವಾಗಿರುವುದಷ್ಟೆ ನನಗೆ ಮುಖ್ಯ. ಸಂಭಾವನೆಯಲ್ಲ, ದಯವಿಟ್ಟು ನನಗೆ ಹಣ ಕಳುಹಿಸಬಾರದಾಗಿ ಪ್ರಾರ್ಥನೆ. ಮುಂದೆಯೂ ಅಷ್ಟೆ ನನಗೆ ಸಂವಾದ ಉಳಿದು ಬೆಳೆಯುವುದಷ್ಟೇ ಮುಖ್ಯ. ಇದಕ್ಕೆ ನನ್ನ ಕಡೆಯಿಂದ ಆಗಬಹುದಾದ ಪ್ರಯತ್ನವೆಂದರೆ ಬರಹಗಳನ್ನು ನೀಡುವುದು. ಏಕೆಂದರೆ ನಾನು ಇಪ್ಪತ್ತು ಭಿಕ್ಷುಕ ಮಕ್ಕಳ ಶಿಕ್ಷಣದ ಹೊಣೆಯಲ್ಲಿದ್ದೇನೆ.

ನೀವು ವಿಶ್ವಾಸದಿಂದ ಕಳುಹಿಸುತ್ತಿರುವ 'ಸಂವಾದ' ವನ್ನು ಓದುತ್ತ ಬಂದಿದ್ದೇನೆ. ಹಾಗೆಯೆ ಶಾಲೆಯ ಮಕ್ಕಳಿಂದಲೂ ಓದಿಸುತ್ತಿದ್ದೇನೆ. ಮಕ್ಕಳ ಒಂದು ಅಪೇಕ್ಷೆ ಯೆಂದರೆ ಅವರಿಗಾಗಿ ಒಂದು ಕಾಲಂ ಬೇಕೆಂಬುದು. ಕಥೆ, ಕವಿತೆ ಬಯಸುತ್ತಾರವರು.

'ಸಂವಾದ' ಓದಿನ ಸಂವಾದವಾಗಿರದೆ ಸಾಮಾಜಿಕ ಪರಿಸರದ ಸಂವಾದವಾಗಿ ಮೂಡಿಬರುತ್ತಿದೆ. ಪ್ರಜ್ಞೆ ಮತ್ತು ಅರಿವಿನ ಪರಿಸರ ನಿರ್ಮಾಣಕ್ಕೆ ಅಕ್ಷರ ವೇದಿಕೆಯಾಗಿ ಮೂಡಿ ಬರುತ್ತಿದೆ. ಅತ್ಯಂತ ಮುಖ್ಯ ಸಂಗತಿಯೆಂದರೆ ಇಂದು ಚಳವಳಿಗಳು ಯಾವ ಸಂವಾದವನ್ನು ಮರೆತಿವೆಯೊ ಆ ಸಂವಾದವನ್ನು ಆರಂಭಿಸಿದೆ ಎನ್ನಿಸುತ್ತದೆ. ಮುಂದೆ ಯಾವ ರೂಪದಲ್ಲಿ ಚಳವಳಿ ಹುಟ್ಟಬೇಕು ಎಂಬುದಕ್ಕೆ ಆಶಯದಂತೆ 'ಸಂವಾದ' ಪತ್ರಿಕೆ ಕಂಡುಬರುತ್ತಿದೆ.

ಗಾಂಧೀಜಿಯ ಬಗ್ಗೆ ಮಾತಾಡಿ ಮಾತಾಡಿ ದಣಿದು ತೆಪ್ಪಗಾಗಿರುವ ನಾವು ಅಂಬೇಡ್ಕರರ ಬಗ್ಗೆಯೂ ಹಾಗೆಯೇ ಮಾತನಾಡ ಹೊರಟಿದ್ದೇವೆ. ಇದರ ದಣಿವು ಮುಂದೆ ಆವರಿಸಲಿದೆ ಎನ್ನಿಸುತ್ತದೆ. ಅಂಬೇಡ್ಕರರನ್ನು ಬೆಳೆಸಿದ್ದು ಅವರ ಓದು, ಅವರನ್ನು ಎತ್ತರಕ್ಕೆ ನಿಲ್ಲಿಸಿದ್ದು ಈ ದೇಶದ ಅಪಮಾನಿತ ಬದುಕನ್ನು ಚಾರಿತ್ರ್ಯಕವಾಗಿ ಗ್ರಹಿಸಿ ಅದಕ್ಕೆ ಸಾಂಸ್ಕೃತಿಕ ಘನತೆ ತರುವ ಹೋರಾಟದಲ್ಲಿ. ಇದು ಹೊಸ ವಿಚಾರವಲ್ಲ, ಆದರೂ ಆದರ್ಶದ್ದು ಹೊಸತು ಎಂಬಂತೆ ಉಳಿದ ವಿಚಾರ. ಅಂಬೇಡ್ಕರ್ ಅವರ ಬಗ್ಗೆ ಯೋಚಿಸುವಾಗ ಅಂಬೇಡ್ಕರ್ ಈ ದೇಶಕ್ಕೆ ಕಲಿಸಿದ್ದು ಏನು ಎಂದುಕೊಂಡಾಗ 'ಏನೇಲೇ' ಅನ್ನುತ್ತಿದ್ದವರಿಂದ 'ಏನಮ್ಮ' ಅನ್ನಿಸಿಕೊಳ್ಳುವುದನ್ನು ಕಲಿಸಿದರು ಅನ್ನಿಸುತ್ತದೆ. ಹಳ್ಳಿಗಳ ಸಭೆಗಳಲ್ಲಿ ಮಾತನಾಡು ವಾಗ ನಾನು ಇದನ್ನೆ ಮೊದಲಿಗೆ ಹೇಳುತ್ತಿರುತ್ತೇನೆ. ಇಲ್ಲಿಂದಲೆ ಅಂಬೇಡ್ಕರ್ ಕ್ರಾಂತಿ ಪ್ರಾರಂಭ ಎಂಬುದು ನನ್ನ ನಂಬಿಕೆ. 'ನಮ್ಮಮ್ಮ ಬಾರಮ್ಮ' ಎಂಬುದೆ ಈ ಕ್ರಾಂತಿಯ ಮುಂದುವರಿಕೆ. 'ಸಂವಾದ'ದ ಮೂಲಕ ಇದು ಸಮಾಜಕ್ಕೆ ಮುಟ್ಟಬೇಕಿದೆ.

ತಮಗೆ ಇಷ್ಟವಾಗದಕ್ಕೆಲ್ಲ ಗಾಂಧೀಜಿಯವರನ್ನು ಕಾರಣ ಮಾಡುವಂತೆ ಅಂಬೇಡ್ಕರರನ್ನೂ ಕಾರಣ ಮಾಡುವ ಮನಸ್ಸುಗಳಿವೆ. ಇದು ಈ ಇಬ್ಬರನ್ನೂ ಅವರವರ ನೆಲೆಯಲ್ಲಿ ಅಪ್ರಸುತ್ತರನ್ನಾಗಿಸಿ ಬಿಂಬಿಸುವ ಹುನ್ನಾರು. ಜೊತೆಗೆ ಅರಿಯುವ ಮನಸ್ಸಿಲ್ಲದವರ ಹಸಿಹಸಿ ಅನಿಸಿಕೆ. ಹಾಗೆಯೆ ಸಹನೆಗೆಟ್ಟವರ ಹಪಹಪಿಕೆ. ಇಡಿಯಾಗಿ ಭಾರತೀಯ ಬದುಕಿಗೆ, ಅದರಲ್ಲೂ ಇಂದಿನ ಜಾಗತೀಕರಣ, ಉದಾರೀ ಕರಣ, ಖಾಸಗೀಕರಣದ ಹಿನ್ನೆಲೆಯಲ್ಲಿ ಈ ಎರಡೂ ಚೇತನಗಳ ಹೋರಾಟ, ನಿರ್ಮಾಣ ಶಕ್ತಿಯ ಪುನರುತ್ಥಾನ ಹೇಗಾಗಬೇಕೆಂಬ ಚಿಂತನೆಗೆ 'ಸಂವಾದ' ಪತ್ರಿಕೆ ದಾರಿ ತೆರೆಯಬೇಕಾಗಿದೆ. ಅಂಬೇಡ್ಕರ್ ಅವರನ್ನು ದೇವರಾಗಿಸದೆ ಗೆಳೆಯನನ್ನಾಗಿ ಮಾಡಿಕೊಳ್ಳುವ ಪ್ರೇರಣೆ 'ಸಂವಾದ' ದಿಂದಾಗಲಿ ಎಂಬ ಆಶಯ ನನ್ನಂಥ ಗೆಳೆಯರದು.

ಏಕಲವ್ಯ ಪ್ರಜ್ಞೆ, ಭಗೀರಥ ತತ್ವ 'ಸಂವಾದ'ಕ್ಕಿದೆ ಎಂದು ನಂಬಿದ್ದೇನೆ. ಹಲಾಯುಧದಿಂದ ನದಿಯನ್ನು ಎಳೆದ ಬಲರಾಮನಿಗಿಂತ ದುಡಿಮೆಯ ಮೂಲಕ ಗಂಗೆಯನ್ನು ತಂದ ಭಗೀರಥ ಮುಖ್ಯನಾಗುತ್ತಾನೆ. ಈ ತತ್ವದಲ್ಲಿ ಇಂದಿನ ಭಾರತದ ಹಳ್ಳಿಗಳ ಬದುಕನ್ನು ನಿಲ್ಲಿಸಿಕೊಳ್ಳಬೇಕಿದೆ. ಭಾಷೆ-ಶಿಕ್ಷಣವೂ ಹಳ್ಳಿಗಳನ್ನು ಅವುಗಳ ಸಾಂಸ್ಕೃತಿಕ ನೆಲೆಯಲ್ಲಿ ಬೆಳೆಯುವಂತಾಗಬೇಕಿದೆ. 'ಸಂವಾದ' ಇತ್ತಲೂ ಪುಟ ತೆರೆಯಲಿ.

ವಂದನೆಗಳೊಂದಿಗೆ,

ನಿಮ್ಮ ಪ್ರೀತಿಯ
ಸ. ರಘುನಾಥ, ಕೋಲಾರ

ಉತ್ಕೃಷ್ಟ ಗುಣಮಟ್ಟದ ಕಥೆ, ಕವನ, ಲೇಖನಗಳು

ಮಾನ್ಯ ಇಂದೂಧರ ಹೊನ್ನಾಪುರ ಅವರಿಗೆ ವಂದನೆಗಳು.

'ಸಂವಾದ' ವಾರ್ಷಿಕ ವಿಶೇಷಾಂಕ ದಲ್ಲಿ ಪ್ರಕಟಿತವಾದ ಕವನಕ್ಕೆ ಗೌರವಧನ ಕಳುಹಿಸುವುದಾಗಿ ಬರೆದಿದ್ದೀರಿ. 'ಸಂವಾದ' ನಮ್ಮ ಪತ್ರಿಕೆ. ಇದಕ್ಕೆ ಏನನ್ನೇ ಬರೆದರೂ ಇದರಲ್ಲಿ ನಮ್ಮ ಪಾಲ್ಗೊಳ್ಳುವಿಕೆಯ ಸಂತೋಷ ಮಾತ್ರ ಸಾಕು. ಗೌರವಧನ ದಯವಿಟ್ಟು ಕಳುಹಿಸಬೇಡಿ.

ವಾರ್ಷಿಕ ವಿಶೇಷಾಂಕ ತುಂಬಾ ಚೆನ್ನಾಗಿ ಬಂದಿದೆ. ಸಂಚಿಕೆಯಲ್ಲಿನ ಲೇಖನ, ಕಥೆ ಮುಂತಾದವುಗಳ ಗುಣಮಟ್ಟ ಉತ್ಕೃಷ್ಟವಾಗಿದೆ. ವಾರ್ಷಿಕ ವಿಶೇಷಾಂಕ ಸಿದ್ಧಗೊಳ್ಳುವುದಕ್ಕೆ ನೀವು ಹಾಕಿದ ಶ್ರಮ ಎದ್ದು ಕಾಣುತ್ತದೆ. ಹಾಗೂ ಅದು ಸಾರ್ಥಕವಾಗಿದೆ. ನಾವು ಸ್ನೇಹಿತರ ಜೊತೆ ನಮ್ಮ ಸಂತೋಷವನ್ನು ಹಂಚಿಕೊಂಡಿದ್ದೇವು. ಪತ್ರ ಬರೆದಿರಲಿಲ್ಲ ಅಷ್ಟೆ.

ಬೌದ್ಧಿಕ ಬೆಳಕು 'ಸಂವಾದ'

ಆತ್ಮೀಯ ಇಂದೂಧರ ಹೊನ್ನಾಪುರ ಅವರಿಗೆ,

ಶೈಲಜ ಹಿರೇಮಠ ಮಾಡುವ ನಮಸ್ಕಾರಗಳು. ತಮ್ಮ ಪತ್ರ ತಲುಪಿತು. ನನಗೆ ಗೌರವ ಸಂಭಾವನೆ ಬೇಡ. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿ ಯುವಂತಹ, ತುಳಿತಕ್ಕೊಳಗಾದವರ ದನಿ ಕೇಳಿಸುವ 'ಸಂವಾದ'ದಂತಹ ಪತ್ರಿಕೆಗೆ ಲೇಖನಗಳನ್ನು ಕಳುಹಿಸುವುದು ಪ್ರತಿಯೊಬ್ಬ ಪ್ರಜ್ಞಾವಂತ ಲೇಖಕಿ ಲೇಖಕರ ಕರ್ತವ್ಯ ವೆಂದು ಭಾವಿಸಿರುವೆ. ನೀವೆಲ್ಲಿಯೂ 'ಸಂವಾದ' ಪತ್ರಿಕೆ ಅಕ್ಯಾಡೆಮಿಕ್ ಸ್ವರೂಪ ವುಳ್ಳದ್ದು ಎಂದು ಹೇಳಿಲ್ಲ. ಆದರೆ ಅದು ಅಕ್ಯಾಡೆಮಿಕ್ ಸ್ವರೂಪವನ್ನು ಒಳಗೊಂಡಿ ದೆ. ಬೌದ್ಧಿಕ ಬೆಳಕನ್ನು ಬೀರುವ ಈ ಪತ್ರಿಕೆಯು ಜನಸಾಮಾನ್ಯರಿಂದ ದೂರ ಉಳಿದಿಲ್ಲ. ಅದು ತನ್ನ ಧ್ಯೇಯೋದ್ದೇಶ ಗಳನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದೆ. 'ಸಂವಾದ' ಪತ್ರಿಕೆಯು ಅಧ್ಯಯನ ಮತ್ತು ಆಂದೋಲನಗಳೆರಡನ್ನು ಯಶಸ್ವಿಯಾಗಿ ಏಕಕಾಲಕ್ಕೆ ನಡೆಸಿಕೊಂಡು ಹೋಗುತ್ತಿದೆ.

ಪರ್ಯಾಯ ರಾಜಕಾರಣದ ಕುರಿತು ಸುದೀರ್ಘ ಚಿಂತನೆ ಮತ್ತು ಚರ್ಚೆಗಳನ್ನು ಬೆಳೆಸಿಕೊಂಡು ಬಂದಿದ್ದೀರಿ. ಇವತ್ತಿನ ಅತಂತ್ರ ರಾಜಕೀಯ ವ್ಯವಸ್ಥೆಯಲ್ಲಿ ಪರ್ಯಾಯ ರಾಜಕಾರಣದ ಚಿಂತನೆ ಅಗತ್ಯವಾಗಿದೆ. ತಮ್ಮ ಪತ್ರಿಕೆಯು ಅದನ್ನು ಯಶಸ್ವಿಯಾಗಿ ಪೂರೈಸಿದೆ.

ವಂದನೆಗಳೊಂದಿಗೆ,

ವಿಶ್ವಾಸದ
ಡಾ|| ಶೈಲಜ ಹಿರೇಮಠ, ಹಂಪಿ

ಏಪ್ರಿಲ್ ತಿಂಗಳ ಸಂಚಿಕೆಯ ಕುರಿತು :

ಏಪ್ರಿಲ್ ಸಂಚಿಕೆಯ ಸಂಪಾದಕೀಯ ತುಂಬಾ ಸಕಾಲಿಕ ಹಾಗೂ ಪರಿಣಾಮಕಾರಿ ಯಾಗಿ ಮೂಡಿಬಂದಿದೆ. ಅದೇ ರೀತಿ ಟಿ.ಎಸ್.ವಿವೇಕಾನಂದ ಅವರ 'ನಕ್ಸಲೀಯರು ಮತ್ತು ....' ಎಂಬ ಲೇಖನ ವಿಚಾರಪೂರ್ಣವಾಗಿದೆ. ಜನಪ್ರಿಯ, ಜನಪರ ಎಂದು ಭಾವಿಸುವ ಮಾಧ್ಯಮ ಗಳನ್ನೂ ವಿಮರ್ಶಾತ್ಮಕವಾಗಿ ನೋಡುವ ಔಚಿತ್ಯ ಮತ್ತು ಅಗತ್ಯವನ್ನು ಈ ಲೇಖನ ತಿಳಿಸಿದೆ. ಅದೇ ರೀತಿ ದೇವನೂರು ಮಹಾದೇವರ ಸಂದರ್ಶನ ಮತ್ತು ನಟರಾಜ್ ಹುಳಿಯಾರರ 'ಪರ್ಯಾಯ ರಾಜಕಾರಣ – ಏಕೆ? ಹೇಗೆ ?' ಲೇಖನ ಮೌಲಿಕವಾಗಿವೆ.

'ಸಂವಾದ' ಹೀಗೆಯೇ ಸಶಕ್ತವಾಗಿ ಮೂಡಿಬರಲಿ ಎಂದು ಹಾರೈಸುವೆ.

ಡಾ|| ಸಬಿಹಾ ಭೂಮಿಗೌಡ,
ಮಂಗಳೂರು

ಸಂಪಾದಕೀಯ

ಅಂತರಂಗ

ಸಮಾನ ಶಿಕ್ಷಣ ಮತ್ತು ಇಂಗ್ಲೀಷ್

ಜಾಗತೀಕರಣ ಮತ್ತು ಖಾಸಗೀಕರಣದ ಈ ಹೊತ್ತು ಅತ್ಯಂತ ಭಯಾನಕವಾಗಿದೆ. ಮನುಷ್ಯ ಮನುಷ್ಯರ ನಡುವಿನ ಕಂದಕ ಹೆಚ್ಚಾಗುತ್ತಿದೆ. ಅಸಮಾನತೆ ಬದುಕಿನ ಸರ್ವ ಮಗ್ಗುಲನ್ನು ಹೊಕ್ಕು ಇಡೀ ಸಾಮಾಜಿಕ ಸ್ಥಿತಿಯೇ ಬುಡಮೇಲಾಗುವ ವಾತಾವರಣ ಸೃಷ್ಟಿಯಾಗುತ್ತಿದೆ. ಸರ್ಕಾರಿ ನೌಕರಿಗಳು ಕಡಿಮೆಯಾಗುತ್ತಿವೆ. ಖಾಸಗಿ ಕ್ಷೇತ್ರ ಕೇವಲ ಬಲಾಢ್ಯರ ಮತ್ತು ಇಂಗ್ಲೀಷ್ ಬಲ್ಲವರ ಪಾಲಾಗುತ್ತಿದ್ದು ಗ್ರಾಮೀಣ ಪ್ರದೇಶದ ಜನ ದಿಕ್ಕು ತಪ್ಪಿದಂತಾಗಿದ್ದಾರೆ.

ಭಾಷೆ, ಸಂಸ್ಕೃತಿ, ಸಾಂಸ್ಕೃತಿಕ ವೈವಿಧ್ಯತೆಗಳನ್ನು ಉಳಿಸಿಕೊಳ್ಳಬೇಕಾದ ನಾವು ಏನು ಮಾಡಬೇಕೆಂಬುದೇ ಇಂದಿನ ತುರ್ತು ಸಂಕಟವಾಗಿದೆ. ಬದುಕಿನ ಪ್ರತಿಯೊಂದು ಕ್ಷೇತ್ರವನ್ನು ಆವರಿಸಿಕೊಂಡಿರುವ ಇಂಗ್ಲೀಷ್ ಗ್ರಾಮೀಣ ಯುವ ಜನಾಂಗಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಕನಿಷ್ಠ ವ್ಯಾವಹಾರಿಕ ಇಂಗ್ಲೀಷ್ ಗೊತ್ತಿಲ್ಲದ ಬಡ ಹಾಗೂ ಗ್ರಾಮೀಣ ಪ್ರದೇಶದ ಉದ್ಯೋಗಾಕಾಂಕ್ಷಿಗಳು ತಬ್ಬಲಿಗಳಂತಾಗಿದ್ದಾರೆ. ಕೊರಿಯರ್ ಹುಡುಗನಿಂದ ಹಿಡಿದು ಸೇಲ್ಸ್ ಬಾಯ್/ಗರ್ಲ್-ಹೊಟೆಲ್ ಸಪ್ಲೈಯರ್ ಕೆಲಸ ಬೇಕೆಂದರೂ ಇಂಗ್ಲೀಷ್ ಅನಿವಾರ್ಯ ಎನ್ನುವ ಸ್ಥಿತಿ ನಿರ್ಮಾಣವಾಗಿದೆ.

ಇಂಥ ಸ್ಥಿತಿಯಲ್ಲಿ ಬಡವರ ಮತ್ತು ಗ್ರಾಮೀಣ ಜನರ ಶೈಕ್ಷಣಿಕ ತಾಣಗಳಾದ ಸರ್ಕಾರಿ ಶಾಲೆಗಳಲ್ಲಿ ಪ್ರಾಥಮಿಕ ಶಾಲೆಯ ಒಂದನೇ ತರಗತಿಯಿಂದ ಇಂಗ್ಲೀಷ್ ಕಲಿಸುವ ಪ್ರಯತ್ನವೊಂದಕ್ಕೆ ಸರ್ಕಾರ ಮುಂದಾಗಿದೆ. ನಾಡಿನ ಬಹುತೇಕ ಜನಪರ ಚಳವಳಿಗಳು, ಚಿಂತಕರು, ಹೋರಾಟಗಾರರೆಲ್ಲ ಸರ್ಕಾರದ ಈ ಪ್ರಯತ್ನವನ್ನು ಸ್ವಾಗತಿಸುತ್ತಿದ್ದರೆ, ಕೆಲವು 'ಪ್ರತಿಗಾಮಿ ಕನ್ನಡ ಗುತ್ತಿಗೆದಾರರು' ಮಾತ್ರ ಇದನ್ನು ವಿರೋಧಿಸುತ್ತಿದ್ದಾರೆ.

ಕನ್ನಡ ನಾಡು-ನುಡಿ-ಸಂಸ್ಕೃತಿಯ ಏಳಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡೇ ಈ ವಿಚಾರವನ್ನು ಅವಲೋಕಿಸಬೇಕು. ಯಾವುದೇ ಸಂಸ್ಕೃತಿ ಆಯಾ ಸಮಾಜದ ಬದುಕಿನ ಪ್ರತಿಬಿಂಬವಾಗಿರುತ್ತದೆ ಎಂಬ ಸತ್ಯದ ನೆಲೆಗಟ್ಟನ್ನು ಈ ಚಿಂತನೆ ಅವಲಂಬಿಸಿರಬೇಕಾದುದು ಇನ್ನೂ ಮುಖ್ಯ. ಹಾಗೆ ನೋಡಿದರೆ, ಇಂಗ್ಲೀಷ್ ಕಲಿಯದೆ, ಇಂದಿನ ಪರಿಸ್ಥಿತಿಯಲ್ಲಿ ಎಂಥ ಸಾಮಾಜಿಕ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಯೋಚಿಸಿ. ಜಾಗತೀಕರಣ ಹಾಗೂ ಖಾಸಗೀಕರಣ ಈ ಬದುಕಿನ ಸ್ಪರ್ಧೆಯಲ್ಲಿ ಬಡ ಮತ್ತು ಹಳ್ಳಿಗಾಡಿನ ಮಕ್ಕಳು ಹೇಳ ಹೆಸರಿಲ್ಲದೆ ಕೊಚ್ಚಿಕೊಂಡು ಹೋಗುವಂಥ ಸ್ಥಿತಿ ನಿರ್ಮಾಣವಾಗುತ್ತಿದೆ. ಖಾಸಗಿ ಶಾಲೆಗಳ ಸ್ಥಿತಿವಂತ ಮಕ್ಕಳೊಂದಿಗೆ ಸ್ಪರ್ಧಿಸಲಾರದೆ ನಮ್ಮ ಗ್ರಾಮ ಮತ್ತು ನಗರಗಳ ಬಡಮಕ್ಕಳು ಬಸವಳಿಯುತ್ತಿದ್ದಾರೆ.

ನಾಡು, ನುಡಿ, ಸಂಸ್ಕೃತಿಯನ್ನು ಉಳಿಸಿ - ಬೆಳೆಸಬೇಕಾದ ಒಂದು ಜನಾಂಗವೇ ಜಾಗತೀಕರಣದ ಈ ಸವಾಲಿನೆದುರು ಕುಸಿದು ಬಿದ್ದರೆ ಅಂಥ ಸಂಸ್ಕೃತಿ ಉಳಿಯುವುದಾದರೂ ಹೇಗೆ? ನಾವು ಉಳಿಯದೆ ನಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳಬಹುದೇ? ಇದು ಕೇವಲ ಭಾವನಾತ್ಮಕ ವಿಷಯ ಮಾತ್ರವಲ್ಲ. ಅಥವಾ ಕೆಲವೇ ಮಂದಿ ಭಾಷಾ ಪಂಡಿತರ ವಾದ ಪ್ರವೀಣತೆಯೂ ಅಲ್ಲ. ಇದು ಬದುಕಿನ ಪ್ರಶ್ನೆ. ಬದುಕಿಗೆ ಪೂರಕವಾಗದ ಯಾವುದೂ ಉಳಿದು ಬೆಳೆಯಲಾರದು ಎನ್ನುವುದೇ ಪರಮ ಸತ್ಯ. ಪರಿವರ್ತನಾಶೀಲವಾದ ಸಮಾಜದ ಯಾವುದೇ ಬದಲಾವಣೆಗಳಿಗೆ ನಮ್ಮನ್ನು ಒಡ್ಡಿಕೊಳ್ಳುತ್ತಾ ಅದರೊಳಗೆ ನಮ್ಮತನವನ್ನು ಉಳಿಸಿಕೊಳ್ಳುವುದು ಹೇಗೆ ಅನ್ನುವುದಷ್ಟೇ ಈಗ ಮುಖ್ಯ.

ಈ ಹಿನ್ನೆಲೆಯಲ್ಲಿ ಸರ್ಕಾರಿ ಶಾಲೆಗಳಲ್ಲಿ ಪ್ರಾಥಮಿಕ ಒಂದನೇ ತರಗತಿಯಿಂದಲೇ ಇಂಗ್ಲೀಷ್ ಕಲಿಸುವುದು ಅಗತ್ಯ. ಸಮಾನ ಶಿಕ್ಷಣ ಒದಗಿಸಬೇಕಾದ ಸರ್ಕಾರ, ಜಾಗತಿಕ ಪಿತೂರಿಗೆ ಬಲಿಯಾಗಿ ತಾನೇ ಮುಂದಾಗಿ ಅಸಮಾನ ಶಿಕ್ಷಣಕ್ಕೆ ನಾಂದಿ ಹಾಡುತ್ತಿದೆ. ಉಳ್ಳವರು ಮತ್ತು ಬಲಾಢ್ಯರ ಮಕ್ಕಳಿಗಾಗಿ ರಂಗು ರಂಗಿನ ಖಾಸಗಿ ಶಾಲೆಗಳು ನಾಯಿಕೊಡೆಗಳಂತೆ ಹುಟ್ಟಿಕೊಳ್ಳುತ್ತಿವೆ. ಅಲ್ಲಿ ಇಂಗ್ಲೀಷ್ ಶಿಕ್ಷಣ ಪಡೆದ ಮಕ್ಕಳೆದುರು ಸರ್ಕಾರಿ ಶಾಲೆಗಳಲ್ಲಿ ಕಲಿತ ಮಕ್ಕಳು ತೊದಲು ಮಾತಾಡಲೂ ಆಗುತ್ತಿಲ್ಲ. ಇನ್ನು ಅವರೊಂದಿಗೆ ಸ್ಪರ್ಧಿಸಿ ಗೆಲ್ಲುವ ಮಾತೆಲ್ಲಿ?

ಒಂದನೇ ತರಗತಿಯಿಂದ ಮಕ್ಕಳಿಗೆ ಇಂಗ್ಲೀಷ್ ಕಲಿಸಿದರೆ ಕನ್ನಡ ಸಂಸ್ಕೃತಿ ನಾಶವಾಗುತ್ತದೆ ಎನ್ನುವವರ ನೈತಿಕತೆಯನ್ನೇ ನಾವಿಲ್ಲಿ ಪ್ರಶ್ನೆ ಮಾಡಬೇಕಾಗುತ್ತದೆ. ಒಂದು ಭಾಷೆಯನ್ನು ಕಲಿತಾಕ್ಷಣ ತನ್ನ ಮೂಲ ಸಂಸ್ಕೃತಿ ನಾಶವಾಗುತ್ತದೆ ಎಂದು ವಾದಿಸುವವರ 'ಪಾಂಡಿತ್ಯ'ಕ್ಕೆ ಏನೆನ್ನಬೇಕು? ಸಾಮಾಜಿಕ ಅಸಮಾನತೆಯ 'ಗೌಪ್ಯ ಅಜೆಂಡ' ಇವರ ಪಾಂಡಿತ್ಯದ ಹಿಂದೆ ಅಡಗಿ ಕುಳಿತಿರುವುದಂತೂ ನಮಗೆ ಸ್ಪಷ್ಟವಾಗಿ ಕಾಣಿಸುತ್ತಿದೆ. ಇದನ್ನು ಮುಚ್ಚಿಕೊಳ್ಳಲು ಇವರ ಹೆಸರಿಲ್ಲದ ಭಾಷಾ ತಜ್ಞರು - ಮನೋ ವಿಜ್ಞಾನಿಗಳ ಮೊರೆ ಹೋಗುತ್ತಾರೆ. ಅದೇ ಜಾಗತಿಕ ಭಾಷಾ ತಜ್ಞರಾದ ಚಾಮ್‌ಸ್ಕಿ, ಫಿಷ್‌ಮನ್, ರಮೈನ್, ಡ್ರೈಡನ್, ಜೀನೆಟ್ ಪೋಸ್ ಮುಂತಾದವರ ಸಂಶೋಧನೆಗಳು ಇವರಿಗೆ ಕಾಣಿಸುವುದಿಲ್ಲ.

ಅಷ್ಟೇ ಏಕೆ ಶಾಲಾಮಟ್ಟದ ಇಂಗ್ಲೀಷ್ ಕಲಿಕೆ ಕುರಿತು ಅಧ್ಯಯನ ನಡೆಸಿರುವ ನಮ್ಮ ಕನ್ನಡ ವಿ.ವಿ.ಯ ಭಾಷಾ ತಜ್ಞ ಡಾ|| ವಿ.ಬಿ. ತಾರಕೇಶ್ವರ್ ಮತ್ತು ಅವರ ತಂಡ ಪ್ರಾಥಮಿಕ ಶಿಕ್ಷಣದ ಮೊದಲನೇ ತರಗತಿಯಿಂದಲೇ ಮಕ್ಕಳಿಗೆ ಇಂಗ್ಲೀಷ್ ಕಲಿಸಬೇಕೆಂಬ ಸರ್ಕಾರದ ನಿರ್ಧಾರವನ್ನು ಸ್ವಾಗತಿಸಿದೆ.

ಖಾಸಗಿ ರಂಗದಲ್ಲಿ ಪ್ರತಿವರ್ಷ ಸುಮಾರು ೭೫ ಸಾವಿರ ಉದ್ಯೋಗಗಳು ಸೃಷ್ಟಿಯಾಗುತ್ತವೆ. ಈ ಉದ್ಯೋಗದಲ್ಲಿ ಸುಮಾರು ೭೦ ಸಾವಿರ ಉದ್ಯೋಗಗಳು ಕೇವಲ ಇಂಗ್ಲೀಷ್ ಬಲ್ಲವರಿಗೆ ಲಭ್ಯವಾಗುತ್ತದೆ. ಉಳಿದ ಐದು ಸಾವಿರ ಇಂಗ್ಲೀಷ್ ಅರಿವಿಲ್ಲದವರಿಗೂ ಸಿಗುತ್ತವೆ. ಆದರೆ ಇಂಗ್ಲೀಷ್ ಹೇಳಿಕೊಡದ ಸುಮಾರು ೨೭ ಸಾವಿರ ಸರ್ಕಾರಿ ಶಾಲೆಗಳಲ್ಲಿ ೩೫ ಲಕ್ಷ ಗ್ರಾಮೀಣ ಹಾಗೂ ನಗರ ಪ್ರದೇಶದ ಬಡಮಕ್ಕಳು ಕಲಿಯುತ್ತಾರೆ. ಇಂಗ್ಲೀಷ್ ಬಾರದ ಒಂದೇ ಕಾರಣಕ್ಕೆ ಇವರೆಲ್ಲ ತಬ್ಬಲಿಗಳಾಗಬೇಕೆ? ನಿರುದ್ಯೋಗಿಗಳಾಗಬೇಕೆ?

ಸಮಾಜದಲ್ಲಿ ಸಮಾನ ಅವಕಾಶ, ಸಮಾನ ಸೌಲಭ್ಯಗಳಿಂದ ಬದುಕುವ ವಾತಾವರಣ ಇಂದಿನ ಶಿಕ್ಷಣ ಕ್ರಮದಲ್ಲಿ ಇಲ್ಲ. ಸಮಾನ ಅವಕಾಶ ಅಂದರೆ ಸಮಾನ ಉದ್ಯೋಗಗಳ ಅವಕಾಶ. ಉದ್ಯೋಗಗಳು ಸೃಷ್ಟಿಯಾಗುವ ಬೃಹತ್ ನಗರಗಳಲ್ಲಿ ಗ್ರಾಮೀಣ ಹಾಗೂ ನಗರ ಪ್ರದೇಶಗಳ ಮಕ್ಕಳು ಉಳಿಯಬೇಕೆಂದರೆ ಅವರಿಗೆ ಎಲ್ಲ ಸರ್ಕಾರಿ ಶಾಲೆಗಳಲ್ಲಿ ಪ್ರಾಥಮಿಕ ಒಂದನೇ ತರಗತಿಯಿಂದ ಇಂಗ್ಲೀಷ್ ಅನ್ನು ಒಂದು ಭಾಷೆಯಾಗಿ ಹೇಳಿಕೊಡಲೇಬೇಕು. ಸರ್ಕಾರಿ ಶಾಲೆಗಳ ಉಳಿವಿಗೂ ಇದು ಅಗತ್ಯ. ಅಂತೆಯೇ ಇತರೆ ಎಲ್ಲ ಖಾಸಗಿ ಶಾಲೆಗಳಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಕಲಿಸಲೇಬೇಕು. ಎಲ್ಲ ಶಾಲೆಗಳಲ್ಲಿ ಒಂದೇ ಬಗೆಯ ಸಮಾನ ಶಿಕ್ಷಣ ಒದಗಿಸಲು ಸರ್ಕಾರಕ್ಕೆ ತಾಕತ್ತಿಲ್ಲದಿದ್ದರೆ ಕನಿಷ್ಠ ಇಷ್ಟು ಸಮಾನತೆಯನ್ನಾದರೂ ಅದು ತರಬೇಕು. ಅದು ಸರ್ಕಾರದ ಕನಿಷ್ಠ ಜವಾಬ್ದಾರಿ.

○ ಇಂದೂಧರ ಹೊನ್ನಾಪುರ

ಪ್ರತಿಕ್ರಿಯೆ

ಜಾತಿ ಗಣರಾಜ್ಯಗಳ ರಾಜಕಾರಣ

‘ಸಂವಾದ’ ಮೇ ಸಂಚಿಕೆಯಲ್ಲಿ ‘ಜಾತಿ ಗಣರಾಜ್ಯಗಳ’ ರಾಜಕಾರಣದ ಬಗೆಗೆ ‘ದಲಿತ್ ಡೈರಿ’ ಯಲ್ಲಿ ಬರೆಯಲಾಗಿದೆ. ಈ ಲೇಖನ ‘ಜಾತೀಯತೆ’ಯನ್ನು ರಾಜಕೀಯ ಪಕ್ಷಗಳು, ರಾಜಕಾರಣಿಗಳು ಹೇಗೆ ಬಳಸಿಕೊಂಡು ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆಂಬುದನ್ನು ಎತ್ತಿ ತೋರಿಸುತ್ತದೆ. ಚುನಾವಣೆಗಳು ನಡೆಯುವುದೇ ಹೀಗೆ. ಲಿಂಗಾಯತ ಮತದಾರರು ಹೆಚ್ಚಾಗಿರುವ ಕಡೆ ಲಿಂಗಾಯತ ಉಮೇದುದಾರರನ್ನು, ಒಕ್ಕಲಿಗರು ಬಹುಸಂಖ್ಯೆಯಲ್ಲಿರುವ ಕಡೆ, ಒಕ್ಕಲಿಗ ಉಮೇದುದಾರರನ್ನು ನಿಲ್ಲಿಸುವುದು, ಹೀಗೆಯೇ ರಜಪೂತರು, ಜಾಟರು, ಸಿಖ್ಖರು, ಕೂರ್ಮಿಗಳು ಹೆಚ್ಚು ಮತದಾರರಿರುವ ಕಡೆ ಆಯಾ ಜಾತಿಯವರನ್ನೇ ಚುನಾವಣೆಗೆ ಅಭ್ಯರ್ಥಿಯಾಗಿಸುವುದು ಎಲ್ಲ ರಾಜಕೀಯ ಪಕ್ಷಗಳಿಗೂ ಅಂಟಿದ ‘ಅಂಟುಜಾಡ್ಯ’. ಇದು ಜಾತೀಯತೆಯನ್ನು ಖಾಯಂಗೊಳಿಸುವ ಷಡ್ಯಂತ್ರ.

ಹಿಂದೆ ಕೆಂಗಲ್ ಹನುಮಂತಯ್ಯನವರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದಾಗ ಮಹಾಚುನಾವಣೆ ಬಂತು. ಅವರು ಕೋಲಾರದ ಪ್ರಸಿದ್ಧ ಕಾಂಗ್ರೆಸ್ ನಾಯಕರಾಗಿದ್ದ ಕೆ. ಪಟ್ಟಾಭಿ ರಾಮನ್ ಅವರಿಗೂ ಒಂದು ಸೀಟು ಕೊಟ್ಟರು. ಸೀಟು ಹಂಚಿಕೆಯ ಕ್ರಮವನ್ನು ಗಮನಿಸಿದ ಪಟ್ಟಾಭಿ ರಾಮನ್, ಹನುಮಂತಯ್ಯನವರಿಗೆ ಪತ್ರ ಬರೆದು ‘ನೀವು ಪ್ರಗತಿಪರರು, ವಿಚಾರವಂತರು, ನೀವು ಸೀಟು ಹಂಚಿಕೆ ಮಾಡುವಾಗ ಹೊಸ ಮಾರ್ಗ ಹಿಡಿಯುತ್ತೀರೆಂದು ನಾನು ಭಾವಿಸಿದ್ದೆ. ಆದರೆ ಹಳೆಯ ಸಂಪ್ರದಾಯಸ್ಥರ ನೀತಿಯನ್ನೇ ಅನುಸರಿಸಿದ್ದೀರಿ. ಅಪ್ಪ ಹಾಕಿದ ಆಲದ ಮರಕ್ಕೆ ಜೋತು ಬಿದ್ದಿದ್ದೀರಿ. ಲಿಂಗಾಯಿತರು ಹೆಚ್ಚು ಜನ ಇರುವ ಕಡೆ ಲಿಂಗಾಯತರಿಗೆ, ಒಕ್ಕಲಿಗರು ಹೆಚ್ಚಾಗಿರುವ ಕಡೆ ಒಕ್ಕಲಿಗರಿಗೆ ಸೀಟು ಕೊಟ್ಟಿದ್ದೀರಿ.

ನಮ್ಮಲ್ಲಿ ಅಲ್ಪಸಂಖ್ಯಾತರು ಬಹಳಷ್ಟು ಇದ್ದಾರೆ. ಅಲ್ಪಸಂಖ್ಯಾತರ ರಕ್ಷಣೆ, ಪೋಷಣೆ ಬಹುಮತ ಉಳ್ಳ ಜನಾಂಗದವರದಾಗಬೇಕು. ಬಹುಮತದ ಜನಾಂಗದವರಿರುವ ಕಡೆ ಅವರಲ್ಲೇ ಒಬ್ಬರನ್ನೂ ಆಯ್ಕೆ ಮಾಡುವುದರಲ್ಲಿ ಏನು ಮಹತ್ವವಿದೆ ? ಬಹುಸಂಖ್ಯಾತ ಮತದಾರರಿರುವ ಕಡೆ ಅಲ್ಪಸಂಖ್ಯಾತ ಉಮೇದುದಾರರನ್ನು ನಿಲ್ಲಿಸಿ ಗೆಲ್ಲಿಸಬೇಕಾದ್ದು ಕಾಂಗ್ರೆಸ್ಸಿನ ನೀತಿಯಾಗಬೇಕು. ಜಾತೀಯತೆಯನ್ನು ಖಾಯಂಗೊಳಿಸುವ ಕಾರ್ಯ ಮಾಡಬಾರದು.

ಭಾರತೀಯ ಪ್ರಜೆ ಅವನು ಯಾವುದೇ ಕೋಮಿನವನಿರಬಹುದು, ಅವನು ಯಾವ ಕ್ಷೇತ್ರದಲ್ಲಾದರೂ ನಿಂತು ಗೆಲ್ಲಬಲ್ಲೆನೆಂಬ ಭರವಸೆ ಬಹುಸಂಖ್ಯಾತರಲ್ಲಿ ಹಾಗೂ ಅಲ್ಪಸಂಖ್ಯಾತರಲ್ಲಿ ಮೂಡಿಸಬೇಕಾದ್ದು ಕಾಂಗ್ರೆಸ್ಸಿನಂತಹ ಘನತವೆತ್ತ ಸಂಸ್ಥೆಯ ಆದರ್ಶವಾಗಬೇಕು. ನಿಮ್ಮ ಕಾಲದಲ್ಲಿ ಅದು ಕಾರ್ಯಗತವಾದೀತೆಂದು ನಾನು ಆಶಿಸಿದ್ದೆ, ನನಗೆ ಭ್ರಮನಿರಸನ ಆಗಿದೆ. ನಾನು ನೀವಿತ್ತಿರುವ ಉಮೇದುದಾರಿಕೆಯನ್ನು ತಮಗೆ ಹಿಂದಿರುಗಿಸುತ್ತಿದ್ದೇನೆ. ನಾನು ಕಾಂಗ್ರೆಸ್ಸಿಗೆ ರಾಜೀನಾಮೆ ಇತ್ತು ಸ್ವತಂತ್ರವಾಗಿ ನಿಂತು ಚುನಾವಣೆಯನ್ನು ಎದುರಿಸಲು ಬಯಸುತ್ತೇನೆ’ ಎಂದು ತಿಳಿಸಿದರು. ಚುನಾವಣೆಗೆ ನಿಂತು ಅತ್ಯಧಿಕ ಮತದಿಂದ ಗೆದ್ದೂ ಬಂದರು. ಅಂದಿನ ವಿಧಾನಸಭೆಯಲ್ಲಿ ಕೆ. ಪಟ್ಟಾಭಿರಾಮನ್, ಸೋಷಿಯಲಿಸ್ಟ್ ಪಕ್ಷದ ಶಾಂತವೇರಿ ಗೋಪಾಲಗೌಡರು ತುಂಬ ವರ್ಚಸ್ವಿಗಳಾಗಿ ಕೆಲಸ ನಿರ್ವಹಿಸಿದರು ಎಂಬುದನ್ನು ಎಲ್ಲರೂ ಬಲ್ಲವರಾಗಿದ್ದಾರೆ.

ಅಲ್ಪಸಂಖ್ಯಾತರನ್ನು ರಾಜಕೀಯ ಸಂಸ್ಥೆಗಳು ಯೋಗ್ಯ ರೀತಿ ನಡೆಸಿಕೊಳ್ಳಬೇಕು. ಬಹುಸಂಖ್ಯಾತ ಕೋಮಿನವರಿರುವ ಕಡೆ ಅಲ್ಪಸಂಖ್ಯಾತರನ್ನು ನಿಲ್ಲಿಸಿ ಅವರನ್ನು ಗೆಲ್ಲಿಸುವ ಜವಾಬ್ದಾರಿಯನ್ನು ರಾಜಕೀಯ ಸಂಸ್ಥೆಗಳು ಹೊರಬೇಕು. ಅವರ ಗೆಲುವು ಅಥವಾ ಸೋಲು ತಮ್ಮದೇ ಗೆಲುವು ಅಥವಾ ಸೋಲು ಎಂದು ಭಾವಿಸಬೇಕು.

ಸ್ವಾತಂತ್ರ್ಯ ಪೂರ್ವದಲ್ಲಿ ಇಂತಹ ವಾತಾವರಣ ಇತ್ತು. ದೇಶಭಕ್ತರನ್ನು ಉಮೇದುದಾರರನ್ನಾಗಿ ನಿಲ್ಲಿಸುವಾಗ ಅವರ ಜಾತಿಗಲ್ಲ ಪ್ರಾಶಸ್ತ್ಯ ಇದ್ದದ್ದು. ಅವರ ತ್ಯಾಗ ಬಲಿದಾನಕ್ಕೆ. ‘ಹುಲ್ಲುಕಡ್ಡಿಯನ್ನು ಚುನಾವಣೆಗೆ ನಿಲ್ಲಿಸಿದ್ದೇವೆ. ನಿಮ್ಮ ಮತ ನೀಡಿ’ ಎಂದು ಮತದಾರರನ್ನು ಪ್ರಾರ್ಥಿಸುತ್ತಿದ್ದ ಕಾಲ ಅದು. ಆದರೆ ಯಾವ ಮತದಾರರೂ ಈ ಹುಲ್ಲುಕಡ್ಡಿಯ ಜಾತಿ ಯಾವುದು ಎಂದು ಕೇಳುತ್ತಿರಲಿಲ್ಲ.

ಈ ಹುಲ್ಲು ಕಡ್ಡಿ, ಬರೀ ಹುಲ್ಲು ಕಡ್ಡಿಯಾಗಿರಲಿಲ್ಲ. ತ್ಯಾಗ ಬಲಿದಾನದ ಮಂತ್ರಗಳಿಂದ ಪುನೀತವಾಗಿದ್ದ ಹುಲ್ಲು ಕಡ್ಡಿಗಳು ಇವಾಗಿದ್ದವು. ಆಗ ಜಾತ್ಯಾತೀತವಾಗಿ ಮತದಾರರು ನಡೆದುಕೊಳ್ಳಲು ಕಾಂಗ್ರೆಸ್ ಸಂಸ್ಥೆ ಪ್ರೇರಣೆ ನೀಡುತ್ತಿತ್ತು.

ಈಗ ಭಾರತೀಯ ಜನತಾ ಪಕ್ಷ ಮಾತ್ರವಲ್ಲ ಕಾಂಗ್ರೆಸ್ ಮೊದಲುಗೊಂಡು ಎಲ್ಲ ರಾಜಕೀಯ ಪಕ್ಷಗಳೂ ಜಾತಿ, ಮತಗಳನ್ನು ಪ್ರಚೋದಿಸುವುದನ್ನು ತಮ್ಮ ಕಸುಬನ್ನಾಗಿ ಮಾಡಿ ಕೊಂಡಿವೆ.

ಈ ಪರಿಸ್ಥಿತಿಯನ್ನು ತೊಲಗಿಸುವ ಕಾಲ ಬೇಗ ಬರಲಿ ಎಂದು ಆಶಿಸೋಣ. □

> ಬಹುಸಂಖ್ಯಾತ ಕೋಮಿನವರಿರುವ ಕಡೆ ಅಲ್ಪಸಂಖ್ಯಾತರನ್ನು ನಿಲ್ಲಿಸಿ ಅವರನ್ನು ಗೆಲ್ಲಿಸುವ ಜವಾಬ್ದಾರಿಯನ್ನು ರಾಜಕೀಯ ಸಂಸ್ಥೆಗಳು ಹೊರಬೇಕು. ಅವರ ಗೆಲುವು ಅಥವಾ ಸೋಲು ತಮ್ಮದೇ ಗೆಲುವು ಅಥವಾ ಸೋಲು ಎಂದು ಭಾವಿಸಬೇಕು. ಸ್ವಾತಂತ್ರ್ಯ ಪೂರ್ವದಲ್ಲಿ ಇಂತಹ ವಾತಾವರಣ ಇತ್ತು. ದೇಶಭಕ್ತರನ್ನು ಉಮೇದುದಾರರನ್ನಾಗಿ ನಿಲ್ಲಿಸುವಾಗ ಅವರ ಜಾತಿಗಲ್ಲ ಪ್ರಾಶಸ್ತ್ಯ ಇದ್ದದ್ದು. ಅವರ ತ್ಯಾಗ ಬಲಿದಾನಕ್ಕೆ.

○ ಎಚ್.ಎಸ್. ದೊರೆಸ್ವಾಮಿ

ಕಾಮ



ಕಣ್ಣೀರಿನ ಆಳ
ಗೊತ್ತಾದ ದಿನ
ಯಾರೊಬ್ಬರ ಮುಖದಲ್ಲೂ
ನಗು ಜಿನುಗುವುದೇ ಇಲ್ಲ!

ಮಾಯಾ ಜಿಂಕೆಯ ತೊಗಲು
ಹೊತ್ತವನಿಗೇನು ಗೊತ್ತು
ತನ್ನ ಸ್ಖಲನದ ಕ್ಷಣಕ್ಕೂ ಮುನ್ನ
ಬೇಟೆಗಾರನ ಕೆಂಗಣ್ಣಿಗೆ
ಗುರಿಯಾಗುತ್ತೇನೆಂದು.

ಬೆದೆಗೆ ಬಂದ ಕುದುರೆ ಏಕೆ
ಮಾವುತ ಹಾಕಿದ
ಒಣ ಹುಲ್ಲನ್ನು
ತಲೆ ಬಗ್ಗಿಸಿ ತಿನ್ನುತ್ತದೆ.

ರೂಪದರ್ಶಿಯೊಬ್ಬಳ
ಮೈಮೇಲೆ ಹರಿದಾಡುವ
ಸರ್ಪವೇಕೆ
ಅವಳನ್ನು ಸುಖಾ ಸುಮ್ಮನೇ ಚುಂಬಿಸುತ್ತದೆ

ಈ ಅಮೃತಮತಿ, ಈ ಕುಂತಿ
ಈ ಅಂಬಿಕೆ
ಈ ಬೆಂದ ಇರುಳಲ್ಲಿ
ಬೇತಾಳದಂತೆ ಅಡ್ಡಾಡುತ್ತಾರೆ.

ಅಬ್ಬಾ! ಇಲ್ಲಿ ಸುಳ್ಳುಗಳನ್ನು
ಗೆಲ್ಲುವುದು ಎಷ್ಟು ಸಲೀಸು

○ ಉಗಮ ಶ್ರೀನಿವಾಸ್

> ಪ್ರತಿಪ್ರಾಂತ್ಯದಲ್ಲೂ ಜಾತಿ ಉಪಜಾತಿಗಳ, ಮತಪಂಥಗಳ ಭಿನ್ನತೆಯನ್ನೂ ಕೂಡ ನಾವು ಕಾಣುತ್ತೇವೆ. ಇತ್ತೀತ್ತಲಾಗಿ ಅಸ್ಪೃಶ್ಯ ಜಾತಿಗಳಲ್ಲಿಯೂ ಸಾಮಾಜಿಕ ವೈಶಮ್ಯ ಭಯಂಕರವಾಗಿ ಬೆಳೆಯುತ್ತಿರುವುದು ವಿಶಾದವನ್ನುಂಟು ಮಾಡುವ ಸಂಗತಿಯಾಗಿದೆ.

ಡಾ|| ಮನೋಹರ ಯಾದವ

ಪರ್ಯಾಯ ರಾಜಕಾರಣದ ಬಗ್ಗೆ ಮಾತನಾಡ ಬೇಕಾದರೆ ಅದರ ಅನಿವಾರ್ಯತೆಯ ಪ್ರಸಂಗ ಮತ್ತು ಅದನ್ನು ಸಾಧಿಸುವಲ್ಲಿ ಎದುರಾಗುವ ತೊಡಕುಗಳು ಈ ಎರಡನ್ನೂ ಮುಂದಿಟ್ಟುಕೊಂಡು ನಮ್ಮ ಯೋಚನೆಗಳನ್ನು ಹೆಣೆಯಬೇಕಾಗುತ್ತದೆ. ಪ್ರಸಂಗದ ದೃಷ್ಟಿಯಿಂದ ಹೇಳಬೇಕಾದರೆ ನಮ್ಮ ಹಳ್ಳಿಗಳಲ್ಲಿ ಈ ಹೊತ್ತಿಗೂ ಜಾತಿ ಕಂದಕಗಳು ಮತ್ತು ಅದಕ್ಕೆ ಸಂಬಂಧಪಟ್ಟ ಸಾಮಾಜಿಕ ನೆಲೆಗಳೂ ಮೊದಲಿನಷ್ಟೇ ಆಳವಾಗಿ ಉಳಿದುಕೊಂಡಿದ್ದರೂ ಸ್ವಲ್ಪದರಮಟ್ಟಿಗೆ ವಾತಾವರಣ ಬದಲಾದಂತೆ ತೋರುತ್ತದೆ. ಬಹುಶಃ ಪ್ರಜಾತಾಂತ್ರಿಕ ಪರಿಸರದಲ್ಲಿ ಜಾತಿಗಳು ರಾಜಕೀಯವಾಗಿ ವ್ಯವಹರಿಸಿಬೇಕಾದರೆ ಆ ಮಟ್ಟಿಗಾದರೂ ತಮ್ಮ ಸಾಮಾಜಿಕ ಮಿತಿಗಳನ್ನು ಮೀರಿ ಹೊರಬರಬೇಕಾದ ಒತ್ತಡ ಅವುಗಳ ಮೇಲಿದೆ.

ಇದಕ್ಕೆ ಕಾರಣ ಯಾವುದೆ ಒಂದು ಜಾತಿ ಕೇವಲ ತನ್ನ ಸ್ವಂತ ತಾಕತ್ತಿನ ಮೇಲೆ ಸ್ವತಂತ್ರ ರಾಜಕೀಯ ಶಕ್ತಿಯಾಗಿ ಹೊರಹೊಮ್ಮಲು ಸಾಧ್ಯವಿಲ್ಲ. ಈ ಮಿತಿಯನ್ನು ಅದು ಅರಿತುಕೊಂಡು ತನಗೆ ಬೇಕಾದ ಇತರೆ ಸಮೂಹಗಳೊಟ್ಟಿಗೆ ಸಹಕಾರ ಮನೋಭಾವನೆಯನ್ನು ತೋರಬೇಕಾಗುತ್ತದೆ. ಹೀಗಾಗಿ ಅವಕಾಶವಿದ್ದಲ್ಲಿ ತನ್ನ ಹಿತಾಸಕ್ತಿಯನ್ನು ಕಾಪಾಡುವಲ್ಲಿ ಒಂದು ಜಾತಿ ಇತರೆ ಜಾತಿಗಳೊಟ್ಟಿಗೆ ರಾಜಕೀಯವಾಗಿ ಸ್ಪಂದಿಸಲೇಬೇಕಾಗುತ್ತದೆ. ಆ ಒಂದು ರೀತಿಯ ಸ್ಪಂದನ ಮೇಲ್ಜಾತಿಯ ಕೆಲವು ಸಮೂಹಗಳ ಮಧ್ಯೆ ಈಗಾಗಲೆ ಸೂಕ್ಷ್ಮವಾದ ಅವಸ್ಥೆಯಲ್ಲಿ ಸ್ಪಷ್ಟವಾಗಿ ಇರುವುದನ್ನು ನಾವು ಕಾಣುತ್ತೇವೆ. ಆದರೆ ಇದಕ್ಕೆ ಹೊರತಾಗಿ ಇಲ್ಲಿ ಇನ್ನೊಂದು ಬೆಳವಣಿಗೆಯನ್ನು ಕಾಣಬಹುದು. ಪ್ರಜಾಸತ್ತೆಯನ್ನುವಂತಹದ್ದು ವ್ಯಕ್ತಿಯನ್ನ ಮೂಲಭೂತ ವಸ್ತುವನ್ನಾಗಿಟ್ಟುಕೊಂಡು, ಒಟ್ಟಾರೆ ಸಮಾಜ ಕಟ್ಟುವ ವ್ಯವಸ್ಥೆಯಾಗಿರುವುದರಿಂದ ಇಲ್ಲಿ ವ್ಯಕ್ತಿಗಳು ತಮ್ಮ ವೈಯಕ್ತಿಕ ಜಾತಿಗಳ ಸಂಬಂಧಗಳನ್ನು ಮೀರಿ ರಾಜಕೀಯವಾಗಿ ವ್ಯವಹರಿಸುವ ಸಂದರ್ಭಗಳು ಇದಾವೆ. ಈ ಕಾರಣಕ್ಕಾಗಿ, ಜಾತಿಹಿತಾಸಕ್ತಿ ಗಮನದಲ್ಲಿದ್ದರೂ ಒಂದೇ ಜಾತಿಯ ಜನ ಹಲವಾರು ರಾಜಕೀಯ ಪಕ್ಷಗಳಿಗೆ ಹರಿದು ಹಂಚಿಹೋಗಿರುವ ಉದಾಹರಣೆಗಳಿದ್ದಾವೆ.

ಇದೆಲ್ಲ ಒಂದು ರೀತಿಯ ರಾಜಕೀಯ ಸಮಾನತೆಯನ್ನು ಬಿಂಬಿಸುವ ಅಂಶ. ಇದು ಬಾಬಾಸಾಹೇಬರು ಹೇಳಿರುವಂತೆ 'ಒಬ್ಬವ್ಯಕ್ತಿ ಒಂದು ಓಟು, ಒಂದು ಓಟು ಒಂದು ಮೌಲ್ಯ' ಎಂಬ ಸಂವಿಧಾನಾತ್ಮಕ ಪ್ರಜಾತಾಂತ್ರಿಕ ವ್ಯವಸ್ಥೆಯಿಂದ ಉಂಟಾಗಿರುವಂತಹುದು. ಆದರೆ ಇಲ್ಲಿಯವರೆಗೂ ಓಟಿನ ದೃಷ್ಟಿಯಿಂದ ಮಾತ್ರ ಒಬ್ಬ ವ್ಯಕ್ತಿ ಒಂದು ಮೌಲ್ಯವಾಗಿ ಉಳಿದಿದ್ದಾನೆ ಹೊರತು ಆ ಸ್ಥಿತಿಯನ್ನು ಮೀರಿ ಬೆಳೆದಿಲ್ಲ. ಇದರರ್ಥ ಸಂವಿಧಾನಾತ್ಮಕವಾದ ಅವಕಾಶವಿದ್ದಾಗ್ಯೂ ಇವರೆಗೂ ರಾಜಕೀಯ ಮೌಲ್ಯ ಸಾಮಾಜಿಕ ಮೌಲ್ಯವಾಗಿ ಪರಿವರ್ತನೆಗೊಂಡಿಲ್ಲ. ಚಲಾವಣೆಯಲ್ಲಿರುವ ರಾಜಕೀಯ ಪಕ್ಷಗಳಿಗೆ ಈ ಸ್ಥಿತಿಯನ್ನು ತರುವ ಮನಸ್ಸಿಲ್ಲ. ಹೀಗಾಗಿ ಸಂವಿಧಾನದಲ್ಲಿ ಕೊಡಮಾಡಲಾಗಿರುವ ಹಲವಾರು ಸವಲತ್ತುಗಳು ಇನ್ನು ಸಂಪೂರ್ಣವಾಗಿ ಜಾರಿಗೊಂಡಿಲ್ಲ. ಈ ಕಾರಣಕ್ಕಾಗಿ ಈ ಹೊತ್ತು ಹೊಸ ಸಂವಿಧಾನದ ಮೂಲಕ ಶೋಷಿತರಿಗೆ ದಕ್ಕಿರುವ ರಾಜಕೀಯ ಶಕ್ತಿಗೆ ಸರಿಯಾದ ಚಾಲನೆ ನೀಡಬೇಕಾದ ಅವಶ್ಯಕತೆ ಇದೆ ಮತ್ತು ಆ ಮೂಲಕ ಅದು ಸಾಮಾಜಿಕ ಮತ್ತು ಆರ್ಥಿಕ ಶಕ್ತಿಯಾಗಿ ಹೊರಹೊಮ್ಮುವ ಹಾಗೆ ನೋಡಿಕೊಳ್ಳಬೇಕಾದ ಅನಿವಾರ್ಯತೆಯ ಪ್ರಸಂಗವು ಕೂಡ ಇದೆ.

ಈ ನಿಟ್ಟಿನಲ್ಲಿ ಎಲ್ಲ ಪ್ರಗತಿಪರ ವ್ಯಕ್ತಿಗಳು ಮತ್ತು ಶಕ್ತಿಗಳು ಒಂದಾಗಿ ಕರ್ನಾಟಕದುದ್ದಕ್ಕೂ 'ಸಾಮೂಹಿಕ ಅನುಮತಿ'ಯನ್ನು ನಿರ್ಮಿಸುವಲ್ಲಿ ನಿರತರಾಗಬೇಕಾಗಿದೆ.

ವಿಸ್ತೃತ ಯತ್ನಕ್ಕೆ ಅವಕಾಶ

ಈಗಾಗಲೇ ಮೂಲಭೂತವಾದಿ ಶಕ್ತಿಗಳಾದ ಬಿ.ಜೆ.ಪಿ. ಮತ್ತು ಸಂಘಪರಿವಾರಗಳು ಹಿಂದು ರಾಷ್ಟ್ರೀಯತೆಯ ನಿರ್ಮಾಣದ ಹೆಸರಿನಲ್ಲಿ ಈ ನಾಡಿನಲ್ಲಿಯ ಸಾಮಾಜಿಕ ವಾತಾವರಣವನ್ನು ಹದಗೆಡಿಸುವಲ್ಲಿ ನಿರಂತರ ಪ್ರಯತ್ನದಲ್ಲಿ ತೊಡಗಿದ್ದಾವೆ. ಇದು ಅಪಾಯಕಾರಿಯಾದ ಬೆಳವಣಿಗೆಯಾದ್ದರಿಂದ ಇದನ್ನ

ಪ್ರತಿಕ್ರಿಯೆ

ನಿಯಂತ್ರಿಸದಿದ್ದರೆ ಈ ನಾಡಿನಲ್ಲಿ ಬಹುಸಂಖ್ಯಾತ ಜಾತಿಗಳಿಗೆ ಮತ್ತು ಸಮೂಹಗಳಿಗೆ ಉಳಿಗಾಲವಿಲ್ಲ. ಕಾರಣ ನಾಡು, ಸಂಸ್ಕೃತಿ ಮತ್ತು ಒಟ್ಟಾರೆ ಸಮಾಜ ಕಟ್ಟುವ ದೃಷ್ಟಿಯಿಂದ ಪರ್ಯಾಯ ರಾಜಕಾರಣದ ಅವಶ್ಯಕತೆ ಇದೆ ಎಂದು ಹೇಳಬಹುದು.

ಐತಿಹಾಸಿಕವಾಗಿ ಕರ್ನಾಟಕ, ಭಾರತದ ಇತರೆ ಪ್ರಾಂತ್ಯಗಳಿಗೆ ಹೋಲಿಸಿದರೆ, ಪ್ರಗತಿಪರವಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಳಿಗೆ ಹೆಸರುವಾಸಿಯಾಗಿರುವಂತಹ ನಾಡು. ಬಸವಣ್ಣ ಕನಕರನ್ನೊಳಗೊಂಡಂತೆ ಅನೇಕ ಸಂತರು ಮನುಕುಲದ ಏಕತೆ ಮತ್ತು ಸಹಜ ಸಮಾನತೆಯ ಬಗ್ಗೆ ಚಿಂತಿಸುವುದಲ್ಲದೆ ಆ ಚಿಂತನೆಗಳು ವಸ್ತುನಿಷ್ಠ ಸ್ಥಿತಿಗಳಾಗಲಿಕ್ಕೆ ಕಾರ್ಯತಃ ಶ್ರಮಿಸಿದ ನಿದರ್ಶನಗಳಿದ್ದಾವೆ. ಅವರ ಹೋರಾಟಗಳು ಹಿಂದೂ ಧರ್ಮದ ವೈಭವೀಕರಣದ ಕಲ್ಪನೆಯ ಮೇಲೆ ರೂಪುಗೊಂಡಿರಲಿಲ್ಲ, ಬದಲಾಗಿ ಅದರ ಧೋರಣೆಗಳನ್ನು ವಿರೋಧಿಸುವ ಮೂಲಕ ರೂಪುಗೊಂಡಿದ್ದವು. ಹೀಗಾಗಿ ಅವರ ವೈಚಾರಿಕ ನೆನಪುಗಳು, ಹೋರಾಟದ ಸಾಮಾನ್ಯ ತಂತ್ರಗಳು ಈ ಹೊತ್ತಿಗೂ ಸಾಮೂಹಿಕ ಮನಸ್ಸಿನಲ್ಲಿ ಮನೆಮಾಡಿಕೊಂಡಿದ್ದಾವೆ. ಅಂತಹ ಒಂದು ಸಾಮೂಹಿಕ ಮನಸ್ಸನ್ನು ಜಾಗೃತಗೊಳಿಸುವ ಅರ್ಥಪೂರ್ಣವಾದ ಯತ್ನ ನಡೆಯಬೇಕಿದೆ. ಸದ್ಯದ ಪ್ರಜಾತಾಂತ್ರಿಕವಾದ ವ್ಯವಸ್ಥೆಯಲ್ಲಿ ಈ ಒಂದು ಯತ್ನಕ್ಕೆ ಸವಿಸ್ತಾರವಾದ ಅವಕಾಶವಿದೆ.

ತೊಡಕುಗಳು : ಕರ್ನಾಟಕ ಪ್ರಗತಿಪರವಾದ ಚಿಂತನೆಗಳ ನಾಡಾಗಿರಬಹುದು. ಆದರೆ ಅದರದ್ದೆ ಆದ ಪ್ರಾಂತಿಯ ಸಾಮಾಜಿಕ, ಸಾಂಸ್ಕೃತಿಕ ಮತ್ತು ಭಾಷೆಯ ಭಿನ್ನತೆಗಳಿಗೆ ಸ್ಥಳ ಒದಗಿಸಿದ್ದು ಉಂಟು. ಹಾಗೂ ಅದರ ಪ್ರಾಂತ್ಯಗಳ ನಡುವೆ ಆರ್ಥಿಕ ಅಸಮಾನತೆಯನ್ನು ತೋರುವ ಭಿನ್ನತೆಯನ್ನು ಕೂಡ ಕಾಣಬಹುದು. ಆಮೇಲೆ ಪ್ರತಿಪ್ರಾಂತ್ಯದಲ್ಲೂ ಜಾತಿ ಉಪಜಾತಿಗಳ, ಮತಪಂಥಗಳ ಭಿನ್ನತೆಯನ್ನೂ ಕೂಡ ನಾವು ಕಾಣುತ್ತೇವೆ. ಇತ್ತೀತ್ತಲಾಗಿ ಅಸ್ಪೃಶ್ಯ ಜಾತಿಗಳಲ್ಲಿಯೂ ಸಾಮಾಜಿಕ ವೈಶಮ್ಯ ಭಯಂಕರವಾಗಿ ಬೆಳೆಯುತ್ತಿರುವುದು ವಿಶಾದವನ್ನುಂಟು ಮಾಡುವ ಸಂಗತಿಯಾಗಿದೆ. ಈ ಎಲ್ಲ ಭಿನ್ನತೆಗಳನ್ನು ಗಮನದಲ್ಲಿಟ್ಟುಕೊಂಡು ಪರ್ಯಾಯ ರಾಜಕಾರಣದ ಯೋಚನೆ ನಡೆಯಬೇಕು.

ಇನ್ನೊಂದು ಗಂಭೀರವಾದ ವಿಷಯವೇನೆಂದರೆ ಈ ಹೊತ್ತಿನ ಬದಲಾಗುತ್ತಿರುವ ಸಾಮಾಜಿಕ ವಾತಾವರಣ. ಗ್ರಾಮಮಟ್ಟದಲ್ಲೂ ವ್ಯಕ್ತಿಕೇಂದ್ರಿತ ಸಾಮಾಜಿಕ ಸಂಬಂಧಗಳ ಬೆಳವಣಿಗೆಯಾಗುತ್ತಲಿದೆ. ರಾಜಕಾರಣವೆಂದರೆ ಹಣ ಮತ್ತು ಹೆಂಡದ ವಿತರಣೆಯ ವ್ಯವಸ್ಥೆಯಾಗಿದೆ. ಹೀಗಾಗಿ ಗಾಂಧಿ ಬಯಸಿದ ರೀತಿಯಲ್ಲಿ ಈ ಹೊತ್ತು ಗ್ರಾಮ ಸ್ವರಾಜ್ಯವನ್ನು ಕಟ್ಟಲಿಕ್ಕಾಗುವುದಿಲ್ಲ. ಬದಲಾಗುತ್ತಿರುವ ಮತ್ತು ಸಾಂದರ್ಭಿಕ ಸ್ಥಿತಿಯನ್ನು ಹಿನ್ನೆಲೆಯಾಗಿಟ್ಟುಕೊಂಡು ಹೊಸ ರಾಜಕೀಯ ಚಿಂತನೆ ಮತ್ತು ಚಟುವಟಿಕೆಗಳ ಬಗ್ಗೆ ಮಾತನಾಡ ಬೇಕಾಗುತ್ತದೆ.

ಗಾಂಧಿ ಮಾದರಿಗಿಂತ ಹೊಸ ಮಾದರಿಯ ಸನ್ನಿಹಿತವಾದ ರಾಜಕಾರಣದ ಮೂಲಕವೂ ಶೋಷಣೆ ರಹಿತ, ಬಡತನ ಮತ್ತು ಅಸಮಾನತೆ ರಹಿತ, ಸಮಾಜ ನಿರ್ಮಾಣ ಮಾಡಬಹುದು. ಕೊನೆಯದಾಗಿ ಸಮಾಜವಾದಿಗಳು ತಮ್ಮ ಹಾಲಿ ಮನಸ್ಸಿನ ಸ್ಥಿತಿಯನ್ನ ಬದಲಾಯಿಸಿ ಕೊಳ್ಳಬೇಕು. ಗಾಂಧಿವಾದಿ, ಲೋಹಿಯಾವಾದಿ ಮತ್ತು ಮಾರ್ಕ್ಸ್‌ವಾದಿ ಚಿಂತನೆಗಳ ನೆಲೆಯಲ್ಲಿ ತೊಡಗಿಸಿಕೊಂಡಷ್ಟೇ ಪ್ರಮಾಣದಲ್ಲಿ ಅಂಬೇಡ್ಕರ್ ಚಿಂತನೆಯಲ್ಲೂ ತೊಡಗಿಸಿ ಕೊಳ್ಳಬೇಕು. ತಮ್ಮ ಚಿಂತನೆಗಳಲ್ಲಿ ಅಲ್ಪಸಂಖ್ಯಾತರು ಮತ್ತು ಮಹಿಳೆಯರಿಗೆ ಒತ್ತು ಕೊಡುವ ಮಹತ್ವವನ್ನು ಅಸ್ಪೃಶ್ಯರಿಗೂ ಕೊಡಬೇಕು. ಅಂಬೇಡ್ಕರ್ ವ್ಯಕ್ತಿತ್ವ ಮತ್ತು ವಿಚಾರಗಳಿಗೆ ಒಟ್ಟಾರೆ ಸಾಮಾಜಿಕ ಸಮ್ಮತಿ ಸಿಗುವ ನಿಟ್ಟಿನಲ್ಲಿ ಶ್ರಮಿಸಬೇಕು. ಹೊಸ ಧೋರಣೆಗಳ ಮೂಲಕ ಪರ್ಯಾಯ ರಾಜಕಾರಣ ಹುಟ್ಟಿಕೊಳ್ಳಬೇಕು ಮತ್ತು ಬೆಳೆಯಬೇಕು. ಇದಿಲ್ಲವಾದಲ್ಲಿ ಹಳೆಯದಕ್ಕೂ ಮತ್ತು ಹೊಸದೆಂದು ಹೇಳಿಕೊಳ್ಳುವುದಕ್ಕೂ ಯಾವುದೇ ವ್ಯತ್ಯಾಸವಿರುವುದಿಲ್ಲ. □

ಪರ್ಯಾಯ ರಾಜಕಾರಣ ಏಕೆ? ಹೇಗೆ?

ಶರ್ಮರ ಕಾವ್ಯತತ್ವ ಮತ್ತು ಆಚಾರ



ನೆನಪು

ಒಂದೊಂದು ಕವನವೂ ಭರವಸೆಯ ವ್ಯವಸಾಯ ಎಂದು ಭಾವಿಸಿದ ಶರ್ಮ ತಮ್ಮ ಜೀವನುದುದ್ದಕ್ಕೂ ಅತೀವ ನಿಷ್ಠೆ ಮತ್ತು ಶ್ರದ್ಧೆಗಳಿಂದ ಕಾವ್ಯ ಕೃಷಿಯನ್ನು ನಡೆಸುತ್ತ ಬಂದವರು. ಇವರ ಒಟ್ಟಾರೆ ಕಾವ್ಯ ಸಿದ್ಧಾಂತಗಳನ್ನು ನಾವು ಒಪ್ಪದಿರಬಹುದು. ಇವರ ದೃಷ್ಟಿ ಧೋರಣೆಗಳ ಬಗ್ಗೆ ನಮಗೆ ಸಹಮತವೂ ಇಲ್ಲದಿರಬಹುದು. ಆದರೆ ಇವರ ಸೈದ್ಧಾಂತಿಕ ನೆಲೆಗಳ ಬಗ್ಗೆ ಇನ್ನಷ್ಟು ಚರ್ಚೆಯಾಗಬೇಕಿದೆ. ಇರಲಿ, ಇವರು ಬಹಿರಂಗ ಮಾತುಗಳಲ್ಲಿ ವ್ಯಕ್ತಮಾಡಿರುವ ಕಾವ್ಯತತ್ವ ಕವಿತೆಗಳ ಕುರಿತಾದ ಇವರ ಕವಿತೆಗಳಲ್ಲಿನ ಕಾವ್ಯ ತತ್ವ ಹಾಗೂ ಇವರ ಇತರ ಕಾವ್ಯದಲ್ಲಿ ವ್ಯಕ್ತವಾಗುವ ಕಾವ್ಯತತ್ವ ಈ ಮೂರರಲ್ಲೂ ಢಾಳಾಗಿ ಕಾಣುವ ವ್ಯತ್ಯಾಸವಿಲ್ಲ.

○ ರಾಮಲಿಂಗಪ್ಪ ಟಿ. ಬೇಗೂರು

ಶರ್ಮರ ಕಾವ್ಯದ ಪರಿಕಲ್ಪನೆ ಮತ್ತವರ ಕವಿತೆಗಳಲ್ಲಿರುವ ಅದರ ಆಚರಣೆ ಇವುಗಳ ನಡುವಣ ಸಂಬಂಧಗಳನ್ನು ಕುರಿತು ಯೋಚಿಸುವುದು : ಆ ಮೂಲಕ ಅವರ ಕಾವ್ಯ ಸ್ವರೂಪವನ್ನು ಚರ್ಚಿಸುವುದು ಈ ಲೇಖನದ ಉದ್ದೇಶವಾಗಿದೆ. ಹಾಗೇ ಶರ್ಮರ ಚಿಂತನೆ ಮತ್ತು ದೃಷ್ಟಿಕೋನ ಹಾಗೂ ಸಾಮಾಜಿಕ ಕಾಳಜಿಗಳ ಮೂಲಕ ಅವರ ಕಾವ್ಯವನ್ನು ಪ್ರವೇಶಿಸುವುದು ಈ ಬರೆಹದ ಇನ್ನೊಂದು ಉದ್ದೇಶ.

ಶರ್ಮರ ಕಾವ್ಯದಲ್ಲಿ ಪ್ರಧಾನವಾಗಿ ಎರಡು ಘಟ್ಟಗಳಿವೆ. ೧. ೧೯೫೬ ರವರೆಗಿನ ಆರಂಭದ ಘಟ್ಟ ೨. ೧೯೬೦ರ ನಂತರದ ಘಟ್ಟ. ಈ ಎರಡರಲ್ಲೂ ತಂತ್ರ, ರಚನಾ ವಿನ್ಯಾಸ, ಛಂದಸ್ಸು, ಸಂವೇದನೆಗಳಲ್ಲೆಲ್ಲ ಗಮನೀಯ ವ್ಯತ್ಯಾಸಗಳಿವೆ. ಮೊದಲ ಘಟ್ಟ ಶರ್ಮರು ತಮ್ಮದೇ ಕಾವ್ಯದ ದಾರಿಯನ್ನು ಅನುಕರಣಶೀಲತೆಯಿಂದ ಹೊರಬಂದು ಹುಡುಕ ತೊಡಗಿದ್ದ ಘಟ್ಟವಾದರೆ, ಎರಡನೆಯದು ಶರ್ಮರೇ ತಮ್ಮನ್ನು ಕಾವ್ಯಮುಖೇನ ಹುಡುಕಿಕೊಳ್ಳುವ ಘಟ್ಟವಾಗಿದೆ.

'ಹಿಡಿಯ ಗಾತ್ರದೆದೆಯ ಹರವಿನಲ್ಲಿ ಜಗವ ಹಿಡಿಯಬಯಸಿದೆ
ನಾನು ನನ್ನ ಎಂಬುದನ್ನು ಪ್ರಥಮದಿಂದ ಸಪ್ತಮೀ ವಿಭಕ್ತಿವರೆಗು
ಮರೆಯಬಯಸಿದೆ.'

(ಹೃದಯಗೀತ ಪುಟ-೧೮, ಸಮಗ್ರ ಕಾವ್ಯ, ಸಪ್ನ ೧೯೯೯)

ಎಂಬ ಶರ್ಮರ ಕಾವ್ಯ ಭೂಮಿಕೆಯಲ್ಲಿ ವ್ಯಕ್ತಿ ಮತ್ತು ಲೋಕಗಳ ನಡುವಿನ ಸಂಬಂಧಗಳ ಶೋಧವಿದೆ. ನಾನು ನನ್ನ ಎಂಬುದನ್ನು ಮರೆಯಬಯಸುವ ಕವಿ ಈ ಇಡೀ ಕವಿತೆಯ ತುಂಬ ತನ್ನ ಆತ್ಮಕಥನವನ್ನೇ ಕಥಿಸ ಹೊರಟಂತೆ ಕಾಣುತ್ತಾರೆ. ಆತ್ಮಕಥನಯುಕ್ತ ಕಾವ್ಯವು ಸಂಸ್ಕೃತಿ ಕಥನವಾಗುವ ರೂಪಾಂತರ ಕ್ರಿಯೆಯು ಇವರಲ್ಲಿದೆ.

ಕನ್ನಡ ಪರಂಪರೆ, ಭಾರತೀಯ ಪುರಾಣ, ಬೈಬಲ್ಲಿನ ಲೋಕ, ಗ್ರೀಕ್ ಪುರಾಣ, ಕ್ರಿಶ್ಚಿಯನ್ ನಂಬಿಕೆಗಳು, ಇಂಗ್ಲಿಷ್ ಲೋಕ ಮತ್ತು ಇದೆಲ್ಲವೂ ಒಳಗೊಂಡ ಇವರ ಖಾಸಗಿ ಬದುಕು - ಇದೆಲ್ಲದರ ಮಿಶ್ರತಳಿ ಅನ್ನಬಹುದಾದದ್ದು. ಸುತ್ತಣ ಜಗತ್ತಿಲ್ಲದೆ ನಾನಿಲ್ಲ ಅನ್ನುವುದು ದಿಟವಾದರೂ, ನನ್ನೊಳಗಿನ ನನ್ನನ್ನು ರೂಢಿಸುವುದೇ ನನ್ನ ಸುತ್ತಣ ಲೋಕವಾದರೂ ನನ್ನ ಕಾವ್ಯದ ವಸ್ತು ನಾನು' (ಬಾನುಲೀ ಮಾತು ಪು.೨೧). ಅಂದರೆ ಸಾಮಾಜಿಕ ಸನ್ನಿವೇಶಗಳು, ಈ ನೆಲದ ಸಮಸ್ಯೆಗಳು, ತರತಮಗಳು ಇವರಲ್ಲಿ ಗೈರುಹಾಜರಾಗಿವೆ ಎಂದೇನೂ ಅಲ್ಲ. ಇವೆಲ್ಲ ಶರ್ಮರ ಕಾವ್ಯ ಜಾಗತೀಕರಣಕ್ಕೆ ತುತ್ತಾದ ಯಾವ ವ್ಯಕ್ತಿಯೂ ನಡುಗಡ್ಡೆಯಂತೆ ಬಾಳಲಾರ. ತನಗೇ ಗೊತ್ತಿಲ್ಲದಂತೆ ಆತ ಹಲವು ಸಮ್ಮಿಶ್ರವಾಗಿರುತ್ತಾನೆ. ಹೀಗಾಗಿ ಶರ್ಮರ ಕಾವ್ಯ ಒಂಥರದ ಹೇಸರಗತ್ತೆ. ಕತ್ತೆ ಕುದುರೆಗಳ ಮಿಶ್ರತಳಿಯಾದ ಹೇಸರಗತ್ತೆ ಶರ್ಮ ಕಾವ್ಯದ ಪ್ರತಿಮೆ.

ಗಳಿಗೆ ಗಳಿಗೆಗೂ ಬೆಳೆದು ನಿಲ್ಲುವ ದೈತ್ಯ
ನಗರದ ಮಧ್ಯೆ ಆರು ಎಂಟರ ಹುತ್ತ
ಒಳಗೆ ಸಣ್ಣಗೆ ಸುರುಟಿಕೊಳ್ಳುವ ಬಾಳು
ಶಂಖದ ಹುಳು.... (ಹೇಸರಗತ್ತೆ ಪು.೧೫೬)

ಈ ನುಡಿ ಇವರ ಕಾವ್ಯ ಸ್ವರೂಪದ ವ್ಯಾಖ್ಯೆಯೂ ಹೌದು. ಆಧುನಿಕತೆಯ ಬೆನ್ನುಹತ್ತಿದ ಸಮಾಜದ ಸಂಕೇತವೂ, ಮೂರನೇ ಜಗತ್ತಿನ ಬಾಳಿನ ವ್ಯಾಖ್ಯಾನವೂ ಹೌದು. ವಸಾಹತುಶಾಹಿ ನೆಲೆಗೆ ತೋರಿದ ಪ್ರತಿಕ್ರಿಯೆಯೂ ಹೌದು. ಲೈಂಗಿಕ ಪುನರುಜ್ಜೀವನದ ವೈಯಕ್ತಿಯ ಅನ್ಯೋಕ್ತಿಯೂ ಹೌದು. ಆತ್ಮ ಸಂವಾದಿ ಕಾವ್ಯವು ಸಂಸ್ಕೃತಿ ಕಥನವಾಗುವ ಸ್ಪಷ್ಟ ಲಕ್ಷಣಗಳು ಇಂಥ ಕವಿತೆಗಳಲ್ಲಿವೆ.

ಬೇಂದ್ರೆ, ಕುವೆಂಪು, ಅಡಿಗರೆಲ್ಲ ತಮ್ಮ ಸಮಕಾಲೀನ ಸಮಾಜಕ್ಕೆ ಸ್ಪಂದಿಸಿದ ಕವಿಗಳು. ತಮ್ಮ ಕಾವ್ಯವನ್ನು ಸಮುದಾಯದ ದನಿಯಾಗಿ ದೃಷ್ಟಿಸಿದವರು. ಶರ್ಮರ ನಂತರದ ಕಂಬಾರ ಚಂಪಾ ಕೂಡ ಇದಕ್ಕೆ ಹೊರತಲ್ಲ. ಸ್ವಾತಂತ್ರ್ಯೋತ್ತರ ಭಾರತದ ಸಮಾಜೋ - ರಾಜಕೀಯ ಸನ್ನಿವೇಶಗಳು ಇವರ ಕಾವ್ಯವನ್ನು ಕಾಡಿವೆ. ಆದರೆ ಶರ್ಮರ ಅಭಿವ್ಯಕ್ತಿ ವ್ಯಕ್ತಿಕೇಂದ್ರಿತವಾದದ್ದು. 'ನನ್ನ ಕಾವ್ಯ ಹೇಳಿ ಕೇಳಿ ಪರ್ಸನಲ್ ಇವರಲ್ಲಿ ಅಂತಿಮವಾಗಿ ವೈಯಕ್ತಿಕ ವ್ಯಕ್ತಿತ್ವ ಮತ್ತು ತಿಳುವಳಿಕೆಯ ಅನ್ವೇಷಣೆಗೆ ದುಡಿಯುತ್ತವೆ.

ಯಾವ ಕವಿ ತನ್ನ ೧೮-೨೦ನೇ ವಯಸ್ಸಿನಲ್ಲಿ ಕಮ್ಯುನಿಸಂ ಬಗ್ಗೆ ನಂಬಿಕೆ ಇಟ್ಟುಕೊಂಡಿರುವುದಿಲ್ಲವೋ ಅವನು ನನ್ನ ಪ್ರಕಾರ ಕವಿಯೇ ಅಲ್ಲ ಎನ್ನುವ ಶರ್ಮ ಕವಿಯಾದವನಿಗೆ ಅವನಿಗೇ ಆದ ಜೀವನ ದೃಷ್ಟಿ ಇರಬೇಕು ಎಂದು ವಾದಿಸುವವರು. (ನೋಡಿ : ಹೊಸತು ವಿಶೇಷಾಂಕ ಸಂದರ್ಶನ ೨೦೦೪) ಜಾತಿ, ಧರ್ಮ, ಬುಡಕಟ್ಟುಗಳ ಪರಂಪರೆಯಿರುವ ಭಾರತದಲ್ಲಿ ವ್ಯಕ್ತಿಗಿಂತ ಸಮುದಾಯವೇ ಮುಖ್ಯ. ವ್ಯಕ್ತಿಯ ಚಹರೆಗಳಿಗಿಂತ ಸಾಮುದಾಯಿಕ ಚಹರೆಗಳೇ ಮುಖ್ಯ. ಇಂಥ ಸಂಸ್ಕೃತಿಯಲ್ಲಿ ಜನಿಸುವ ಕಾವ್ಯ ಕೂಡ ಹುಟ್ಟುವಾಗ ವೈಯಕ್ತಿಕವಾದರೂ ನಂತರದಲ್ಲಿ ಅದು ಸಾಮುದಾಯಿಕವಾಗಿಬಿಡುತ್ತದೆ. ಭಾರತೀಯ ಸಂಸ್ಕೃತಿಯ ಮಾಂತ್ರಿಕತೆಯನ್ನು ಇಂಥ ನೆಲವನ್ನು ಬಿಟ್ಟು ೨೪ ವರ್ಷಗಳ ಕಾಲ ವಿದೇಶದಲ್ಲಿದ್ದ ಶರ್ಮ

ಕನಸು, ನೆನಪು ಕಲಸುವ ನಿಮ್ಮ ಹದ ನೆನಪಾಗಿ
ಮೂಡಲಿಗೆ ನಿತ್ಯ ಚಾಚಿ ಬಾಚಲಿ ಕಯ್ಯಿ
ಮೊಲೆ ಕೊಟ್ಟ ನೆಲಕ್ಕಿರಲಿ ಜಯಕಾರದೊಸಗೆ

(ಸಂಕ್ರಾಂತಿ, ಪು.೨೬೫)

ಎಂದೂ ಬರೆಯುತ್ತಾರೆ. ಶರ್ಮರ ಕಾವ್ಯದಲ್ಲಿ ಮೂಡಲ ವಯಕ್ತಿಕ ಚಹರೆಗಳು ಮತ್ತು ಮೊಲೆ ಕೊಟ್ಟ ನೆಲದ ಸಾಮುದಾಯಿಕ ಚಹರೆಗಳೆರಡೂ ಬೆರೆತಿವೆ. ಇವರ ಕಾವ್ಯ ವ್ಯಕ್ತಿ ವಿಶಿಷ್ಟತೆ ಮತ್ತು

ಸಾಮುದಾಯಿಕತೆಗಳೆರಡರ ಬೆರಕೆ. ಹಾಗೇ ಇವರ ಚಿಂತನೆ ಮತ್ತು ಸಂವೇದನೆಗಳು ಕೂಡ.

'I am not interested in political statement. ನನ್ನ ವಯಕ್ತಿಕ ತುರ್ತು ಇಲ್ಲದ ಪದ್ಯಗಳಿದ್ದರೆ ನನ್ನ ಪ್ರಕಾರ ಅವು ಪದ್ಯಗಳೇ ಅಲ್ಲ.' (ಋಜುವಾತು ಸಂಚಿಕೆ ೪೩, ಪು. ೬೫) ಎಂದು ಹೇಳುವ ಶರ್ಮ ಪ್ರತಿಯೊಂದನ್ನು ಸ್ವ-ಅನುಭವದ ಅನ್ವೇಷಣೆಯ ವ್ಯಾಯಾಮವಾಗಿಯೇ ಕಾಣುತ್ತಾರೆ.

ಶರ್ಮ ತಾವು ಭಾಗವಹಿಸಿದ ಬಹುಪಾಲು ಕವಿಗೋಷ್ಠಿಗಳಲ್ಲಿ ಕಾವ್ಯಗೇಯತೆಯನ್ನು ಖಾರವಾಗಿ ದಾಳಿ ಮಾಡುತ್ತಿದ್ದವರು. ಲಕ್ಷ್ಮಣರಾವ್, ದೊಡ್ಡರಂಗೇಗೌಡ, ವೇಂಕಟೇಶಮೂರ್ತಿ, ವ್ಯಾಸರಾವ್, ಲ.ನಾ. ಭಟ್ಟರು ಇವರನ್ನೆಲ್ಲ ಪಂಚದಾಸರೆಂದೇ ಗೇಲಿ ಮಾಡುತ್ತಿದ್ದ ಶರ್ಮ ಅನೇಕ ವೇಳೆ ವೇದಿಕೆಗಳಲ್ಲಿ ತಾತ್ವಿಕ ಜಗಳ ಹೂಡಿದ್ದೂ ಇದೆ. ಕವಿತೆಯು ರಂಜನೆಯ, ಹಾಡುಗಾರಿಕೆಯ ಪರಿಕರವಾಗಿ ಬಳಕೆಯಾಗುವ ಬಗ್ಗೆ ಶರ್ಮರಿಗೆ ಅಪಾರವಾದ ವಿರೋಧವಿತ್ತು. ಕಾವ್ಯದಲ್ಲಿ ಗೇಯತೆ ಇರಬಾರದು, ಕಾವ್ಯವನ್ನು ಹಾಡಬಾರದು ಎಂಬುದಕ್ಕಿಂತ : ಹಾಡುವುದಕ್ಕೆಂದೇ ಕಾವ್ಯವನ್ನು ಬರೆಯಬಾರದು ಎಂಬ ಸಿದ್ಧಾಂತವನ್ನು ನಿಯಮವೆಂಬಂತೆ ಗೇಯತೆಯನ್ನು ವ್ರತದಂತೆ ಪಾಲಿಸಿಕೊಂಡು ಬಂದ ಕವಿ ಶರ್ಮ. ಕನ್ನಡದ ದಾಸ ಕವಿಗಳು (ಕ್ಯಾಸೆಟ್ ಕವಿಗಳು) ಎಂದು ಯಾರನ್ನು ಶರ್ಮ ಜರೆದರೋ ಅವರು ಮತ್ತು ಅವರ ಸುತ್ತಣ ಮೀಡಿಯಾ, ಜೊತೆಗೆ ಕನ್ನಡದ ಮುಖ್ಯ ವಿಮರ್ಶಕರು ಮತ್ತು ಅಕಡಮೀಶಿಯನ್ನರು ನಂಬಿದ ಕಾವ್ಯಕಲ್ಪನೆ ಶರ್ಮರನ್ನು ಈ ಶತಮಾನದ ಉತ್ತರಾರ್ಧದಲ್ಲಿ ಏಕಾಕಿಯನ್ನಾಗಿಸಿತು. ಗೇಯತೆಯ ಬಗ್ಗೆ ಹೇಗೋ ಹಾಗೆ ಶರ್ಮರಿಗೆ ಹನಿಗವಿತೆಗಳ ಬಗೆಗೂ ಪ್ರೀತಿಯಿರಲಿಲ್ಲ.

ಹನಿ ಹನಿ ಕೂಡಿ ಕಡಲಾದರೂ
ಕಡಲಿಡೀ ಕುಡಿದ ಕವಿ ಬಸಿದ ಹನಿ ಕವನದೊಡಲಾದರೂ
ಹನಿಗೆಂದಾದರೂ ಉಂಟೆ ಕಡಲಿನ ಸಮಗ್ರತೆ

(ಹನಿಗವಿತೆ ಕೇಳಿದ ಸಂಪಾದಕರಿಗೆ, ಪು. ೨೪೪)

ಹೀಗೆ ಹನಿಗವಿತೆಗಳ ಬಗೆಗೆ ಶರ್ಮರಿಗೆ ತಮ್ಮದೇ ಸೈದ್ಧಾಂತಿಕ ಭಿನ್ನಾಭಿಪ್ರಾಯವಿದೆ. ಹನಿಗವಿತೆಯನ್ನು ಬಯ್ಯಲು ಒಂದೇ ಒಂದು ಹನಿಗವಿತೆ ಬರೆದಿರುವ ಶರ್ಮ ಇನ್ನೊಂದು ಹನಿಗವಿತೆ ಬರೆದಿಲ್ಲ.

ರೂಪಾಂತರ ಮಾರ್ಗ ಶರ್ಮರ ಕಾವ್ಯದ ಬಹುದೊಡ್ಡ ತತ್ವ. ಒಂದು ರೂಪ ಕಳೆದು ಇನ್ನೊಂದು ರೂಪವೇ ಬರುವುದರ ಬಗ್ಗೆ ಶರ್ಮರಿಗೆ ಅಪಾರ ಪ್ರೀತಿಯಿದೆ. 'ರೂಪಾಂತರ' (ಪು. ೨೩೦) ಕವಿತೆಯಲ್ಲಿ ನೂರಾರು ಕಂಬಳಿ ಹುಳಗಳಲ್ಲಿ ಯಾವುದೋ ಒಂದು ಧ್ಯಾನಿಸಿ, ತನ್ನ ಒಡಲ ನೂಲಿನಿಂದಲೇ ಗೂಡುಕಟ್ಟಿ ಚಿಟ್ಟೆಯಾಗಿ ರೂಪಾಂತರವಾಗುತ್ತದೆ. ಶರ್ಮರಿಗೆ ಹೀಗೇ ನೂರಾರು ಮಾತುಗಳಲ್ಲಿ ಯಾವುದೋ ಒಂದು ಮಾತು ಮಾತ್ರವೇ ಧ್ಯಾನದಿಂದ ಕವಿತೆಯ ರೂಪ ಪಡೆಯುತ್ತದೆ. ಚಿಟ್ಟೆಯಾಗದೇ ಇನ್ನೊಬ್ಬರ ಪಾಲಿಗೆ ನೂಲಾಗಿ ಪರಿವರ್ತನೆಯಾಗುವ ಕವಿತೆಯು ಶರ್ಮರ ಪ್ರಕಾರ ಕವಿತೆಯಯೇ ಅಲ್ಲ. ಅದು ಕವಿತೆಯ ಸಾವು. 'ತೆರಣೆಯ ಹುಳುವಿನ ಕವಿತೆ' (ಪು. ೨೮೫) ಆರಂಭವಾಗುವುದೇ 'ಸತ್ತು ಹೋಯಿತು ಕವಿತೆ....' ಎಂಬ ಮಾತಿನಿಂದ. ಕವಿತೆಯ ಪ್ರಯೋಜನ ಮತ್ತು ಆಗುವಿಕೆಗಳ ನಡುವೆ ಇವರಿಗೆ ಕವಿತೆ ಒಂದು ಒಳ್ಳೆಯ ಕವಿತೆ ಆಗಬೇಕು ಅಷ್ಟೆ

ಚಿಟ್ಟೆಯಾಗದೇ ಇನ್ನೊಬ್ಬರ ಪಾಲಿಗೆ ನೂಲಾಗಿ ಪರಿವರ್ತನೆಯಾಗುವ ಕವಿತೆಯು ಶರ್ಮರ ಪ್ರಕಾರ ಕವಿತೆಯೇ ಅಲ್ಲ. ಅದು ಕವಿತೆಯ ಸಾವು. 'ತೆರಣೆಯ ಹುಳುವಿನ ಕವಿತೆ' ಆರಂಭವಾಗುವುದೇ 'ಸತ್ತು ಹೋಯಿತು ಕವಿತೆ....' ಎಂಬ ಮಾತಿನಿಂದ. ಕವಿತೆಯ ಪ್ರಯೋಜನ ಮತ್ತು ಆಗುವಿಕೆಗಳ ನಡುವೆ ಇವರಿಗೆ ಕವಿತೆ ಒಂದು ಒಳ್ಳೆಯ ಕವಿತೆ ಆಗಬೇಕು ಅಷ್ಟೆ.

........ತೇವವಾರಿದ ಎಳೆ ಬಿಳಿ ರೆಕ್ಕೆ
ಪಟ ಪಟ ಬಡಿದು ಹಲ್ಲಿಗೆಟುಕದ ಹಾಗೆ
ಗಾಳಿಗೇರಿದ ಬೆಳ್ಳನೆಯ ಚಿಟ್ಟೆ -
ಹೊಸ ಹುಟ್ಟಿಗನುವಾದ ಹೊಸ ಮಾತು
ಪಡೆದೊಂದು ಕವಿತೆ.

ಕಂಬಳಿ ಹುಳ ನೂಲಾಗಬಾರದು ಚಿಟ್ಟೆಯಾಗಬೇಕು ಎಂಬಂತೆ ಮಾತು ಹಾಡಾಗಬಾರದು, ಕವಿತೆಯಾಗಬೇಕು ಎಂಬ ತಾತ್ವಿಕತೆಯೂ ಈ ರೂಪಾಂತರದ ಹಿಂದೆ ಇದೆ. ರೂಪಾಂತರ ತತ್ವವು 'ಕನಸಲ್ಲಿ ಬರೆದ ಕವಿತೆ' ಪದ್ಯದಲ್ಲೂ ಇದೆ. ಕವಿತೆಯ ಕೆಲಸ ಕತೆ ಹೇಳುವುದಲ್ಲ ಎಂದು ಘಂಟಾಘೋಷವಾಗಿ ಹೇಳುವ ಶರ್ಮರ ಈ ಕವಿತೆಯಲ್ಲಿ ಒಂದು ಪುಟ್ಟ ಕತೆಯೇ ಇದೆ. (ನೋಡಿ ಪು. ೩೦೯) ಹಿಮದ ಪುತ್ಥಳಿಯೊಂದು ಪುರುಷ ಸ್ಪರ್ಶಕ್ಕೆ ನೀರಾಗಿ ಹೋಗುವ ವಿವರವುಳ್ಳ ಈ ಕವಿತೆ ರೂಪಾಂತರ ತತ್ವಕ್ಕೆ ಲಕ್ಷಣ ಪದ್ಯವೂ ಹೌದು, ಲಕ್ಷ್ಯಪದ್ಯವೂ ಹೌದು.

ಅನುವಾದದಲ್ಲಿ ಕೂಡ ಶರ್ಮ ರೂಪಾಂತರವೇ ಶ್ರೇಷ್ಠವೆಂದು ಪ್ರತಿಪಾದಿಸುತ್ತಾರೆ. ಅವರ ಇಂಗ್ಲಿಷ್ ಕವಿತೆಗಳ ಅನುವಾದದಲ್ಲಿ ಈ ತತ್ವ ಆಚರಣೆಗೆ ಬಂದಿದೆ ಕೂಡ. ಸಾಂಸ್ಕೃತಿಕ ಭಾಷಾಂತರದ ಕಾಳಜಿಯಿದ್ದ ಶರ್ಮ ಸ್ವತಂತ್ರ ರಚನೆಯೆಂಬಂತೆಯೇ ಅನುವಾದ ಮಾಡಿದ್ದಾರೆ. 'ಎರಡೂ ಭಾಷೆ ಗೊತ್ತಿರುವವರು ಅನುವಾದದ ವಿಮರ್ಶೆ ಮಾಡಲೇಬಾರದು' ಎನ್ನುವ ಶರ್ಮ ಅನುವಾದದ ಬಗ್ಗೆ ತಮ್ಮದೇ ಸಿದ್ಧಾಂತವನ್ನು ಹೊಂದಿದ್ದಾರೆ. (ನೋಡಿ : 'ಹೊಸತು', ಜನವರಿ ೨೦೦೪) ತಮ್ಮ ಇಳಿಗಾಲದಲ್ಲಿ ಹೆಗ್ಗಡಿತಿಯನ್ನು ಇಂಗ್ಲಿಷಿಗೆ ತರ್ಜುಮೆ ಮಾಡಿದ ಶರ್ಮ ಕನ್ನಡದ ಬಹಳಷ್ಟನ್ನು ಇಂಗ್ಲಿಷಿಗೆ ಅನುವಾದಿಸಿಕೊಡಬಹುದಾಗಿದ್ದ ಶಕ್ತಿಯಿದ್ದವರು. ಆದರೆ ಯಾಕೋ ಅವರಿಗೆ ಆ ಕಡೆಗೆ ಸ್ವಯಮಾಸಕ್ತಿ ಮೂಡಲಿಲ್ಲ.

ನಗರದಲ್ಲೇ ಬಾಳಿ ಬದುಕಿದ ಶರ್ಮರಿಗೆ ಈ ನಗರದ ಬದುಕಿನ ಬಗ್ಗೆ ಅಷ್ಟಾಗಿ ಪ್ರೀತಿಯಿಲ್ಲ. ಇವರ 'ಮನೆಯೆದುರಿನ ಪಿಚಕಾರಿ ಮರ' ಎಂಬ ನಾಲ್ಕು ಸಾನೆಟ್ಟುಗಳು ಮನುಷ್ಯ - ಪ್ರಕೃತಿ - ನಗರೀಕೃತ ಸ್ಥಿತಿಗಳ ನಡುವಿನ ಸಂಬಂಧವನ್ನು ಹೇಳುವ ಸಾನೆಟ್ಟುಗಳಾಗಿವೆ. ಇಲ್ಲಿ ಆರೈಕೆ, ನೀರು ಗೊಬ್ಬರ, ಗಾಳಿ ಬೆಳಕು ಎಲ್ಲವೂ ಉಂಟು. ಇಲ್ಲಿ ಬೆಳೆದ ಗಿಡದ ಫಲ ತಿನ್ನಲು ಹಕ್ಕಿಗಳೂ ಬಂದು ಹೋಗುತ್ತವೆ. ಬೀಜವೂ ಸೃಷ್ಟಿಯಾಗುತ್ತವೆ. ಆದರೆ ಇಲ್ಲಿ ಬೀಜಕ್ಕೆ ಬೇರಿಳಿಸಿ ಬೆಳೆಯಲು ನೆಲವಿಲ್ಲ. ಇರುವುದು ಬರೀ ಟಾರು ಮತ್ತು ಮೋರಿ ಮಾತ್ರ.

ನಗರದಲ್ಲೇ ಬಾಳಿ ಬದುಕಿದ ಶರ್ಮರಿಗೆ ಈ ನಗರದ ಬದುಕಿನ ಬಗ್ಗೆ ಅಷ್ಟಾಗಿ ಪ್ರೀತಿಯಿಲ್ಲ. ಇವರ 'ಮನೆಯೆದುರಿನ ಪಿಚಕಾರಿ ಮರ' ಎಂಬ ನಾಲ್ಕು ಸಾನೆಟ್ಟುಗಳು ಮನುಷ್ಯ - ಪ್ರಕೃತಿ - ನಗರೀಕೃತ ಸ್ಥಿತಿಗಳ ನಡುವಿನ ಸಂಬಂಧವನ್ನು ಹೇಳುವ ಸಾನೆಟ್ಟುಗಳಾಗಿವೆ. ಇಲ್ಲಿ ಆರೈಕೆ, ನೀರು ಗೊಬ್ಬರ, ಗಾಳಿ ಬೆಳಕು ಎಲ್ಲವೂ ಉಂಟು. ಇಲ್ಲಿ ಬೆಳೆದ ಗಿಡದ ಫಲ ತಿನ್ನಲು ಹಕ್ಕಿಗಳೂ ಬಂದು ಹೋಗುತ್ತವೆ. ಬೀಜವೂ ಸೃಷ್ಟಿಯಾಗುತ್ತವೆ. ಆದರೆ ಇಲ್ಲಿ ಬೀಜಕ್ಕೆ ಬೇರಿಳಿಸಿ ಬೆಳೆಯಲು ನೆಲವಿಲ್ಲ, ಇರುವುದು ಬರೀ ಟಾರು ಮತ್ತು ಮೋರಿ ಮಾತ್ರ. ವಿಷಾದದೊಳಗೆ ಮುಗಿಯುವ ನಾಲ್ಕನೇ ಸಾನೆಟ್ಟಿನ ಕೊನೆಯ ಸಾಲು ಈ ನಾಲ್ಕನ್ನು ಒಂದೇ ಕವಿತೆಯ ನಾಲ್ಕು ನುಡಿಗಳೆಂಬಂತೆ ಪರಿಭಾವಿಸಲು ಒತ್ತಾಯಿಸುತ್ತದೆ. ಈ ನಾಲ್ಕು ಬಿಡಿ ಕವಿತೆಗಳಾಗಿ ಉಳಿಯದೆ, ಒಟ್ಟಾರೆ ಬೀಜವಿದ್ದೂ ಜೀವಸೃಷ್ಟಿಗೆ ಜಾಗವಿಲ್ಲದ ಸ್ಥಿತಿಗೆ ಒಂದು ವಿರಾಟ್ ಪ್ರತಿಮೆಯಾಗಿ ಒದಗುತ್ತವೆ. ಈ ವಿರಾಟ್ ಪ್ರತಿಮೆ ಶರ್ಮರ ದಾಂಪತ್ಯಕ್ಕಲ್ಲ ಕಾವ್ಯಕ್ಕೆ, ಕಾವ್ಯ ಕೃಷಿಗೆ ಒಡ್ಡಿದ ಪ್ರತಿಮೆಯಾಗಿಯೂ ಕಾಣುತ್ತದೆ. ಶರ್ಮರ ಭರವಸೆಯ ವ್ಯವಸಾಯಕ್ಕಿಲ್ಲಿ ನೆಲವೇ ಇಲ್ಲ, ಬರಿ ಟಾರು ಮತ್ತು ಮೋರಿ ಅಷ್ಟೆ ಇವೆ.

ಒಂದೊಂದು ಕವನವೂ ಭರವಸೆಯ ವ್ಯವಸಾಯ' ಎಂದು ಭಾವಿಸಿದ ಶರ್ಮ ತಮ್ಮ ಜೀವನುದುದ್ದಕ್ಕೂ ಅತೀವ ನಿಷ್ಠೆ ಮತ್ತು ಶ್ರದ್ಧೆಗಳಿಂದ ಕಾವ್ಯ ಕೃಷಿಯನ್ನು ನಡೆಸುತ್ತ ಬಂದವರು. ಇವರ ಒಟ್ಟಾರೆ ಕಾವ್ಯ ಸಿದ್ಧಾಂತಗಳನ್ನು ನಾವು ಒಪ್ಪದಿರಬಹುದು. ಇವರ ದೃಷ್ಟಿಧೋರಣೆಗಳ ಬಗ್ಗೆ ನಮಗೆ ಸಹಮತವೂ ಇಲ್ಲದಿರಬಹುದು. ಆದರೆ ಇವರ ಸೈದ್ಧಾಂತಿಕ ನೆಲೆಗಳ ಬಗ್ಗೆ ಇನ್ನಷ್ಟು ಚರ್ಚೆಯಾಗಬೇಕಿದೆ. ಇರಲಿ, ಇವರು ಬಹಿರಂಗ ಮಾತುಗಳಲ್ಲಿ ವ್ಯಕ್ತಮಾಡಿರುವ ಕಾವ್ಯತತ್ವ, ಕವಿತೆಗಳ ಕುರಿತಾದ ಇವರ ಕವಿತೆಗಳಲ್ಲಿನ ಕಾವ್ಯ ತತ್ವ, ಹಾಗೂ ಇವರ ಇತರ ಕಾವ್ಯದಲ್ಲಿ ವ್ಯಕ್ತವಾಗುವ ಕಾವ್ಯತತ್ವ ಈ ಮೂರರಲ್ಲೂ ಢಾಳಾಗಿ ಕಾಣುವ ವ್ಯತ್ಯಾಸವಿಲ್ಲ. ಹಾಗೇ ತಮ್ಮ ತಾತ್ವಿಕ ನಂಬಿಕೆಗಳನ್ನು ಶರ್ಮ ತಮ್ಮ ಕಾವ್ಯದಲ್ಲಿ ಸಂಪೂರ್ಣ ಪಾಲಿಸಲೂ ಆಗಿಲ್ಲ.

ಅಪ್ಪಟ ನಾಸ್ತಿಕರಾದ ಶರ್ಮ ದೇವರಿಲ್ಲದ ಧರ್ಮದ ಬಗ್ಗೆ ನಂಬಿಕೆ ಇಟ್ಟುಕೊಂಡಿದ್ದವರು. ನಮ್ಮ ಪರಂಪರೆಯ ಮೌಢ್ಯ, ತಾರತಮ್ಯಗಳ ಬಗ್ಗೆ ಅಪಾರ ವಿರೋಧ ವ್ಯಕ್ತಪಡಿಸುತ್ತಿದ್ದ ಶರ್ಮ ಕುತೂಹಲವೆಂದರೆ ಮೀಸಲಾತಿ ವ್ಯವಸ್ಥೆಯನ್ನು ವಿರೋಧಿಸುತ್ತಿದ್ದರು ಕೂಡ. ಬ್ರಾಹ್ಮಣರಾಗಿ ಹುಟ್ಟಿದ ಕಾರಣಕ್ಕೆ ನನಗೆ ಈ ನೆಲದಲ್ಲಿ ಸರ್ಕಾರಿ ಉದ್ಯೋಗ ಲಭಿಸಲಿಲ್ಲ. ಮೀಸಲಾತಿಯಿಂದಾಗಿಯೇ ನಾನು ಈ ದೇಶದಲ್ಲಿ ಇರಲಾಗಲಿಲ್ಲ. ಹೊಟ್ಟಪಾಡಿಗೆ ವಿದೇಶಕ್ಕೆ ಹೋಗಬೇಕಾಯಿತು ಎಂದು ಖಾಸಗಿ ಮಾತುಕತೆಯೊಂದರಲ್ಲಿ ಹೇಳಿದ ಶರ್ಮ ಉನ್ನತ ಶಿಕ್ಷಣದಲ್ಲಿ ಮೀಸಲಾತಿ ಇರಬಾರದೆಂದು ಕಟುವಾಗಿ ಪ್ರತಿಪಾದಿಸುತ್ತಿದ್ದರು. (ನೋಡಿ : ಹೊಸತು ಜನವರಿ - ೨೦೦೪). □

ಶಬ್ದವಿಲ್ಲದ ಯುದ್ಧ

ಸಮಕಾಲೀನ

ಜಾಗತೀಕರಣವೆನ್ನುವುದು ಶಬ್ದವಿಲ್ಲದ ಯುದ್ಧ. ಆಯುಧಗಳು ಅಗೋಚರವಾಗಿ ಅಪ್ಪಳಿಸುತ್ತವೆ. ಬದುಕನ್ನು ಬಸಿದು ಬಂಡವಾಳವಾಗುತ್ತವೆ. ಇದರ ಮೊದಲ ಬಲಿ ನಮ್ಮ ಆರ್ಥಿಕತೆ. ಪರಿಪೂರ್ಣವಲ್ಲದಿದ್ದರೂ ಸಮತೋಲನವನ್ನು ಸಾಧಿಸುವ ಉದ್ದೇಶದಲ್ಲಿ ರೂಪುಗೊಂಡ 'ಮಿಶ್ರ ಆರ್ಥಿಕ ಪದ್ಧತಿ'ಯನ್ನು ಪಲ್ಲಟಗೊಳಿಸಿ 'ಮುಕ್ತ ಆರ್ಥಿಕ ಪದ್ಧತಿ'ಯನ್ನು ಪ್ರತಿಷ್ಠಾಪಿಸುವುದು ಜಾಗತೀಕರಣದ ಹುನ್ನಾರ. ಮುಕ್ತ ಆರ್ಥಿಕ ಪದ್ಧತಿಯಿಂದ ದೇಶವು ಸರ್ವ ಸಮಸ್ಯೆಗಳಿಂದ ಮುಕ್ತವಾಗುತ್ತದೆಯೆಂಬ ಹುಸಿಪ್ರಚಾರ.

○ ಪ್ರೊ॥ ಬರಗೂರು ರಾಮಚಂದ್ರಪ್ಪ

ಬ್ರೆಜಿಲ್‌ನ ಕಾರ್ಮಿಕ ನಾಯಕ ಲೂಯಿಸ್ ಇಗ್ನೆಷಿಯೋ ಸಿಲ್ವ ೧೯೮೫ರ ಆಗಸ್ಟ್‌ನಲ್ಲಿ ಹೇಳಿದ ಮಾತು ನೆನಪಾಗುತ್ತಿದೆ : 'ಮೂರನೇ ವಿಶ್ವಯುದ್ಧ ಆರಂಭವಾಗಿದೆ. ಈ ಯುದ್ಧವು ಬ್ರೆಜಿಲ್, ಲ್ಯಾಟಿನ್ ಅಮೇರಿಕ ಮತ್ತು ತೃತೀಯ ಜಗತ್ತನ್ನು ಹಾಳುಮಾಡುತ್ತದೆ. ಈ ಯುದ್ಧದಲ್ಲಿ ಯೋಧರು ಸಾಯುವುದಿಲ್ಲ; ಅವರ ಬದಲು ಮಕ್ಕಳು ಸಾಯುತ್ತಾರೆ. ಅಸಂಖ್ಯಾತ ಗಾಯಾಳುಗಳು ಕಾಣಿಸುವುದಿಲ್ಲ; ಅವರ ಜಾಗದಲ್ಲಿ ಅಸಂಖ್ಯಾತ ನಿರುದ್ಯೋಗಿಗಳು ಕಾಣಿಸುತ್ತಾರೆ. ಸೇತುವೆಗಳನ್ನು ನಾಶ ಮಾಡುವ ಬದಲು ಕಾರ್ಖಾನೆಗಳನ್ನು, ಶಾಖೆಗಳನ್ನು ಆಸ್ಪತ್ರೆಗಳನ್ನು ಮತ್ತು ಇಡೀ ಆರ್ಥಿಕತೆಯನ್ನು ಧ್ವಂಸ ಮಾಡಲಾಗುತ್ತದೆ. ಇದು ಅಂತಿಂಥ ಯುದ್ಧವಲ್ಲ; ವಿದೇಶಿ ಸಾಲದ ಯುದ್ಧ; ತೃತೀಯ ಜಗತ್ತಿನ ಮೇಲೆ ಅಮೇರಿಕದ ಯುದ್ಧ. ಇದರ ಪ್ರಮುಖ ಆಯುಧವೆಂದರೆ ಬಡ್ಡಿ, ಈ ಆಯುಧ ಅಣುಬಾಂಬಿಗಿಂತ ಮರಣಾಂತಿಕವಾದದ್ದು; ಲೇಸರ್ ಕಿರಣಕ್ಕಿಂತ ವಿನಾಶಕಾರಿಯಾದದ್ದು.'

ಲೂಯಿಸ್ ಇಗ್ನೇಷಿಯೋಸಿಲ್ವಾ ಕೊಟ್ಟ 'ಎಚ್ಚರಿಕೆ' ನಿಜವಾಗುತ್ತಿದೆ. 'ಜಾಗತೀಕರಣ'ವೆಂಬ 'ಯುದ್ಧ'ದ ಆಯುಧಗಳು ಈಗ ಅಮೇರಿಕದ ವಿಮಾನ ನಿಲ್ದಾಣಗಳಲ್ಲಿಲ್ಲ. ನಮ್ಮ ದೇಶದ ವಿಮಾನ ನಿಲ್ದಾಣಗಳಲ್ಲಿ ಇಳಿಸಿಕೊಂಡಾಗಿದೆ. ಅಲ್ಲಿಂದ ಅವು ನಗರ ಪ್ರವೇಶ ಮಾಡಿವೆ; ಪಟ್ಟಣಗಳತ್ತ ಸಾಗಿವೆ. ಹಳ್ಳಿ ಬಸ್ಸು ಹತ್ತಲು ಸಿದ್ಧವಾಗಿವೆ. ಸಾಮಾಜಿಕ-ಆರ್ಥಿಕ ಸಮಾನತೆಗೆ ವಿರೋಧಿಯಾದ 'ವ್ಯವಸ್ಥೆ'ಯ ಮಂತ್ರೋಚ್ಚಾರ ಸ್ವಾಗತ, ಬೌದ್ಧಿಕ ವಲಯದ ಗೊಂದಲ ಮತ್ತು ಪ್ರತಿರೋಧಗಳ ನಡುವೆ ಜಾಗತೀಕರಣ ಪ್ರಕ್ರಿಯೆ ಪ್ರಾರಂಭವಾಗಿಬಿಟ್ಟಿದೆ. ಹಳ್ಳಿಯ ನೆಲೆ ಅಸಹಾಯಕತೆಯಿಂದ ಆಘಾತಗೊಂಡಿದೆ. ಹಟ್ಟಿಗಳು ಕಟ್ಟಿಕೊಂಡಿದ್ದ ಕನಸುಗಳು ಕಂಗೆಡುತ್ತಿವೆ. ಕೊಳಗೇರಿಯ ಕಣ್ಣುಗಳು ಮಂಜಾಗುತ್ತಿವೆ. ಮಧ್ಯಮವರ್ಗದ ಮನಸ್ಸು ಹೊಳೆಯ ಉಬ್ಬರಕ್ಕೆ ತಬ್ಬಿಬ್ಬಾಗಿ ದಾಟುವ ದೋಣಿಯನ್ನು ಹುಡುಕುತ್ತಿದೆ. ಒಟ್ಟಾರೆ ನಾಡಿನ 'ಬೆವರು' ನಡುಗುತ್ತಿರುವಾಗ 'ಬಂಡವಾಳ' ಗುಡುಗುತ್ತಿದೆ. ಆದರೆ ಗುಂಡುಗಳ ಸದ್ದಿಲ್ಲ; ರಕ್ತದ ಮಡುವಿಲ್ಲ; ಅಬ್ಬರ – ಆಕ್ರಂದನಗಳ ಸುಳಿವಿಲ್ಲ.

ಜಾಗತೀಕರಣವೆನ್ನುವುದು ಶಬ್ದವಿಲ್ಲದ ಯುದ್ಧ. ಆಯುಧಗಳು ಅಗೋಚರವಾಗಿ ಅಪ್ಪಳಿಸುತ್ತವೆ. ಬದುಕನ್ನು ಬಸಿದು ಬಂಡವಾಳವಾಗುತ್ತವೆ. ಇದರ ಮೊದಲ ಬಲಿ ನಮ್ಮ ಆರ್ಥಿಕತೆ. ಪರಿಪೂರ್ಣವಲ್ಲದಿದ್ದರೂ ಸಮತೋಲನವನ್ನು ಸಾಧಿಸುವ ಉದ್ದೇಶದಲ್ಲಿ ರೂಪುಗೊಂಡ 'ಮಿಶ್ರ ಆರ್ಥಿಕ ಪದ್ಧತಿ'ಯನ್ನು ಪಲ್ಲಟಗೊಳಿಸಿ 'ಮುಕ್ತ ಆರ್ಥಿಕ ಪದ್ಧತಿ'ಯನ್ನು ಪ್ರತಿಷ್ಠಾಪಿಸುವುದು ಜಾಗತೀಕರಣದ ಹುನ್ನಾರ. ಮುಕ್ತ ಆರ್ಥಿಕ ಪದ್ಧತಿಯಿಂದ ದೇಶವು ಸರ್ವ ಸಮಸ್ಯೆಗಳಿಂದ ಮುಕ್ತವಾಗುತ್ತದೆಯೆಂಬ ಹುಸಿಪ್ರಚಾರ. ಹಾಗೆ ನೋಡಿದರೆ, ಜಾಗತೀಕರಣವೆಂಬ ಕಲ್ಪನೆಯೇ ಹುಸಿ ತಳಹದಿಯ ಮೇಲೆ ನಿಂತಿದೆ. ಅಮೇರಿಕದ ಆರ್ಥಿಕತೆಯನ್ನು ಎಲ್ಲ ಕಡೆಗೂ ವಿಸ್ತರಿಸಬೇಕೆಂಬ 'ಬಂಡವಾಳೀಕರಣ'ವನ್ನು ಜಾಗತೀಕರಣವೆಂದು ಕರೆದು, ಇದು ವಿಶ್ವದ ಅನಿವಾರ್ಯತೆಯೆಂದು ಬಿಂಬಿಸಲಾಗುತ್ತಿದೆ. ಇಂಗ್ಲಿಷ್ ಭಾಷೆಯನ್ನು 'ಅಂತರರಾಷ್ಟ್ರೀಯ ಭಾಷೆ'ಯೆಂದು ಕರೆದಷ್ಟೇ ಹುಸಿ ಪ್ರಚಾರವು ಜಾಗತೀಕರಣದ ಆಧಾರವಾಗಿದೆ. ಇಂಗ್ಲಿಷ್ ಭಾಷೆಯನ್ನು ಜಗತ್ತಿನ ಮೂರನೇ ಎರಡರಷ್ಟು ರಾಷ್ಟ್ರಗಳಲ್ಲಿ ಅಸ್ತಿತ್ವದಲ್ಲಿಲ್ಲ ಅಥವಾ ಮುಖ್ಯಭಾಷೆಯಾಗಿಲ್ಲ. ಹೀಗಿದ್ದೂ ಅದನ್ನು ಅಂತರರಾಷ್ಟ್ರೀಯ ಭಾಷೆಯೆಂದು ಕರೆಯಲಾಗುತ್ತಿದೆ. ಅದೇ ರೀತಿ ಅಮೇರಿಕದ ಆರ್ಥಿಕತೆಯನ್ನು ಜಾಗತೀಕರಣವೆಂದು ಪ್ರಚುರ ಪಡಿಸಲಾಗುತ್ತಿದೆ.

ಆರ್ಥಿಕ ಪದ್ಧತಿಯೊಂದರ ಪಲ್ಲಟವು ಕೇವಲ ಹಣಕಾಸಿನ ವಿಚಾರವಾಗುವುದಿಲ್ಲ. ಆರ್ಥಿಕ ಪದ್ಧತಿಯು ಬದುಕಿನ ವಿವಿಧ ಅಂಗಗಳನ್ನು ನಿಯಂತ್ರಿಸುತ್ತ ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಆದ್ಯತೆಗಳನ್ನು ವ್ಯತ್ಯಾಸಗೊಳಿಸುತ್ತದೆ. ವಿಶೇಷವಾಗಿ, ಮುಕ್ತ ಆರ್ಥಿಕ ಪದ್ಧತಿಯು ಸಾಮಾಜಿಕ-ಆರ್ಥಿಕ ಸಮಾನತೆಯ ಆಶಯಗಳಿಗೇ ವಿರುದ್ಧವಾಗಿ ವರ್ತಿಸುತ್ತದೆ. ಈ ಅಂಶವನ್ನು Herbert Aptekar ಅವರು ತಮ್ಮ 'The Nature of Democracy : Freedom and Revolution' ಎಂಬ ಪುಸ್ತಕದಲ್ಲಿ ಸಾಧಾರವಾಗಿ ನಿರೂಪಿಸಿದ್ದಾರೆ. ಅವರು ಸರಿಯಾಗಿ ಗುರುತಿಸಿರುವಂತೆ ಮುಕ್ತ ಆರ್ಥಿಕ ಪದ್ಧತಿಯ ಉದ್ದೇಶ ಮತ್ತು ನೀತಿ (purpose and policy) ಹೀಗಿದೆ : ೧. ಸರ್ಕಾರವು

ಬಂಡವಾಳಶಾಹಿಯನ್ನು ನಿಯಂತ್ರಿಸಬಾರದು. ೨. ಆದರೆ ಬಂಡವಾಳಶಾಹಿಯು ಸರ್ಕಾರವನ್ನು ನಿಯಂತ್ರಿಸಬಹುದು. ೩. ಆರ್ಥಿಕ ಅಸಮಾನತೆಯು ಸಮಾಜದ ಸಹಜ-ಸ್ವಾಭಾವಿಕ ಅಂಶ ೪. ಸ್ವಾತಂತ್ರ್ಯವೆನ್ನುವುದು ರಾಜಕೀಯಕ್ಕೆ ಮಾತ್ರ ಸಂಬಂಧಿಸಿದ್ದು; ಆರ್ಥಿಕ ವಿಚಾರಗಳಿಗಲ್ಲ.

ಕ್ರೋಢೀಕರಿಸಿಕೊಟ್ಟಿರುವ ಈ ನಾಲ್ಕು ಅಂಶಗಳನ್ನು ಪರಿಶೀಲಿಸಿದರೆ ಸ್ಪಷ್ಟವಾಗುತ್ತದೆ : ಮುಕ್ತ ಆರ್ಥಿಕ ಪದ್ಧತಿಗೆ ನಮ್ಮ ಸಮಾಜದ ದುರ್ಬಲವರ್ಗಗಳ ಉನ್ನತಿ ಮುಖ್ಯವಲ್ಲ; ಸ್ವಾತಂತ್ರ್ಯದ ಹೆಸರಿನಲ್ಲಿ ಬಂಡವಾಳಗಾರರನ್ನು ನಿಯಂತ್ರಿಸ ಬಾರದು; ಜಾತಿ ವ್ಯವಸ್ಥೆ ಮತ್ತು ವರ್ಗ ವ್ಯವಸ್ಥೆಗಳಿಗೆ ವಿರುದ್ಧವಾದ ಆಶಯಕ್ಕೆ ಇಲ್ಲಿ ಅವಕಾಶವಿಲ್ಲ. ಒಟ್ಟಾರೆ ನಮ್ಮ ಸಂವಿಧಾನದ ಆಶಯಗಳನ್ನೇ ಮೂಲೆಗುಂಪು ಮಾಡಿ, ಚುನಾಯಿತ ಸರ್ಕಾರಗಳನ್ನೂ ನಿಯಂತ್ರಿಸಿ, ದೀನದಲಿತರ ವಿಶಿಷ್ಟ ಸಮಸ್ಯೆಗಳನ್ನು ಧಿಕ್ಕರಿಸಿ ಸಾರಾಸಗಟಾದ 'ಬಂಡವಾಳ ರಾಜ್ಯ'ದ ಸ್ಥಾಪನೆಯೇ ಮುಕ್ತ ಆರ್ಥಿಕ ಪದ್ಧತಿಯ ಆದರ್ಶ. ಈ ಆದರ್ಶವೇ ಜಾಗತೀಕರಣದ ಅಸ್ತ್ರ.

ಬ್ರಿಟಿಷ್ ವಸಾಹತುಶಾಹಿ ಆಡಳಿತದ ಮೂಲಕ ನಮ್ಮ ದೇಶಕ್ಕೆ ಬಂದ ಕೈಗಾರಿಕೀಕರಣ ಕೆಲವು ಕೇಡಿನ ಅಂಶಗಳನ್ನು ಒಳಗೊಂಡಿರಬಹುದಾದರೂ ಒಟ್ಟಾರೆಯಾಗಿ ಚಲನಶೀಲತೆಗೆ ಪೂರಕವಾಗಿತ್ತು. ಕಾರ್ಖಾನೆಗಳ ಸ್ಥಾಪನೆಯಿಂದ ಸಾಮೂಹಿಕ ಉತ್ಪಾದನೆ ಆರಂಭಗೊಂಡದ್ದರಿಂದ ಅಷ್ಟರಮಟ್ಟಿಗೆ ಕುಲ ಮೂಲ ಕಸುಬುಗಳ ಉಲ್ಲಂಘನೆಯಾಯಿತು. ಸಾಮೂಹಿಕ ಉತ್ಪಾದನೆಯ ಸಂದರ್ಭದಲ್ಲಿ ಅಸ್ಪೃಶ್ಯತೆ ಅಪ್ರಸ್ತುತವಾಯಿತು. ಜಾತಿಪದ್ಧತಿ ಸ್ವಲ್ಪವಾದರೂ ಸಡಿಲವಾಗತೊಡಗಿತು. ಮಧ್ಯಮವರ್ಗದ ಉದಯವಾಯಿತು. ಸಾಂಸ್ಕೃತಿಕವಾಗಿ – ಹೊಸ ಮಧ್ಯಮ ವರ್ಗದೊಂದಿಗೆ, ಹೊಸ ಸಂವೇದನೆ ಸಾಕಾರಗೊಳ್ಳತೊಡಗಿತು. ಇದರ ಫಲವಾಗಿ ಹೊಸ ಸಾಂಸ್ಕೃತಿಕ ಆವಿಷ್ಕಾರಗಳು ಕಾಣಿಸಿಕೊಂಡವು.

ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಭಾವಗೀತೆ, ಕತೆ, ಕಾದಂಬರಿ, ಸಾಮಾಜಿಕ ನಾಟಕಗಳು ಹುಟ್ಟಿ ವಿಕಾಸಗೊಂಡದ್ದು ಈ ಸನ್ನಿವೇಶದಲ್ಲೇ. ಕೈಗಾರಿಕೀಕರಣದ ಸಂದರ್ಭವು 'ಕಥಾಸಾಹಿತ್ಯ'ವನ್ನು ಜನಪ್ರಿಯಗೊಳಿಸಿತು. 'ಮಹಾಕಾವ್ಯ'ದ ಸ್ಥಾನವನ್ನು 'ಕಥಾಸಾಹಿತ್ಯ'ವು ಪಡೆದುಕೊಳ್ಳ ತೊಡಗಿದ್ದಕ್ಕೂ ಕೈಗಾರಿಕೀರಣಕ್ಕೂ ಸಂಬಂಧವಿದೆ. ಬದಲಾದ ಸಾಮಾಜಿಕ ಸಂಬಂಧಗಳು, ದುಡಿಮೆಯ ಸ್ವರೂಪ, ಹೊಸ ಸಂವೇದನೆ, ಪ್ರಜಾಸತ್ತಾತ್ಮಕ ಆಶಯ – ಎಲ್ಲವೂ ಸೇರಿ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಪ್ರಧಾನ ಅಭಿವ್ಯಕ್ತಿ ಪ್ರಕಾರವಾಗಿದ್ದ 'ಮಹಾಕಾವ್ಯ' ಹಿಂದೆ ಸರಿದು ಸಮುದಾಯದ ಅನುಭವ ಸಾಮಗ್ರಿಯಿಂದ ಸಮೃದ್ಧವಾದ 'ಗದ್ಯ ಕಥಾ ಸಾಹಿತ್ಯ'ಕ್ಕೆ (Fiction) ದಾರಿ ಮಾಡಿಕೊಟ್ಟಿತು.

ರಂಗಭೂಮಿಯಲ್ಲಿ ಹೊಸ ಮಾದರಿಗಳು ಕಾಣಿಸಿಕೊಂಡದ್ದನ್ನು ಇಲ್ಲಿ ಗಮನಿಸಬಹುದು. ಪೌರಾಣಿಕ ದಿಂದ ಸಾಮಾಜಿಕ ವಸ್ತುವಿನತ್ತ ಬಂದ ನಾಟಕ, ರಾಜಾಶ್ರಯದಿಂದ ಜನಾಶ್ರಯಕ್ಕೆ ಬಂದ ರಂಗಭೂಮಿ – ಆ ಕಾಲದ ಮುಖ್ಯ ಸ್ಥಿತ್ಯಂತರ. ಹೊಸ ಆವಿಷ್ಕಾರವಾಗಿ ಮೂಡಿದ ಮುದ್ರಣ ತಂತ್ರಜ್ಞಾನವು ಸಾಹಿತ್ಯ ಪ್ರಸಾರಕ್ಕೆ ಪ್ರಬಲ ಸಾಧನವಾದದ್ದು ಈಗ ಇತಿಹಾಸದ ಭಾಗ. ಪತ್ರಿಕಾ ಮಾಧ್ಯಮದ ಹುಟ್ಟು – ವಿಕಾಸವನ್ನೂ ಇಲ್ಲಿ ಉಲ್ಲೇಖಿಸಬೇಕು. ಸಾಹಿತ್ಯ, ಪತ್ರಿಕೆ, ರಂಗಭೂಮಿಗಳ ಜೊತೆಗೆ ಆಕಾಶವಾಣಿಯ ಆವಿಷ್ಕಾರ; ಸಿನಿಮಾ ಮಾಧ್ಯಮದ ಹುಟ್ಟು. ಹೀಗೆ ಹೊಸ ಅನುಭವ ಮತ್ತು ಅಭಿವ್ಯಕ್ತಿ ವಿಧಾನಗಳು ನಮ್ಮ ಬದುಕಿನ ಭಾಗವಾಗುತ್ತ ಬಂದವು. ಹೀಗೆ ವಿವಿಧ ಕ್ಷೇತ್ರಗಳಲ್ಲಿ ತನ್ನ ಪ್ರಭಾವ, ಪ್ರೇರಣೆ, ಪರಿಣಾಮಗಳನ್ನು ವಿಸ್ತರಿಸಿದ ಕೈಗಾರಿಕೀಕರಣವು ಸ್ವಾತಂತ್ರ್ಯಾ ನಂತರದ ಆಡಳಿತದಲ್ಲಿ ಮಿಶ್ರ ಆರ್ಥಿಕ ಪದ್ಧತಿಗೆ ಅಧೀನವಾಗಿತ್ತು. ಜನತೆಯಿಂದ ಚುನಾಯಿತವಾದ ಸರ್ಕಾರದ ನೀತಿ ನಿಯಂತ್ರಣವನ್ನು ಮೀರಿ ಖಾಸಗಿ ಬಂಡವಾಳಗಾರರು ಸ್ವೇಚ್ಛೆಯಿಂದ ವರ್ತಿಸುವುದಕ್ಕೆ ಅವಕಾಶವಿರಲಿಲ್ಲ. ಸಂಪೂರ್ಣ ಖಾಸಗೀಕರಣವು ಮಿಶ್ರ ಆರ್ಥಿಕ ಪದ್ಧತಿಗೆ ಪಥ್ಯವಾಗಿರಲಿಲ್ಲ. ಇನ್ನೊಂದು ಮುಖ್ಯ ಸಂಗತಿಯೆಂದರೆ – ಯಾವುದೇ ಪ್ರಜಾಸತ್ತಾತ್ಮಕ ಸರ್ಕಾರ ಮತ್ತು ಸಮಾಜದಲ್ಲಿ ಪ್ರಶ್ನೆಗಳಿಗೆ ಅವಕಾಶವಿರುತ್ತದೆ. ಪ್ರಶ್ನೆಗಳು ಇದ್ದಲ್ಲಿ ಸೃಜನಶೀಲ ಪ್ರಕ್ರಿಯೆ ನಿರಾಳವಾಗಿರುತ್ತದೆ. ಪ್ರಶ್ನೆಗಳನ್ನು ಹತ್ತಿಕ್ಕುವ ವ್ಯವಸ್ಥೆಯಲ್ಲಿ ಸೃಜನಶೀಲತೆಯೇನೂ ಸಾಯುವುದಿಲ್ಲ. ವಿವಿಧ ವಿಧಾನಗಳ ಮೂಲಕ ಅಭಿವ್ಯಕ್ತಿ ಸಾಧಿಸುವ 'ಗುಪ್ತ ತಂತ್ರ'ಗಳ ಮೊರೆ ಹೋಗಬೇಕಾಗುತ್ತದೆ. ಹೊಸ 'ಉಪಾಯ'ಗಳ ಹುಡುಕಾಟ ಮುಖ್ಯವಾಗಿಬಿಡುತ್ತದೆ.

ಜಾಗತೀಕರಣವು ಪ್ರಶ್ನೆಗಳನ್ನು ಹತ್ತಿಕ್ಕುವ ಉಪಾಯದ ವ್ಯವಸ್ಥೆ. ಮುಕ್ತ ಆರ್ಥಿಕ ಪದ್ಧತಿಯಲ್ಲಿ ಪ್ರಶ್ನೆಗಳನ್ನು ಅಪ್ರಸ್ತುತಗೊಳಿಸಲಾಗುತ್ತದೆ. ಸ್ಪರ್ಧೆಯನ್ನು ಪ್ರಸ್ತುತಗೊಳಿಸಿ ಅದನ್ನೇ ಆದರ್ಶವೆಂದು ಸಾರಲಾಗುತ್ತದೆ. ಸ್ಪರ್ಧೆಯೆಂದರೆ ಸೃಜನಶೀಲ ಸ್ಪರ್ಧೆಯಲ್ಲ; ಮಾರುಕಟ್ಟೆಯ ಸ್ಪರ್ಧೆ. ಮಾರುಕಟ್ಟೆಯ ಸ್ಪರ್ಧೆಯಲ್ಲಿ ಲಾಭಕೋರತನವೇ ಮಾರ್ಗ ಮತ್ತು ಗುರಿ. ಇದರ ಫಲವಾಗಿ ಮನಸ್ಸೇ ಮಾರುಕಟ್ಟೆ ಯಾಗುವ ಅಪಾಯ; ಅಂತಿಮವಾಗಿ ಮನುಷ್ಯರನ್ನು ಅಳೆಯುವ ಮಾನದಂಡ – ಆದಾಯ.

ಮಿಶ್ರ ಆರ್ಥಿಕ ಪದ್ಧತಿಯು ಗ್ರಾಮೀಣ ಅರ್ಥ ವ್ಯವಸ್ಥೆಯನ್ನು ನಿರಾಕರಿಸಲಿಲ್ಲ; ಸಾಮಾಜಿಕ ಶ್ರೇಣೀಕರಣದಿಂದ ಉಂಟಾದ ಶೋಷಣೆಯನ್ನು ಅರ್ಥ ಮಾಡಿಕೊಂಡೇ ನಮ್ಮ ಆರ್ಥಿಕ ಆದ್ಯತೆಗಳನ್ನು ನಿರ್ಧರಿಸಿಕೊಂಡು ಬರಲಾಯಿತು. ಕೈಗಾರಿಕೀಕರಣದ ಫಲವಾದ ಹೊಸ ಶ್ರಮಜೀವಿ ವರ್ಗದ ಆಶಯ ಮತ್ತು ಹೋರಾಟಗಳು 'ಸ್ವಾತಂತ್ರ್ಯ'ದ ಭಾಗವಾದವು. ಹೀಗಾಗಿ ನಮ್ಮ ದೇಶದಲ್ಲಿ ದಲಿತರು, ಕಾರ್ಮಿಕರು, ಹಿಂದುಳಿದ ವರ್ಗಗಳು ಸಂಘಟಿತರಾದರು. ಸಾಮಾಜಿಕ, ಆರ್ಥಿಕ ಅಸಮಾನತೆಯ ವಿರುದ್ಧವಾಗಿ ಹುಟ್ಟಿದ ವಿವಿಧ ದನಿಗಳು ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಂಚಲನಕ್ಕೆ ಕಾರಣವಾದವು. ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಾಮಾಜಿಕ ಜವಾಬ್ದಾರಿಯ ಕಲ್ಪನೆ ಪ್ರತಿಪಾದನೆ ಗೊಂಡದ್ದು, ಪ್ರಬಲವಾದದ್ದು, ಇಂತಹ ಸಾಮಾಜಿಕ ಸಂದರ್ಭದ ಫಲ.

ಜಾಗತೀಕರಣವು ಪ್ರಶ್ನೆಗಳನ್ನು ಹತ್ತಿಕ್ಕುವ ಉಪಾಯದ ವ್ಯವಸ್ಥೆ. ಮುಕ್ತ ಆರ್ಥಿಕ ಪದ್ಧತಿಯಲ್ಲಿ ಪ್ರಶ್ನೆಗಳನ್ನು ಅಪ್ರಸ್ತುತಗೊಳಿಸಲಾಗುತ್ತದೆ. ಸ್ಪರ್ಧೆಯನ್ನು ಪ್ರಸ್ತುತಗೊಳಿಸಿ ಅದನ್ನೇ ಆದರ್ಶವೆಂದು ಸಾರಲಾಗುತ್ತದೆ. ಸ್ಪರ್ಧೆಯೆಂದರೆ ಸೃಜನಶೀಲ ಸ್ಪರ್ಧೆಯಲ್ಲ; ಮಾರುಕಟ್ಟೆಯ ಸ್ಪರ್ಧೆ. ಮಾರುಕಟ್ಟೆಯ ಸ್ಪರ್ಧೆಯಲ್ಲಿ ಲಾಭಕೋರತನವೇ ಮಾರ್ಗ ಮತ್ತು ಗುರಿ. ಇದರ ಫಲವಾಗಿ ಮನಸ್ಸೇ ಮಾರುಕಟ್ಟೆಯಾಗುವ ಅಪಾಯ; ಅಂತಿಮವಾಗಿ ಮನುಷ್ಯರನ್ನು ಅಳೆಯುವ ಮಾನದಂಡ – ಆದಾಯ.

ಇಂದು ಸಾಮಾಜಿಕ ಜವಾಬ್ದಾರಿಯ ಕಲ್ಪನೆಗೆ ಹಿನ್ನಡೆಯುಂಟಾಗುತ್ತಿದೆ. ವಿಶೇಷವಾಗಿ ಶಿಕ್ಷಣ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಅಥವಾ ಒಟ್ಟಾರೆ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಾಮಾಜಿಕ ಜವಾಬ್ದಾರಿಯ ಸ್ಥಾನವನ್ನು ಮಾರುಕಟ್ಟೆ ಮೌಲ್ಯಗಳು ಆಕ್ರಮಿಸುತ್ತಿವೆ; ಮಾರುಕಟ್ಟೆ ಮೌಲ್ಯಗಳು ಮಾನದಂಡವೆಂದು ಒಪ್ಪದೆ ಇರುವವರಲ್ಲಿ ಒಂದೇ ತೆರನಾದ ಅಭಿಪ್ರಾಯಗಳಿಲ್ಲ. ಸಾಮಾಜಿಕ ಜವಾಬ್ದಾರಿಯ ಪ್ರಬಲ ಪ್ರತಿಪಾದಕರು ಇರುವಂತೆಯೇ ಮಾರುಕಟ್ಟೆ ಮೌಲ್ಯ ಮತ್ತು ಸಾಮಾಜಿಕ ಜವಾಬ್ದಾರಿಗಳಿಂದ ದೂರ ಉಳಿದ ವ್ಯಕ್ತಿತ್ವಗಳೂ ಇವೆ. ಪಲಾಯನ ಪ್ರವೃತ್ತಿಯನ್ನು ಆಕಾಶನುಭವ ಪ್ರತೀಕಗಳಲ್ಲಿ ಮುಚ್ಚಿಟ್ಟ ಮನಸ್ಸುಗಳು ಹೆಚ್ಚುತ್ತಿವೆ; ಅನುಭಾವ-ಆಧ್ಯಾತ್ಮದ ಪ್ರಶ್ನೆಗಳು ಪಲಾಯನಕ್ಕೆ ಪ್ರತೀಕವಾಗುತ್ತಿರುವ ವಿಪರ್ಯಾಸವೂ ಕಂಡುಬರುತ್ತಿದೆ. ಇಷ್ಟೆಲ್ಲ ಬಿಕ್ಕಟ್ಟಿನ ನಡುವೆ ಸಾಮಾಜಿಕ ಜವಾಬ್ದಾರಿಯನ್ನು ನವನವೋನ್ಮೇಷಗೊಳಿಸುತ್ತ ಉಳಿಸಿಕೊಳ್ಳ ಬೇಕಾಗಿದೆ.

ಶಿಕ್ಷಣ ಕ್ಷೇತ್ರವು ಜಾಗತೀಕರಣ ಪ್ರಕ್ರಿಯೆಯ ಪ್ರಾರಂಭಕ್ಕೆ ಮುಂಚೆಯೇ ವ್ಯಾಪಾರೀಕರಣಗೊಳ್ಳತೊಡಗಿತ್ತು. ಈಗಂತೂ ಅದು ಉದ್ಯಮದ ಸ್ವರೂಪವನ್ನು ಪಡೆದುಕೊಂಡಿದೆ. 'ಉಳ್ಳವರು ಶಿವಾಲಯವ ಮಾಡುವರು' ಎಂಬ ವಚನದ ಬದಲಾಗಿ 'ಉಳ್ಳವರು ವಿದ್ಯಾಲಯವ ಮಾಡುವರು। ನಾನೇನ ಮಾಡಲಿ ಬಡವನಯ್ಯ' ಎಂದು ಹೇಳುವ ಸ್ಥಿತಿಗೆ ನಾವು ಬಂದು ನಿಂತಿದ್ದೇವೆ. ವೃತ್ತಿ ಶಿಕ್ಷಣಕ್ಕೆ ಸಿಗುತ್ತಿರುವ ಅತಿ ಪ್ರಾಮುಖ್ಯತೆಯ ಅಡಿಯಲ್ಲಿ ಸಾಮಾನ್ಯ ಶಿಕ್ಷಣವು ನರಳುತ್ತಿದೆ. ಸಾಮಾನ್ಯ ಶಿಕ್ಷಣದ ಸಂಕಟವನ್ನು ಕೇಳುವ ಕಿವಿಗಳು ಕಡಿಮೆಯಾಗುತ್ತಿವೆ. ಪ್ರಾಥಮಿಕ ಪೂರ್ವ ಶಿಕ್ಷಣದಿಂದ ಆರಂಭವಾಗುವ ಶೈಕ್ಷಣಿಕ ಅಸಮಾನತೆ ಅಡ್ಡಿ ಆತಂಕಗಳಿಲ್ಲದೆ ಮುಂದುವರಿಯುತ್ತಿದೆ. ಸಾಮಾನ್ಯ ಉನ್ನತ ಶಿಕ್ಷಣವನ್ನೂ ಕಡೆಗಣಿಸಲಾಗುತ್ತಿದೆ. ನಮ್ಮ ಶೈಕ್ಷಣಿಕ ಚರ್ಚೆ, ಚಿಂತನೆ ಮತ್ತು ಹೋರಾಟಗಳು ವೃತ್ತಿ ಶಿಕ್ಷಣ ಕೇಂದ್ರಿತವಾಗುತ್ತಿರುವುದು ಬಹುದೊಡ್ಡ ಅಪಾಯ.

ಈಗ ನಮಗೆ ಲಭ್ಯವಿರುವ ಉನ್ನತ ಶಿಕ್ಷಣದ ಶೇಕಡಾವಾರು ಪ್ರಮಾಣವನ್ನು ಗಮನಿಸೋಣ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಶೇ. ೫೧, ಅಭಿವೃದ್ಧಿ ಶೀಲ ದೇಶಗಳಲ್ಲಿ ಶೇ. ೨೧ ಮತ್ತು ಅಭಿವೃದ್ಧಿ ಹೊಂದದೆ ಹಿಂದುಳಿದ ದೇಶಗಳಲ್ಲಿ ಶೇ. ೬.೫ರಷ್ಟು ಜನರು ಉನ್ನತ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಅಭಿವೃದ್ಧಿ ಹೊಂದಿದ ದೇಶಗಳೆಂದು ಪರಿಗಣಿತವಾದ ಅಮೇರಿಕಾದಲ್ಲಿ ಶೇ. ೮೧, ಜಪಾನ್‌ನಲ್ಲಿ ಶೇ. ೮೬ ಮತ್ತು ಕೆನಡಾದಲ್ಲಿ ಶೇ. ೧೦೦ ರಷ್ಟು ಜನ ಉನ್ನತ ಶಿಕ್ಷಣವನ್ನು ಪಡೆಯುತ್ತಿದ್ದರೆ ಇಂಡಿಯಾದಲ್ಲಿ ಶೇ. ೬.೯ ರಷ್ಟು ಜನ ಉನ್ನತ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಇದರಲ್ಲಿ ಹೆಚ್ಚೆಂದರೆ ಶೇ. ೨ ರಷ್ಟು ಜನ ವೃತ್ತಿ ಶಿಕ್ಷಣ ಪಡೆಯುತ್ತಿದ್ದಾರೆ. ನಮ್ಮ ಚರ್ಚೆ ಶೇ. ೨ ರಷ್ಟು ಜನರ ವಿದ್ಯಾಭ್ಯಾಸಕ್ಕೆ ಮಹತ್ವ ನೀಡುತ್ತ ಉಳಿದ ಶೇ. ೯೮ರಷ್ಟು ಜನರ ಶಿಕ್ಷಣ ಕ್ರಮದ ಪುನರುಜ್ಜೀವನವನ್ನು ಮರೆಯುತ್ತಿದೆ. ಜಾಗತೀಕರಣದ ಫಲವಾಗಿ ಆದ ಗ್ಯಾಟ್ ಒಪ್ಪಂದ ಶಿಕ್ಷಣಕ್ಕೆ ಮಾರಕವಾಗಿ ಪರಿಣಮಿಸುತ್ತಿದೆ. ವಿದೇಶಿ ವಿಶ್ವವಿದ್ಯಾಲಯಗಳ ಜೊತೆ ಶೈಕ್ಷಣಿಕ ಒಪ್ಪಂದ ಮತ್ತು ನಮ್ಮ

ದೇಶದಲ್ಲಿ ವಿದೇಶಿ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಅವಕಾಶ ಕೊಡುವ ಈ ಒಪ್ಪಂದದ ಅಂಶಗಳು ಉಳ್ಳವರಿಗೆ ಆಕರ್ಷಕವಾಗಿ ಕಾಣುತ್ತವೆ. ಆಳದಲ್ಲಿ ಕತ್ತಲಕೂಪಕ್ಕೆ ತಳ್ಳುವ ಕರಾಳ ಕೈವಾಡಗಳಾಗಿವೆ.

ಗ್ಯಾಟ್ಸ್ ಪ್ರಕಾರ ಶಿಕ್ಷಣವು 'ಜ್ಞಾನ ಕೈಗಾರಿಕೆ' (knowledge Industry) ಶಿಕ್ಷಣ ಕ್ಷೇತ್ರದ ಪರಿಭಾಷೆಯನ್ನು 'ಕೈಗಾರಿಕೆ'ಯ ನೆಲೆಯಿಂದ ಬದಲಾಯಿಸುತ್ತಿರುವ ಈ ಒಪ್ಪಂದವು ಕೈಯಿಟ್ಟ ಕಡೆಯೆಲ್ಲ ಮಾರುಕಟ್ಟೆಯ ನಿರ್ಮಾಣ ಮಾಡುತ್ತದೆ. ಜ್ಞಾನವನ್ನೇ 'ಕೈಗಾರಿಕೆ'ಯೆಂದು ಕರೆಯುವ ಗ್ಯಾಟ್ಸ್, ಅಧ್ಯಾಪಕರನ್ನು 'knowledge Industry workers' ಎಂದು ಪರಿಗಣಿಸುತ್ತದೆ. ವಿದ್ಯಾರ್ಥಿಗಳನ್ನು 'knowledge Industry clients' ಎಂದು ಕರೆಯುತ್ತದೆ. ದೂರ ಶಿಕ್ಷಣ ವ್ಯವಸ್ಥೆಯ ಮೂಲಕ ಪರದೇಶಿ ಶಿಕ್ಷಣ ಕೊಡುವುದಕ್ಕೆ 'Cross Border Supply' ಎಂದು ಹೆಸರಿಡುತ್ತದೆ. ವಿದ್ಯಾರ್ಥಿಗಳ ವಿನಿಮಯ ಕಾರ್ಯ ಯೋಜನೆಯನ್ನು 'Consumption Abroad' ಎಂದೂ ವಿದೇಶಿ ವಿಶ್ವವಿದ್ಯಾಲಯಗಳು ನಮ್ಮ ದೇಶದಲ್ಲಿ ಶಾಖೆಗಳನ್ನು ಆರಂಭಿಸಿ ಶಿಕ್ಷಣ ಕೊಡುವುದನ್ನು Commercial Presence ಎಂದೂ ಕರೆಯುವ ಪರಿಭಾಷೆಯಲ್ಲಿ ಎದ್ದು ಕಾಣುವುದು 'ಉದ್ಯಮ ಪ್ರಜ್ಞೆ'. Industry, Workers, Clients, Consumption, Commercial – ಇವೇ ಮುಂತಾದ ಪದಗಳನ್ನು ಗಮನಿಸಿದಾಗ ಶಿಕ್ಷಣ ಕ್ಷೇತ್ರದ ಕೇಂದ್ರ ಸ್ಥಾನಕ್ಕೆ ವ್ಯಾಪಾರೋದ್ಯಮವನ್ನು ತರುತ್ತಿರುವ ಸ್ಪಷ್ಟ ಸೂಚನೆಗಳು ಸಿಗುತ್ತವೆ. ಈ ಸೂಚನೆಗಳನ್ನು ದೇವರ ವರವೆಂಬಂತೆ ಶಿರದ ಮೇಲಿಟ್ಟುಕೊಂಡು ಮೆರವಣಿಗೆ ಮಾಡುವ ಜೀತ ಮನಸ್ಸುಗಳು ಹೆಚ್ಚುತ್ತಿವೆ.

ನಮ್ಮ ಯು.ಜಿ.ಸಿ. (University grants Commission) ಪ್ರಾಯೋಜಿತ ಗುಣಮಟ್ಟ ಪರಿಶೀಲನೆಯ ವಿಧಾನ ಹೇಗಿದೆಯೆಂದರೆ– ವಿಶ್ವ ವಿದ್ಯಾಲಯಗಳಿಗೆ ಸ್ಟಾರ್ ಸಂಕೇತಗಳನ್ನು ನೀಡತೊಡಗಿದೆ. ವಿಶ್ವವಿದ್ಯಾಲಯಗಳು ತ್ರೀಸ್ಟಾರ್, ಫೈವ್ ಸ್ಟಾರ್ ಎಂದು ಕರೆಸಿಕೊಳ್ಳಲು ಹೊರ ವಯ್ಯಾರ ಮಾಡಿಕೊಂಡು ಕ್ಯೂ ನಿಲ್ಲುತ್ತಿವೆ. ಸ್ಟಾರ್ ಪರಿಭಾಷೆಗೂ ಶಿಕ್ಷಣ ಕ್ಷೇತ್ರಕ್ಕೂ ಎಲ್ಲಿಗೆಲ್ಲಿಯ ಸಂಬಂಧ? ತ್ರೀಸ್ಟಾರ್, ಫೈವ್ ಸ್ಟಾರ್ ಎನ್ನುವುದು ಹೋಟೆಲ್‌ಗಳಿಗಲ್ಲವೆ ? ಹೌದು : ಹೋಟೆಲ್ ಉದ್ಯಮದ ಪರಿಭಾಷೆಯ ವಿಶ್ವವಿದ್ಯಾಲಯಗಳನ್ನು ಪ್ರವೇಶಿಸುತ್ತಿದೆ. ವಿಶ್ವವಿದ್ಯಾಲಯಗಳೆಂಬ ಸ್ಟಾರ್ ಹೋಟೆಲ್‌ಗಳಲ್ಲಿ ಅಧ್ಯಾಪಕರು 'ಮೇನೇಜರ್'ಗಳಾಗಿ ವಿದ್ಯಾರ್ಥಿಗಳು 'ಗಿರಾಕಿ'ಗಳಾಗಿ ಕಾಣಿಸುತ್ತಾರೆ. 'ಸ್ಟಾರ್ ಸಿಂಗಾರ'ಕ್ಕೆ ಸಿದ್ಧವಾಗುತ್ತಿರುವ ವಿಶ್ವವಿದ್ಯಾಲಯಗಳು ಮತ್ತು ಶಿಕ್ಷಣ ಸಂಸ್ಥೆಗಳು ಅಂತಿಮವಾಗಿ ಆರಾಧಿಸುವ ಮೌಲ್ಯವೆಂದರೆ – ಲಾಭಕೋರತನ. ಇದರ ಫಲವಾಗಿ ಶೈಕ್ಷಣಿಕ ಆದ್ಯತೆಗಳು ಬದಲಾಗುತ್ತಿವೆ. ಚರಿತ್ರೆ, ಸಮಾಜಶಾಸ್ತ್ರ, ಸಾಹಿತ್ಯಾದಿಗಳನ್ನು ಕಲಿತರೆ ಏನು ಲಾಭ – ಎಂದು ಪ್ರಶ್ನಿಸುತ್ತ ಜ್ಞಾನಮುಖೀ ಶಿಕ್ಷಣವನ್ನು ನಾಶಗೊಳಿಸುವ ಅಸ್ತ್ರಗಳು ಯುದ್ಧದ ಸದ್ದಿಲ್ಲದೆ ಎರಗುತ್ತಿವೆ: ಆಕ್ರಮಣಕಾರಿಯಾಗಿರುವ ಅಸ್ತ್ರಗಳು ಹೊಗೆಯನ್ನು ಉಗುಳುವುದಿಲ್ಲ. ನಗೆಯನ್ನು ಚಿಮ್ಮುತ್ತ ಸಮ್ಮೋಹಗೊಳಿಸುತ್ತ ಸುಂದರ ಪರಿಭಾಷೆಯಲ್ಲಿ ಪಲ್ಲಟಗೊಳಿಸುತ್ತಿವೆ.

ಶಿಕ್ಷಣ ಕ್ಷೇತ್ರದಲ್ಲಾಗುವ ಪಲ್ಲಟಗಳ ಪ್ರಭಾವ ಸಾಹಿತ್ಯಾದಿ ಕಲೆಗಳ ಮೇಲೂ ಆಗುತ್ತದೆ. ಸಾಹಿತ್ಯಾಸಕ್ತಿಯ ಮೂಲ ಪ್ರೇರಣೆಗಳು ಶಿಕ್ಷಣ ಮತ್ತು ಸಮಾಜದಲ್ಲಿದ್ದು ಈ ಎರಡು ವಲಯಗಳನ್ನು ಇಡಿಯಾಗಿ ವ್ಯಾಪಾರೀ ವಲಯವನ್ನಾಗಿ

ಮೊಹಿಯ್ಯು. ಕೆ. ಮೊದಿಮಂಟೆ

ಸುತ್ತಿರುವ ಜಾಗತೀಕರಣಕ್ಕೆ ಸಾಹಿತ್ಯಾದಿ ಕಲೆಗಳು ಬೇಕಾದರೂ ಯಾಕೆ ? ಅವುಗಳಿಂದ ಲಾಭವೇನಿದೆ ? ಸಾಹಿತ್ಯದ ಓದು ಸಮಯ ವ್ಯರ್ಥವಲ್ಲವೆ? ಇಂತಹ ಪ್ರಶ್ನೆಗಳನ್ನು ಮುಂದಿಡುವ ಜಾಗತೀಕರಣದ ಪ್ರಭಾವ ವಲಯಗಳು ಸೃಜನಶೀಲತೆಗಿಂತ ಯಾಂತ್ರಿಕತೆಗೆ ಗಮನ ಕೊಡುತ್ತವೆ. ಇಂದಿನ ತಂತ್ರಜ್ಞಾನವನ್ನು ಹಿಂದಿನ ಮಂತ್ರಜ್ಞಾನದಂತೆ ಬಳಸುತ್ತವೆ. ಬಾಯಿಪಾಠದ ಮಂತ್ರಜ್ಞಾನವು ತಂತ್ರಜ್ಞಾನಕ್ಕೆ ಒದಗಬಹುದಾದ ಮಾನವೀಯ ಸಾಧ್ಯತೆ ಮತ್ತು ಸಾಹಿತ್ಯಾದಿ ಸೃಜನಶೀಲತೆಗಳನ್ನು ಒಟ್ಟಾಗಿಯೇ ಹತ್ತಿಕ್ಕುತ್ತದೆ. ತಂತ್ರಜ್ಞಾನವನ್ನು 'ತಂತ್ರೋದ್ಯಮ'ವನ್ನಾಗಿಸಿ ಲಾಭಕೋರತನಕ್ಕೆ ಮಾತ್ರ ಬಳಸುತ್ತದೆ. ಒಂದೇ ಮಾರ್ಗ: ಒಂದೇ ಗುರಿ. ಬಂಡವಾಳದ ಮಾರ್ಗದಲ್ಲಿ ಲಾಭದ ಗುರಿ. ಇದು ಜಾಗತೀಕರಣದ ಏಕಮುಖೀ ಆರ್ಥಿಕತೆ.

ಏಕಮುಖೀ ಆರ್ಥಿಕತೆಯಿಂದ ಬಹುಮುಖೀ ಆರ್ಥಿಕತೆಯ ಮಿಶ್ರ ಆರ್ಥಿಕ ಪದ್ಧತಿಗೆ ಧಕ್ಕೆ; ಮಾರುಕಟ್ಟೆ ಮನೋಧರ್ಮದಿಂದ ಶಿಕ್ಷಣ ಮತ್ತು ಸಮಾಜದಲ್ಲಿ ಬಹುಭಾಷಿಕತೆಗೆ ಹಿನ್ನಡೆ. ಇದೇ ಸಂದರ್ಭದಲ್ಲಿ ಬಹುಸಂಸ್ಕೃತಿಗಳ

ನಮ್ಮ ದೇಶದಲ್ಲಿ ಧರ್ಮೋದ್ರೇಕವನ್ನು ಉದ್ಯಮವಾಗಿಸುವುದು ಸಾಧ್ಯ. ಉದ್ರೇಕವನ್ನೇ ಉದ್ಯಮವಾಗಿಸಿದಾಗ ಅಲ್ಲಿ ಭಕ್ತಿಯ ಪಾತ್ರ ಬದಲಾಗುತ್ತದೆ. "ಭಕ್ತಿಯೆಂಬುದು ತೋರುಂಬ ಲಾಭ' ವಾಗುತ್ತದೆ. ಅಷ್ಟೇ ಅಲ್ಲ "ದೇಶಭಕ್ತಿಯೂ ತೋರುಂಭ ಲಾಭ' ವಾಗುತ್ತದೆ. ನಮಗೆ ಲಾಭವಾಗುವುದಾದರೆ ನಾವು ದೇವರನ್ನೂ ಬಿಡುವುದಿಲ್ಲ; ಧರ್ಮವನ್ನೂ ಬಿಡುವುದಿಲ್ಲ; ಭಕ್ತಿಯನ್ನೂ ಬಿಡುವುದಿಲ್ಲ. ಎಲ್ಲವನ್ನೂ ಲಾಭಕ್ಕೆ ಬಳಸಿಕೊಳ್ಳಲು ಹೇಸುವುದಿಲ್ಲ. ಬುದ್ಧಿವಂತ ಬಾಯಿಗಳು ಇಂತಹ ಅನಾರೋಗ್ಯಕರ ಅಂಶಗಳಿಗೂ "ಮೌಲ್ಯಗಳ ಪಟ್ಟ' ಕಟ್ಟುತ್ತಾರೆ. ಜನರನ್ನು ಉದ್ರೇಕಿಸಿ ನಂಬಿಸುತ್ತಾರೆ.

ಅಸ್ತಿತ್ವಕ್ಕೆ ಮಾರಕವಾದ ಏಕ ಸಂಸ್ಕೃತಿ ಮತ್ತು ಏಕಧರ್ಮವಾದವೂ ನಮ್ಮ ದೇಶದಲ್ಲಿ ತಲೆಯೆತ್ತಿದೆ. ಮಂದಿರ–ಮಸೀದಿಗಳನ್ನೇ ಮುಖ್ಯ ಆದ್ಯತೆಯೆಂದು ಭಾವಿಸಿ 'ಉದ್ರೇಕೋದ್ಯಮ'ದಲ್ಲಿ ಆಸಕ್ತವಾದ ಏಕಧರ್ಮವಾದವನ್ನು ನಾನು 'ದೇಗುಲೀಕರಣ'ವೆಂದು ಕರೆಯುತ್ತೇನೆ. ಹಿಂದೂ, ಮುಸ್ಲಿಂ, ಕ್ರೈಸ್ತ –ಯಾವುದೇ ಧರ್ಮದವರು ನಡೆಸುವ ಏಕಸಂಸ್ಕೃತಿ ಮತ್ತು ಏಕಧರ್ಮದ ದಾಳಿಗಳು 'ದೇಗುಲೀಕರಣ'ದ ವ್ಯಾಪ್ತಿಗೆ ಬರುತ್ತವೆ.

ವಿಚಿತ್ರವೆಂದರೆ ನಮ್ಮ ದೇಶದಲ್ಲಿ ಜಾಗತೀಕರಣ ಮತ್ತು ದೇಗುಲೀಕರಣಗಳು ಏಕಕಾಲದಲ್ಲಿ ಪ್ರಬಲಗೊಂಡಿವೆ. ಇಪ್ಪತ್ತನೇ ಶತಮಾನದ ಕೊನೆಯ ದಶಕದ ಆರಂಭದಲ್ಲಿ ಜಾಗತೀಕರಣ ಪ್ರಕ್ರಿಯೆ ಪ್ರಾರಂಭವಾಯಿತು. ಸರಿಸುಮಾರು ಇದೇ ಸಮಯದಲ್ಲಿ ಅಯೋಧ್ಯೆಯಲ್ಲಿ ಮಸೀದಿಯನ್ನು ಧ್ವಂಸಗೊಳಿಸುವುದರ ಮೂಲಕ ದೇಗುಲೀಕರಣವು 'ದಾಳಿ'ಯ ಲಕ್ಷಣಗಳನ್ನು ಪಡೆಯಿತು. ಇಸ್ಲಾಂ ಮೂಲಭೂತವಾದಿಗಳ ವಿಧ್ವಂಸಕ ಕ್ರಮಗಳು ಹೆಚ್ಚಾಗತೊಡಗಿದವು. ಹಿಂದೂ–ಮುಸ್ಲಿಂ ಮೂಲಭೂತವಾದಿಗಳ ಜನವಿರೋಧಿ ಕ್ರಿಯೆಗಳಿಂದ ದೇವರು, ಧರ್ಮ, ಭಕ್ತಿಗಳು 'ಉದ್ರೇಕೋದ್ಯಮ'ದ ಭಾಗವಾದವು. ಹಿಂದೂ ಮೂಲಭೂತವಾದಿಗಳಂತೂ ಹಿಂದೆಂದಿಗಿಂತ ಹಿರಿದಾದ ಲಾಭ ಪಡೆಯಲು ದೇಗುಲೀಕರಣವನ್ನು ಬಳಸಿಕೊಳ್ಳತೊಡಗಿದರು. ಇಸ್ಲಾಂ ಮೂಲಭೂತವಾದಿಗಳಿಗೆ ಧರ್ಮದ ಅಪವ್ಯಾಖ್ಯಾನ ಆಧಾರವಾಗಿದ್ದರೆ, ಹಿಂದೂ ಮೂಲಭೂತವಾದಿಗಳಿಗೆ ಧರ್ಮದ ಅಪವ್ಯಾಖ್ಯಾನದ ಜೊತೆಗೆ 'ಮರ್ಯಾದ ಪುರುಷ ಶ್ರೀರಾಮ' ರಾಜಕೀಯ ಲಾಭದ ಮಾರುಕಟ್ಟೆಯ ಪುರುಷನಾಗಿಬಿಟ್ಟ. ರಾಮಾಯಣದ ಶ್ರೀರಾಮನ ಆದರ್ಶ ಮೌಲ್ಯಗಳು ಮಣ್ಣು ಮುಕ್ಕಿ ದೇಗುಲದ 'ಲಾಭ'ವೇ ಮುಖ್ಯವಾಯಿತು.

ನಮ್ಮ ದೇಶದಲ್ಲಿ ಧರ್ಮೋದ್ರೇಕವನ್ನು ಉದ್ಯಮವಾಗಿಸುವುದು ಸಾಧ್ಯ. ಉದ್ರೇಕವನ್ನೇ ಉದ್ಯಮವಾಗಿಸಿದಾಗ ಅಲ್ಲಿ ಭಕ್ತಿಯ ಪಾತ್ರ ಬದಲಾಗುತ್ತದೆ. 'ಭಕ್ತಿಯೆಂಬುದು ತೋರುಂಬ ಲಾಭ' ವಾಗುತ್ತದೆ. ಅಷ್ಟೇ ಅಲ್ಲ 'ದೇಶಭಕ್ತಿಯೂ ತೋರುಂಭ ಲಾಭ'ವಾಗುತ್ತದೆ. ನಮಗೆ ಲಾಭವಾಗುವುದಾದರೆ ನಾವು ದೇವರನ್ನೂ ಬಿಡುವುದಿಲ್ಲ; ಧರ್ಮವನ್ನೂ ಬಿಡುವುದಿಲ್ಲ; ಭಕ್ತಿಯನ್ನೂ ಬಿಡುವುದಿಲ್ಲ. ಎಲ್ಲವನ್ನೂ ಲಾಭಕ್ಕೆ ಬಳಸಿಕೊಳ್ಳಲು ಹೇಸುವುದಿಲ್ಲ. ಬುದ್ಧಿವಂತ ಬಾಯಿಗಳು ಇಂತಹ ಅನಾರೋಗ್ಯಕರ ಅಂಶಗಳಿಗೂ 'ಮೌಲ್ಯಗಳ ಪಟ್ಟ' ಕಟ್ಟುತ್ತಾರೆ. ಜನರನ್ನು ಉದ್ರೇಕಿಸಿ ನಂಬಿಸುತ್ತಾರೆ. ಜಾಗತೀಕರಣ ಮತ್ತು ದೇಗುಲೀಕರಣಗಳು ಮೇಲ್ನೋಟಕ್ಕೆ ಬೇರೆಯಾಗಿದ್ದರೂ ಮಾಡುವುದು ಮಾತ್ರ ನಂಬಿಸುವ ಕೆಲಸವನ್ನೇ.

ಜಾಗತೀಕರಣವು ತಾನು ಪ್ರತಿಪಾದಿಸುವ 'ಏಕಮುಖೀ ಆರ್ಥಿಕತೆ'ಯಿಂದ ಮಾತ್ರ ಲೌಕಿಕ ಸುಖ ಸಾಧ್ಯವೆಂದು ನಂಬಿಸಲು ಪ್ರಯತ್ನಿಸಿದರೆ, ದೇಗುಲೀಕರಣವು ತಾನು ಪ್ರತಿಪಾದಿಸುವ 'ಏಕಮುಖೀ ಧಾರ್ಮಿಕತೆ'ಯಿಂದ ಮಾತ್ರ ಅಲೌಕಿಕ ಸುಖ ಸಾಧ್ಯವೆಂದು ನಂಬಿಸಲು ಪ್ರಯತ್ನಿಸುತ್ತದೆ. ಬಹುಸಂಸ್ಕೃತಿ ಮತ್ತು ಬಹುಧರ್ಮಗಳ ಸಮಾನ ಅಸ್ತಿತ್ವವನ್ನು ಒಪ್ಪಿಕೊಳ್ಳದ ದೇಗುಲೀಕರಣ; ಮಿಶ್ರ ಆರ್ಥಿಕ ಪದ್ಧತಿಯ ಸಮತೋಲನವನ್ನು ಮೆಟ್ಟಿ ಮುಂದುವರೆಯುವ ಜಾಗತೀಕರಣ – ಎರಡೂ ಮೂಲಭೂತವಾದಿಗಳೇ ಆಗಿವೆ. ದೇಗುಲೀಕರಣವು ಏಕ ಸಂಸ್ಕೃತಿ – ಏಕಧರ್ಮ ಪ್ರತಿಷ್ಠಾಪನೆಯ ಮೂಲಕ 'ಧಾರ್ಮಿಕ ಮೂಲಭೂತವಾದಿ'ಯಾದರೆ, ಜಾಗತೀಕರಣವು ಬಂಡವಾಳಶಾಹಿಯ

ಏಕಮುಖೀ ಆರ್ಥಿಕ ಪದ್ಧತಿಯ ಪ್ರತಿಷ್ಠಾಪನೆಗೆ ಕಟಿಬದ್ಧವಾದ 'ಆರ್ಥಿಕ ಮೂಲಭೂತವಾದಿ'ಯಾಗಿದೆ. ವಿಚಿತ್ರವೆಂದರೆ ಈ ಏಕಮುಖೀ ಆರ್ಥಿಕತೆಯನ್ನು 'ಮುಕ್ತ ಆರ್ಥಿಕ ಪದ್ಧತಿ' ಯೆಂದು ಕರೆಯುವುದು. ಆರ್ಥಿಕತೆಯ ಇತರೆ ಸಾಧ್ಯತೆಗಳನ್ನು ಮುಚ್ಚಿ ಹಾಕುವ ವಿಧಾನವು 'ಮುಕ್ತ' ಆರ್ಥಿಕತೆಯೆನ್ನಿಸಿಕೊಳ್ಳುವುದು ಒಂದು ವಿಪರ್ಯಾಸವೇ ಸರಿ. ಧಾರ್ಮಿಕ ಮೂಲಭೂತವಾದವೂ ಅಷ್ಟೆ : ಸದಾ ತಂತಮ್ಮ ಧರ್ಮದ ಉದಾರ, ವಿಶಾಲ ಗುಣಲಕ್ಷಣಗಳನ್ನು ಭಜಿಸುತ್ತಲೇ ಇತರೆ ಧರ್ಮಗಳ ಬಗ್ಗೆ ದ್ವೇಷವನ್ನು ಬಿತ್ತುವುದು ಸಹ ವಿಪರ್ಯಾಸವೇ. ಜಾಗತೀಕರಣ ಮತ್ತು ದೇಗುಲೀಕರಣಗಳಿಗೆ Public Agenda ಮತ್ತು Hidden Agenda ಪ್ರತ್ಯೇಕವಾಗಿರುವುದು ಮತ್ತೊಂದು ಸಮಾನ ಅಂಶ; ಸಾಹಿತ್ಯಾದಿ ಕಲೆಗಳ ಸಾಂಸ್ಕೃತಿಕ ಕ್ಷೇತ್ರದ ಮೇಲೆ ಉಂಟಾಗುವ ಪರಿಣಾಮಗಳಲ್ಲೂ ಕೆಲವು ಸಮಾನ ಅಂಶಗಳಿವೆ.

ಜಾಗತೀಕರಣವು ಸಾಂಸ್ಕೃತಿಕ ಕ್ಷೇತ್ರದ ಮಹತ್ವವನ್ನು ಗೌಣಗೊಳಿಸಿದರೆ, ದೇಗುಲೀಕರಣವು ಸಾಂಸ್ಕೃತಿಕ ಕ್ಷೇತ್ರದ ಮಹತ್ವವನ್ನು ತನ್ನ ಆಶಯಕ್ಕನುಗುಣವಾಗಿ ರೂಪಿಸತೊಡಗುತ್ತದೆ. ಜಾಗತೀಕರಣವು ಬಹುಭಾಷಿಕತೆಗೆ ಮತ್ತು ದೇಗುಲೀಕರಣವು ಬಹುಸಂಸ್ಕೃತಿಗೆ ವಿರುದ್ಧವಾಗಿ ವರ್ತಿಸುತ್ತದೆ. ಎರಡೂ ಸೇರಿ ಸಾಹಿತ್ಯಾದಿ ಕಲೆಗಳ ಬಹುಮುಖೀ ಸಾಧ್ಯತೆಗಳನ್ನು ಕುಗ್ಗಿಸುತ್ತವೆ. ಜಾಹಿರಾತೀಕರಣದ ಸಾಧ್ಯತೆಗಳನ್ನು ಹೆಚ್ಚಿಸುತ್ತವೆ.

ಸಾಹಿತ್ಯಾದಿ ಕಲೆಗಳಿಗೆ ಜಾಹಿರಾತಿನ ಲಕ್ಷಣಗಳು ಅಂಟಿಕೊಂಡರೆ ಅಂತಃಸತ್ವಕ್ಕೇ ಅಪಾಯ. ತೆಳುವಾದ ತಿಳುವಳಿಕೆಯಿದ್ದರೆ ಸಾಕು; ನಿರ್ದಿಷ್ಟ ಕಾರ್ಯಸೂಚಿಗಾಗಿ ದುಡಿಯುವ ಸಾಧನಗಳಷ್ಟೇ ಇವರಿಗೆ ಬೇಕು. ಸಾಮಾಜಿಕ ಪ್ರಜ್ಞೆಗೆ ಇಲ್ಲಿ ಅವಕಾಶವಿಲ್ಲ. ಇಲ್ಲವೆ, ಸಾಮಾಜಿಕ ಪ್ರಜ್ಞೆಯ ಪರಿಕಲ್ಪನೆಯನ್ನೇ ಬದಲಾಯಿಸಲಾಗುತ್ತದೆ. ಉದಾರೀಕರಣದ ಫಲವಾಗಿ ಅನುಷ್ಠಾನಗೊಳ್ಳುತ್ತಿರುವ 'ಆರ್ಥಿಕ ಸುಧಾರಣೆ'ಯೇ ಸಾಮಾಜಿಕ ಪ್ರಜ್ಞೆಯೆಂದು ಪ್ರತಿಪಾದಿಸಬಹುದು. ಭೂಹೀನರು ಮತ್ತು ಬಡವರ ಪರವಾದ 'ಭೂ ಸುಧಾರಣೆ' ಗೋರಿ ಸೇರಬಹುದು. ಜಾಗತೀಕರಣದ ವಕ್ತಾರರು ಹೀಗೆ ಹೇಳಿದರೆ ದೇಗುಲೀಕರಣವಾದಿಗಳು 'ನಮ್ಮದೊಂದೇ ದೇವರು, ನಮ್ಮದೊಂದೇ ಧರ್ಮ, ಅನ್ಯಧರ್ಮ ದ್ವೇಷಿಸಿ ನಮ್ಮ ಧರ್ಮ ಉಳಿಸುವುದೇ ಸಾಮಾಜಿಕ ಪ್ರಜ್ಞೆ ಹಾಗೂ ಜವಾಬ್ದಾರಿ' ಎನ್ನಬಹುದು. A. Kukarkin ಎಂಬ ಚಿಂತಕ ತನ್ನ 'The Passing Age' ಎಂಬ ಪುಸ್ತಕದಲ್ಲಿ ಜಾಹಿರಾತೀಕರಣವನ್ನು ಕುರಿತು ಹೇಳಿರುವ ಈ ಮಾತುಗಳು ಮನನೀಯವಾಗಿವೆ. 'ಜಾಹೀರಾತು, ಬೂರ್ಜ್ವಾ ಸಂಸ್ಕೃತಿಯ ಶೈಲಿಯನ್ನು ಸ್ಥಾಪಿಸುತ್ತದೆ ಮತ್ತು ಅದರ ನೀತಿಗಳನ್ನು ರೂಪಿಸುತ್ತದೆ. ಜಾಹಿರಾತು, ಬಂಡವಾಳಶಾಹಿ ರಾಷ್ಟ್ರಗಳ ಸಂಸ್ಕೃತಿಯಲ್ಲಿ ಅತ್ಯಗತ್ಯವಾದ ಒಂದು ಪ್ರಮುಖ ಅಂಶವಾಗಿದ್ದು, ಸಾಮಾಜಿಕ ಪ್ರಜ್ಞೆಯನ್ನು ನಿಯಂತ್ರಿಸುವ ಸ್ವತಂತ್ರ ಸಾಧನವಾಗಿದೆ.'

ಆರ್ಥಿಕ ಬೂರ್ಜ್ವಾಗಳನ್ನು ಗಮನದಲ್ಲಿಟ್ಟುಕೊಂಡು ಕುಕಾರ್ಕಿನ್ ಅವರು ಮಾಡಿರುವ ವ್ಯಾಖ್ಯಾನವನ್ನು ಹೊಸ ಸಂದರ್ಭದಲ್ಲಿ ಧಾರ್ಮಿಕ ಬೂರ್ಜ್ವಾಗಳಿಗೂ ಅನ್ವಯಿಸಬಹುದು. ಆರ್ಥಿಕ ಮತ್ತು ಧಾರ್ಮಿಕ ಬೂರ್ಜ್ವಾಗಳು ಸಾಮಾಜಿಕ ಪ್ರಜ್ಞೆಯನ್ನು ತಮ್ಮ ಲಾಭದ ಅಳತೆಗೆ ತಕ್ಕಂತೆ ನಿಯಂತ್ರಿಸುವ ಸಲುವಾಗಿ ಜಾಹಿರಾತಿನ ಸಕಲ ಸಾಧ್ಯತೆಗಳನ್ನು ಬಳಸಿಕೊಳ್ಳುತ್ತಾರೆ; ವ್ಯಾಖ್ಯಾನದ ವಿವಿಧ ಸಾಧ್ಯತೆಗಳನ್ನು ಹತ್ತಿಕ್ಕಿ ಏಕಮುಖೀ ಪ್ರಚಾರಕ್ಕೆ ತೊಡಗುತ್ತಾರೆ. ಚರ್ಚೆ-ಚಿಂತನೆ ಕೇವಲ ಹೊರಗಿನ ವೇಷಗಳಾಗುತ್ತವೆ. ಪ್ರಚಾರ ದಕ್ಕಿದವರೇ

ಮೂಲಭೂತವಾದಿಗಳು ಯಾವ ಸ್ವರೂಪದಲ್ಲಿದ್ದರೂ ಪ್ರಶ್ನೆಗಳನ್ನು ಸಹಿಸುವುದಿಲ್ಲ. ಪ್ರಶ್ನೆಗಳಿಲ್ಲದ ಕಡೆ ಸಾಹಿತ್ಯಾದಿ ಕಲೆಗಳಿಗೆ ಜಾಗವಿಲ್ಲ. ಇದೊಂದು ಸೃಜನಶೀಲ ಬಿಕ್ಕಟ್ಟು. ಪ್ರತಿರೋಧದ ನೆಲೆಗಳ ಶೋಧದಿಂದ ಈ ಬಿಕ್ಕಟ್ಟನ್ನು ಉತ್ತರಿಸಿಕೊಳ್ಳಬೇಕು.

ಆದರ್ಶದ ಹಕ್ಕುದಾರರಾಗುತ್ತಾರೆ. ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಅರುಂಧತಿರಾಯ್, ವಿಕ್ರಮ್‌ಶೇಠ್, ಸಲ್ಮಾನ್ ರಶ್ದಿಗಳ ಎದರು ಟಾಗೂರ್, ಪ್ರೇಮಚಂದ್, ಕುವೆಂಪು, ಕಾರಂತ, ಬೇಂದ್ರೆಗಳು ಪ್ರಚಾರವಿಲ್ಲದೆ ಮಬ್ಬಾಗುತ್ತಾರೆ. ಸಾಹಿತ್ಯಕ್ಕೆ ಈ ಗತಿ; ಸಂಶೋಧನೆಯದು ಮತ್ತೊಂದು ಸ್ಥಿತಿ. ಜಾಗತೀಕರಣ ಮತ್ತು ದೇಗುಲೀಕರಣಗಳ ಸಂದರ್ಭದಲ್ಲಿ ಸಂಶೋಧನೆಗೆ ಒದಗುವ ಒತ್ತಡಗಳು ಹೇಗಿರಬಹುದು ? ಅ. ಉದ್ಯಮದ ಅಗತ್ಯಗಳಿಗನುಗುಣವಾಗಿ ವಿಜ್ಞಾನ ಮತ್ತು ತಂತ್ರಜ್ಞಾನದ ಶೋಧಗಳು ಹೆಚ್ಚಾಗುತ್ತವೆ. ವಿಶೇಷವಾಗಿ ತಂತ್ರಜ್ಞಾನವು ಮಾರುಕಟ್ಟೆಯ ಒತ್ತಡದಲ್ಲಿ ದುಡಿಯತೊಡಗುತ್ತದೆ. ಮಾರುಕಟ್ಟೆಗೆ ಅಗತ್ಯವಾದ ಹೊಸ ಮಾದರಿಗಳನ್ನು ಶೋಧಿಸುತ್ತದೆ. ಆ. ಸಾಹಿತ್ಯಕ - ಚಾರಿತ್ರಿಕ ಸಂಶೋಧನೆಗಳು ದೇವರು, ಧರ್ಮ, ಜನ್ಮಸ್ಥಾನ ಮತ್ತು ಮೃತ್ಯು ಸ್ಥಾನಗಳನ್ನು ಶೋಧಿಸುತ್ತ ಗುಡಿಗೋಪುರಗಳಿಗೆ ಪ್ರದಕ್ಷಿಣೆ ಹಾಕುವುದನ್ನೇ ಆದರ್ಶವೆಂದು ತಿಳಿಯುವ ಅಪಾಯವಿದೆ. ಈಗಾಗಲೇ ಇಂತಹ ಸಂಶೋಧನೆಗಳನ್ನು ಆದರ್ಶಪ್ರಾಯವೆಂದು ಪ್ರತಿಪಾದಿಸಲಾಗುತ್ತಿದೆ. ಹೀಗಾಗಿ ಹಿಂದೂ ಪರಿಷತ್ತು, ಮುಸ್ಲಿಂ ಹುರಿಯತ್ತುಗಳು ಸಂಶೋಧನೆಯ ಸಾರಥಿ, ಕೀರುತಿ - ಎಲ್ಲವೂ ಆಗುತ್ತಾರೆ.

ಮೂಲಭೂತವಾದಿಗಳು ಯಾವ ಸ್ವರೂಪದಲ್ಲಿದ್ದರೂ ಪ್ರಶ್ನೆಗಳನ್ನು ಸಹಿಸುವುದಿಲ್ಲ. ಪ್ರಶ್ನೆಗಳಿಲ್ಲದ ಕಡೆ ಸಾಹಿತ್ಯಾದಿ ಕಲೆಗಳಿಗೆ ಜಾಗವಿಲ್ಲ. ಇದೊಂದು ಸೃಜನಶೀಲ ಬಿಕ್ಕಟ್ಟು. ಪ್ರತಿರೋಧದ ನೆಲೆಗಳ ಶೋಧದಿಂದ ಈ ಬಿಕ್ಕಟ್ಟನ್ನು ಉತ್ತರಿಸಿಕೊಳ್ಳಬೇಕು. ಸಾಹಿತ್ಯದ ಮಟ್ಟಿಗೆ ಹೇಳುವುದಾದರೆ ಸಾಹಿತಿಯ ಕ್ರಿಯೆ ಮತ್ತು ಸಾಹಿತ್ಯದ ಕ್ರಿಯೆ -ಎರಡೂ ಮುಖ್ಯ. ಸಾಹಿತಿಯ ಸಾಮಾಜಿಕ ಕ್ರಿಯೆ, ಸಾಹಿತ್ಯದ ಸೃಜನಶೀಲಕ್ರಿಯೆ ಕ್ರಮವಾಗಿ ಬಹಿರ್ಮುಖಿ ಮತ್ತು ಅಂತರ್ಮುಖಿ ನೆಲೆಗಳಲ್ಲಿ ಜೀವಂತವಾಗಿ ಮತ್ತು ಪರಸ್ಪರ ಪೂರಕವಾಗಿ ದುಡಿಯುವುದು ಅಪೇಕ್ಷಣೀಯವಾದುದು. ಅಂದರೆ ಜಾಗತೀಕರಣ ಮತ್ತು ದೇಗುಲೀಕರಣಗಳನ್ನು ಪ್ರತಿರೋಧಿಸುವ ಸಾಮಾಜಿಕ ಕ್ರಿಯೆಯಲ್ಲಿ ಸಾಹಿತಿಯಾಗಿ ತೊಡಗಿಸಿಕೊಳ್ಳುವುದು; ಸಾಹಿತ್ಯ ಸೃಷ್ಟಿಯಲ್ಲಿ ಪ್ರತಿರೋಧಾತ್ಮಕ ಶೋಧದ ಮೂಲಕ ಸೃಜನಶೀಲರಾಗುವುದು ಏಕಕಾಲಕ್ಕೆ ಎರಡೂ ಜವಾಬ್ದಾರಿಗಳನ್ನು ನಿರ್ವಹಿಸುವುದು ಇವತ್ತು ಜರೂರಿನ ಸಂಗತಿಯಾಗಿದೆ.

ಪ್ರಸಿದ್ಧ ಭಾಷಾ ವಿಜ್ಞಾನಿ ಮತ್ತು ರಾಜಕೀಯ ಚಿಂತಕರಾದ ನೋಮ್ ಚಾಮ್‌ಸ್ಕೀಯವರ ವ್ಯಾಖ್ಯಾನವೊಂದು ಇಲ್ಲಿ ಪ್ರಸ್ತುತ : 'ಸದ್ಯದ ಸ್ಥಿತಿಯಲ್ಲಿ ಏನಾದರೂ ಬದಲಾವಣೆ ತರಬಲ್ಲ ಶಕ್ತಿ ಇರುವ ಜನರಿಗೆ, ಬದುಕಿಗೆ ಸಂಬಂಧಪಟ್ಟ ವಾಸ್ತವಿಕ ಸತ್ಯಗಳನ್ನು ತಿಳಿಸುವ ನೈತಿಕ ಮಧ್ಯವರ್ತಿಯಾಗಿ ಕೆಲಸ ಮಾಡುವುದು ಬರಹಗಾರರ ಮತ್ತು ಬುದ್ಧಿ ಜೀವಿಗಳ ಜವಾಬ್ದಾರಿ.' ಚಾಮ್‌ಸ್ಕಿಯವರು ಸತ್ಯ ಹೇಳುವುದನ್ನು ಬರಹಗಾರರು ಮತ್ತು ಬುದ್ಧಿಜೀವಿಗಳಿಗೆ ಮಾತ್ರ ಸೀಮಿತಗೊಳಿಸುವುದಿಲ್ಲ. ಅದು 'ಒಬ್ಬ ಮರ್ಯಾದಸ್ಥ ಮನುಷ್ಯನ ಬೌದ್ಧಿಕ ಜವಾಬ್ದಾರಿ' ಎಂದೂ ಸ್ಪಷ್ಟಪಡಿಸುತ್ತಾರೆ. ಈ ಮಾತುಗಳು ನಮ್ಮಲ್ಲಿರುವ ಸಾಮಾಜಿಕ ಜವಾಬ್ದಾರಿಯನ್ನು ಮತ್ತಷ್ಟು ಪ್ರಖರಗೊಳಿಸಿಕೊಳ್ಳಲು ಪ್ರೇರಣೆಯಾಗಬೇಕು. ಇದು ಸಾಹಿತಿಯ ಸಾಮಾಜಿಕ ಕ್ರಿಯೆ; ಇದೇ ಸಾಹಿತಿಯು ಸಾಹಿತ್ಯದ ಸೃಷ್ಟಿಕ್ರಿಯೆಯಲ್ಲೂ ತನ್ನ ಜವಾಬ್ದಾರಿಯನ್ನು ನಿರ್ವಹಿಸುವುದು ಹೇಗೆ ? ಜಾಗತೀಕರಣ ಮತ್ತು ದೇಗುಲೀಕರಣದ ಸನ್ನಿವೇಶವು ಸೃಜನಶೀಲತೆಗೆ ಪೂರಕವಾಗಿಲ್ಲವೆಂದು ಅವುಗಳು ಎಳೆದತ್ತ ಹೋಗಬಾರದು; ದಿವ್ಯ ನಿರ್ಲಿಪ್ತತೆಯ ದೀಪ್ತಿಯಲ್ಲಿ 'ಬೆಳಗಬಾರದು' ಅನೇಕಾಂತದ ಸಾಮಾಜಿಕ ಕ್ರಿಯೆಯು ಏಕಾಂತದ ಸೃಷ್ಟಿಕ್ರಿಯೆಗೆ ಬೇಕಾದ ಒತ್ತಾಸೆಯನ್ನು ನೀಡಬಲ್ಲದು; ಏಕಾಂತ, ಅನೇಕಾಂತಕ್ಕೂ ಅರ್ಥಪೂರ್ಣ ಒತ್ತಾಸೆಯಾಗಬಲ್ಲದು. ಆದ್ದರಿಂದ ಎಂಥದೇ ಬಿಕ್ಕಟ್ಟಿನ ಸಂದರ್ಭದಲ್ಲೂ ಸೃಷ್ಟಿಶೀಲತೆಯು ಹಾದಿಯನ್ನು ಶೋಧಿಸಿಕೊಳ್ಳುತ್ತದೆ.

ಶ್ರೀಮತಿ ಇಂದಿರಾಗಾಂಧಿಯವರು ತುರ್ತು ಪರಿಸ್ಥಿತಿ ಹೇರಿದ ಸಂದರ್ಭವನ್ನೊಮ್ಮೆ 'ತಿಟ್ಟತ್ತಿ ತಿರುಗಿ' ನೋಡೋಣ. ಇದೇ ಇಂದಿರಾ ಗಾಂಧಿಯವರು ಬ್ಯಾಂಕ್ ರಾಷ್ಟ್ರೀಕರಣ, ಜೀತ ವಿಮುಕ್ತಿ ಶಾಸನ, ರಾಜಧನ ರದ್ಧತಿ, ಸಾಲ ಪರಿಹಾರ ಕಾಯಿದೆ ಮುಂತಾದ ಕ್ರಮಗಳ ಮೂಲಕ ಜನ ಸಾಮಾನ್ಯರ 'ಸ್ವಾತಂತ್ರ್ಯ'ಕ್ಕೆ ಪ್ರೇರಣೆ ನೀಡಿದ್ದರೆಂಬುದನ್ನು ನಾನು ಈಗಲೂ ನೆನೆಯುತ್ತೇನೆ. ಆದರೆ ಇದೇ ಇಂದಿರಾಗಾಂಧಿಯವರು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಪ್ರತಿರೋಧ ಮತ್ತು ಅಕ್ಷರಾಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅಡೆತಡೆಗಳನ್ನು ತಂದರು. ತುರ್ತು ಪರಿಸ್ಥಿತಿಯನ್ನು ವಿರೋಧಿಸಿ ಬರೆಯುವುದು ಹೇಗೆ ? ಅಥವಾ ಬರೆದರೆ ಹೇಗೆ? ಎಂಬೆಲ್ಲ ಪ್ರಶ್ನೆಗಳ ಮಧ್ಯೆ ಅನೇಕ ಕವಿತೆ, ಕತೆಗಳು ಹುಟ್ಟಿಯೇಬಿಟ್ಟವು. ಇಂದಿರಾಗಾಂಧಿಯವರ 'ಸಾಮಾಜಿಕ-ಆರ್ಥಿಕ ಸ್ವಾತಂತ್ರ್ಯದ ನೀತಿ'ಯನ್ನು ಪ್ರಶಂಸಿಸಿದ ರಚನೆಗಳು ಬಂದಂತೆಯೇ ಅಭಿವ್ಯಕ್ತಿ ಸ್ವಾತಂತ್ರ್ಯ ಹರಣದ ವಿರೋಧದಲ್ಲಿ ಹುಟ್ಟಿದ ರಚನೆಗಳೂ ಬಂದವು. ಪ್ರತಿರೋಧಾತ್ಮಕ ಅಭಿವ್ಯಕ್ತಿಯನ್ನು ಇಂದಿರಾಗಾಂಧಿಯವರು ತಡೆಯಲಾಗಲಿಲ್ಲ. ಹೆಚ್ಚೆಂದರೆ ನೇರ ವಿರೋಧಿ ಬರಹಗಳ ಪ್ರಕಟಣ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಲು ಸಾಧ್ಯವಾಯಿತು. ಇಲ್ಲಿ ಗಮನಿಸಬೇಕಾದ ಎರಡು ಅಂಶಗಳೆಂದರೆ- ಅ. ಯಾರೂ ನಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಲಾಗದು. ನಮಗೆ ನಾವು ಅಭಿವ್ಯಕ್ತಿಸಿಕೊಳ್ಳುವ ಆಂತರಂಗಿಕ ಸ್ವಾತಂತ್ರ್ಯ ಇದ್ದೇ ಇರುತ್ತದೆ. ಆ. ಆದರೆ ಅಭಿವ್ಯಕ್ತಿಗೊಂಡದ್ದನ್ನು ಪ್ರಕಟಿಸುವ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಬಹುದು.

ಹಾಗಾದರೆ, ಅಭಿವ್ಯಕ್ತಿ ಮತ್ತು ಪ್ರಕಟಣ ಸ್ವಾತಂತ್ರ್ಯಗಳೆರಡನ್ನೂ ಒಟ್ಟಿಗೇ ಸೇರಿಸಿಕೊಂಡ ರಚನೆಗಳು ಸಾಧ್ಯವಿಲ್ಲವೇ? ಸಾಧ್ಯವೆನ್ನುವುದನ್ನು ತುರ್ತುಪರಿಸ್ಥಿತಿಯ ಸಂದರ್ಭ ತೋರಿಸಿದೆ. ಆದರೆ ಅಭಿವ್ಯಕ್ತಿ ವಿಧಾನದ ವಿನ್ಯಾಸಗಳು ಬೇರೆಯಾಗಿರುತ್ತವೆ. ಅಂದಿನ ಪ್ರಜಾಪ್ರಭುತ್ವ ವಿರೋಧಿ ಕಾಯ್ದೆಯೆನ್ನಿಸಿಕೊಂಡ 'ಮೀಸಾ' ಅನ್ನು ಪ್ರತಿರೋಧಿಸಿ 'ಮೀಸೆಯವರು' ಎಂಬ ಕತೆ ಪ್ರಕಟವಾಯಿತು. ಇಂದಿರಾಗಾಂಧಿಯವರನ್ನೇ ಗಮನದಲ್ಲಿಟ್ಟುಕೊಂಡು ರಾಣಿಯೊಬ್ಬಳ ಹಲ್ಲಿನ ಪ್ರಸಂಗವನ್ನು ನಿರೂಪಿಸಿದ 'ಒಂದು ದಂತಕತೆ' ಯೆಂಬ ಕತೆಯೂ ಹೊರ ಬಂದಿತು. (ಎರಡೂ 'ಪ್ರಜಾವಾಣಿ'ಯಲ್ಲಿ). ಸಂಜಯ್‌ಗಾಂಧಿ ಬಗ್ಗೆ ಬರೆದ 'ಒಂದೂರಲ್ಲೊಬ್ಬ ಯುವರಾಜ' ಎಂಬ ಕತೆ 'ಮಲ್ಲಿಗೆ'ಯಲ್ಲಿ

ಸುತ್ತಿಗೆ ಸಪ್ಪಳ



ಕೆಂಪ ಹಂಚಿಕೊಂಡಿದ್ದವರ ತುತ್ತಿನ
ಚೀಲ ತುಂಬುವ ಕಾಯಕದಲಿ
ಗಾಣದೆತ್ತಾಗಿದ್ದ ನಲವತ್ತರದವ
ಬೇಡವೆಂದಿದ್ದ ಬೆಡಗಿಯನ್ನು ಸ್ವಪ್ನದ
ಹಿತೋಪದೇಶಗಳಿಗೆ ಮಾರುಹೋಗಿ ಕೈ ಹಿಡಿದ.

ಹೊಸ್ತಿಲ ಮೆಟ್ಟಿದ ವಾರದೊಳಗೆ
ರೂಪದರ್ಶಿಯ ನಡುಪ್ರಾಯದ
ಗುಂಡಿಗೆಯೊಳಗಿಂದೆ ಸೃಜಿಸಿತು ಹಾಲಾಹಲ

ಧಾತೆ ಅಸ್ಥಿಯಿಡಿದು ಹಾಸಿಗೆ ಹೇರಿ
ಅಳಿಯನ ಕಿದ್ದಂಡೆಗೆ ಹೋದರೆ
ಧಾತ ಪೂರ್ಣ ಜಂಗಮನಾದ
ಹಿಂದಲ - ಮುಂದಲ ಬೇರುಗಳೆಲ್ಲವೂ
ವಲಸೆ ಹಕ್ಕಿಗಳಂತಾಗಿ ಗರ್ಭದೊಳಗಿಂದ
ಹಾರಿದವು.

ಗೋಧಿ ಬಣ್ಣದೊಳಗಿಂದ ಉದುರಿತೊಂದು
ಅದ್ದು ಮುದ್ದಿನ ಉಸಿರಿನ ಬೊಂಬೆ
ಆಕಾಶ-ಭೂಮಿಗಳೆರಡನ್ನು ಒಂದಾಗಿಸುತ್ತಿತ್ತು
ಅಂಬೆಗಾಲಿಡಿಸುವವರಿಲ್ಲವೆಂದು

○ ದಾಸನೂರು ಕೂಸಣ್ಣ

ಪಂಜರದೊಳಗೆ ದೀಪವತ್ತಿದ್ದರೂ
ಅಷ್ಟ ಪ್ರಯತ್ನಪಟ್ಟು ತಂದವರ
ಬಳಿ ಸಿಗದಿದ್ದ ಪ್ರೀತಿ - ವಾತ್ಸಲ್ಯದ
ಬುತ್ತಿಗಾಗಿ ದುರುಗುಟ್ಟುತ್ತಿತ್ತು

ಹುಣ್ಣಿಮೆ - ಅಮಾವಾಸೆಗಳೆನ್ನದೆ
ಬಣ್ಣಗಳೆರಡೂ ಕುಟ್ಟಾಡುತ್ತಿದ್ದವು
ಮಾತೆಂಬ ಸುತ್ತಿಗೆ ಹಿಡಿದು
ಬಣ್ಣವೊಂದು ದೂರ್ವಾಸನಾದರೆ,
ಮತ್ತೊಂದು ಹಿಡಿಂಬೆಯಾಗುತ್ತಿತ್ತು

ಬ್ರಹ್ಮ ವಾಕ್ಯವ ಜಪಿಸುತ್ತಾ ಕದ್ದು - ಮುಚ್ಚಿ
ತನ್ನ ಜಗತ್ತಿನೊಳಗೆ ಸರೀಕರೊಂದಿಗೆ
ಗೋಲಿ ಗಜ್ಜುಗಗಳ ಹುಡುಕಾಡುತ್ತಿದ್ದಾಗಲೂ
ಬೊಂಬೆಯನ್ನು ಸುತ್ತಿಗೆಯ ಸಪ್ಪಳ
ಬೆಂಬಿಡದೆ ಕಾಡುತ್ತಿತ್ತು

ಬಂತು. ಹೀಗೆ ಅನೇಕ ಪ್ರಕಟಣೆಗಳನ್ನು ಉದಾಹರಿಸಬಹುದು. ಇವೆಲ್ಲ 'ಅನ್ಯೋಕ್ತಿ ವಿಧಾನ'ದಲ್ಲಿ ಅಭಿವ್ಯಕ್ತಗೊಂಡ ರಚನೆಗಳೆಂಬುದನ್ನು ಗಮನಿಸಬೇಕು. ತುರ್ತು ಪರಿಸ್ಥಿತಿಯ ಪ್ರತಿರೋಧದಲ್ಲಿ ಹುಟ್ಟಿದ ಕವಿತೆಗಳನ್ನು ಸಂಕಲಿಸಿ ಆ ನಂತರ 'ಆಪತ್ಕಾಲೀನ ಕವಿತೆಗಳು' ಎಂಬ ಕೃತಿ ಪ್ರಕಟಗೊಂಡಿತು. (ಸಂ: ಕಿ.ರಂ. ನಾಗರಾಜ್) ಹೀಗೆ ವ್ಯತಿರಿಕ್ತ ಸನ್ನಿವೇಶದಲ್ಲೂ ಸೃಜನಶೀಲತೆಯು ಕ್ರಿಯಾಶೀಲವಾಗಿರಬಲ್ಲದು.

ಅನ್ಯೋಕ್ತಿ ವಿಧಾನದಲ್ಲಿ ಹುಟ್ಟುವ ರಚನೆಗಳಿಗೆ ಪ್ರಾಚೀನ ಸಾಹಿತ್ಯದ ಉದಾಹರಣೆಯಾಗಿ 'ಪಂಚತಂತ್ರ'ವನ್ನು ಹೆಸರಿಸಬಹುದು. ಪಂಚ ತಂತ್ರದಲ್ಲಿ ಪ್ರಾಣಿ ಪಾತ್ರಗಳಿವೆ. ಆದರೆ ಅವು ಮನುಷ್ಯ ಸ್ವಭಾವದ ಪ್ರಾಣಿ ರೂಪಕಗಳು. ಪಂಚತಂತ್ರಕಾರ ಯಾಕೆ ಇಂತಹ ಅನ್ಯೋಕ್ತಿ ವಿಧಾನವನ್ನು ಬಳಸಿದ? 'ಪಂಚತಂತ್ರ'ದಲ್ಲಿ ಅನೇಕ ರಾಜವಿರೋಧಿ ಸಂಗತಿಗಳಿವೆ. 'ಅರಸಿಂಗೆ ಹಿತವ ಮಾಡುವಾತಂ ಪ್ರಜೆಗೆ ಹಗೆಯಹನು । ಪ್ರಜೆಗೆ ಹಿತವ ಮಾಡುವಾತನನ್ ಅರಸುಗಳ್ ಕೈಪಿಡಿಯರು' ಎಂಬ ತಿಳುವಳಿಕೆಯಿಂದ ಹಿಡಿದು ರಾಜಪ್ರಭುತ್ವದ ಪೊಳ್ಳುತನವನ್ನು ಪ್ರಾಣಿ ಸಮಾಜ ಮತ್ತು ರೂಪಕಗಳ ಮೂಲಕ ಅಭಿವ್ಯಕ್ತಿಸಲಾಗಿದೆ. ನೇರವಾಗಿ ರಾಜಾಸ್ಥಾನವನ್ನೇ ತಂದು ಪ್ರಜೆಗಳ ಪ್ರತಿರೋಧವನ್ನು ದಾಖಲಿಸಲು ಅಸಾಧ್ಯವಾದ ಸನ್ನಿವೇಶದಲ್ಲಿ ಕವಿಯು ಕಂಡುಕೊಂಡದ್ದು ಅನ್ಯೋಕ್ತಿ ವಿಧಾನ.

ಮಹಾಕವಿ ಪಂಪ, ತನಗೆ ಎದುರಾದ ಸೃಜನಶೀಲ ಬಿಕ್ಕಟ್ಟನ್ನು ಪರಿಹರಿಸಿಕೊಂಡ ರೀತಿ ಅನುಕರಣೀಯವಾದುದು. ಜೈನಧರ್ಮವನ್ನು ನಂಬಿಯೂ ಅದನ್ನು ಮೀರಿದ 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ನೆಲೆಗೆ ತಲುಪಿದ್ದು, ಅರ್ಜುನನನ್ನು ತನ್ನ ಆಶ್ರಯದಾತ ರಾಜನಿಗೆ ಹೋಲಿಸಿ, ನಾಯಕ ಸ್ಥಾನದಲ್ಲಿರಿಸಿ, ಕಡೆಗೆ 'ಕರ್ಣ ರಸಾಯನ ಮಲ್ತೆ ಭಾರತಂ' ಎಂದಾಗಿಸಿದ್ದು. ಅನನ್ಯ ಪ್ರತಿಭೆಯ ಪ್ರತಿರೋಧದ ಶೋಧಗಳಾಗಿವೆ. ಪಂಪಕವಿಯು ಪರ್ಯಾಯಗಳ ಶೋಧದಲ್ಲಿ ಪ್ರತಿರೋಧಕ್ಕೆ ಸೃಜನಶೀಲ ಸ್ವರೂಪವನ್ನು ನೀಡಿರುವುದು ಇಂದಿಗೂ ಅನನ್ಯ ಅಭಿವ್ಯಕ್ತಿ. ಗಮನಿಸಿ : ಕರ್ಣನದು ಪ್ರತಿನಾಯಕನ ಪಾತ್ರ; ಅರ್ಜುನ ನಾಯಕ ಮಾತ್ರವಲ್ಲ, ಆಶ್ರಯದಾತ ರಾಜನ ಪ್ರತೀಕ. ಹೀಗಿದ್ದೂ 'ಸತ್ಯ'ವನ್ನೇ ಅಭಿವ್ಯಕ್ತಿಸುವ ಜವಾಬ್ದಾರಿಯನ್ನು ಪಂಪ ನಿರ್ವಹಿಸಲು ಆಯ್ಕೆ ಮಾಡಿಕೊಂಡ ವಿಧಾನ ವಿಶಿಷ್ಟವಾದುದು. ನಾಯಕನ ಬದಲು ಪ್ರತಿನಾಯಕ ನೆಲೆಯಿಂದ ಮಹಾಭಾರತದ ಕತೆಯನ್ನು ಕಂಡುಕೊಳ್ಳುವುದು ಮತ್ತು ಕಟ್ಟಿಕೊಡುವುದು ಪಂಪನ ಅನನ್ಯ ವಿಧಾನ. ಇದನ್ನೇ ರನ್ನ ಕವಿಯೂ ಅನುಸರಿಸಿದ.

ಮಹಾಕವಿ ಪಂಪ, ತನಗೆ ಎದುರಾದ ಸೃಜನಶೀಲ ಬಿಕ್ಕಟ್ಟನ್ನು ಪರಿಹರಿಸಿಕೊಂಡ ರೀತಿ ಅನುಕರಣೀಯವಾದುದು. ಜೈನಧರ್ಮವನ್ನು ನಂಬಿಯೂ ಅದನ್ನು ಮೀರಿದ "ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ನೆಲೆಗೆ ತಲುಪಿದ್ದು, ಅರ್ಜುನನನ್ನು ತನ್ನ ಆಶ್ರಯದಾತ ರಾಜನಿಗೆ ಹೋಲಿಸಿ, ನಾಯಕ ಸ್ಥಾನದಲ್ಲಿರಿಸಿ, ಕಡೆಗೆ "ಕರ್ಣ ರಸಾಯನ ಮಲ್ತೆ ಭಾರತಂ' ಎಂದಾಗಿಸಿದ್ದು ಅನನ್ಯ ಪ್ರತಿಭೆಯ ಪ್ರತಿರೋಧದ ಶೋಧಗಳಾಗಿವೆ.

ಈ ಹಿನ್ನೆಲೆಯಲ್ಲಿ ಜಾಗತೀಕರಣದ 'ಆಕ್ರಮಣ' ಮತ್ತು ದೇಗುಲೀಕರಣದ 'ದಾಳಿ'ಗಳನ್ನು ಎದುರಿಸುವ ವಿಧಾನಗಳನ್ನು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗಳು ಕಂಡುಕೊಳ್ಳಬೇಕೆಂದು ನನಗನ್ನಿಸುತ್ತದೆ. ಇಂದು ನಾಯಕನ ಸ್ಥಾನವನ್ನು ಆಕ್ರಮಿಸಿಕೊಳ್ಳುತ್ತಿರುವವರು ಯಾರೆಂದು ನೋಡಿ: ಸಿಂಘಾಲ್, ಬಿನ್‌ಲಾಡೆನ್, ಬೆನ್ನಿಹಿನ್, ತೊಗಾಡಿಯಾ, ಗೋಡ್ಸೆ ಮುಂತಾದವರು ಧಾರ್ಮಿಕ ನಾಯಕರಾಗಿ, ಬಿಲ್‌ಗೇಟ್ಸ್, ನಾರಾಯಣ ಮೂರ್ತಿ, ಪ್ರೇಮ್‌ಜಿ, ಅಂಬಾನಿ ಇತ್ಯಾದಿಗಳು ಆರ್ಥಿಕ ನಾಯಕರಾಗಿ ಅದ್ವಾನಿ, ಮೋದಿ, ವಾಜಪೇಯಿ, ಬುಷ್ ಖೊಮೇನಿ' ಮುಂತಾದವರು ರಾಜಕೀಯ ನಾಯಕತ್ವದ 'ಆದರ್ಶ'ಗಳಾಗಿ ಕಾಣುತ್ತಿದ್ದಾರೆ. ಧಾರ್ಮಿಕ, ಆರ್ಥಿಕ ಮತ್ತು ರಾಜಕೀಯ ನಾಯಕತ್ವಕ್ಕೆ ಅಂತರ್ ಸಂಬಂಧವೂ ಇದೆ. ಹೀಗಾಗಿ ಈ 'ಶಕ್ತಿ ಸಮೂಹ' 'ಆದರ್ಶ'ವಾಗಿ ಬಿಂಬಿತವಾಗುತ್ತಿರುವಾಗ ಬುದ್ಧ, ಬಸವಣ್ಣ, ಗಾಂಧಿ, ಅಂಬೇಡ್ಕರ್, ಲಿಂಕನ್, ಮದರ್ ತೆರೇಸಾ ಮುಂತಾದವರ ಆದರ್ಶದ ಬದಲು ಹುಸಿ ನಾಯಕರು ವಿಜೃಂಭಿಸುತ್ತಾರೆ. ಇಂತಹ ಸಂದರ್ಭದಲ್ಲಿ ಕನ್ನಡ ಸಾಹಿತ್ಯ-ಸಂಸ್ಕೃತಿಗಳು ಪಂಪನ ಅನನ್ಯ ವಿಧಾನದ ಮೂಲಕ ಎದುರಾಗಬೇಕು. ಈ ಹುಸಿ ನಾಯಕರಿಗೆ ಪ್ರತಿನಾಯಕರಾಗಬೇಕು. ಪ್ರತಿರೋಧಾತ್ಮಕ ರೂಪಕಗಳಲ್ಲಿ ಜೀವಂತವಾಗಬೇಕು. ಇದು ಎಲ್ಲ ಕ್ಷೇತ್ರಗಳಿಗೂ ಅನ್ವಯಿಸುತ್ತದೆ.

ಶಬ್ದವಿಲ್ಲದ ಯುದ್ಧಕ್ಕೆ ಪ್ರತಿರೋಧ ಮತ್ತು ಪರ್ಯಾಯ ಶೋಧವೇ ಉತ್ತರ; ಪ್ರತಿನಾಯಕನೇ ಪ್ರತೀಕ. □



ಹೊಸ ಪುಸ್ತಕ

ಹುಟ್ಟಿ ಕಟ್ಟಿಗೆಯಾಗು (ಕವನಗಳು)
ಲೇ. ಹರೀಶ್ ಕಟ್ಟೆಬೆಳಗುಲಿ
ಬೆಲೆ: ರೂ. ೬೫/ -

ಕವಿ ಹರೀಶ್ ಕಟ್ಟೆಬೆಳಗುಲಿ ಈಗಾಗಲೇ ಕನ್ನಡದ ಸಾರಸ್ವತ ಲೋಕಕ್ಕೆ ಪರಿಚಿತರು.

ಪ್ರಸ್ತುತ 'ಹುಟ್ಟಿ ಕಟ್ಟಿಗೆಯಾಗು' ಅವರ ಈ ಕೃತಿಯಲ್ಲಿನ ಕವನಗಳು ಓದುಗನನ್ನು ಆವರಿಸಿಕೊಳ್ಳುತ್ತಾ ಹೋಗುತ್ತದೆ. ಇಲ್ಲಿ ತಮ್ಮ ನೋವಿಗೆ, ಅಸಹನೆಗೆ, ಸಿಟ್ಟಿಗೆ ಕಾವ್ಯ ಸ್ಪರ್ಶ ನೀಡಿದ್ದಾರೆ.

ಇಲ್ಲಿನ ಚಿಂತನೆಗಳು ಸಮಾಜಮುಖಿಯಾಗಿವೆ. ಬದಲಾವಣೆಯ ದಿಕ್ಕಿನತ್ತ ಬೆರಳಿಟ್ಟು ನಿರ್ದೇಶನ ಮಾಡುವ ಮಾರ್ಗದರ್ಶನದ ಮುದವಿದೆ.

ಪ್ರಕಾಶಕರು : ಐಶ್ವರ್ಯ ಪ್ರಕಾಶನ, ಸರಸ್ವತಿಪುರಂ, ಹಾಸನ – ೫೭೩ ೨೦೧



ಚಂದಿರನ ಕಣ್ಣು ಇಂಗಲಾರದ ಹುಣ್ಣು (ಆಯ್ದ ಕವಿತೆಗಳು)
ಲೇ. ಮೂಡ್ನಾಕೂಡು ಚಿನ್ನಸ್ವಾಮಿ
ಬೆಲೆ: ರೂ. ೮೦/-

ನಾಡಿನ ಕಾವ್ಯ ಸಂದರ್ಭದಲ್ಲಿ ಗಟ್ಟಿಧ್ವನಿಯಾಗಿರುವ ಚಿನ್ನಸ್ವಾಮಿ ಅವರ ಹೊಸ ಕವನ ಸಂಕಲನ ಇದು.

'ದಲಿತ ಕವಿ' ಎಂಬ ಹಣೆಪಟ್ಟಿ ಅಂಟಿಸಿಕೊಳ್ಳದ ಆಳವಾದ ದಲಿತ ಪ್ರಜ್ಞೆಯ ಅರ್ಥಪೂರ್ಣ ಕಾವ್ಯ ಸೃಷ್ಟಿಯಲ್ಲಿ ಚಿನ್ನಸ್ವಾಮಿ ನಿಷ್ಣಾತರು. ಕೃತಿಯಿಂದ ಕೃತಿಗೆ ಬೆಳೆಯುತ್ತಲೇ ಇರುವ ಚಿನ್ನಸ್ವಾಮಿ ಅವರ ಕಾವ್ಯ ಸಾಮಾಜಿಕ ಬದುಕಿಗೆ ಹಿಡಿದ ಕನ್ನಡಿಯಾಗಿದೆ.

ಪ್ರಕಾಶಕರು : ಮಾನವ ಧರ್ಮ ಪೀಠ ನಂ. ೪೯, ಹೆಚ್.ಬಿ. ಸಮಾಜ ರಸ್ತೆ ಬಸವನಗುಡಿ, ಬೆಂಗಳೂರು.

ದ್ರೌಪದಿ (ಕಾದಂಬರಿ)
ಲೇ. ಡಾ|| ಎಸ್.ವಿ. ಪ್ರಭಾವತಿ
ಬೆಲೆ: ರೂ. ೫೦ /-

ಮಹಾಭಾರತದ ಕಥೆಯನ್ನು ಆ ಇತಿಹಾಸದ ಬಹುಪ್ರಧಾನ ಪಾತ್ರವಾದ ದ್ರೌಪದಿಯ ದೃಷ್ಟಿಯಿಂದ ನೋಡಿದರೆ ಆ ಕಥೆ ಹೇಗೆ ಕಾಣಬಹುದು ಎಂಬುದು ಈ ಪುಸ್ತಕದ ಅಂತರಂಗ.

ಮಹಾಭಾರತದ ಪ್ರತಿಯೊಂದು ಸನ್ನಿವೇಶವನ್ನೂ ಹೆಣ್ಣಿನ ದೃಷ್ಟಿಯಿಂದ ನೋಡಿ ರಚಿಸಿರುವ ಈ ಕೃತಿಯಲ್ಲಿ ಅನೇಕ ಹೊಸ ಒಳನೋಟಗಳು ಅಡಗಿವೆ.

ಪ್ರಕಾಶಕರು : ಡಾ|| ಎಸ್.ವಿ. ಪ್ರಭಾವತಿ
೩೦೧, ಪಲ್ಲವ ಟೆರೆಸ್,
ಜಯನಗರ ೭ನೇ ಬ್ಲಾಕ್,
ಬೆಂಗಳೂರು – ೫೬೦ ೦೮೨

ಶೂನ್ಯ ಬಂಡವಾಳ ಲಾಭದಾಯಕ ನೈಸರ್ಗಿಕ ಕೃಷಿ (ಒಂದು ಅಧ್ಯಯನ)
ಬೋಧಕರು : ಸುಭಾಷ್ ಪಾಳೇಕರ
ಸಂಗ್ರಹ. ಬಸವರಾಜ ತಂಬಾಕೆ
ಬೆಲೆ: ರೂ. ೧೦/-

ಸುಭಾಷ್ ಪಾಳೇಕರರ ಹೊಸ ಅನ್ವೇಷಣೆ ಈ ಯಶಸ್ವೀ ನೈಸರ್ಗಿಕ ಕೃಷಿ. ದೇಸೀ ಹಸುವಿನ ಸಗಣಿ, ಗಂಜಳ, ದ್ವಿದಳ ದಾನ್ಯ, ನೀರು ಇಷ್ಟೇ ವಸ್ತುಗಳನ್ನು ನಿಗದಿತ ಪ್ರಮಾಣದಲ್ಲಿ ಬೆರೆಸಿಕೊಂಡು ತಯಾರಿಸುವ ಜೀವಾಮೃತ ಇದು. ಇದರ ತಯಾರಿಕೆಯ ವಿಧಾನ ಹಾಗೂ ಬಳಕೆಯ ವಿಧಾನಗಳನ್ನು ಈ ಕಿರು ಹೊತ್ತಿಗೆಯಲ್ಲಿ ನೀಡಲಾಗಿದೆ. ಕೃಷಿಕರಿಗೆ ಅತ್ಯುಪಯುಕ್ತ ಹೊತ್ತಿಗೆ ಇದು.

ಪ್ರಕಾಶಕರು : ಬಸವತೀರ್ಥ ವಿದ್ಯಾಪೀಠದ ಕಾಯಕ ವಿಕಾಸ ವೇದಿಕೆ, ಹುಮನಾಬಾದ, ಜಿಲ್ಲೆ: ಬೀದರ್.



ಚಿತ್ತಾಟ (ನೀಳ್ಗತೆ)
ಲೇ. ಬಂದಗದ್ದೆ ರಾಧಾಕೃಷ್ಣ
ಬೆಲೆ: ರೂ. ೩೦/-

ಚಿತ್ತಾಟ ರಾಧಾಕೃಷ್ಣರ ಮೂರನೆಯ ಕಥೆ. ಒಂದು ದೃಷ್ಟಿಯಿಂದ ಇದು ಗೋಪಾಲ, ಅವನ ಹೆಂಡತಿ, ಮಗ, ಮಗಳು –ಇವರ ಸಂಸಾರದ ಕಥೆ.

ಆದರೆ ಇದು ಗೋಪಾಲನ ಸಂಸಾರದ ಕಥೆಯನ್ನು ಕೇಂದ್ರವಾಗಿಟ್ಟುಕೊಂಡು ಬರೆದ ಒಂದು ಊರಿನ ಕಥೆ ಸಹ ಹೌದು.

ಊರಿನ ವಿವರ, ಜೊತೆಗೆ ಪಾತ್ರಗಳ ಮನಸ್ಸಿನ ವ್ಯಾಪಾರ ಇವೆರಡನ್ನೂ ಒಟ್ಟಿಗೆ ತೂಗಿಸಿಕೊಂಡು ಒಂದು ಹದದಲ್ಲಿ ಬರೆದಿರುವ ಈ ಬರವಣಿಗೆ ಸೊಗಸಾಗಿದೆ.

ಪ್ರಕಾಶಕರು : ಪುಸ್ತಕ ಹೊಂಬಾಳೆ, ಕೆಳದಿ, ಸಾಗರ – ೫೭೭ ೪೦೧, ಶಿವಮೊಗ್ಗ

ಹೊರಳು ನೋಟ (ಪ್ರಬಂಧ ಸಂಕಲನ)
ಲೇ. ಡಾ|| ಎಸ್.ವಿ. ಪ್ರಭಾವತಿ
ಬೆಲೆ: ರೂ. ೯೦ /-

ಲೇಖಕರ ಮಹಿಳಾವಾದದ ದೃಷ್ಟಿಕೋನ ಹೊಂದಿದ ಪ್ರಬಂಧ ಸಂಕಲನ ಇದು.

ಇಲ್ಲಿ ಲೇಖಕರ ಸಮಾನತೆಯ ಹಂಬಲ ಸ್ತ್ರೀಯರಿಗೆ ಮಾತ್ರವಾಗಿರದೆ ಒಟ್ಟು ಮಾನವ ಕುಲದ ಸಮಾನತೆಯದ್ದಾಗಿದೆ. ಭೂತಕಾಲದ ದುರಂತದ ಬಗ್ಗೆ ರಮ್ಯವಾಗಿ ಹೇಳುತ್ತಾ ವರ್ತಮಾನದ ವಾಸ್ತವಕ್ಕೆ ಮುಖಾಮುಖಿಯಾಗುಗಲು ಎದ್ದು ನಿಲ್ಲುವ ಸಿದ್ಧತೆ ಅವರ ಬರಹಗಳ ಮನೋವ್ಯಾಪಾರವಾಗಿದೆ. ಪುರಾಣ, ಮಹಾಕಾವ್ಯ ಮತ್ತು ಐತಿಹ್ಯಗಳಲ್ಲಿ ಧಿಗ್ಗನೆ ಎದ್ದುನಿಲ್ಲುವ ಹೆಣ್ಣುಗಳನ್ನು ಹೊಸ ದೃಷ್ಟಿಕೋನದಿಂದ ನೋಡುತ್ತಾ ಅವರಿಗೆ ವರ್ತಮಾನದ ಮೌಲ್ಯಗಳನ್ನು ನೀಡುತ್ತಾರೆ.

ಪ್ರಕಾಶಕರು: ವಸಂತ ಪ್ರಕಾಶನ, ಸಂಖ್ಯೆ ೧೦, ತುಳಸೀತೋಟ, ಬೆಂಗಳೂರು – ೦೩



ಜಿಜ್ಞಾಸೆ

ಅದ್ವೈತವು ವ್ಯಕ್ತಿ ಪರಿಪೂರ್ಣತೆಯನ್ನು ಬೋಧಿಸುತ್ತದೆಯೇ ? ಎಲ್ಲಾ ಧರ್ಮಗಳಿಗೂ ಅತೀತವಾದದ್ದನ್ನು ಹೇಳುತ್ತಾ ಹಿಂದೂ ಧರ್ಮದೊಂದಿಗೆ ಅವಿನಾಭಾವವನ್ನಿಟ್ಟು ಕೊಳ್ಳುವ ಇದರ ಮುಖ್ಯ ಗುರಿ ಏನು? ವ್ಯಕ್ತಿ ಪರಿಪೂರ್ಣ ತೆಯೇ? ಅಥವಾ ಧಾರ್ಮಿಕ ಸಿದ್ಧಾಂತಗಳಲ್ಲಿ ವ್ಯಕ್ತಿಯನ್ನು ಬಂಧಿಯಾಗುವಂತೆ ಮಾಡುವ ತಂತ್ರವೇ? ಇಡೀ ಮಾನವ ಜನಾಂಗಕ್ಕೆ ಒಳಿತಾಗುವಂತದ್ದು ಅದರಲ್ಲಿ ಏನಿದೆ? ನೈತಿಕ ಜೀವನದ ಗುರಿಯನ್ನು ಈಡೇರಿಸಿಕೊಳ್ಳಲು ಅದ್ವೈತದ ತತ್ವಗಳು ಸಹಾಯವನ್ನು ನೀಡಬಲ್ಲವೇ?

○ ಪದ್ಮಾಲಯಾ ನಾಗರಾಜ

ಅದ್ವೈತದ ಸಮನ್ವಯ

ಗುರು ಪತ್ನಿಯೊಂದಿಗಿನ ಸಂಯೋಗವು 'ಅತ್ಯಂತ ನೀತಿಗೆಟ್ಟ ಲೈಂಗಿಕತೆ' ಎಂಬ ಕನಿಷ್ಟ ಗೌರವವನ್ನೂ ಇಟ್ಟುಕೊಳ್ಳದಾ ದೇವೇಂದ್ರನು, ಗೌತಮಿ ಮಹರ್ಷಿಯ ಪತ್ನಿ ಅಹಲ್ಯೆಯೊಂದಿಗೆ ಮೋಸದಿಂದ ಸಮಾಗಮಿಸಲು ಪ್ರಯತ್ನಿಸಿ ಮಹರ್ಷಿ ಗೌತಮನಿಂದ 'ನಿನ್ನ ವೃಷಣಗಳು ಸಹಸ್ರ ಹೋಳುಗಳಾಗಲಿ!' ಎಂಬ ಶಾಪಕ್ಕೀಡಾಗುತ್ತಾನೆ. ಈ ವಿಷಯದಿಂದ ವ್ಯಥೆಗೊಳಗಾದ ದೇವಗಣದಲ್ಲಿ ವ್ಯಥೆಯುಂಟಾಗಿ, ಹೇಗಾದರೂ ಮಾಡಿ ದೇವೇಂದ್ರನನ್ನು ಪೂರ್ಣಪ್ರಮಾಣದ ಪುರುಷನನ್ನಾಗಿ ಉಳಿಸಿಕೊಳ್ಳುವ ಸಲುವಾಗಿ ದೇವಗುರು ಬೃಹಸ್ಪತಿಯ ಯಜಮಾನ್ಯದಲ್ಲಿ 'ಮೇಷಯಜ್ಞ' ಮಾಡುತ್ತಾರೆ. ಈ ಯಜ್ಞದ ಫಲದಿಂದಾಗಿ ದೇವೇಂದ್ರನಿಗೆ ಮೇಷ ವೃಷಣ ಎಂಬ ಇನ್ನೊಂದು ಹೆಸರೂ ಬಂತು.

ಚತುರ್ವೇದಗಳು ಕಾಮವನ್ನು ಪರಮ ಪವಿತ್ರವಾದ ವಿಷಯವೆಂದು ಮಾನ್ಯ ಮಾಡುತ್ತವೆ. ಹಾಗೂ ಕಾಮವು ಪ್ರಜೆಗಳಲ್ಲಿ ಸಮೃದ್ಧಿ ಮಾಡಬೇಕೆಂದು ಪ್ರಾರ್ಥಿಸುತ್ತವೆ. (ಪ್ರಜಾಮೇ ಕಾಮ ಸಮೃದ್ಧ್ಯಾತಾಂ). ವೈದಿಕರಿಗೆ - ವೇದಗಳ ಕಾಲದಲ್ಲಿ ಕಾಮವು ಜೀವನದ ಸಾಮಾನ್ಯವಾದ ಒಂದು ಭಾಗವಾಗಿತ್ತು. ಕಾಮದ ವಿಚಾರಗಳಲ್ಲಿ ಆರ್ಯರು ನೈತಿಕ ಕಟ್ಟುಪಾಡುಗಳನ್ನು ಹೊಂದಿರಲಿಲ್ಲವಾದ್ದರಿಂದ ಈ ವಿಚಾರವು ಅವರಿಗೆ ಲಜ್ಜಾಸ್ಪದವಾಗಿರಲಿಲ್ಲವೆಂಬುದಕ್ಕೆ ಪುರಾವೆಯಾಗಿ ಸಂಸ್ಕೃತ ಸಾಹಿತ್ಯವು ವಿಫುಲವಾದ ಆಧಾರಗಳನ್ನು ನೀಡುತ್ತದೆ.

ಕಾಳಿದಾಸನು ತನ್ನ ಆರಾಧ್ಯ ದೈವವಾದ ಕಾಳಿಯನ್ನು 'ಕುಚೋನ್ನತೆ' ಎಂದು ವರ್ಣಿಸುತ್ತಾನೆ. ಶ್ರೀಕೃಷ್ಣನ ಪರಮಭಕ್ತನಾದ ಜಯದೇವನು ಕೃಷ್ಣನನ್ನು 'ರತಿಸುಖಸಾರೇ' (ಕಾಮ ಸುಖದ ಸಾರ ರೂಪನು) ಎಂದು ಕರೆಯುತ್ತಾನೆ. ಉಪನಿಷತ್ತುಗಳು 'ಬ್ರಹ್ಮಾನುಭವಕ್ಕೆ' ಕಾಮ ಸುಖವನ್ನು ಉದಾಹರಣೆಯಾಗಿ ತೆಗೆದುಕೊಂಡಿವೆ. ಇದೇ 'ಆ... ರತಿ'. ಇದೇ ದೇವತೆಗಳಿಗೆ ಕರ್ಪೂರವನ್ನು ಹೊತ್ತಿಸುವ ಆರತಿ!

ಹಿಂದೂಗಳಲ್ಲಿ ಪಾವಿತ್ರ್ಯ ಗ್ರಂಥಗಳೆಂಬ ಮಾನ್ಯಕ್ಕೆ ಪಾತ್ರವಾಗಿರುವ ರಾಮಾಯಣ ಮಹಾಭಾರತಗಳು ಅಸೂಯೆಯನ್ನು ಶಕುನಿ ಚಿತ್ರಣ ಕೊಡುವುದರ ಮೂಲಕ, ದ್ವೇಷವನ್ನು ದುರ್ಯೋಧನನ ಮೂಲಕ, ಕುಚೇದ್ಯ ಕುತಂತ್ರವನ್ನು ಶ್ರೀಕೃಷ್ಣನ ಮೂಲಕ, ಹತ್ಯೆಯನ್ನು ರಾಮನ ಮೂಲಕ, ಸೋದರ ದ್ರೋಹವನ್ನು ವಿಭೀಷಣನ ಮೂಲಕ, ಕುಡಿತವನ್ನು ಶಲ್ಯನ ಮೂಲಕ, ಜೂದವನ್ನು ಧರ್ಮರಾಯನ ಮೂಲಕ ಅತ್ಯಂತ ನೀತಿಯುತವಾದುದೆಂದು ವಿಚಿತ್ರವಾಗಿ ವಿಜೃಂಭೀಕರಿಸುತ್ತವೆ. ಇದು ವೈದಿಕ ಸಾಹಿತ್ಯದ ಕ್ರೌರ್ಯವೆಂಬಂತೆ ಕೂಡ ಭಾಸವಾಗುತ್ತದೆ. ಏಕೆಂದರೆ ಇಡೀ ಜಗತ್ತಿನಲ್ಲಿ ಕ್ರೂರ ಗುಣಗಳನ್ನು ಇಷ್ಟೊಂದು ವರ್ಣನಾತ್ಮಕವಾಗಿ ಯಾವ ಧರ್ಮದ ಸಾಹಿತ್ಯವೂ ವರ್ಣಿಸಲಾರದು.

ಈ ಎಲ್ಲಾ ಕ್ರೌರ್ಯದ ಲಕ್ಷಣಗಳನ್ನಿರಿಸಿಕೊಂಡೇ ಭಾರತೀಯ ಗತಕಾಲದ ರಾಜಮನೆತನಗಳ ಚರಿತ್ರೆಗಳೂ ಮುಂದುವರೆದಿವೆ. ಇಂತಹ ಸಾಹಿತ್ಯದ ಪ್ರಭಾವಗಳು ಪ್ರಸ್ತುತವಾದ ಸಾಮಾಜಿಕ ಸನ್ನಿವೇಶಗಳಲ್ಲಿಯೂ ಕ್ರೌರ್ಯದ ಪರ ಪ್ರೇರಣೆಯನ್ನು ಪಡೆದುಕೊಳ್ಳುತ್ತವೆ.

ಹಿಂದೂ ಸಾಮಾಜಿಕ ವ್ಯವಸ್ಥೆ ಮತ್ತು ಸಂಸ್ಕೃತ ಸಾಹಿತ್ಯದ ಕುರಿತಾಗಿ ಡಾ|| ಅಂಬೇಡ್ಕರ್‌ರು 'ಹಿಂದೂ ಧರ್ಮದ ನೀತಿಯು ಮಾನವತೆಯ ವಿವಕ್ಷೆಯಿಂದ ಹೊರಗುಳಿದಿದೆ ಎಂದರೆ ತೀರಾ ಕಡಿಮೆಯಾದೀತು. ಇಂತಹವು ಬಹುಬೇಗ ಅನೀತಿಯುತವೂ ಕಳಂಕಕಾರಿಯೂ ಅಮಾನುಷವೂ ಆಗುತ್ತದೆ. ಹಿಂದೂ ಧರ್ಮಕ್ಕೆ ಒದಗಿರುವ ಗತಿ ಇದು. (ಅಂ.ಭಾ.ಬ. ಸಂ.೩ ಪು.ಸಂ. ೧೨೭)'.

ಇನ್ನು ಧರ್ಮದ ವಿಚಾರಕ್ಕೆ ಬಂದರೆ 'ಎಲ್ಲಾ ಧರ್ಮಗಳೂ ಒಂದೇ ರೀತಿಯಲ್ಲಿ ಶ್ರೇಷ್ಠವಾಗಿವೆ. ಅವುಗಳ ನಡುವೆ ಅಂತಹ ವ್ಯತ್ಯಾಸವೇನೂ ಇಲ್ಲ; ಇದಕ್ಕಿಂತ ತಪ್ಪು ಬೇರೊಂದಿಲ್ಲ; ಧರ್ಮವೆಂದರೆ ಒಂದು ಸಾಮಾಜಿಕ ಸಂಸ್ಥೆ ಅಥವಾ ಪ್ರಭಾವ'. (ಅದೇ ಪು.ಸಂ. ೩೫).

ಹಿಂದೂ ಧರ್ಮವು ಒಂದು ಸಂಸ್ಥೆ ಅಥವಾ ಪ್ರಭಾವವಾಗಿ ಧರ್ಮಾಂಧತೆ, ಮೌಢ್ಯತೆ ಅಸಮಾನತೆ, ಸರ್ವಾಧಿಕಾರ, ವಿರುದ್ಧ ಹಿತಾಸಕ್ತಿಗಳ ಸಂಘರ್ಷಗಳನ್ನು ಒಪ್ಪಿಕೊಂಡು ವರ್ಣಿಸುವ ಸಾಹಿತ್ಯವಾಗಿ ೧೮ ಪುರಾಣಗಳನ್ನು ಒಂದು ಕಡೆ ಬಿಂಬಿಸಿದರೆ, ಇಡೀ ಮಾನವ ಜನಾಂಗಕ್ಕೆ ಮೌಲಿಕವಾದದ್ದನ್ನು ಕೂಡ ನಾನು ಕೊಡಬಲ್ಲೆಂಬುದನ್ನು ತೋರಿಸಲು, ಉಪನಿಷತ್ತು ಮತ್ತು ದರ್ಶನ ಸಾಹಿತ್ಯವನ್ನು ತೆಗೆದುಕೊಂಡು, ಅಧ್ಯಾತ್ಮಿಕವಾಗಿ ಕೂಡ ನಾನು ಶ್ರೇಷ್ಠವೆಂಬಂತೆ ಬಿಂಬಿಸುತ್ತದೆ. ಈ ತೆರನಾದ ಸಾಂಪ್ರದಾಯಿಕವಾದ ಅಧ್ಯಾತ್ಮಿಕ ಸಾಹಿತ್ಯದ ಮುಖ್ಯ ಲಕ್ಷಣವೇನೆಂದರೆ, ಹಿಂದೂ ಧರ್ಮದ ಮೂಲಭೂತ ಪರಿಕಲ್ಪನೆಗಳಿಗೆ ತೀರಾ ನಿಷ್ಠನಾಗಿದ್ದುಕೊಂಡು ಈ ಸಾಹಿತ್ಯವನ್ನು ಓದಿದರೂ ಅಸ್ಪಷ್ಟವಾದ ಶಾಬ್ದಿಕ

ಗೊಂದಲಗಳಿಗೆ ಬಲಿಯಾಗಲೇಬೇಕು. ಆಶ್ಚರ್ಯವೆಂದರೆ ಭಾರತೀಯ ಚರಿತ್ರಾತ್ಮಕ ಕ್ರಾಂತಿ ಮತ್ತು ಪ್ರತಿಕ್ರಾಂತಿಗಳನ್ನು ಗಮನದಲ್ಲಿಟ್ಟುಕೊಂಡು ಓದಿದಾಗ ಅನೇಕ ಸತ್ಯಗಳು ಹೃದ್ಗೋಚರವಾಗುತ್ತವೆ. ಬ್ರಾಹ್ಮಣ್ಯದಲ್ಲಿ ಆಸಕ್ತರಾದ ರಾಜರು, ಚಕ್ರವರ್ತಿಗಳು ಮತ್ತು ಆಚಾರ್ಯರು ಇಲ್ಲಿ ಅವತರಿಸಿ ಹಿಂದೂ ಸಾಂಪ್ರದಾಯಿಕ ಸಿದ್ಧಾಂತಗಳನ್ನು ಶ್ರೇಷ್ಠವೆಂಬಂತೆ ತಿದ್ದಿ ಹಿಂದೆ ಇಲ್ಲದವುಗಳನ್ನು ಸೇರಿಸುತ್ತಾ ಹೋದಂತೆಲ್ಲಾ ವೈರುಧ್ಯಗಳು ಬೆಳೆಯತೊಡಗಿವೆ. ಈ ಬೆಳವಣಿಗೆ ಗುರ್ತು ಸಿಗಲಾರದಂತೆ ಮುಚ್ಚಿಡಲು 'ವೈಜ್ಞಾನಿಕ ಇತಿಹಾಸದ ಉತ್ಖನನಕ್ಕೆ' ವಿರುದ್ಧವಾದ ಅವೈಜ್ಞಾನಿಕ ಯುಗಗಳನ್ನು ಸೃಷ್ಟಿಸಿ ಇದು ಪ್ರಾಚೀನ ಸಾಹಿತ್ಯವೆಂಬಂತೆ ಹೇಳುವುದನ್ನು ಹಿಂದೂಗಳು ತುಂಬು ಹೃದಯದಿಂದ ಸ್ವಾಗತಿಸಿದ್ದಾರೆ. ಹಾಗಾಗಿ ಇದು ಸನಾತನ ಹಿಂದೂ ಧರ್ಮ!!!.

'ಬಹುತೇಕ ಹಿಂದೂಗಳು ಧರ್ಮ ನಿಷ್ಠರಿರಲಿ ಇಲ್ಲದಿರಲಿ ಅಥವಾ ಕಲಿತವರೋ ಅಲ್ಲವೋ ತಮ್ಮ ಸಾಹಿತ್ಯ ಅತ್ಯಂತ ಪ್ರಾಚೀನವೆಂಬ ಅಚಲ ನಂಬಿಕೆಯನ್ನು ಹೊಂದಿರುತ್ತಾರೆ. ಹಾಗೆ ನೋಡಿದರೆ ತಮ್ಮ ಪ್ರಾಚೀನ ಸಾಹಿತ್ಯದ ಪ್ರಾಚೀನತೆಯನ್ನು ನಂಬುವುದು ಪ್ರತಿಯೊಬ್ಬ ಹಿಂದೂವಿನ ಪಾಲಿಗೆ ಧರ್ಮ ಶ್ರದ್ಧೆಯ ವಿಚಾರವಾಗಿದೆ. (-ಡಾ|| ಅಂಬೇಡ್ಕರ್ ಸಂ.೩. ಪು.ಸಂ.೩೬೮)'.

ಉದಾಹರಣೆಗೆ ಒಂದು ದೃಷ್ಟಾಂತವನ್ನು ನೀಡುವುದಾದರೆ, ಭಕ್ತಿ ಪ್ರಾಧಾನ್ಯತೆಯಲ್ಲಿ ಕನಕ ಪುರಂದರದಾಸರು 'ಭಕ್ತಿ' ಯಿಂದ ಭಗವಂತನನ್ನು ಅರಸಿ ತಾವೂ ಪುನೀತರಾಗಿ ಬದುಕನ್ನು ಸಾರ್ಥಕ್ಯ ಮಾಡಿಕೊಂಡರೆ, ದೇವರು ಎಂಬುದು ಧರ್ಮವು ನೀಡಿದ ಕೊಡುಗೆಯೆಂಬಂತಾಗಿ ದಾಸರನ್ನು ಹಿಂದೂಧರ್ಮದ ಧಾರ್ಮಿಕ ವ್ಯಕ್ತಿಗಳೆಂಬಂತೆ ನಾವು ಅರ್ಥ ಮಾಡಿಕೊಳ್ಳುತ್ತೇವೆ. ಆದರೆ ಹಿಂದೂ ಧರ್ಮದ ಸುಧಾರಕರ 'ಧರ್ಮ ಪುನರುತ್ಥಾನದ' ತಂತ್ರ ಕೂಡ ಇಲ್ಲಿದೆ.

'ಭಕ್ತನಿಗೆ ಕೆಲವು ನೈಜ ಲಕ್ಷಣಗಳಿರಬೇಕು. ಯಾರು ನಿಜವಾದ ಭಕ್ತ? ೧. ಮೈತ್ರಿ ೨.ಕರುಣೆ ೩. ಮುದಿತಾ (ಸಮರ್ಪಣಾ ಭಾವ : ಎಲ್ಲವನ್ನೂ ಸಮರ್ಪಿಸಿಕೊಳ್ಳುವುದು) ೪. ಉಪೇಕ್ಷ (ಪ್ರಾಪಂಚಿಕವಾದ ಸಂಕುಚಿತ ವಿಚಾರಗಳ ಕುರಿತು ಉಪೇಕ್ಷೆ) ಇವುಗಳನ್ನು ಯಾರು ಅನುಷ್ಠಾನ ಮಾಡುತ್ತಾರೋ ಅವನೇ ನಿಜವಾದ ಭಕ್ತ. ಇದು ಅಕ್ಷರಶಃ ಬೌದ್ಧಧರ್ಮದ್ದು. ಇದಕ್ಕೆ ಆಧಾರ ಬೇಕೆನ್ನುವವರು ಹೃದಯ ಕೃಷಿಗೆ ಅಗತ್ಯವಾದ ಭಾವನೆಗಳನ್ನು ಬೋಧಿಸಿದ ಬುದ್ಧನ ಮಹಾಪಾದನ ಸುತ್ತ ಮತ್ತು ತೇಜಸ್ವಿ ಸುತ್ತಗಳನ್ನು ಹೋಲಿಸಬಹುದು (ಡಾ|| ಅಂಬೇಡ್ಕರ್ ಸಂ.೩. ಪು.ಸಂ. ೫೩೬)'.

ಈ ಮೇಲ್ಕಂಡ ಭಾವನೆಗಳನ್ನು ಹೊಂದಿದ್ದರಿಂದ ದಾಸರು ಶ್ರೇಷ್ಠ ಹೌದು! ಆದರೆ ಈ ತತ್ವವು ಬುದ್ಧನ ಸಮಾಜದಲ್ಲಿ ಮನುಷ್ಯನೊಬ್ಬನ ಅಸಹಾಯಕತೆಗೆ, ದುಃಖಕ್ಕೆ ರೋಗಕ್ಕೆ, ಹಿಂಸೆಗೆ ಇನ್ನೊಬ್ಬನು ಸಹಾಯಕನಾಗಿ ಕರುಣೆಯಿಂದ, ಸ್ನೇಹದಿಂದ, ಸಮರ್ಪಣಾ ಭಾವದಿಂದ ಬಂಧುವಿನಂತೆ ಸ್ಪಂದಿಸುವ ಮಹಾನ್ ತತ್ವವಾಗಿತ್ತು. ಇಂತಹ ಅಮೂಲ್ಯವಾದ ಸಿದ್ಧಾಂತವನ್ನು ಬ್ರಾಹ್ಮಣ ಸುಧಾರಕರು ಹಾದಿ ತಪ್ಪಿಸಿ ದೇವರು ಮತ್ತು ಧರ್ಮದ ಕಡೆ ತಿರುಗಿಸಿದರು. ದೈವ ಪ್ರಾಧಾನ್ಯತೆಯಲ್ಲಿ ಈ ಭಾವನೆಗಳು ಅಹೀಮು ಎಂಬಂತಾದವು. ಈ ವಾದವನ್ನು ಒಪ್ಪದವರು ಭಾಷ್ಯಕಾರನೂ ಅದ್ವೈತಾಸಕ್ತನೂ ಆದ ಪತಂಜಲಿಯ ಯೋಗ ಶಾಸ್ತ್ರದ ಈ ಶ್ಲೋಕವನ್ನೂ ಗಮನಿಸಬಹುದು.

ಮೈತ್ರಿ-ಕರುಣಾ-ಮುದಿತೋ-ಪೇಕ್ಷಣಾಂ ಸುಖ
ದುಃಖ ಪುಣ್ಯಾಹ ಪುಣ್ಯ ವಿಷಯಾಣಾಂ ಭಾವನಾ ತಶ್ಚಿತ್ತ ಪಸಾಧ ನಮ್ ॥
(ರಾಮಕೃಷ್ಣ ಮಿಷನ್, ರಾಜಯೋಗ - ಶ್ಲೋಕ - ೩೩)

ಈ ಮೈತ್ರಿ-ಕರುಣಾ-ಮುದಿತಾ-ಉಪೇಕ್ಷೆಗಳು ಪರಿಶುದ್ಧವಾದ ಮನಸ್ಸನ್ನು ನೀಡುತ್ತವೆ ಎಂಬುದನ್ನು ಅದ್ವೈತದ ಗುರು ಗೋವಿಂದ ಪಾದಾಚಾರ್ಯರ ಸಮಕಾಲೀನನಾದ ಪತಂಜಲಿ ಏಕೆ ತೆಗೆದುಕೊಂಡ ? ಹಿಂದೂ ಧರ್ಮದಲ್ಲಿ ಮೌಲ್ಯಗಳೇ ಇರಲಿಲ್ಲವೆ ? ಈ ಸತ್ಯವನ್ನು ಹಿಂದೂ ಧರ್ಮವು ಒಪ್ಪಲಾರದು; ಆದರೂ ತಪ್ಪಿಸಿಕೊಳ್ಳಲೂಬಾರದು. ಶ್ರೇಷ್ಠವಾದ ಭಾವನೆಗಳನ್ನು ಕನಕ ಪುರಂದರಾದಿಗಳು ಹೊಂದಿದ್ದರೂ ಅವರು 'ದಾಸ' ರಾಗಿದ್ದರು. ಬ್ರಾಹ್ಮಣರು 'ಆಚಾರ್ಯ' (ಹಿರಿಯ ಗುರು) ಗಳಾಗಿದ್ದರು. ದಾಸರನ್ನು ಪುರಂದರಾಚಾರ್ಯ, ಕನಕಾಚಾರ್ಯ, ಗೋಪಾಲಚಾರ್ಯ, ಎಂದು ಕರೆಯಲು ಹೇಗೆ ಸಾಧ್ಯವಿಲ್ಲವೋ... ಹಾಗೆ ಆಚಾರ್ಯರನ್ನು ಶಂಕರದಾಸ, ಮಧ್ವದಾಸ, ರಮಾನುಜದಾಸ ಎಂದು ಕರೆಯಲು ಬರುವುದೇ ಇಲ್ಲ. ಇದಕ್ಕೆ ಮೂಲ ಕಾರಣವೇನೆಂದರೆ ವ್ಯಕ್ತಿ ಶ್ರೇಷ್ಠತೆಯನ್ನು ಅರ್ಹತೆಯ ಆಧಾರದ ಮೇಲೆ ಬ್ರಾಹ್ಮಣರು ಒಪ್ಪಿಕೊಂಡಿದ್ದೇ ಆದರೆ 'ಜಾತಿ ಮತ್ತು ದೇವರನ್ನು' ಕೈಬಿಡಬೇಕಾಗಿತ್ತು. ಇದು ಧಾರ್ಮಿಕ ಸುಧಾರಕರಿಗೆ ದೊಡ್ಡ ಪ್ರಶ್ನೆಯೂ ಹೌದು !!! ಹಾಗಾಗಿ ಕೆಳಜಾತಿಯ ಜನರನ್ನೂ ದೇವರ ಸಾನ್ನಿಧ್ಯಕ್ಕೆ ಕರೆದೊಯ್ದು ಅವರನ್ನು 'ದಾಸ' ಸ್ಥಾನದಲ್ಲಿರಿಸಿ ತಾವು ಗುರುವಿನ ಜಾಗದಲ್ಲಿದ್ದುಕೊಂಡು ಇಡೀ ವ್ಯವಸ್ಥೆಯನ್ನು ತಮ್ಮ ಕೈಗೆ ತೆಗೆದುಕೊಳ್ಳಬಹುದಾಗಿತ್ತು.

...ಹೀಗೆ ಅತ್ಯಂತ ಪರಿಣಾಮಕಾರಿಯಾಗಿ ಇಡೀ ಸಮಾಜಕ್ಕೆ ವ್ಯಕ್ತಿಯಿಂದ ಒಳಿತಾಗುವ ಕಾರಣಕ್ಕಾಗಿ ಮನುಷ್ಯನೊಬ್ಬನು ಅನುಸರಿಸಲೇಬೇಕಾದ ಬುದ್ಧನ ಅಧ್ಯಾತ್ಮಿಕ ಸತ್ವವನ್ನು, ದೇವರು ಮತ್ತು ಧರ್ಮದ ಕಾರಣಕ್ಕಾಗಿ ಬ್ರಾಹ್ಮಣರು ದುರುಪಯೋಗ ಮಾಡಿಕೊಳ್ಳುವುದರ ಮೂಲಕ ಹಿಂದೂ ಧರ್ಮದ ಸಾಹಿತ್ಯವನ್ನು ಬೆಳೆಸಿದರು. ಈ ಬೆಳವಣಿಗೆ ಅತ್ಯಂತ ವಿಸ್ತಾರವಾಗಿ ಬೆಳೆಯಿತು.

ಹಿಂದೂಗಳಲ್ಲಿ ಪಾವಿತ್ರ್ಯ ಗ್ರಂಥಗಳೆಂಬ ಮಾನ್ಯಕ್ಕೆ ಪಾತ್ರವಾಗಿರುವ ರಾಮಾಯಣ ಮಹಾಭಾರತಗಳು ಅಸೂಯೆಯನ್ನು ಶಕುನಿ ಚಿತ್ರಣ ಕೊಡುವುದರ ಮೂಲಕ, ದ್ವೇಷವನ್ನು ದುರ್ಯೋಧನನ ಮೂಲಕ, ಕುಚೇದ್ಯ ಕುತಂತ್ರವನ್ನು ಶ್ರೀಕೃಷ್ಣನ ಮೂಲಕ, ಹತ್ಯೆಯನ್ನು ರಾಮನ ಮೂಲಕ, ಸೋದರ ದ್ರೋಹವನ್ನು ವಿಭೀಷಣನ ಮೂಲಕ, ಕುಡಿತವನ್ನು ಶಲ್ಯನ ಮೂಲಕ, ಜೂದವನ್ನು ಧರ್ಮರಾಯನ ಮೂಲಕ ಅತ್ಯಂತ ನೀತಿಯುತವಾದುದೆಂದು ವಿಚಿತ್ರವಾಗಿ ವಿಜೃಂಭೀಕರಿಸುತ್ತವೆ. ಇದು ವೈದಿಕ ಸಾಹಿತ್ಯದ ಕ್ರೌರ್ಯವೆಂಬಂತೆ ಕೂಡ ಭಾಸವಾಗುತ್ತದೆ. ಏಕೆಂದರೆ ಇಡೀ ಜಗತ್ತಿನಲ್ಲಿ ಕ್ರೂರ ಗುಣಗಳನ್ನು ಇಷ್ಟೊಂದು ವರ್ಣನಾತ್ಮಕವಾಗಿ ಯಾವ ಧರ್ಮದ ಸಾಹಿತ್ಯವೂ ವರ್ಣಿಸಲಾರದು.

ಈ ವಿಧಾನದಿಂದ ಕಾಲದಿಂದ ಕಾಲಕ್ಕೆ ದೃಢೀಕರಣಗೊಳ್ಳುತ್ತಾ ಮುಂದೆ ಅಚಲ, ತಾರಕ, ಅಮನಸ್ಕ, ಸಾಂಖ್ಯ, ವೈಶೇಶಿಕಾ, ದ್ವೈತ, ಅದ್ವೈತ... ಎಂಬ ಸಾಂಪ್ರದಾಯಿಕ ಅಧ್ಯಾತ್ಮ ಶಾಖೆಗಳ ಹುಟ್ಟಿಗೆ ಕಾರಣವಾಯಿತು.

ಇಲ್ಲಿ ಅದ್ವೈತವು ಅತಿಮುಖ್ಯ ಏಕೆಂದರೆ 'ಪರಬ್ರಹ್ಮವೇ ಸತ್ಯ' ಎಂಬ ತನ್ನ ಸ್ಥಿರವಾದ ತನ್ನ ಮೂಲ ಸಿದ್ಧಾಂತವನ್ನು ದಾಟಿ ಇದು 'ಜೀವನ ವಿಜ್ಞಾನ'ವೆಂಬ ಅಭಿಪ್ರಾಯದಲ್ಲಿ ಕೊನೆಗೊಳ್ಳುತ್ತದೆ. ಭಾರತೀಯ ಸಂದರ್ಭಗಳಲ್ಲಿ ಅದ್ವೈತವು ಎರಡು ತನಗೆ ತಾನು ಸಾಟಿಯಾದ ಆಧ್ಯಾತ್ಮವೆಂಬಂತೆ ಅಗ್ರಸ್ಥಾನದಲ್ಲಿದೆ. ೧. ಬೌದ್ಧಿಕ ತರ್ಕವನ್ನಾಧರಿಸಿ ೨. ಜೀವನ ಸಾಫಲ್ಯದ ಪರಿಪೂರ್ಣತೆಯನ್ನು ಸಾಧಿಸುವ ದೃಷ್ಟಿಯಿಂದ. ನಮ್ಮ ಹಿರಿಯ ಕಿರಿಯ ದಾರ್ಶನಿಕ ವಿದ್ವಾಂಸರೆಲ್ಲರೂ ಇದರ ಸಾರಾಂಶವನ್ನು 'ಬದುಕನ್ನು ಪರಿಪೂರ್ಣತೆಗೆ ಕೊಂಡೊಯ್ಯ ಬಹುದಾದ ಅತ್ಯುನ್ನತ ದರ್ಶನವೆಂಬಂತೆ ಬಿಂಬಿಸುತ್ತಾರೆ' ಹಾಗೂ ಹಿಂದೂಗಳು ಅದ್ವೈತ ಭಾವವನ್ನು ಒಂದಿಲ್ಲೊಂದು ರೀತಿಯಲ್ಲಿ ಭಾವನಾತ್ಮಕವಾಗಿ ಗೌರವಿಸುತ್ತಾರೆ.

ಈ ಕಾರಣಗಳಿಂದಾಗಿ ಅದ್ವೈತವು ವ್ಯಕ್ತಿ ಪರಿಪೂರ್ಣತೆಯನ್ನು ಬೋಧಿಸುತ್ತದೆಯೇ ? ಎಲ್ಲಾ ಧರ್ಮಗಳಿಗೂ ಅತೀತವಾದದ್ದನ್ನು ಹೇಳುತ್ತಾ ಹಿಂದೂ ಧರ್ಮದೊಂದಿಗೆ ಅವಿನಾಭಾವವನ್ನಿಟ್ಟುಕೊಳ್ಳುವ ಇದರ ಮುಖ್ಯ ಗುರಿ ಏನು? ವ್ಯಕ್ತಿ ಪರಿಪೂರ್ಣತೆಯೇ? ಅಥವಾ ಧಾರ್ಮಿಕ ಸಿದ್ಧಾಂತಗಳಲ್ಲಿ ವ್ಯಕ್ತಿಯನ್ನು ಬಂಧಿಯಾಗುವಂತೆ ಮಾಡುವ ತಂತ್ರವೇ? ಇಡೀ ಮಾನವ ಜನಾಂಗಕ್ಕೆ ಒಳಿತಾಗುವಂತದ್ದು ಅದರಲ್ಲಿ ಏನಿದೆ? ನೈತಿಕ ಜೀವನದ ಗುರಿಯನ್ನು ಈಡೇರಿಸಿಕೊಳ್ಳಲು ಅದ್ವೈತದ ತತ್ವಗಳು ಸಹಾಯವನ್ನು ನೀಡಬಲ್ಲವೇ? ದುಸ್ತರವಾದ ಈ ಬದುಕು ಮತ್ತದರ ಸಂಕೀರ್ಣ ಸಮಸ್ಯೆಗಳನ್ನು ನೀಗಿಸಿಕೊಳ್ಳಲು ಅದ್ವೈತವು ಸಹಕರಿಸಬಲ್ಲದೇ? ವ್ಯಕ್ತಿಗೆ ವಿಕಾಸೋನ್ಮುಖವಾಗಿ ಹೃದಯ ಸಿರಿವಂತಿಕೆಯನ್ನು ಬಲಪಡಿಸಿಕೊಳ್ಳುವಲ್ಲಿ ಅದ್ವೈತದ ಅಧ್ಯಾತ್ಮವು ಮನಸ್ಸಿಗೆ ಎಂತಹ ತರಬೇತಿಯನ್ನು ನೀಡಬಲ್ಲದು? ಈ ಸಿದ್ಧಾಂತವು ಯಾವ ಕಾರ್ಯ ಮತ್ತು ಕಾರಣಗಳ ಮೇಲೆ ನಿಂತಿದೆ ?

ಈ ಎಲ್ಲಾ ಪ್ರಶ್ನೆಗಳನ್ನು ಸರಿಯಾಗಿ ಕಂಡುಕೊಳ್ಳಲು ನಾನು ಅದ್ವೈತ ಸಂಸ್ಥಾಪಕ ಶಂಕರಾಚಾರ್ಯರನ್ನು ಅವಲಂಬಿಸುತ್ತೇನೆ. ಇಲ್ಲಿ ಕೆಲವರು ಇದು ಶಂಕರಾಚಾರ್ಯರ ಅದ್ವೈತವೆಂದು ಅರ್ಥ ಮಾಡಿಕೊಳ್ಳುವುದರ ಮೂಲಕ ಮೂಲ ಅದ್ವೈತವು ಬೇರೆಯದಾಗಿದೆಯೆಂದು ಭಾವಿಸಬಹುದು. ಈ ವಾದದಲ್ಲಿ ಹುರುಳಿಲ್ಲ ಏಕೆಂದರೆ ಮೂಲ ಅದ್ವೈತಕ್ಕೂ ಶಂಕರಾಚಾರ್ಯ ಅದ್ವೈತಕ್ಕೂ ತನ್ನ ಗುರಿಗಳಲ್ಲಿ ಸ್ವಲ್ಪವೂ ವ್ಯತ್ಯಾಸವಿಲ್ಲ ಎಂಬುದನ್ನು ನೋಡಬಹುದು.

ನಾಮ ರೂಪ ಗುಣಾದಿ ಪದಾರ್ಥ ರೂಪ ಭೌತಿಕ ಜಗತ್ತಿನ ವಿಸ್ತಾರದ ಸ್ತರವನ್ನು ದಾಟಿ, ಒಳಗಿನ ಅಂತರಾತ್ಮದ ಅರಿವಿನ ಕೋಶದ ವೈಶಾಲ್ಯಕ್ಕೂ ಮೀರಿ ಸರ್ವಕಾಲ ಸರ್ವಾವಸ್ಥೆಗಳಲ್ಲಿ ಅದ್ವಿತೀಯವಾಗಿ ಬೆಳಗುತ್ತಿರುವ ತುರೀಯಾತ್ಮನನ್ನೂ, ಸ್ಥೂಲಾದಿಗಳ ಇರುವಿಕೆಯನ್ನು ಮೆಟ್ಟಿದ ನಿರ್ದಿಗಂತ ವ್ಯಾಪ್ತನನ್ನು ಸೇರುವುದು ಮತ್ತು ಅನುಸಂಧಾನಗೈಯ್ಯುವುದು. ಮಾನವನ ಅತ್ಯುತ್ಕೃಷ್ಟವಾದ ಸ್ಥಿತಿ' ಈ ಪರಮಗುರಿಯಲ್ಲಿ ಶಂಕರಾ

ಚಾರ್ಯರ ಅದ್ವೈತಕ್ಕೂ ಮೂಲ ಅದ್ವೈತಕ್ಕೂ ವ್ಯತ್ಯಾಸವಿರುವುದಿಲ್ಲ. ಹಾಗಾಗಿ ಅದ್ವೈತವನ್ನು ಶಂಕರಾಚಾರ್ಯರ ಮೂಲಕ ಹೇಳುವುದು ತಪ್ಪಾಗಲಾರದು.

ಒಮ್ಮೆ ಆಚಾರ್ಯರು ತಮ್ಮ ಆರಾಧ್ಯ ದೈವವಾದ ಶಿವನನ್ನು... 'ಬ್ರಹ್ಮಾದಿ ದೇವತೆಗಳಿಂದ ಸ್ತುತಿಸಲ್ಪಡುವವನೂ ನಿರ್ಮಲಾಕಾರನೂ ಜನ್ಮಾದಿಗಳ ದುಃಖವನ್ನು ಹೋಗಲಾಡಿಸುವವನೂ ಲಿಂಗರೂಪಿಯಾದ ಶಿವನಿಗೆ ನಮಿಸುತ್ತಿದ್ದೇನೆ.' ಎಂದು ಪ್ರಾರ್ಥಿಸುತ್ತಾ... ಇದ್ದಕ್ಕಿದ್ದಂತೆ ತಮ್ಮ ನಿಲುವನ್ನು ಬದಲಾಯಿಸಿಕೊಂಡು ಶಿವೋಽಹಂ(ನಾನೇ ಶಿವ) ಎನ್ನುತ್ತಾರೆ. (ಆಚಾರ್ಯರು ಶಿವೋಽಹಂ ಎಂದು ಹೇಳುವ ಶ್ಲೋಕ ಮತ್ತು ಸಂದರ್ಭವನ್ನು ಗಮನಿಸಿದರೆ ಭಾವೋನ್ಮಾದವೇ ಪ್ರಧಾನವಾಗಿ ಕಾಣುತ್ತದೆಯೇ ಹೊರತು ಪಾರಮಾರ್ಥಿಕಕ್ಕೆ ಸಂಬಂಧವಿಲ್ಲದಂತೆ ಭಾಸವಾಗುತ್ತದೆ)

ಇಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾಗಿರುವುದೇನೆಂದರೆ 'ಶಿವನು ತನಗಿಂತ ಬೇರೆಯಾಗಿ ಆಕಾರ ಮೂರ್ತಿಯಾಗಿ ಜೀವಿಗಳ ಪಾಪ ಪುಣ್ಯಗಳನ್ನು ಹೋಗಲಾಡಿಸುವ ಶಕ್ತಿಯನ್ನು ಹೊಂದಿದ್ದಾನೆಂಬುದು' ಒಂದು ವಾದವಾದರೆ ಇಂತಹ "ಶಿವನೇ ನಾನಾಗಿದ್ದೇನೆಂಬುದು' ಇನ್ನೊಂದು. ಈ ಎರಡೂ ವಾದಗಳು ಒಂದಕ್ಕೊಂದು ವಿರುದ್ಧವಾದವು ಎಂಬಂತೆ ಭಾಸವಾಗಬಹುದು. ಇಲ್ಲವೇ ಇನ್ನೂ ಕೆಲವರು ಇದನ್ನು ಸಮದರ್ಶನ ಅಥವಾ ಸಮಭಾವವೆಂದು ಕರೆಯಬಹುದು.' ಯತಾರ್ಥದಲ್ಲಿ ಇವೆರಡೂ ವಿರುದ್ಧವಾದವುಗಳೂ ಅಲ್ಲ; ಸಮಭಾವ ಸಮದರ್ಶನವೂ ಅಲ್ಲ; ಎಲ್ಲಿಯವರೆಗೂ ಶಿವನು ಮನುಷ್ಯನಿಗಿಂತ ಬೇರೆಯವನಾಗಿದ್ದು ತ್ರಿಶೂಲ ಢಮರುಗ ಸರ್ಪಾದಿಗಳನ್ನು ಒಳಗೊಂಡಿರುತ್ತಾನೆಯೋ ಅಲ್ಲಿಯವರೆಗೂ ಧರ್ಮದ ಆಚರಣೆಗಳಾದ ಪೂಜೆ, ಪುನಸ್ಕಾರಗಳು ವರ್ಣಾಶ್ರಮಧರ್ಮ, ಜನನ, ಉಪನಯನ, ಕೇಶಖಂಡನಾ, ವಿವಾಹ, ಮರಣ ಇತ್ಯಾದಿ ಸನ್ನಿವೇಶಗಳಲ್ಲಿ ಧರ್ಮವು ರೂಪಿಸಿದ ಸಂಪ್ರದಾಯಗಳನ್ನು ಜೀವಂತವಾಗಿಡಬಹುದಿತ್ತು. ಇವು ಜೀವಂತವಾಗಿದ್ದಾಗ ಬ್ರಾಹ್ಮಣರ ಅಸ್ತಿತ್ವವೂ ಜೀವಂತವಾಗಿರುತ್ತಿತ್ತು. ಹೀಗಾಗಿ ಶಿವನು ತನಗಿಂತ ಬೇರೆ. ಇದು ವೈದಿಕರ ಭಾಷೆಯಲ್ಲಿ ಕರ್ಮಕಾಂಡವೆಂದು ಕರೆಸಿಕೊಳ್ಳುತ್ತದೆ.

'ನಾನೇ ಶಿವ' ಮತ್ತು ಅಹಂ ಬ್ರಹ್ಮಾಸ್ಮಿ ಎನ್ನುವುದು ಬ್ರಾಹ್ಮಣರ 'ಜ್ಞಾನಕಾಂಡ'. ಇದರ ಸಾರಾಂಶವನ್ನು ಹೇಳುವುದಾದರೆ 'ಈ ವಿಶ್ವವು ಇಲ್ಲ; ಮಾಯೆಯ ಕಾರಣದಿಂದ ಇದೆಯೆಂದು ಭಾವಿಸಲ್ಪಡುತ್ತಿದೆ. ಇರುವುದು ಒಂದೇ ಅದು ಪರಮಾತ್ಮ. ಹಾರದಲ್ಲಿ ಎಲ್ಲಾ ಮಣಿಗಳ ಮೂಲಕ ಹಾದು ಹೋಗಿರುವ ದಾರದಂತೆ ಈ ಸಕಲ ಚರಾಚರಾ ಜಗತ್ತಿನಲ್ಲಿ ಈಶ್ವರನು ಅನಿಕೇತನ ಸ್ವರೂಪದಿಂದ ಬೆಳಗುತ್ತಿದ್ದಾನೆ.' ಪ್ರಾಮಾಣಿಕವಾಗಿ ಹೇಳುವುದಾದರೆ ಈ ತತ್ವದಲ್ಲಿಯೂ ಪರಮಾರ್ಥಿಕವಾದುದು ಏನೂ ಇಲ್ಲ!!! ಹೇಗೆಂದರೆ 'ಆತ್ಮ' ಇದೆ ಎಂತಾದರೆ ದೇವರೂ ಸಹ ಇರಲೇಬೇಕು. ದೇವರಿದ್ದಾನೆ ಎಂದರೆ ಅವನನ್ನು ಕಂಡುಕೊಳ್ಳುವ ಮಾರ್ಗವಾಗಿ ಧರ್ಮವನ್ನು ಅನುಸರಿಸಬೇಕು. ಧರ್ಮವನ್ನು ಅನುಸರಿಸುವುದಾದರೆ ಅಲ್ಲಿ ಕಟ್ಟುಪಾಡು ಸಂಪ್ರದಾಯಗಳಿವೆ. ಇವೆಲ್ಲವನ್ನೂ ಇಟ್ಟುಕೊಳ್ಳುವುದಾದರೆ ಬ್ರಾಹ್ಮಣರ ಅಸ್ತಿತ್ವವೂ ಇರಲೇಬೇಕು.

ಹೀಗೆ.... ಬ್ರಾಹ್ಮಣರ ಜ್ಞಾನಕಾಂಡವು ದೇವರ ಅಸ್ತಿತ್ವವನ್ನು ಉಳಿಸಿಕೊಳ್ಳಲು ಪ್ರತಿಪಾದಿಸಿದ ಬುದ್ಧಿಪೂರ್ವಕ ತರ್ಕವಾಗಿತ್ತಲ್ಲದೇ ಅದ್ಯಾತ್ಮಿಕವಾಗಿ ಅದು ಮೇಲು ಮೇಲಿನದಾಗಿತ್ತಷ್ಟೆ.

ಶಂಕರಾಚಾರ್ಯರಿಂದ ಮೊದಲ್ಗೊಂಡು ಇಡೀ ಅದ್ವೈತ ಪರಂಪರೆಯ ಕರ್ಮಕಾಂಡ ಮತ್ತು ಜ್ಞಾನಕಾಂಡಗಳು ಮೇಲೆ ಹೇಳಿರುವಷ್ಟಕ್ಕೆ ಸೀಮಿತವಾಗಿಲ್ಲ. ಇವರ ಕರ್ಮಕಾಂಡವು ಮುಂದುವರಿದು... ಆಂಧ್ರದ ಜಗ್ಗಯ್ಯಪೇಟ, ಅಮರಾವತಿ, ನಾಗಾರ್ಜುನ ಕೊಂಡದಲ್ಲಿದ್ದ ಪ್ರಾಚೀನ ಬೌದ್ಧ ಸ್ತೂಪ ಮತ್ತು ವಿಹಾರಗಳ ಮೇಲೆ ಕೈ ಮಾಡಿತೆಂಬುದು ಇತಿಹಾಸ ಸತ್ಯ. ತಿರುಮಲ ತಿರುಪತಿ ದೇವಾಲಯವೂ ಸಹ ಹಿಂದೆ ಬೌದ್ಧ ವಿಹಾರ ಅಥವಾ ದೇವಾಲಯವಾಗಿತ್ತೆಂಬುದಕ್ಕೆ ಇತಿಹಾಸವು ಬೆಳಕನ್ನು ಚೆಲ್ಲುತ್ತದೆ. ನಮ್ಮ ಕರ್ನಾಟಕದ ಅದ್ವೈತ ಸ್ಥಾಪನೆಗಳಲ್ಲೊಂದಾದ ಶೃಂಗೇರಿಯ ವಿದ್ಯಾಶಂಕರ ದೇವಾಲಯವು ಇಂದಿಗೂ ಬೌದ್ಧ ಚೈತ್ಯಾಕಾರದಲ್ಲಿರುವುದನ್ನು ಗಮನಿಸಬಹುದು.

'ಕ್ರಿ.ಪೂ. ೩ನೇ ಶತಮಾನದಲ್ಲಿ ಕರ್ನಾಟಕದ ವನವಾಸಿ (ಬನವಾಸಿ?) ಎಂಬಲ್ಲಿಗೆ'ರಕ್ಷಿತ' ಎಂಬು ಬಿಕ್ಕುವು ಬಂದಿದ್ದ. ಇದರ ಪ್ರಭಾವದಿಂದಾಗಿ ೬೦ ಸಾವಿರ ಜನ ಬೌದ್ಧ ಅನುಯಾಯಿಗಳಾದರು. ೪೦ ಸಾವಿರ ಜನ ಬಿಕ್ಕುಗಳಾದರು. ಅಲ್ಲದೇ ರಕ್ಷಿತನು ಕರ್ನಾಟಕವೊಂದರಲ್ಲೇ ೫೦೦ ಬೌದ್ಧ ವಿಹಾರಗಳನ್ನು ಕಟ್ಟಿಸಿದ್ದನು. ೭ನೇ ಶತಮಾನದಲ್ಲಿ ಭಾರತಕ್ಕೆ ಬಂದಿದ್ದ ಹ್ಯೂಯೆನ್‌ತ್ಸಾಂಗನು ಕರ್ನಾಟಕವೊಂದರಲ್ಲೇ ಏಳುಸಾವಿರ ಜನ ಬಿಕ್ಕುಗಳಿದ್ದರೆಂದು ಹೇಳಿದ್ದಾನೆ. (-ಕರ್ನಾಟಕ ಸರ್ಕಾರ, ಕನ್ನಡ ವಿಷಯ ವಿಶ್ವಕೋಶ ಪು.ಸಂ.೧೦೬೯).'

> **ದೇವರಿದ್ದಾನೆ ಎಂದರೆ ಅವನನ್ನು ಕಂಡುಕೊಳ್ಳುವ ಮಾರ್ಗವಾಗಿ ಧರ್ಮವನ್ನು ಅನುಸರಿಸಬೇಕು. ಧರ್ಮವನ್ನು ಅನುಸರಿಸುವುದಾದರೆ ಅಲ್ಲಿ ಕಟ್ಟುಪಾಡು ಸಂಪ್ರದಾಯಗಳಿವೆ. ಇವೆಲ್ಲವನ್ನೂ ಇಟ್ಟುಕೊಳ್ಳುವುದಾದರೆ ಬ್ರಾಹ್ಮಣರ ಅಸ್ತಿತ್ವವೂ ಇರಲೇಬೇಕು. ಹೀಗೆ.... ಬ್ರಾಹ್ಮಣರ ಜ್ಞಾನಕಾಂಡವು ದೇವರ ಅಸ್ತಿತ್ವವನ್ನು ಉಳಿಸಿಕೊಳ್ಳಲು ಪ್ರತಿಪಾದಿಸಿದ ಬುದ್ಧಿಪೂರ್ವಕ ತರ್ಕವಾಗಿತ್ತಲ್ಲದೇ ಅದ್ಯಾತ್ಮಿಕವಾಗಿ ಅದು ಮೇಲು ಮೇಲಿನದಾಗಿತ್ತಷ್ಟೆ.**

ಇಷ್ಟೊಂದು ಅನುಯಾಯಿಗಳು ಮತ್ತು ಪ್ರಭಾವವಿದ್ದಾಗ್ಯೂ ಬೌದ್ಧಧರ್ಮವು ೧೨ನೇ ಶತಮಾನದ ಹೊತ್ತಿಗೆ ಅಂದರೆ ಸುಮಾರು ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಕಾಲಕ್ಕೆ ಸಂಪೂರ್ಣವಾಗಿ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತ್ತೆಂಬ ಚರಿತ್ರೆಯ ಸತ್ಯವನ್ನು ಹೇಳುವಾಗ, ವಿಜಯನಗರವನ್ನು ಸ್ಥಾಪಿಸಿದ ವಿದ್ಯಾರಣ್ಯ ಗುರುಗಳು ಶೃಂಗೇರಿ ಪೀಠದ ಅದ್ವೈತ ಪರಂಪರೆಯವರೆಂಬುದನ್ನು ಹೇಳಲು ಮರೆಯಲಿಕ್ಕಾಗುವುದಿಲ್ಲ. ಇವರ ಸಾಲಿನಲ್ಲೇ ಬರುವ ಶಂಕರಾಚಾರ್ಯರು ಹಾಗೂ ಇವರ ಗುರುಗಳಾದ ಗೌಡಪಾದರು: ಇವರ ಗುರುಗಳಾದ ಗೋವಿಂದ ಪಾದರು ಮತ್ತು ಇವರ ಸಮಕಾಲೀನರಾದ ಪತಂಜಲಿ...ಸುರೇಶ್ವರ, ಅಷ್ಟಾಮಲಕ, ಪದ್ಮಪಾದಾಚಾರ್ಯ ನಂತರ ವಿಜಯನಗರದ ವಿದ್ಯಾರಣ್ಯರು ಹೀಗೆ ಅದ್ವೈತದ ಗುರುಪೀಠವು ಅವೈದಿಕ ಧರ್ಮಗಳ ಪ್ರಭಾವ ಹಾಗೂ ಹೊಸಹೊಸ ವಿಚಾರಗಳೊಂದಿಗೆ ಮುಂದುವರಿಯಲು ಜ್ಞಾನಕಾಂಡದ ಸಾಹಿತ್ಯವನ್ನು ವಿಸ್ತರಿಸಿಕೊಳ್ಳುವುದರ ಮೂಲಕ ಅದ್ವೈತವನ್ನು ಸಮನ್ವಯಗೊಳಿಸಿಕೊಳ್ಳಲೇಬೇಕಾದ ಒತ್ತಡಕ್ಕೆ ಸಿಕ್ಕಿದ್ದರು. ಹಿಂದೂಧರ್ಮದ ಆದ್ಯಾತ್ಮ ಹಿಂದೆ ಎಷ್ಟು ವಿಶಾಲವಾಗಿತ್ತೆಂಬುದನ್ನು ಇಲ್ಲಿ ಗಮನಿಸಬಹುದು. ಹಾಗಾದರೆ ಪ್ರಾಚೀನವಾದ ಉಪನಿಷತ್ತಿನ ಸಾರವು ಇವರ ಹಿಂದೂಧರ್ಮವನ್ನು ರಕ್ಷಿಸಲಿಲ್ಲವೇಕೆ ? ಇದು ಅತ್ಯಂತ ಮಹತ್ವದ ಪ್ರಶ್ನೆ. ಹಿಂದೂಧರ್ಮದ ಸರ್ವಶ್ರೇಷ್ಠವಾದ ವೇದೋಪನಿಷತ್‌ಗಳ ಸಾರವನ್ನು ಬೌದ್ಧ ಸಮಾಜವು ನಿರಾಕರಿಸಿತ್ತು.

ಈ ಸನ್ನಿವೇಶಕ್ಕೆ ಪೂರಕವಾಗಿ 'ಆತ್ಮದ ಅಸ್ತಿತ್ವವನ್ನು ಅಲ್ಲಗಳೆಯುವ ಬಗ್ಗೆ ಅವನ ಚರ್ಚೆಯು ದೇವರ ಅಸ್ತಿತ್ವವನ್ನೂ ಅಲ್ಲಗಳೆಯುವಷ್ಟೇ ಉಪಯೋಗವಿಲ್ಲದ್ದಾಗಿತ್ತು (ಬುದ್ಧ ಮತ್ತು ಅವನ ಧಮ್ಮ -೨೬೦-ಅಂಬೇಡ್ಕರ್).' ಮುಂದುವರಿದು... 'ಬುದ್ಧ ಮತ್ತು ಪೊಟ್ಟ ಪಾದನಿಗೆ ನಡೆದ ಸಂಭಾಷಣೆ ಒಂದರಲ್ಲಿ ಚೆನ್ನಾಗಿ ವಿವರಿಸಲಾಗಿದೆ. ಪೊಟ್ಟ ಪಾದನು ಬುದ್ಧನನ್ನು ಕುರಿತು ಈ ಪ್ರಶ್ನೆಗಳನ್ನು ಕೇಳುತ್ತಾನೆ. ೧. ಈ ಪ್ರಪಂಚವು ಶಾಶ್ವತವೇ? ೨. ಆತ್ಮ ದೇಹದ ಹಾಗೆಯೇ ಇದೆಯೇ ? ೩. ಆತ್ಮ ಬೇರೆಯದರ ಹಾಗೆ ಇದೆಯೇ ? ೪. ಆತ್ಮ ಸಾಕ್ಷಾತ್ಕಾರ ಮಾಡಿಕೊಂಡ ವ್ಯಕ್ತಿ ಸಾವಿನ ನಂತರ ಏನಾಗುತ್ತಾನೆ?

ಪೊಟ್ಟ ಪಾದನೇ... ದುಃಖಕ್ಕೆ ಕಾರಣವಾದ ಆಸೆಗಳನ್ನು ಕಳೆದುಕೊಳ್ಳುವುದಕ್ಕಾಗಲಿ... ಅಸೂಯೆ ಮತ್ತು ದ್ವೇಷಗಳ ನಾಶಕ್ಕಾಗಲಿ... ಹೃದಯ ಶ್ರೀಮಂತಿಕೆಗಾಗಲಿ... ಸತ್ಪಥದ ಉನ್ನತಿಗಾಗಲಿ ಮತ್ತು ಮೋಕ್ಷಕ್ಕಾಗಲಿ... ಈ ಪ್ರಶ್ನೆಗಳು ಉಪಯೋಗಕಾರಿಯಾಗಿಲ್ಲ. ಆದ್ದರಿಂದ ಈ ಪ್ರಶ್ನೆಗಳನ್ನು ನಾನು ಉಪಯೋಗಕಾರಿಯೆಂದು ತೆಗೆದುಕೊಂಡಿಲ್ಲ (ಡಾ॥ ಅಂಬೇಡ್ಕರ್ ಸಂ.೩, ಪು.ಸಂ.೩೧೬).'

ಬುದ್ಧನ 'ಅನಾನಾತ್ಮ' ಸಿದ್ಧಾಂತವು ಇಡೀ ಆತ್ಮ ಸಿದ್ಧಾಂತವನ್ನು ಸುಳ್ಳು ಎಂದು ಹೇಳಲು ಪ್ರತಿಪಾದಿಸಿದ ಸಿದ್ಧಾಂತ. 'ಅನಾನಾತ್ಮ' ಎಂದರೆ ಆತ್ಮರಹಿತ ಎಂದರ್ಥ. ಇಂತಹ ಸಂದರ್ಭಗಳಲ್ಲಿ ಬುದ್ಧನು ಬ್ರಾಹ್ಮಣ ಧರ್ಮವನ್ನೇ ಹುರುಳಿಲ್ಲದ್ದೆಂದು ತಿರಸ್ಕರಿಸಿದ್ದ. ಏಕೆಂದರೆ ಬುದ್ಧನ ಅದ್ಯಾತ್ಮವು ಅನುಭವಾತ್ಮಕ ವಿಚಾರಗಳನ್ನು ಅವಲಂಬಿಸಿತ್ತು. ಮೇಲ್ನೋ

ಟಕ್ಕೆ ಬುದ್ಧನ ತತ್ವಗಳು ನೈತಿಕ ಕಟ್ಟು ಪಾಡುಗಳಂತೆಯೋ ಅಥವಾ ನೈತಿಕ ಪಾಠಗಳಂತೆಯೋ ಕಾಣಬಹುದು. ನೈತಿಕವಾಗಿ ಮನುಷ್ಯ ಏಕೆ ಬಾಳಬೇಕು? ಏಕೆಂದರೆ ನೈತಿಕ ಜೀವನವು ತನ್ನ ಪರಿಣಾಮದಲ್ಲಿ ಪಾರಮಾರ್ಥಿಕ ಶಕ್ತಿಯನ್ನೀಡಿ ಸತ್ವಪಥ ಉನ್ನತಿಯ ಕಡೆಗೆ ಸಾಗುವಂತೆ ಮಾಡುತ್ತಿತ್ತು. ಈ ತೆರನಾದ ಪರಿಣಾಮಕಾರಿಯಾದ ಜ್ಞಾನ ಪ್ರಸರಣದ ಮೂಲಕ ಬುದ್ಧಧರ್ಮವು ಪ್ರತಿ ವ್ಯಕ್ತಿಯ ಜೀವನದಲ್ಲಿ ಬೇರುಬಿಟ್ಟಿದ್ದ ಬುದ್ಧನ ಪ್ರಭಾವವನ್ನು ನೈತಿಕತೆಯನ್ನು ದಿಕ್ಕು ತಪ್ಪಿಸಿ ಗೊಂದಲಕ್ಕೊಳಪಡಿಸಿದ ಸಾಹಿತ್ಯವೇ ಅದ್ವೈತದ ಸಮನ್ವಯ.

ಇದು ಕನ್ನಡಿಯ ಬಿಂಬದಷ್ಟೇ ಸ್ಪಷ್ಟ. ಬುದ್ಧನ ಅಧ್ಯಾತ್ಮಿಕವನ್ನೇ, ತಮ್ಮ ದೃಷ್ಟಿಯಲ್ಲಿಟ್ಟುಕೊಂಡು ಅಕ್ಷರಶಃ ಶಂಕರಾಚಾರ್ಯರು ಮತ್ತು ಗೌಡ ಪಾದಾಚಾರ್ಯರು ಬರೆದ 'ಮಂಡೂಕ್ಯೋಪನಿಷತ್‌ಕಾರಿಕಾಭಾಷ್ಯ' ದಲ್ಲಿ 'ಅನಾನತ್ಮ' (ಅ.ಪ್ರ.ಸಂ. ೪-೧೦) ಎಂಬ ಪದಕ್ಕೆ ನಾನಾತ್ವವಿಲ್ಲದೇ ಅದ್ವಿತೀಯವಾದ ಬ್ರಹ್ಮ ಎಂಬ ವಿಪರೀತಾರ್ಥವನ್ನು ಹಚ್ಚಿರುವುದನ್ನು ಕಾಣಬಹುದು. ಅದಕ್ಕೆ ಅಕ್ಷರಶಃ ಬುದ್ಧನ ಪದಗಳನ್ನೇ ತೆಗೆದುಕೊಂಡು ಅವನ ಅರ್ಥಗಳನ್ನು ವಿರುದ್ಧವಾಗಿ ತಿರುಚಿ ಬರೆದರು? ಲೋಕ ಸಮ್ಮತವಾದವುಗಳನ್ನು ಕುಲಗೆಡಿಸುವ ವಿಧಾನವಷ್ಟೇ! ಈ ರೀತಿಯ ಸಿದ್ಧಾಂತಗಳನ್ನು ಕುಲಗೆಡಿಸುವ ಸಮನ್ವಯವನ್ನು ಅದ್ವೈತ ಸಂಪ್ರದಾಯಸ್ಥರಾದ ಪರಂಪರಾನುಗತ ಆಚಾರ್ಯರು ೧.ಭಾಷ್ಯಗಳು ೨. ಭಾಷ್ಯ ಭಾಷ್ಯ ೩. ಸೂತ್ರ ಭಾಷ್ಯ ೪. ಕಾರಿಕಾ (ಇದೊಂದು ರೀತಿಯ ಸೂತ್ರ) ೫. ಯೋಗ ಶಾಸ್ತ್ರಗಳ ಸಾಹಿತ್ಯವಾಗಿ ತಮ್ಮ ಸಾಹಿತ್ಯವನ್ನು ವಿಫುಲವಾಗಿ ಬೆಳೆಸಿದರು.

ಈ ಸಾಹಿತ್ಯ ಪ್ರಕಾರಗಳ ಪೈಕಿ 'ಭಾಷ್ಯ' ಸಾಹಿತ್ಯವನ್ನು ತೆಗೆದುಕೊಂಡರೆ, ಭಾಷ್ಯ ಎಂದರೆ ಮೂಲ ಆವೃತ್ತಿಯಲ್ಲ; ಮೂಲಗ್ರಂಥಗಳ ಅರ್ಥವನ್ನು ವಿಸ್ತರಿಸಿ ಬರೆಯುವುದು ಎಂದರ್ಥ. ಅದ್ವೈತಿಗಳು ಉಪನಿಷತ್ತುಗಳನ್ನು ಕುರಿತು ಬರೆಯುವಾಗ ಇವುಗಳನ್ನು ವಿಸ್ತಾರ ಮಾಡಿ ಬರೆದರು. ಈ ಅರ್ಥ ವಿಸ್ತರಣೆಯಲ್ಲಿ ಬೌದ್ಧಧರ್ಮದ 'ಪರಮಾರ್ಥಿಕ ಸತ್ಯಗಳು' ಪರಮಾತ್ಮ ಸತ್ಯಗಳಾಗಿ ಅದ್ವೈತದ ಮಡಿಲನ್ನು ಸೇರಿದವು. ಇದೂ ಸಹ ಬೌದ್ಧ ವಿಹಾರಗಳನ್ನು ಕುರೂಪಗೊಳಿಸಿ ಹಿಂದೂ ದೇವಾಲಯಗಳನ್ನಾಗಿ ಮಾರ್ಪಡಿಸುವಂತೆಯೇ ಬೌದ್ಧ ಸಿದ್ಧಾಂತಗಳನ್ನು ಗುರ್ತು ಸಿಗಲಾರದಷ್ಟು ಕುರೂಪಗೊಳಿಸಿದ ತಂತ್ರವೂ ಹೌದು ಎನ್ನಬಹುದು.

ಈ ಸಂದರ್ಭಕ್ಕೆ 'ಅಸ್ಥಿರವಾದ'ವನ್ನು ತೆಗೆದುಕೊಂಡು ಹೇಳುವುದಾದರೆ ಈ ವಾದವು ಬುದ್ಧನ ಪರಮಾರ್ಥಿಕ ಸತ್ಯಗಳಲ್ಲೊಂದಾಗಿತ್ತು. ಅಸ್ಥಿರವೆಂದರೆ ಈ ಜಗತ್ತಿನ ಯಾವುದೇ ವಸ್ತುವಾಗಲಿ, ಕಾಲವಾಗಲಿ, ಜೀವಿಗಳಾಗಲಿ, ವ್ಯಕ್ತಿಯಾಗಲಿ ವ್ಯಕ್ತಿಯ ಭಾವನೆಗಳಾಗಲಿ, ಅಭಿಪ್ರಾಯಗಳಾಗಲಿ ಸ್ಥಿರವಾಗಿರಲಾರವು ಬದಲಾಗುತ್ತಾ ಹೋಗುತ್ತಿರುತ್ತವೆ. ಈ ಸತ್ಯದ ಗ್ರಹಿಕೆಯಲ್ಲಿ ಅಭಿಪ್ರಾಯಗಳಿಗೆ ಭಾವನೆಗಳಿಗೆ ಬಲಿಯಾಗದೆ ಸುಖ ದುಃಖಗಳಲ್ಲಿ ಸಮಚಿತ್ತದ ಧೋರಣೆಯನ್ನು ಹೊಂದಿ ಜಾಗ್ರತವಾಗಿ ವರ್ತಿಸಿದಾಗ ಸ್ವಾಸ್ಥ್ಯ ಚಿಂತನೆಯನ್ನು ಪಡೆಯಬಹುದೆಂಬುದಾಗಿದ್ದ ಈ ತತ್ವವನ್ನು ಅದ್ವೈತಿಗಳೂ ಪದಶಃ ತೆಗೆದುಕೊಂಡು 'ಅಸ್ಥಿರ' ಎಂಬುದನ್ನು ಅಶಾಶ್ವಿತ - ಅರ್ಥಾತ್ ಮಾಯೆ ಎಂಬಂತೆ ಅರ್ಥೈಸಿ 'ಜಗನ್ಮಿಥ್ಯಾ ಬ್ರಹ್ಮಂ ಸತ್ಯಂ' ಈ ವಾಕ್ಯಕ್ಕೆ ಬದ್ಧವಾಗುವಂತೆ, ತೋರ್ಪಡುತ್ತಿರುವ ಈ ಜಗತ್ತು ಮಾಯೆ ಆತ್ಮನೊಬ್ಬನೇ ಅಜ ಅಥವಾ ಸ್ಥಿರ, ಶಾಶ್ವತ ಎಂಬುದಾಗಿ ವ್ಯಕ್ತಪಡಿಸಿ ಪರಮಾರ್ಥ ಸತ್ಯವೇ ಪರಮಾತ್ಮ ಸತ್ಯವೆಂಬಂತೆ ಸಮರ್ಥಿಸಿದರು. ಈಗಲೂ ಅಧ್ಯಾತ್ಮಿಕ ವಲಯಗಳಲ್ಲಿ ಬಹುಶಃ ಈ ಎರಡೂ ಪದಗಳನ್ನು ಸರಿಯಾಗಿ ಅವುಗಳಂತೆ ಗ್ರಹಿಸಿಕೊಂಡರೆ ಸಂಬಂಧವೇ ಇಲ್ಲದಷ್ಟು ವ್ಯತ್ಯಾಸವಿದೆ. ಬುದ್ಧನ ಪರಮಾರ್ಥ ಸತ್ಯಗಳಿಗೆ ವೈಜ್ಞಾನಿಕ ಆಧಾರವಿದೆ ಏಕೆಂದರೆ ಇವು ಪರಿಣಾಮಗಳಲ್ಲಿ ಫಲವನ್ನೀಡುತ್ತವೆ. ಪರಮಾತ್ಮ ತತ್ವಕ್ಕೆ ಯಾವ ಆಧಾರವೂ ಇಲ್ಲ! ಇದು ಪರಿಣಾಮದಲ್ಲಿ ಅನಿಶ್ಚಿತ ಫಲವನ್ನು ಮಾತ್ರ ನೀಡಬಲ್ಲವು ಇದಕ್ಕೆ ಆಧಾರ ಅನುಭವ ಮಾತ್ರ !!!

ನಂತರ ಬುದ್ಧನ ಅಷ್ಟಾಂಗ ಮಾರ್ಗವನ್ನು ತೆಗೆದುಕೊಂಡು ಹೇಳುವುದಾದರೆ, ಈ ಜಗತ್ತಿನ ದುಃಖವನ್ನು ಹೋಗಲಾಡಿಸಲು ಇರುವ ಏಕೈಕ ಮಾರ್ಗವಾಗಿ ಬುದ್ಧನು ರೂಪಿಸಿದ್ದು ಅಷ್ಟಾಂಗ ಮಾರ್ಗ. ಪತಂಜಲಿಯು ಮೋಕ್ಷಕ್ಕಾಗಿ ಹೇಳಿದ್ದು ಅಷ್ಟಾಂಗ ಯೋಗ.

ಈ ಎರಡೂ ಪದಗಳಿಗಿರುವ ಸಾಮೀಪ್ಯತೆಯನ್ನು ಗಮನಿಸಿದಾಗ ಇವೆರಡೂ ತಮ್ಮ ಅಂತರದಲ್ಲಿ ಒಂದೇ ವಿಚಾರಕ್ಕೆ ಸಂಬಂಧಪಟ್ಟ ಪದಗಳೆಂಬಂತೆ ತೋರುತ್ತವೆ. ಅತ್ಯಂತ ಪ್ರಾಚೀನವಾದಂತಹ ಬುದ್ಧನ ತತ್ವವನ್ನೇ ಅನುಕರಿಸುವಂತೆ ಕಾಣುವ ಅಷ್ಟಾಂಗಯೋಗ ಎಂಬ ಪದವನ್ನು ಪತಂಜಲಿ ಏಕೆ ತೆಗೆದುಕೊಂಡ? ಬುದ್ಧನ ತತ್ವದಷ್ಟೆ ಪವಿತ್ರವಾದುದೆಂದು ಅಷ್ಟಾಂಗ ಯೋಗವನ್ನು ತೋರಿಸಲೋ? ಅಥವಾ ಮೋಕ್ಷಕ್ಕಾಗಿ ಅಥವಾ ಜೀವನ್ಮುಕ್ತಿಗಾಗಿ ಅಷ್ಟಾಂಗ ಮಾರ್ಗ ಎಂಬ ಅಂದಿನ ಸಾಮಾಜಿಕ ಅಭಿಪ್ರಾಯವನ್ನು ಮುಂದೆ ವರ್ತಮಾನದಲ್ಲಿ ಅಷ್ಟಾಂಗಯೋಗವೆಂಬಂತೆ ಮಾಡಿ ಹಿಂದೂ ಮೂಲಭೂತ ಸಿದ್ಧಾಂತಗಳನ್ನು ಪುನರುತ್ಥಾನ ಮಾಡಿಕೊಳ್ಳುವುದಕ್ಕೋ?

ಇವೆರಡರಲ್ಲಿ (ಕೆಳಗಿನ ಪಟ್ಟಿಯನ್ನು ನೋಡಿ) ನಾವು ಸ್ಪಷ್ಟವಾಗಿ ಗಮನಿಸಬಹುದಾಗಿರುವುದು ಪತಂಜಲಿಯ

ಬುದ್ಧನ ಅಷ್ಟಾಂಗ ಮಾರ್ಗ	ಪತಂಜಲಿ ಅಷ್ಟಾಂಗ ಯೋಗ
೧. ಸಮ್ಯಕಾದೃಷ್ಠಿ : ಕಲ್ಪನಾತ್ಮಕ ವಿಷಯಗಳನ್ನು ವಾಸ್ತವಗಳೆಂದು ಭ್ರಮಿಸುವುದನ್ನಾಗಲಿ, ಮೌಢ್ಯತೆ ಮತ್ತು ಧಾರ್ಮಿಕ ಆಚರಣೆಗಳಿಂದ ಉಪಯೋಗವಾಗುವುದೆಂಬುದನ್ನು ಬಿಟ್ಟು ಜೀವನದೃಷ್ಟಿಯೇ ಅಧ್ಯಾತ್ಮಿಕವೆಂದು ತಿಳಿಯುವುದು.	**೧. ಯಮ** : ಅಹಿಂಸೆ, ಸುಳ್ಳು ಹೇಳದಿರುವುದು, ಕದಿಯದಿರುವುದು, ಇತ್ಯಾದಿ ಆಸ್ತೇಯ ನೈತಿಕ ಜೀವನ.
೨. ಸಮ್ಯಕ್ ಗುರಿ : ಸತ್ಯವನ್ನು ಅದು ಇರುವಂತೆ ಗ್ರಹಿಸಿ ಇದನ್ನು ಪ್ರೀತಿಸಲು ಪುರುಷತ್ವವಿರಬೇಕು. ಈ ವಿಧಾನದಿಂದ ಪ್ರಾಪಂಚಿಕ ವಾಸ್ತವಗಳನ್ನು ವಿವೇಕದಿಂದ ಅರಿತು ಸತ್ಯರ್ಥವನ್ನು ಆರಿಸಿಕೊಂಡು ಈ ಹಾದಿಯಲ್ಲೇ ನಡೆಯುವುದು.	**೨. ನಿಯಮ** : ಈಶ್ವರನೇ ಶ್ರೇಷ್ಠವಾದ ವ್ಯಕ್ತಿ ಅವನು ಕರುಣಾಳು ಜಗದ್ರಕ್ಷಕ. ಹೀಗಾಗಿ ಇವನನ್ನು ಶರಣು ಹೋಗುವುದಲ್ಲದೆ ಪುಣ್ಯಕ್ಷೇತ್ರ ಪುಣ್ಯ ಸ್ನಾನಾದಿಗಳಿಂದ ಪಾಪವನ್ನು ಕಳೆದುಕೊಂಡು ಪರಿಶುದ್ಧನಾಗುವುದು. ಧಾರ್ಮಿಕ ಆಚರಣೆಗಳನ್ನು ಉಲ್ಲಂಘಿಸುವುದು ಅಧರ್ಮ.
೩. ಸಮ್ಯಕ್ ವಚನ : ವೈರಿಯನ್ನಾಗಲಿ ಸ್ನೇಹಿತನನ್ನಾಗಲಿ ಭೇದವೆಣಿಸದೇ ಪ್ರೀತಿಯುತವಾದ ದಯಾಪರವಾದ ಬಿಚ್ಚು ಮಾತು.	**೩. ಆಸನ** : ದೇಹದಂಡನೆ (ಶಾರೀರಿಕ ಸಾಧನೆ) ಅಥವಾ ಇಂದಿನ ಕಾಲಕ್ಕನುಗುಣವಾಗಿ ಸ್ವಾಸ್ಥ್ಯ ಆರೋಗ್ಯವನ್ನು ಪಡೆಯುವುದಕ್ಕಾಗಿ.
೪. ಸಮ್ಯಕ್ ನಡೆ : ಪರಿಶುದ್ಧವಾದ ನಡತೆ ಪ್ರಾಮಾಣಿಕವಾದದ್ದು ಇದರ ಅವಶ್ಯಕತೆ ಏನೆಂದರೆ ಪ್ರಾಮಾಣಿಕವಾಗಿದ್ದಾಗ ಮಾತ್ರ ಲೋಕವನ್ನು ಸರಿಯಾಗಿ ಗ್ರಹಿಸಬಹುದು.	**೪. ಪ್ರಾಣಾಯಾಮ** : ಉಸಿರಾಟದ ನಿಯಂತ್ರಣ. ಶಾರೀರಿಕ ಶುದ್ಧಿ.
೫. ಸಮ್ಯಕ್ ಜೀವನ : ನಾನು ಈ ವಿಶ್ವದ ಭಾಗವಾಗಿರುವುದರಿಂದ ಈ ವಿಶ್ವದ ಇತರೆ ಎಲ್ಲಾ ಜೀವಿಗಳೂ ವಸ್ತುಗಳೂ ನಾವಾಗಿದ್ದೇವೆ. ಹಾಗಾಗಿ ಜೀವಿಗಳಿಗೆ ಹಿಂಸಿಸಿದರೆ ತನ್ನನ್ನೇ ಹಿಂಸಿಸಿಕೊಂಡ ಹಾಗೆ ಎಂಬ ಉನ್ನತ ಸ್ಥಿತಿಯಲ್ಲಿ ಜೀವಿಸುವುದು.	**೫. ಪ್ರತ್ಯಾಹಾರ** : ಇಂದ್ರಿಯಾದಿಗಳನ್ನು ವಿಷಯಾದಿಗಳ ಕಡೆ ಹೋಗಲಾಡಿಸದೇ ನಿರ್ಬಂಧಿಸುವುದು.
೬. ಸಮ್ಯಕ್ ಸಾಧನೆ : ಈ ಎಲ್ಲಾ ಅಂಶಗಳಲ್ಲಿ ಬದುಕನ್ನು ರೂಪಿಸಿಕೊಂಡು ಅದರಂತೆಯೇ ಕೊನೆವರೆಗೂ ಜೀವಿಸಲು ನಿರಂತರ ಪ್ರಯತ್ನ ಮಾಡುವುದು.	**೬. ಧ್ಯಾನ** : ಭಗವಂತನ ವಾಚಕ ವಾದ 'ಓಂ' ಕಾರದ ಸಂಧಾನ (ಓಂ ಎಂಬುದು ಬ್ರಹ್ಮ, ವಿಷ್ಣು, ಈಶ್ವರ, ವಿಷ್ಣುಗಳ ಸೃಷ್ಟಿ ಸ್ಥಿತಿ ಲಯಾದಿಗಳ ಸಂಗಮದಿಂದಾಗಿ ಅ,ಉ,ಮ ಎಂಬ ಬೀಜಾಕ್ಷರಗಳಿಂದ ಉಗಮವಾಗಿದೆ.)
೭. ಸಮ್ಯಕ್ ಮನಸ್ಸು : ಸದಾ ಕ್ರಿಯಾಶೀಲವಾದ ಮನಸ್ಸು, ಆಲೋಚನೆ (ಜಾಗೃತ ಮನಸ್ಸು)	**೭. ಧಾರಣ** : ಪರಬ್ರಹ್ಮವನ್ನು ತನ್ನೊಳಗೆ ತಾನೆಂದು ಧಾರಣ ಮಾಡುವುದು.
೮. ಸಮ್ಯಕ್ ಧ್ಯಾನ : (ಸಮಾಧಿ) ಗಂಭೀರವಾದ ವಿಚಾರಗಳನ್ನು ಅಥವಾ ಸೂಕ್ಷ್ಮಾತಿ ಸೂಕ್ಷ್ಮಗಳಾದ ಮನಸ್ಸು, ಪ್ರೇಮ, ವಿವೇಕ ಇತ್ಯಾದಿಗಳ ಮೂಲವನ್ನು ಗ್ರಹಿಸಿ ಅವುಗಳಲ್ಲಿ ತನ್ಮಯತೆಯನ್ನು ಹೊಂದುವುದು.	**೮. ಸಮಾಧಿ** : ವಿಕಲ್ಪಾದಿಗಳಿಂದ ಹೊರತಾದ ಅತೀಂದ್ರಿಯತ್ವವನ್ನು ಹೊಂದಿ ಸ್ಥಿರವಾಗಿರುವುದು.

ಬುದ್ಧನನ್ನೇ ಅನುಕರಿಸಿ ಅವನ ಅಹಿಂಸಾ ತತ್ವವನ್ನು ಪಂಚಶೀಲಗಳನ್ನು ಯಮ ಹಂತದಲ್ಲಿ ಅಳವಡಿಸಿ ಕ್ರಿಯಾಶೀಲವಾದ, ಜಾಗೃತವಾದ ಮನಸ್ಸು ಎಂಬ ಏಳನೇ ಹಂತವನ್ನು ನಿಷ್ಕ್ರಿಯಗೊಳಿಸುವಂತೆ ಧಾರಣವನ್ನು ರೂಪಿಸಿರುವುದು. ಜಾಗೃತ ಎಂದರೆ ನೈತಿಕವಾಗಿ ಹಾದಿ ತಪ್ಪುವ ಜಾಗೃತವನ್ನು ಭಗವಂತನನ್ನು ಮರೆಯದಂತೆ ಜಾಗೃತ ಎಂಬಂತೆ ಹೇಳುತ್ತಾನೆ ಏಕೆ? ಶಿವನು ತನಗಿಂತ ಬೇರೆ ಅಥವಾ ಶಿವನೇ ತಾನು ಎಂಬೆರಡೂ ಬ್ರಾಹ್ಮಣ ಕಲ್ಪಿತ ಸಿದ್ಧಾಂತಗಳಿಗೆ ಪತಂಜಲಿ ಯೋಗಶಾಸ್ತ್ರವು ಬೆಸೆಯುವ ಕೊಂಡಿಯಾಗಿ ಎರಡನ್ನೂ ಉಳಿಸಿಕೊಳ್ಳುತ್ತದೆ. ಇದು ಮನುಷ್ಯನೊಬ್ಬನು ಹಿಂದೂಧರ್ಮದಿಂದ ಹೊರಹೋಗದಂತೆ ದೇವರ ನೆಪದಿಂದ ನಿರ್ಬಂಧಿಸುವ ನಿಷೇಧಾತ್ಮಕ ತಂತ್ರವೂ ಆಗಿರಲು ಸಾಧ್ಯ. ಮನಸ್ಸಿನ ಆಲೋಚನೆಯನ್ನು ಯೋಗವು ನಿರ್ಬಂಧಿಸುವುದರಿಂದ, ಬುದ್ಧ ತತ್ವದಂತೆ ತನಗಾಗಿ ತನ್ನಲ್ಲಿ ತಾನು ಚಲಿಸಲಾರದು.

ಇಂತಹ ಯೋಗ ರೀತಿಯ ಮೋಕ್ಷದ ಬಗ್ಗೆಯೂ ಬುದ್ಧನು ಪ್ರತಿಕ್ರಿಯಿಸುತ್ತಾನೆ. 'ಯೋಗ ರೀತಿಯ ಮೋಕ್ಷದ ಕಲ್ಪನೆಯು ಪೂರ್ತಿಯಾಗಿ ಅದೊಂದು ಕಾಲ್ಪನಿಕ ಸ್ಥಿತಿ. ಅದು ತರುವ ಸಂತೋಷ ವಿರುದ್ಧ ರೀತಿಯದು. ಅದು ಈ ಜಗತ್ತಿನಿಂದ ಬೇರ್ಪಡುತ್ತದೆ. ಅದು ನೋವನ್ನು ನಿವಾರಿಸಿದರೂ ಸಂತೋಷವನ್ನು ತರಲಾರದು. ಅದು ತರುವಂಥ ಸಂತೋಷ ಯೋಗ ಸ್ಥಿತಿ ಇರುವ ತನಕ ಮಾತ್ರ ಇರುತ್ತದೆ. ಅದು ಶಾಶ್ವತವಲ್ಲ; ಅಶಾಶ್ವಿತ (-ಬುದ್ಧ ಮತ್ತು ಅವನ ಧಮ್ಮ - ಅಂಬೇಡ್ಕರ್-ಪು.ಸಂ. ೨೩೨).'

ಸಂತೋಷವೇ ಬೇರೆ, ಆನಂದವೇ ಬೇರೆ: ಬಯಕೆಯಿಂದ ತೃಪ್ತಿಗೊಳ್ಳುವುದೇ ಸಂತೋಷ. ಯೋಗವೂ ಕೂಡ ಬಯಕೆಯ ತೃಪ್ತಿಯಿಂದ ಹುಟ್ಟಿಕೊಂಡಿರುವಂತಾದ್ದು.

ಬುದ್ಧನ ಅಷ್ಟಾಂಗ ಮಾರ್ಗವು ಮನುಷ್ಯನ ಒಳಗಿನ ಹುಡುಕಾಟವನ್ನು ಅವನಲ್ಲಿಯೇ ಹುದುಗಿರುವ ಶಕ್ತಿಯ ಕಡೆ ನಿಲ್ಲಿಸುವಂತದ್ದು ಆದರೆ ಅದ್ವೈತವು ಹುಡುಕಾಟವನ್ನು ಹೊರಗೂ ಮತ್ತು ಒಳಗೂ ಹುದುಗಿದೆಯೆಂದು ಭಾವಿಸಲಾದ ಕಲ್ಪನಾತ್ಮಕ ಶಕ್ತಿಯ ಕಡೆಗೆ ತಿರುಗಿಸುವಂತಹದ್ದು. ಹೀಗಾಗಿ ಇದು ವ್ಯಕ್ತಿ ಶ್ರೇಷ್ಠತೆಯನ್ನು ತಿರಸ್ಕರಿಸಿ ದೈವ ಶ್ರೇಷ್ಠತೆಯಲ್ಲಿ ಮನುಷ್ಯನೊಬ್ಬನನ್ನು ತಾನು ಅಸಹಾಯಕನೆಂಬಂತೆ ಮಾಡುತ್ತದೆ. ಬುದ್ಧನ ತತ್ವವು ದೈವ ಶ್ರೇಷ್ಠತೆಯನ್ನು ತಿರಸ್ಕರಿಸಿ ಮನುಷ್ಯ ಶ್ರೇಷ್ಠತೆಯಲ್ಲಿ ತನ್ನನ್ನು ಬೆಳಗಿಸಿಕೊಳ್ಳುತ್ತದೆ.

ಈ ಮಹತ್ವ ವಿಷಯಗಳನ್ನು ಒಬ್ಬರಿಂದೊಬ್ಬರಿಗೆ ಪ್ರಚಾರ ಮಾಡಲು ಬುದ್ಧನು ದೀಕ್ಷಾ ಪದ್ಧತಿಯನ್ನು ಜಾರಿಗೊಳಿಸಿದನು. 'ಮಾರ್ಗದರ್ಶನಕ್ಕಾಗಿ ಅವನು ದೀಕ್ಷಾ ಪದ್ಧತಿಯನ್ನು ರೂಪಿಸಿದನು. ಇದು ಆರ್ಯ ಸಮಾಜಕ್ಕೆ ತಿಳಿದಿರಲಿಲ್ಲ (-ಅಂಬೇಡ್ಕರ್ ಸಂ.೩. ಪು.ಸಂ.೨೭೮).' ಇಂತಹ ಆರ್ಯರಿಗೆ ಗೊತ್ತಿಲ್ಲದಾ ದೀಕ್ಷಾ ಪದ್ಧತಿಯು ಕೂಡ ಅದ್ವೈತದಲ್ಲಿರುವುದು ವಿಶೇಷ. ಬುದ್ಧನು ದೀಕ್ಷೆಯಾಗಿ ೧.ಕೊಲ್ಲಬಾರದು ೨. ಕಳವು ಮಾಡಬಾರದು ೩. ಸುಳ್ಳು ಹೇಳಬಾರದು ೪. ವ್ಯಭಿಚಾರ ಮಾಡಬಾರದು ೫. ಮತ್ತು ಬರಿಸುವ ಪೇಯಗಳನ್ನು ಕುಡಿಯಬಾರದು ಎಂದು ಬೋಧಿಸುತ್ತಿದ್ದನು. ಏಕೆಂದರೆ ಇವುಗಳಿಂದ ಲೋಕದಲ್ಲಿ ದುಃಖವಿತ್ತು. ಈ ಪಂಚಶೀಲಗಳನ್ನೇ ಅದ್ವೈತಿಗಳು 'ಪಂಚಾಕ್ಷರಿ' ಮಂತ್ರವನ್ನು ಬೋಧಿಸುವುದರ ಮೂಲಕ ತಮ್ಮನ್ನು ಗಟ್ಟಿಗೊಳಿಸಿಕೊಂಡರು.

'ಮಂಡೂಕ್ಯೋಪನಿಷತ್ ಗೌಡಕಾರಿಕಾ ಭಾಷ್ಯ' ಎಂಬ ಪುಸ್ತಕದ 'ಅಲಾತಿ ಶಾಂತಿ ಪ್ರಕರಣ' ಎಂಬ ಒಂದೇ ಅಧ್ಯಾಯದಲ್ಲಿ ಸುಮಾರು ೩೮ ಬುದ್ಧನ ಸಿದ್ಧಾಂತಗಳನ್ನು ಅದ್ವೈತ ಸಿದ್ಧಾಂತಗಳನ್ನಾಗಿ ಮಾರ್ಪಡಿಸಿಕೊಂಡಿದೆ. ಇವುಗಳಲ್ಲಿ ಹಲವನ್ನು ಇಲ್ಲಿ ಪ್ರಸ್ತುತ ಪಡಿಸುವುದಾದರೆ,

೧. **ಅಲಾತ : (೪-೪೨) :** ಬೆಂಕಿಯ ಕೊಳ್ಳಿ, ಇದನ್ನು ಜೋರಾಗಿ ತಿರುಗಿಸಿದರೆ ಬೆಂಕಿಯ ವೃತ್ತ ಕಾಣಿಸುತ್ತದೆ. ವೃತ್ತಾಕಾರದ ಬೆಂಕಿ ಭ್ರಮೆ. ಇದಕ್ಕೆ ಕಾರಣವಾದ ಕೊಳ್ಳಿ ಮಾತ್ರ ಸತ್ಯ. ಹಾಗೆಯೇ ಪ್ರಾಪಂಚಿಕವಾದ ಬಯಕೆಗಳು ಭ್ರಮಾತ್ಮಕ ವಾದದ್ದನ್ನು ಸೃಷ್ಟಿಸುತ್ತವೆ. ಈ ಭ್ರಮೆಯಲ್ಲಿ ಸುಖ ಕೊಳ್ಳಿಯಷ್ಟು ಮಾತ್ರ ಎಂಬ ಪರಮಾರ್ಥಿಕ ಸತ್ಯವನ್ನು ಅದ್ವೈತಿಗಳು ಈ ಜಗತ್ತೇ ಬೆಂಕಿಯ ವೃತ್ತದಂತೆ ಭ್ರಮೆ ಕೊಳ್ಳಿಯಂತೆ ಆತ್ಮ ಮಾತ್ರ ಸತ್ಯ ಎಂದು ರೂಪಾಂತರಿಸುವುದರ ಮೂಲಕ ಸಿದ್ಧಾಂತವನ್ನೇ ಹಾಳುಗೆಡವಿದರೆನ್ನಬಹುದು.

೨. **ಬುದ್ಧ :** (೪-೯೮) ಜ್ಞಾನಿ, ಗೌತಮ ಬುದ್ಧನನ್ನು ಕರೆಯುವ ನಾಮ ವಿಶೇಷಕ. ಅದೇ ಅದ್ವೈತಿಗಳು ಅದ್ವೈತಾತ್ಮನನ್ನು ಬಲ್ಲವನೆಂಬರ್ಥದಲ್ಲಿ ನೂರಾರು ಸಲ ಉಪಯೋಗಿಸಲಾಗಿದೆ.

೩. **ಪರತಂತ್ರ :** (೪-೭೪) ವಿಜ್ಞಾನಕ್ಕೆ ಅಧೀನವಾಗಿರುವ ಬಾಹ್ಯವಸ್ತುಗಳ ವಸ್ತು ಜ್ಞಾನ ಎಂಬರ್ಥದಲ್ಲಿ ಬೌದ್ಧರ ಬಳಕೆ ಪರಬ್ರಹ್ಮವನ್ನು ಯುಕ್ತಿಯಿಂದ ತಾಂತ್ರಿಕವಾಗಿ ಕಂಡುಕೊಳ್ಳುವುದೆಂದು ಅದ್ವೈತಿಗಳು ಬಳಸಿಕೊಂಡಿದ್ದಾರೆ.

೪. **ಉಚ್ಛೇದ :** (೪-೫೨) ಆತ್ಮನು ಮರಣವಾದ ಮೇಲೆ ನಾಶವಾಗಿ ಬಿಡುತ್ತಾನೆ. ಅಥವಾ ಮೂಲ ವಸ್ತುಗಳಲ್ಲಿ ಲಯವಾಗುತ್ತಾನೆಂದು ಬೌದ್ಧರಲ್ಲಿ ಬಳಕೆ. ಎಲ್ಲವೂ ಜನ್ಮರಹಿತವಾದ ಆತ್ಮನೇ ಆಗಿರುವುದರಿಂದ ನಾಶವೆಂಬುದೇ ಇಲ್ಲ ಎಂದು ಅದ್ವೈತಿಗಳ ಬಳಕೆ.

ಬರೀ ಗ್ರಂಥಗಳಲ್ಲಿ ಬೇರೆಯವರ ಸಿದ್ಧಾಂತಗಳನ್ನು ತಿರುಚಿ ಬರೆದು ತಮ್ಮ ಆಧ್ಯಾತ್ಮವನ್ನು ವಿಸ್ತಾರ ಮಾಡಿಕೊಳ್ಳುವುದರಲ್ಲೇ ಅದ್ವೈತಿಗಳು ನಿರತರಾಗಿಲ್ಲ, ರಾಜಾಶ್ರಯಗಳಿಂದ ಕೂಡ ಸಮಾಜದ ಮೇಲೆ ಒತ್ತಡದ ಪ್ರಚಾರವನ್ನೂ ಕೈಗೊಂಡರು. ಪ್ರತಿಯೊಬ್ಬನೂ ಅದ್ವೈತವನ್ನು ತಿಳಿದುಕೊಳ್ಳುವಂತೆ ಕೂಡ ಮಾಡಿತು. 'ಚತುಷ್ಪಾತ್ ಕಾರ್ಷಾಪಣಮ್ ನ ಗೌರವ॥' (- ಮಂಡೂಕ್ಯೋಪನಿಷತ್ - ೬-೧೧) ಇಲ್ಲಿ ಬಂದಿರುವ 'ಕರ್ಷಾಪಣಮ್' ಎಂಬ ಸಂಸ್ಕೃತ ಪದದ ಅಪಭ್ರಂಶವೆಂಬಂತೆ ಕನ್ನಡದ "ಕಾಂಚಾಣ' ಗೋಚರಿಸುತ್ತದೆ. 'ರೂಪಾಯಿ' ಎಂಬ ಪದ ಅದ್ವೈತದ ರೂಪಾದಿಗಳ ವಿಸ್ತಾರವನ್ನು ದಾಟಿದ ಎಂಬ ಅರ್ಥಕ್ಕೆ ಸನಿಹವಾದದ್ದು. ರೂಪಾಯಿಯಲ್ಲಿರುವ ಹದಿನಾರು ಆಣೆ ಕೂಡ ಅದ್ವೈತಿಗಳ ಕಲ್ಪನೆ. ಹೇಗೆಂದರೆ ಹದಿನಾರು ಆಣೆಗಳನ್ನು ೪ ಗುಂಪು ಮಾಡಿದರೆ ಪ್ರತಿಗುಂಪಿಗೂ ನಾಲ್ಕನೇ ಒಂದು ಭಾಗದ ನಾಲ್ಕು ಆಣೆಗಳು ಬರುತ್ತದೆ. ಈ ನಾಲ್ಕನೇ ಒಂದು ಎಂಬುದು ಆತ್ಮನಿಗೆ ನಾಲ್ಕು ಪಾದಗಳಿವೆ. ಅಥವಾ ಆತ್ಮನು ನಾಲ್ಕನೇ ಒಂದು ಪಾದವಾಗಿದ್ದಾನೆ ಎಂಬರ್ಥವನ್ನು ಪಡೆದುಕೊಳ್ಳುತ್ತದೆ. (ವೈಶ್ವಾನರ, ತೃಜಸ, ಪ್ರಾಜ್ಞ, ತುರೀಯ, ಚತುರ್ಥಃ ಪಾದಃ ಕ್ರಮ ಪ್ರಾಪ್ತೋ ವಕ್ತವ್ಯಃ ಇತ್ಯಾಹ) ಇದು ಸ್ಪಷ್ಟವಾಗಿ ಸುಧಾರಕರ ಕೈವಾಡ. ಇದೇ ಅರ್ಥದಲ್ಲಿಯೇ ಶಂಕರಾಚಾರ್ಯರು ಭಾರತದ ನಾಲ್ಕು ಮೂಲೆಗಳಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿದರು.

ಹೀಗೆ.... ಹೇಳುತ್ತಾ ಹೋಗಬಹುದು. ಈ ತೆರನಾದ ಸಮನ್ವಯದಿಂದಾಗಿ ಬಹುಶಃ ಬುದ್ಧನು ತನ್ನ ತವರಿನಲ್ಲೇ ಹೇಳ ಹೆಸರಿಲ್ಲದಂತೆ ಮಾಯವಾಗಲು ಕಾರಣವಾಯಿತು. ಆದಾಗ್ಯೂ ಭಾರತೀಯರಲ್ಲಿ ಯಾವ ಧರ್ಮದವನಾಗಿರಲಿ 'ಒಂದು ಜೀವಿಯ ಕತ್ತನ್ನು ಕುಯ್ಯುವ ಸನ್ನಿವೇಶ ಬಂದಾಗ ಬಹುಶಃ ನಮ್ಮ ಜನರು ಈ ಕೆಲಸ ಮಾಡಲು ಹಿಂಜರೆಯುತ್ತಾರೆ' ನಮ್ಮ ಜನ ಎಂತಹ ಸಂದರ್ಭದಲ್ಲಿಯಾದರೂ ನೀತಿಗೆಟ್ಟ ಲೈಂಗಿಕತೆಯನ್ನು ಪುರಸ್ಕರಿಸಲಾರರು. ಲೈಂಗಿಕತೆ ನಮ್ಮ ಭಾರತೀಯರಲ್ಲಿ ಹದ್ದು ಬಸ್ತಿನಲ್ಲಿರುತ್ತದೆ. ಕಳ್ಳತನ ಮಾಡುವವರನ್ನು ನಮ್ಮ ಸಮಾಜವು ಗೌರವಾನ್ವಿತ ವ್ಯಕ್ತಿಯೆಂದು ಪರಿಗಣಿಸುವುದಿಲ್ಲ. ಮದ್ಯಪಾನವು ಸಹಜವೆಂಬಂತೆ ನಮ್ಮಲ್ಲಿ ಕಂಡರೂ ಅದು ದೊಡ್ಡ ದುಶ್ಚಟವೆಂಬ ಅಭಿಪ್ರಾಯವನ್ನು ಪಡೆಯುತ್ತದೆ. ಇದು ಈ ನೆಲದಲ್ಲಿನ ಅತ್ಯಂತ ಪ್ರಾಚೀನ ಗೌತಮನ ಶಕ್ತಿ ಮತ್ತು ಪ್ರಭಾವವಾಗಿದ್ದರೂ ಸಹ ಇವು ಸಂಬುದ್ಧನ ಸಿದ್ಧಾಂತಗಳೆಂಬ ತನ್ನ ಮೂಲವನ್ನು ಗುರ್ತಿಸಿಕೊಳ್ಳಲಾರದಷ್ಟು ಅಸಂಗತವಾದ ರೂಪಕ್ಕಿಳಿಸಿದ್ದಕ್ಕೆ ಹಿಂದೂಧರ್ಮದ ಸುಧಾರಕರೇ ಹೊಣೆಗಾರರು.

ಕೈ ಹಿಡಿದು ಅನಾಥರನ್ನೂ, ಅಸಹಾಯಕರನ್ನೂ, ಶೋಷಿತರನ್ನೂ ತಿದ್ದಿ ದಾರಿ ತೋರಿಸಿದ ಆ ಮಹೋನ್ನತ ವ್ಯಕ್ತಿಯಂತೂ ಈ ದೇಶದಲ್ಲಿ ಮತ್ತೊಮ್ಮೆ ಹುಟ್ಟಲಾರ ನೆನಿಸುತ್ತದೆ.

ಅದ್ವೈತದ ವಿಚಾರವನ್ನು ಹೇಳುವಾಗ ಭಾರತದ ಉದ್ದಗಲಕ್ಕೂ ಬೆಳೆದು ಮಾನವ ಕುಲಕ್ಕೆ ಸನ್ಮಾರ್ಗವನ್ನು ತೋರಿದ ಯೋಗಿಗಳನ್ನು, ಸಂತರನ್ನೂ, ಸೂಫಿಗಳನ್ನೂ ನಾನಿಲ್ಲಿ ತೆಗೆದುಕೊಂಡಿಲ್ಲ. ಕಾರಣವೇನೆಂದರೆ ಅವರು ಕೆಲವೊಮ್ಮೆ ಬುದ್ಧನಂತೆ, ಕೆಲವೊಮ್ಮೆ ಅದ್ವೈತಿಗಳಂತೆ ನಮಗೆ ಕಾಣಿಸತೊಡಗುತ್ತಾರೆ. ಇದಕ್ಕೆ ಕಾರಣ ಇವರ ಜೀವನದ ಅದ್ವೈತ ದ್ರವದಲ್ಲಿ ಬುದ್ಧ ಧರ್ಮದ ಪಾರಮಾರ್ಥಿಕ ಸಕ್ಕರೆಯು ಕರಗಿ ನೀರಾಗಿ ತನ್ನನ್ನು ಕಳೆದುಕೊಂಡು ಅದ್ವೈತಕ್ಕೆ ರಸಾಸ್ವಾದವನ್ನೀಡಿದ್ದು ನಮ್ಮ ದುರಂತ. ಇದು ಅದ್ವೈತದ ಸಮನ್ವಯದ ಸಾಧನೆಯ ಫಲವೂ ಹೌದು !!!

□

ನಮ್ಮ ಜನ ಎಂತಹ ಸಂದರ್ಭದಲ್ಲಿಯಾದರೂ ನೀತಿಗೆಟ್ಟ ಲೈಂಗಿಕತೆಯನ್ನು ಪುರಸ್ಕರಿಸಲಾರರು. ಲೈಂಗಿಕತೆ ನಮ್ಮ ಭಾರತೀಯರಲ್ಲಿ ಹದ್ದು ಬಸ್ತಿನಲ್ಲಿರುತ್ತದೆ. ಕಳ್ಳತನ ಮಾಡುವವರನ್ನು ನಮ್ಮ ಸಮಾಜವು ಗೌರವಾನ್ವಿತ ವ್ಯಕ್ತಿಯೆಂದು ಪರಿಗಣಿಸುವುದಿಲ್ಲ. ಮದ್ಯಪಾನವು ಸಹಜವೆಂಬಂತೆ ನಮ್ಮಲ್ಲಿ ಕಂಡರೂ ಅದು ದೊಡ್ಡ ದುಶ್ಚಟವೆಂಬ ಅಭಿಪ್ರಾಯವನ್ನು ಪಡೆಯುತ್ತದೆ. ಇದು ಈ ನೆಲದಲ್ಲಿನ ಅತ್ಯಂತ ಪ್ರಾಚೀನ ಗೌತಮನ ಶಕ್ತಿ ಮತ್ತು ಪ್ರಭಾವವಾಗಿದ್ದರೂ ಸಹ ಇವು ಸಂಬುದ್ಧನ ಸಿದ್ಧಾಂತಗಳೆಂಬ ತನ್ನ ಮೂಲವನ್ನು ಗುರ್ತಿಸಿಕೊಳ್ಳಲಾರದಷ್ಟು ಅಸಂಗತವಾದ ರೂಪಕ್ಕಿಳಿಸಿದ್ದಕ್ಕೆ ಹಿಂದೂಧರ್ಮದ ಸುಧಾರಕರೇ ಹೊಣೆಗಾರರು.

ಒಡ ಹುಟ್ಟುಗಳು!

ಪಂಚಕನ್ಯೆಯರು
ಪ್ರಾತಃ ಸ್ಮರಣೀಯರು
ಒರಳುಗಲ್ಲಿನಲ್ಲಿ ಹೊಕ್ಕಾಡಿ
ಸುತ್ತು ಬಳಸಿ ನಜ್ಜುಗುಜ್ಜಾದ
ಖಾದ್ಯದ ಹಿಡಿ - ಕಿಡಿ ಪುಡಿಗಳು
ನಿರಂತರದ ಚಲನೆಯಲಿ
ನಿತ್ಯ ಕಾಡುವ ದ್ವಂದ್ವಗಳು
ದಿಗಣ.. ಥೈ.. ತಕ ಧೀಂ ಥೈ
ತಾಂಡವದ ತದಗಿಣಿಗೆ
ಶಿವನ ಜಡೆಯೊಳಗೆ
ಗಂಗೆ ಕಟೆಯೊಳಗೆ
ಸ್ವಯಜ್ಞ
ಸ್ವಗತ ಪ್ರಜ್ಞದಗ್ನಿ ಕುಂಡದಲಿ
ಕಮರಿ ಅರಳುವ ಹೂವುಗಳು
ಅಸ್ಥಿ ಪಂಜರಗಳು
ಡಿಂಭದ... ಗುಂಭದಲಿ
ಅವತರಿಸಿ... ಗೋಡೆ
ಕಿಟಕಿ... ಹುರುಡಾಗಿ
ಹಗೇವುಗಳ ಬಳಸಿ
ಕೀಂ.. ಕಿಚಿ.. ಹಾಡುವ ಹಕ್ಕಿಗಳು.

ಅಂತರಂಗದ ಹಸಿವು
ಹಳಹಳ... ಹಡೆ ಪ್ರೀತಿ
ಅದುವಿಟ್ಟು... ಮೈ ಕೊಡವಿ
ಕಾಯಕವ ತಬ್ಬಿ ಮೂಗುದಾರದ ಲಗಾಮಿಗೊಗ್ಗಿ
ಮುನ್ನಡೆವ ಮೂಕ ಪ್ರೇಕ್ಷಕರು
ಹತಾಶರು... ಹ್ಯಾ ... ಅವರೇ
ಎನ್ನ... ಒಡ ಹುಟ್ಟುಗಳು
ಚುಕ್ಕೆ... ಚಂದ್ರಮನ ನಭಕೆ
ನೆಗೆವಾಸೆ ಕೈ ಬಿಟ್ಟು
ಇನ್ನಿಲ್ಲದ ಹಾಗೆ ಕಾಡುವ... ಕಂದೀಲುಗಳು

○ದೇವಿಕಾ ನಾಗೇಶ್

ರಿಯಾಯ್ತಿ



ಅರ್ಧ ಬೆಲೆ, ಜೊತೆಗಿನ್ನೊಂದು ಉಚಿತ
ಮುಫತ್ತು ಕವಿಯ ಭಾವಚಿತ್ರ.

ಜೋಡಿಸಿರಲಿ ಕಪಾಟಿನಲ್ಲಿ ಸಾಲು ಸಾಲು
ಎಷ್ಟೊಂದು ಶೋಭೆ ಡ್ರಾಯಿಂಗು ರೂಮಿನಲ್ಲಿ !

ಓದುವುದು ಕಡ್ಡಾಯ ಮಾಡುವುದೆ ಕಪಾಟು ?
ಕಂಡವರು ತಿಳಿದರಾಯ್ತು ಎಷ್ಟೊಂದು ಉಂಟು !

ಮಾತು ಇದ್ದರೆ ಸಾಕು ಕರೆಯುವವರು
ಬಂದು ಮಾತು ಆಡಿರಿ ಎಂದು.

ವೇದಿಕೆ ಹತ್ತಿದರೆ ಬರುವುದು ನೆರವಿಗೆ
ಮುನ್ನುಡಿಯೊ ಬೆನ್ನುಡಿಯೊ ಎರಡೂ ಕೂಡಿಯೊ

ಜಯಂತಿಯೊ ವರ್ಧಂತಿಯೊ
ಬ್ಯಾನರು ಇರುವುದು ಬೆನ್ನಿಗೆ

ಮಾತಾಡಬಹುದು ಬೇಕಾದಷ್ಟು
ಚೀಟಿ ಬರುವವರೆಗೆ

ಯಾರು ಕೇಳುವರು ಪುಟ ಸಂಖ್ಯೆ
ಚಪ್ಪಾಳೆ ನಡುವೆ ?

ಗಾಂಧಿ ಅನ್ನುವ ಬದಲು ಅಂಬೇಡ್ಕರ್
ಅಂಬೇಡ್ಕರ್‌ಗೆ ಬದಲು ಗಾಂಧಿ ಬಂದರೂ ಸರಿಯೆ.

ಅಭಾಸದ ಮಾತೇ ಇಲ್ಲ, ಅಸಂಗತವೂ ಅಲ್ಲ
ಈ ಇಬ್ಬರೂ ಇರದ ವಿಚಾರವಿಲ್ಲ ಈ ದೇಶದೊಳಗೆ.

○ಸ. ರಘುನಾಥ

ನೈಸರ್ಗಿಕ ಕೃಷಿ

ಈ ಜಗತ್ತು ಜೀವ ತಳೆದು ಇಷ್ಟು ಸಾವಿರ ವರ್ಷಗಳಾದವು. ಈ ಭೂಮಿಯ ಮೇಲೆ ವ್ಯವಸಾಯ ಶುರುವಾಗಿ ಹತ್ತು ಸಾವಿರ ವರ್ಷಗಳಾದವು. ಬೇಸಾಯದಲ್ಲಿ ಸಗಣಿ ಬಳಕೆಗೆ ಬಂದು ಐದೂವರೆ ಸಾವಿರ ವರ್ಷಗಳಾದವು. ಈ ಭೂಮಿಯ ಮೇಲೆ ಬೇಸಾಯ ಕಲೆ ಎಂಬುದು ಹತ್ತು ಸಾವಿರ ವರ್ಷಗಳಿಂದ ಬಾಳಿ, ಬದುಕಿ, ಬೆಳೆದು ಬಂದಿದೆ. ಜೊತೆಗೆ ಕಳೆದ ಈ ಐವತ್ತು ವರ್ಷಗಳಲ್ಲಿ ಅದು ಕೆಡಬಾರದಷ್ಟು ಕೆಟ್ಟಿದೆ. ಈ ಕಾರಣಕ್ಕೆ ಇಡೀ ಜಗತ್ತು ಮರಣೋನ್ಮುಖಿಯಾಗಿದೆ. ಇಂಥ ಮರಣೋನ್ಮುಖಿಯಾದ ಜಗತ್ತನ್ನು ಸುಭಾಷ್ ಪಾಳೇಕರರ ನೈಸರ್ಗಿಕ ಕೃಷಿ ವಿಜ್ಞಾನ ಜೀವೋನ್ಮುಖಿಯಾಗಿಸಲು ಹೊರಟು ನಿಂತಿದೆ.

○ ಸ್ವಾಮಿ ಆನಂದ್.ಆರ್

ಇದು ನಿಜಕ್ಕೂ ಬಿಡುಗಡೆಯ ಸಂಗತಿ.

'ವಿಸ್ಮಯ' 'ಪವಾಡ' ಬೆರಗು ಇತ್ಯಾದಿ ಆಕೃತಿಗಳಿಗೆ ತದ್ರೂಪ ಅರ್ಥ ಬೇಕೆನ್ನುವಂತಿದ್ದರೆ ನೀವು ಈ ಸುಭಾಷ್ ಪಾಳೇಕರರ ನೈಸರ್ಗಿಕ ಕೃಷಿ ವಿಷಯಕ್ಕೆ ಪ್ರವೇಶ ಮಾಡಲೇಬೇಕು.

ಈ ಜಗತ್ತು ಜೀವ ತಳೆದು ಇಷ್ಟು ಸಾವಿರ ವರ್ಷಗಳಾದವು. ಈ ಭೂಮಿಯ ಮೇಲೆ ವ್ಯವಸಾಯ ಶುರುವಾಗಿ ಹತ್ತು ಸಾವಿರ ವರ್ಷಗಳಾದವು. ಬೇಸಾಯದಲ್ಲಿ ಸಗಣಿ ಬಳಕೆಗೆ ಬಂದು ಐದೂವರೆ ಸಾವಿರ ವರ್ಷಗಳಾದವು. ಆದರೆ ಯಾರೂ ಕೂಡ; ಯಾವ ವಿಜ್ಞಾನಿ, ಯಾವ ವಿಜ್ಞಾನ, ಯಾವ ಅವತಾರ ಪುರುಷ ಕೂಡ ಬೇಸಾಯ ಮಾಡಲು ಇಂತಿಷ್ಟೆ ಸಗಣಿ ಸಾಕು, ಇಂತಿಷ್ಟೇ ಗಂಜಳ ಸಾಕು ಅಂತ ಹೇಳಿರಲಿಲ್ಲ.

ಯಾರೂ ಹೇಳಿರಲಿಲ್ಲ ಅನ್ನುವುದು ಅಷ್ಟು ದೊಡ್ಡ ಸಂಗತಿ ಅಲ್ಲ. ಯಾರೇ ಹೇಳಿರಲಿ, ಹೇಳದಿರಲಿ ಈ ಭೂಮಿಯ ಮೇಲೆ ಬೇಸಾಯ ಕಲೆ ಎಂಬುದು ಹತ್ತು ಸಾವಿರ ವರ್ಷಗಳಿಂದ ಬಾಳಿ, ಬದುಕಿ, ಬೆಳೆದು ಬಂದಿದೆ. ಜೊತೆಗೆ ಕಳೆದ ಈ ಐವತ್ತು ವರ್ಷಗಳಲ್ಲಿ ಅದು ಕೆಡಬಾರದಷ್ಟು ಕೆಟ್ಟಿದೆ. ಈ ಕಾರಣಕ್ಕೆ ಇಡೀ ಜಗತ್ತು ಮರಣೋನ್ಮುಖಿಯಾಗಿದೆ. ಇಂಥ ಮರಣೋನ್ಮುಖಿಯಾದ ಜಗತ್ತನ್ನು ಸುಭಾಷ್ ಪಾಳೇಕರರ ನೈಸರ್ಗಿಕ ಕೃಷಿ ವಿಜ್ಞಾನ ಜೀವೋನ್ಮುಖಿಯಾಗಿಸಲು ಹೊರಟು ನಿಂತಿದೆ.

ಶ್ರೀ ಸುಭಾಷ್ ಪಾಳೇಕರ್ ಮಹಾರಾಷ್ಟ್ರದ ಅಮರಾವತಿ ಜಿಲ್ಲೆಯವರು. ಹುಟ್ಟಿದ್ದು ಕೃಷಿ ಕುಟುಂಬದಲ್ಲಿ; ಓದಿದ್ದು ಕೂಡ ಕೃಷಿ ಕುರಿತು. ಮಹಾರಾಷ್ಟ್ರದ 'ಬಳಿಗಾರ' ಎಂಬ ಕೃಷಿ ಪತ್ರಿಕೆಗೆ ಅವರು ೧೫ ವರ್ಷಗಳ ಕಾಲ ಉಪಸಂಪಾದಕರಾಗಿದ್ದರು. ಜೊತೆಗೆ ಕೃಷಿ ಕುರಿತು ಸಂಶೋಧನೆಗಾಗಿಯೇ ಸ್ವತಂತ್ರ ಸಂಶೋಧನಾ ಕೇಂದ್ರ ಕೂಡ ಸ್ಥಾಪಿಸಿದ್ದರು. ಡಾ॥ ಸ್ವಾಮಿನಾಥನ್ ಮತ್ತು ನೆಹರೂ ಪ್ರಣೀತ ಹಸಿರುಕ್ರಾಂತಿಯ ಅನಾಹುತಗಳು ಪಾಳೇಕರ್ ಮನಸ್ಸಿಗೆ ಬಹುಬೇಗ ಅರಿವಾಗತೊಡಗಿದವು. ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ ಹಾಗೂ ಕಳೆನಾಶಕಗಳನ್ನು ಬಳಸಿ ಮಾಡುವ ಬೇಸಾಯದ ಅಂತಿಮ ಗುರಿ ಏನು ? ಹಾಲಿ ರಾಸಾಯನಿಕ ಕೃಷಿ ಉಂಟು ಮಾಡಿರುವ ತಲ್ಲಣ, ಸೃಷ್ಟಿಸಿರುವ ಕ್ಷೋಭೆ ಈಗ ಎಲ್ಲರ ಗಮನಕ್ಕೂ ಬಂದಿದೆ.

ಆದರೆ ಪಾಳೇಕರ್ ೩೦ ವರ್ಷಗಳ ಹಿಂದೆಯೇ ಇದನ್ನು ಮನದಟ್ಟು ಮಾಡಿಕೊಂಡಿದ್ದರು. ಆಧುನಿಕ ಕೃಷಿ ವಿಜ್ಞಾನದ ಕುರಿತು ಆಳವಾದ ಓದು, ಸಂಶೋಧನೆ, ದೇಶ ವಿದೇಶಗಳ ಸುತ್ತಾಟದ ಜೊತೆ ಜೊತೆಗೆ ಪರಂಪರಾನುಗತ ಸಾಂಪ್ರದಾಯಿಕ ಕೃಷಿ ವಿಜ್ಞಾನದ ಕಡೆಗೂ ಗಮನ ಹರಿಸಿದರು. ನಿಜಕ್ಕೂ ನಿಸರ್ಗ ಅಂದರೇನು ? ಮಣ್ಣಿನ ಚೈತನ್ಯ, ಬೇರಿನ ಕರ್ತವ್ಯ, ಬೆಳಕಿನ ಹೊಣೆ, ನೀರಿನ ಪಾತ್ರ – ಒಟ್ಟಾರೆ ವಾತಾವರಣದ ಪ್ರಭಾವ.... ಇತ್ಯಾದಿಗಳ ಕುರಿತೆಲ್ಲ ಚಿಂತಿಸುತ್ತಾ ಬಂದರು. ನಿಜಕ್ಕೂ ನಿಸರ್ಗಕ್ಕೆ ಯಾವುದೆಲ್ಲ ಬೇಕು, ಯಾವುದೆಲ್ಲ ಬೇಡ... ಪಟ್ಟಿ ಮಾಡುತ್ತಾ ಹೊರಟರು. ಬೇಡವಾದುದನ್ನೆಲ್ಲ ಹೊರಹಾಕಿದರು. ಬೇಕಾದ್ದನ್ನೆಲ್ಲ ನಿರ್ದಿಷ್ಟವಾಗಿ ಎಷ್ಟು ಬೇಕು – ಪತ್ತೆ ಹಚ್ಚುತ್ತಾ ಸಾಗಿದರು. ಈ ಜಗತ್ತಿನ ತುಂಬ ಬೇಡದ್ದೇ ಹೆಚ್ಚು ತುಂಬಿರುವುದು – ನಿಸರ್ಗ ನಿಯಮಕ್ಕೆ ವಿರುದ್ಧವಾಗಿ. ಅತಿಯಾದ ಮಾನವ ಹಸ್ತಕ್ಷೇಪದಿಂದಾಗಿ ನಿಸರ್ಗಕ್ಕೆ ಆಯ್ಕೆಯೇ ಇಲ್ಲ. ನಮ್ಮ ಬೇಸಾಯ ಪದ್ಧತಿಗಳು ಕೂಡ ನಿಸರ್ಗದ ಮೇಲಿನ ಹಸ್ತಕ್ಷೇಪಗಳೆ. ಆದರೆ ನಿಸರ್ಗ ವ್ಯವಹಾರಗಳೊಂದಿಗೆ ಬೇಸಾಯವನ್ನು ಬೆಸೆಯುವುದಿದೆಯಲ್ಲ– ಅದುವೇ ನಿಜವಾದ ಬೇಸಾಯ ಕಲೆ.

ಶೂನ್ಯ ಬಂಡವಾಳ – ಸಮೃದ್ಧ ಬೆಳೆ

ಪಾಳೇಕರರ ಜೀವಾಮೃತ

ಹಾಲಿ ಆಧುನಿಕ ಕೃಷಿ ಪದ್ಧತಿಯ ಅನಾಹುತಗಳು ಎಲ್ಲರಿಗೂ ತಿಳಿದಿರುವಂಥದ್ದೆ. ಗ್ಯಾಟ್-ಡಂಕೆಲ್ ಒಪ್ಪಂದ, ಅದರ ಅಂಗವಾಗಿ ಜಾಗತೀಕರಣ, ಬಹುರಾಷ್ಟ್ರೀಯ ಬೀಜ ಕಂಪನಿಗಳ ಏಕಸ್ವಾಮ್ಯ –ಇವುಗಳೆಲ್ಲ ನೇರವಾಗಿ ರೈತನನ್ನು ತಟ್ಟಿವೆ. ಬಹುರಾಷ್ಟ್ರೀಯ ಬೀಜ ಕಂಪನಿಗಳು ಪೂರೈಸುತ್ತಿರುವ ಬೀಜಗಳಿಂದ ಬೆಳೆ ಬೆಳೆಯುವುದೇ ಹೊರತು ಮುಂದಿನ ಬಿತ್ತನೆಗೆ ಅವು ಬೀಜಗಳಾಗಲಾರವು. ಬಿತ್ತನೆಯಾಗುವ ಯೋಗ್ಯತೆಯನ್ನೆ ಅವುಗಳ ಜೀನ್ಸ್‌ನಿಂದ ಬೇರ್ಪಡಿಸಲಾಗಿದೆ. ಯಾವುದೇ ಹೈಬ್ರಿಡ್ ತಳಿ – ಅದು ಬೆಳೆದು ಬೆಳೆಯಾಗಲು ಕೀಟನಾಶಕ, ಕಳೆನಾಶಕ, ರಾಸಾಯನಿಕ ಗೊಬ್ಬರ ಅತ್ಯವಶ್ಯಕ. ಈ ಕೀಟನಾಶಕ, ಕಳೆನಾಶಕ, ರಾಸಾಯನಿಕ ಗೊಬ್ಬರಗಳು ಬೆಳೆಗೆ, ಜನಾರೋಗ್ಯಕ್ಕೆ, ಮಣ್ಣಿಗೆ ಒಟ್ಟಾರೆ ಪರಿಸರಕ್ಕೆ ಮಾರಣಾಂತಿಕ. ಗಿಡಗಳ ರಸ ಹೀರುವ ಕೀಟಗಳು ಮತ್ತು ಗೆದ್ದಲುಗಳ ನಾಶಕ್ಕೆ ಸಿಂಪಡಿಸುವ Phorate ಎಷ್ಟು ವಿಷಕಾರಿ ಗೊತ್ತೆ ? Phorate ಸಿಂಪಡಿಸಿದ ಮರು ದಿನವೇ ಆ ಪ್ರದೇಶದಲ್ಲಿರುವ ಹಾವು, ಹಲ್ಲಿ, ಇಲಿ, ಮೊಲ, ಕಾಡು ಬೆಕ್ಕು ಎಲ್ಲವೂ ನಿರ್ನಾಮ ! ಕೆರೆ, ಕಟ್ಟೆ, ನದಿ, ಅಂತರ್ಜಲವೆಲ್ಲ ವಿಷಯುಕ್ತ.

ಇದರ ಜೊತೆಗೆ ಕೆಮಿಕಲ್ – ಫರ್ಟಿಲೈಜರ್ ಬಳಸಿ ಮಾಡುವ ಬೇಸಾಯ ಅತಿ ದುಬಾರಿ ಖರ್ಚಿನದ್ದಾಗಿದೆ. ಇವತ್ತಿನ ಬಹುರಾಷ್ಟ್ರೀಯ ಕಂಪನಿಗಳ ಬೀಜ, ರಾಸಾಯನಿಕ ಗೊಬ್ಬರ, ಕಳೆನಾಶಕ, ಕೀಟನಾಶಕಗಳನ್ನು ನಂಬಿ ಸಾಲ ಮಾಡಿ, ಬೇಸಾಯ ಮಾಡಿದರೆ ಅದರ ಬಡ್ಡಿ ಕಟ್ಟಲು ಜಮೀನನ್ನೆ ಮಾರಬೇಕಾದ ಸ್ಥಿತಿಗೆ ರೈತ ಸಿಲುಕಿಕೊಂಡಿದ್ದಾನೆ. ಈ ಕಂಪನಿಗಳ ಜೊತೆಗೆ ಕೃಷಿ ವಿ.ವಿ.ಗಳು, ಕೃಷಿ ಅಧಿಕಾರಿಗಳು ಹೇಳುವುದನ್ನೆಲ್ಲ ಚಾಚೂ ತಪ್ಪದೆ ಅನುಸರಿಸಿ ಬೀಜ ಬಿತ್ತಿ ಬೆಳೆ ಬೆಳೆಯ ಹೊರಟರೂ ಫಸಲು ಬರುವ ಕುರಿತು ನಿಯಂತ್ರಣಕ್ಕೆ ಬಾರದಿದ್ದರೆ, ಎಷ್ಟೇ ಗೊಬ್ಬರ ಕೊಟ್ಟರೂ ಗಿಡ ಚೈತನ್ಯ ಶಾಲಿಯಾಗದಿದ್ದರೆ ರೈತನಾದವನು ಏನು ತಾನೆ ಮಾಡಿ ಯಾನು ? ಆತ್ಮಹತ್ಯಾ ಹಾದಿ ತುಳಿಯುವುದೊಂದನ್ನು ಬಿಟ್ಟು ? ಇನ್ನು ಸಾವಯವಿಗಳ ಕುರಿತು ಮಾತನಾಡದಿರುವುದೇ ಲೇಸು. 'ಸಾವಯವ ಕೃಷಿ' ಎಂಬುದು ಪರಂಪರಾನುಗತವಾಗಿ ಜ್ಞಾನ ಬಚ್ಚಿಟ್ಟುಕೊಂಡು ಬಂದವರ ಕೈಯಲ್ಲಿ ನರಳುತ್ತಿದೆ. ಅವರನ್ನು ಹಿಂಬಾಲಿಸುವ ವ್ಯರ್ಥ ಪ್ರಯತ್ನ ಬೇಡ. ಅದು ರಾಸಾಯನಿಕ ಕೃಷಿಗಿಂತ ದುಬಾರಿ.

ಇವತ್ತು ರೈತ ಮತ್ತು ರೈತಾಪಿ ವರ್ಗದ ಬದುಕು ಮಾತ್ರವೇ ಈ ವಿಷವರ್ತುಲದಲ್ಲಿ ಸಿಲುಕಿ ಬಿದ್ದಿಲ್ಲ. ಇಡೀ ಜಗತ್ತೇ ಸಿಲುಕಿ ಬಿದ್ದಿದೆ. ಶುದ್ಧಗಾಳಿ, ಬೆಳಕು, ನೀರು, ಆಹಾರ ಇಂದು ಜಗದೆಲ್ಲೆಡೆಯ ತುರ್ತು. ಇಂಥ ಸಂದರ್ಭದಲ್ಲಿ ಸುಭಾಷ್ ಪಾಳೇಕರ್ ತಮ್ಮ ನೈಸರ್ಗಿಕ ಕೃಷಿ ಜ್ಞಾನದ ಬೆಳಕಲ್ಲಿ ಇಡೀ ಜಗತ್ತನ್ನೇ ಬೆಳಗು ಮಾಡ ಹೊರಟಿದ್ದಾರೆ. ಈ ಬೆಳಕನ್ನು ತಡೆಯುವ ಶಕ್ತಿಗಳು ಬಹಳ ಇವೆ. ಆದರೆ ಯಾರಿಗೂ ತಡೆಯಲಾಗುವುದಿಲ್ಲ ಅನ್ನುವುದೆ ಈ ಕೃಷಿ ಪದ್ಧತಿಯಲ್ಲಿ ಅಡಗಿರುವ ಬೆರಗು ಮತ್ತು ಬೆಡಗು.

ಹೇಳಿ-ಕೇಳಿ ಬೇಸಾಯ ರಂಗವೆಂಬುದು ಖಾಯಂ ಜೂಜಿನ ಕಟ್ಟೆ. ಅಲ್ಲಿ ನಿಮ್ಮದೊಂದು ಸುಸ್ಥಿರ ಅಖಾಡ. ಈವರೆಗೆ ಆಡಿ, ಆಡಿ ಸೋತಿದ್ದೀರಿ, ದಣಿದಿದ್ದೀರಿ, ಕಳೆದು ಕೊಂಡಿದ್ದೀರಿ. ಜೊತೆಗೆ ಜಿಗುಪ್ಸೆಯ ತುತ್ತ ತುದಿ ಕೂಡ ತಲುಪಿದ್ದೀರಿ. ಮತ್ತೆ ಈ ಮಳೆಗಾಲದಲ್ಲಿ ಅದೇ ಹಳೆಯ ಹುಮ್ಮಸ್ಸಿನಿಂದ ಜೂಜಾಡಲು ಹೊರಟು ನಿಂತಿರುವಿರಿ. ಹಾಗೆ ಆಡುವ ಮುನ್ನ, ದಾಳ ಉರುಳಿಸುವ ಮುನ್ನ ಒಮ್ಮೆ ಯೋಚನೆ ಮಾಡಿ. ನೀವು ಆಡುವುದೆ ಆದರೆ 'ನಿಜ'ದ ಆಟ ಆಡಿ. ಸುಭಾಷ್ ಪಾಳೇಕರರ ಈ ನೈಸರ್ಗಿಕ ಕೃಷಿಯ ಅಖಾಡ ಪ್ರವೇಶಿಸಿ. ಬರಿಗೈಯಲ್ಲೇ ಬರಬೇಕು, ಬರಿಗೈಯಲ್ಲೇ ಆಡಬೇಕು ಎಂಬುದು ಈ ಜೂಜುಕಟ್ಟೆಯ ಮೊದಲ ನಿಯಮ. ಬರಿಗೈಯಲ್ಲೇ ಆಡುತ್ತೀರಿ ಆದ್ದರಿಂದ ಕಳೆದುಕೊಳ್ಳಲು ಏನೂ ಇರುವುದಿಲ್ಲ. ಇಲ್ಲಿ ಏನಿದ್ದರೂ ಬರಿ ಪಡೆದುಕೊಳ್ಳುವುದು ಮಾತ್ರ!



ಮೈಸೂರಿನಲ್ಲಿ ಪಾಳೇಕರರಿಗೆ ಸನ್ಮಾನ

ಹೇಳಿ-ಕೇಳಿ ಬೇಸಾಯ ರಂಗವೆಂಬುದು ಖಾಯಂ ಜೂಜಿನ ಕಟ್ಟೆ. ಅಲ್ಲಿ ನಿಮ್ಮದೊಂದು ಸುಸ್ಥಿರ ಅಖಾಡ. ಈವರೆಗೆ ಆಡಿ, ಆಡಿ ಸೋತಿದ್ದೀರಿ, ದಣಿದಿದ್ದೀರಿ, ಕಳೆದುಕೊಂಡಿದ್ದೀರಿ. ಜೊತೆಗೆ ಜಿಗುಪ್ಸೆಯ ತುತ್ತ ತುದಿ ಕೂಡ ತಲುಪಿದ್ದೀರಿ. ಮತ್ತೆ ಈ ಮಳೆಗಾಲದಲ್ಲಿ ಅದೇ ಹಳೆಯ ಹುಮ್ಮಸ್ಸಿನಿಂದ ಜೂಜಾಡಲು ಹೊರಟು ನಿಂತಿರುವಿರಿ. ಹಾಗೆ ಆಡುವ ಮುನ್ನ, ದಾಳ ಉರುಳಿಸುವ ಮುನ್ನ ಒಮ್ಮೆ ಯೋಚನೆ ಮಾಡಿ. ನೀವು ಆಡುವುದೆ ಆದರೆ 'ನಿಜ'ದ ಆಟ ಆಡಿ. ಸುಭಾಷ್ ಪಾಳೇಕರರ ಈ ನೈಸರ್ಗಿಕ ಕೃಷಿಯ ಅಖಾಡ ಪ್ರವೇಶಿಸಿ. ಬರಿಗೈಯಲ್ಲೇ ಬರಬೇಕು, ಬರಿಗೈಯಲ್ಲೇ ಆಡಬೇಕು ಎಂಬುದು ಈ ಜೂಜುಕಟ್ಟೆಯ ಮೊದಲ ನಿಯಮ. ಬರಿಗೈಯಲ್ಲೇ ಆಡುತ್ತೀರಿ ಆದ್ದರಿಂದ ಕಳೆದುಕೊಳ್ಳಲು ಏನೂ ಇರುವುದಿಲ್ಲ. ಇಲ್ಲಿ ಏನಿದ್ದರೂ ಬರಿ ಪಡೆದುಕೊಳ್ಳುವುದು ಮಾತ್ರ!

ಹೀಗಾಗಿಯೇ ಸುಭಾಷ್ ಪಾಳೇಕರ್ ತಮ್ಮ ನಿಸರ್ಗ ಕೃಷಿಗೆ 'ಶೂನ್ಯ ಬಂಡವಾಳದ ಲಾಭದಾಯಕ ನೈಸರ್ಗಿಕ ಕೃಷಿ' ಅಂತ ಹೆಸರಿಟ್ಟಿದ್ದಾರೆ. ಈ ಬೇಸಾಯಕ್ಕಾಗಿ ರೈತ ಸಾಲ ಮಾಡಬೇಕಾಗಿಲ್ಲ. ಸರಕಾರಿ ಸಬ್ಸಿಡಿಗಳ ಜಾಡು ಹರಸುತ್ತಾ ಸರ್ಕಾರ ಹಿಂದೆ ಸುತ್ತಾಡಬೇಕಾಗಿಲ್ಲ. ರಾಸಾಯನಿಕ ಗೊಬ್ಬರ, ಕಳೆನಾಶಕ, ಕೀಟನಾಶಕ ಇಲ್ಲಿ ಸಂಪೂರ್ಣ ವರ್ಜ್ಯ. ಇತರ ಸಿದ್ಧಗೊಬ್ಬರ, ಸಾವಯವ ಗೊಬ್ಬರ, ವರ್ಮಿ ಕಾಂಪೋಸ್ಟ್, ಕೆರೆಯ ಗೋಡು, ಇಕೋ ಫ್ರೆಂಡ್ಲಿ, ಬಯೋ ಫ್ರೆಂಡ್ಲಿಗಳೆಲ್ಲ ಅಮಾನ್ಯ. ಉಳುಮೆಗಾಗಿ ಟ್ರ್ಯಾಕ್ಟರ್ ಬಳಸುವಂತಿಲ್ಲ. ಪೇಟೆಯಿಂದ, ಕಂಪನಿಗಳಿಂದ ಬೀಜ ಮೊದಲ್ಗೊಂಡು ಬೇರೇನನ್ನೂ ಖರೀದಿಸಿ ತರುವಂತಿಲ್ಲ. ಯಾವ ಕಾರಣಕ್ಕೂ ಕೃಷಿ ವಿಶ್ವ ವಿದ್ಯಾನಿಲಯ, ಕೃಷಿ ಮತ್ತು ತೋಟಗಾರಿಕಾ ಇಲಾಖೆಯ ಅಧಿಕಾರಿಗಳು ಹಾಗೂ ಸಾವಯವ ಪಂಡಿತರ ಉಚಿತ ಸಲಹೆಗಳನ್ನು ಸ್ವೀಕರಿಸಬೇಕಾಗಿಲ್ಲ. ಸದ್ಯಕ್ಕೆ ಅವರ್ಯಾರೂ ನಮ್ಮ ಗೊಡವೆಗೆ ಬರಬೇಕಾಗಿಲ್ಲ. ನಾವೂ ಕೂಡ ಅವರ ಗೊಡವೆಗೆ ಹೋಗಬೇಕಾಗಿಲ್ಲ. ಅವರೆಲ್ಲರೂ ನಮ್ಮ ಸಂಬಳ ಪಡೆದು ನಿಶ್ಚಿಂತೆಯಿಂದ ಇರಲಿ. ಆ ಕುರಿತು ನಮ್ಮಲ್ಲಿ ಯಾವ ಅಸಹನೆಯೂ ಇರಬೇಕಾಗಿಲ್ಲ. ಇಂದಲ್ಲ, ನಾಳೆ ಅವರೆಲ್ಲರೂ ನಮ್ಮನ್ನು ಹಿಂಬಾಲಿಸಿಯೇ ತೀರುತ್ತಾರೆ. ಇದು ಬಿಟ್ಟು ಬೇರೆ ದಾರಿಯೇ ಅವರಿಗಿರುವುದಿಲ್ಲ.

ದೇಸಿ ಹಸು ಮತ್ತು ಜೀವಾಮೃತ

ನಿಮ್ಮಲ್ಲಿ ಒಂದು ನಾಡ ಹಸು ಇದ್ದರೆ ೩೦ ಎಕರೆಗೆ ಬೇಕಾಗುವಷ್ಟು ಗೊಬ್ಬರ ಮಾಡಿಕೊಳ್ಳಬಹುದು. ಒಮ್ಮೆ ಉಳುಮೆ ಮಾಡಿ ಬಾಳೆ, ಕಬ್ಬುಗಳನ್ನು ನೆಟ್ಟರೆ ಸತತವಾಗಿ ೩೫ ವರ್ಷಗಳ ಕಾಲ ಫಸಲು ತೆಗೆಯಬಹುದು. ಬೇಸಾಯದ ಸಣ್ಣಪುಟ್ಟ ಖರ್ಚುಗಳನ್ನು ಅಲ್ಪಾವಧಿ ಹಾಗೂ ಉಪ ಬೆಳೆಗಳ ಮೂಲಕವೇ ನಿಭಾಯಿಸಬಹುದು. ಐದು ಎಕರೆ ಜಮೀನಿರುವ ಕುಟುಂಬ ಜೀವನ ಪೂರ್ತಿ ಶ್ರೀಮಂತಿಕೆಯಿಂದಿರಬಹುದು. ೨೦ ಗುಂಟೆ – ೩೦ ಗುಂಟೆ ರೀತಿ ತುಂಡು ಭೂಮಿಗಳಿರುವ ಕುಟುಂಬಗಳೂ ಕೂಡ ಸಾಲಗಳಿಲ್ಲದ, ಋಣ ಭಾರಗಳಿಲ್ಲದ ನೆಮ್ಮದಿಯಿಂದ ಕುಟುಂಬಗಳಾಗಿರಬಹುದು. ಸುಭಾಷ್ ಪಾಳೇಕರರ ಈ ನೈಸರ್ಗಿಕ ಕೃಷಿ ಶೈಲಿಯಲ್ಲಿ ಕೇವಲ ಲಾಭ ಮಾಡಿಕೊಳ್ಳುವ ಉದ್ದೇಶ ಮಾತ್ರವೇ ಅಡಗಿಲ್ಲ. ವಿಷಮುಕ್ತ ಮಣ್ಣು, ವಿಷಮುಕ್ತ ಪರಿಸರ, ವಿಷಮುಕ್ತ ಆಹಾರ, ವಿಷಮುಕ್ತ ಸಮಾಜ, ವಿಷಮುಕ್ತ ಜಗತ್ತಿನ ದರ್ಶನವೇ ಅಡಗಿದೆ.

ಕೃಷಿ ಭೂಮಿಯಲ್ಲಿ ಪವಾಡ ಜರುಗಿಸುತ್ತಿರುವ ಸಗಣಿ ಮತ್ತು ಗಂಜಲದ ಮಿಶ್ರಣಕ್ಕೆ ಸುಭಾಷ್ ಪಾಳೇಕರ್‌ರಿಟ್ಟಿರುವ ಹೆಸರು 'ಜೀವಾಮೃತ'. ಈ ಜೀವಾಮೃತಕ್ಕೆ ನಾಡ ಹಸುವಿನ ಸಗಣಿ, ಗಂಜಲಗಳೇ ಆಗಬೇಕು. ಹಸು ಮಾತ್ರವೆ ಆಗಬೇಕೆಂತೇನೂ ಇಲ್ಲ. ನಾಡ ತಳಿಯ ಎತ್ತು, ಎಮ್ಮೆ ಕೂಡ ಆಗಬಹುದು. ಹೋಲ್‌ಸ್ಟಿನ್, ಜೆರ್ಸಿ ಮುಂತಾದ ವಿದೇಶಿ ಹಾಗೂ

ಶೂನ್ಯ ಬಂಡವಾಳ – ಸಮೃದ್ಧ ಬೆಳೆ

ಶೂನ್ಯ ಬಂಡವಾಳ - ಸಮೃದ್ಧ ಬೆಳೆ

ಮಿಶ್ರ ತಳಿಯ ಹಸುಗಳು ಈ ಬೇಸಾಯಕ್ರಮದಲ್ಲಿ ನಿಷಿದ್ಧ. ಯಾಕೆಂದರೆ ಅವ್ಯಾವೂ ಹಸುಗಳೇ ಅಲ್ಲ. ಅವು ಕೊಡುವ ಹಾಲು ಹಾಲಲ್ಲ. ಅವೆಲ್ಲ ಹಸು ರೂಪದ ಹಂದಿಗಳು ಎನ್ನುತ್ತದೆ ಪಾಳೇಕರರ ವಿಜ್ಞಾನ. ನಾಡತಳಿಯ ಹಸು, ಎಮ್ಮೆ, ಎತ್ತುಗಳ ಗಂಜಳ ರೋಗ ನಿವಾರಕ. ಆದರೆ ಜೆರ್ಸಿ, ಹೋಲ್‌ಸ್ಟಿನ್ ಮುಂತಾದ ಮಿಶ್ರತಳಿಯ ಹಸುಗಳ ಗಂಜಳ ರೋಗವರ್ಧಕ. ಈ ಹಸುಗಳ ಗಂಜಳ 'ರೋಗವರ್ಧಕ ಅಲ್ಲ' ಅಂತ ಯಾರಾದರೂ ಸಾಬೀತು ಪಡಿಸಿದರೆ ಅಂಥವರಿಗಾಗಿ ೧೦ ಲಕ್ಷ ರೂ ನಗದು ಬಹುಮಾನ ಕೂಡ ಘೋಷಿಸಿದ್ದಾರೆ ಪಾಳೇಕರ್.

ನಾಡ ತಳಿಯ ಜಾನುವಾರುಗಳ ೧೦ ಕೆ.ಜಿ. ಸಗಣಿಯಲ್ಲಿ ೩೦ ಲಕ್ಷ PSB ಬ್ಯಾಕ್ಟೀರಿಯಾಗಳಿರುತ್ತವೆ. ಈ ಬ್ಯಾಕ್ಟೀರಿಯಾಗಳು ನಾಡ ತಳಿಯ ಜಾನುವಾರುಗಳ ಕರಳುಗಳಲ್ಲಿ ಹುಟ್ಟುತ್ತವೆ. ಮಿಶ್ರತಳಿಯ ಜಾನುವಾರುಗಳ ಕರುಳಲ್ಲಿ ಈ PSB ಬ್ಯಾಕ್ಟೀರಿಯಾ ಪ್ರಮಾಣ ೬೦ ರಿಂದ ೭೦ ಸಾವಿರ ಮಾತ್ರ. PSB ಬ್ಯಾಕ್ಟೀರಿಯಾಗಳು ಬೆಳೆಯುವ ಬೆಳೆಗಳಿಗೆ ಮೂಲ ಪೋಷಕ ದ್ರವ್ಯಗಳು. ಈ PSB ಬ್ಯಾಕ್ಟೀರಿಯಾಗಳನ್ನು ಅಗಣಿತ ಸಂಖ್ಯೆಯಲ್ಲಿ ವೃದ್ಧಿ ಮಾಡಿಕೊಳ್ಳುವುದಷ್ಟೆ ನಮ್ಮ ಕೆಲಸ. ಅದಕ್ಕಾಗಿ ಹೆಚ್ಚಿನ ಶ್ರಮ ವಹಿಸಬೇಕಾಗಿಲ್ಲ.

೧೦ ಕೆ.ಜಿ. ಸಗಣಿಯಲ್ಲಿ ೩೦ ಲಕ್ಷ PSB ಬ್ಯಾಕ್ಟೀರಿಯಾಗಳಿರುತ್ತವೆ. ಈ ೧೦ ಕೆ.ಜಿ. ಸಗಣಿ ಬಳಸಿ 'ಜೀವಾಮೃತ' ತಯಾರಿಸಿದರೆ ಜೀವಾಮೃತದ ಪ್ರತಿ ಹನಿ, ಹನಿಯಲ್ಲೂ ೫೦೦ ಕೋಟಿಗೂ ಮೀರಿ PSB ಬ್ಯಾಕ್ಟೀರಿಯಾಗಳಿರುತ್ತವೆ. ಒಂದು ಹನಿ ಜೀವಾಮೃತ ಭೂಮಿಗೆ ಬಿದ್ದರೆ ಮಣ್ಣಿನ ತತ್ವವೇ ಬದಲಾಗುತ್ತದೆ.

ಜೀವಾಮೃತ ತಯಾರಿಸುವ ಬಗೆ

೧೦ ಕೆ.ಜಿ. ಸಗಣಿ, ೧೦ ಕೆ.ಜಿ. ಗಂಜಳ (ರೋಗ ನಿವಾರಕ). ೨ ಕೆ.ಜಿ. ಕಡ್ಲೆಹಿಟ್ಟು ಅಥವಾ ಯಾವುದೇ ದ್ವಿದಳ ಧಾನ್ಯದ ಹಿಟ್ಟು (ಹುರುಳಿ, ಉದ್ದು, ಹೆಸರು, ತೊಗರಿ, ನೆಲಗಡಲೆ... ಯಾವುದೂ ಆಗಬಹುದು) ೨ ಕೆ.ಜಿ. ಕಪ್ಪು ಬೆಲ್ಲ (ರಾಸಾಯನಿಕ ರಹಿತ) ಮತ್ತು ಒಂದು ಹಿಡಿ ಮಣ್ಣು ಇವಿಷ್ಟನ್ನು ೨೦೦ ಲೀಟರ್ ನೀರಿನಲ್ಲಿ ಬೆರಸಿ. ತಂಪಾದ, ಮರದ ನೆರಳಲ್ಲಿ ಜೀವಾಮೃತದ ತೊಟ್ಟಿಗಳನ್ನಿಡಿ. ೨೨೫ ಲೀಟರ್‌ನ ಪ್ಲಾಸ್ಟಿಕ್ ಡ್ರಮ್ ಆಗಬಹುದು, ಸಿಮೆಂಟ್ ತೊಟ್ಟಿ ಆಗಿರಬಹುದು. ಅವ್ಯಾವೂ ನಿಮ್ಮ ಬಳಿ ಇಲ್ಲದಿದ್ದರೆ ಚಿಂತೆ ಬೇಡ. ನಿಮ್ಮ ಜಮೀನಿನಲ್ಲಿರುವ ಮರದ ಕೆಳಗೆ ಈ ಮಿಶ್ರಕ್ಕೆ ಬೇಕಾಗುವ ಅಳತೆಯ ಗುಂಡಿ ತೋಡಿ. ಸಗಣಿಯಿಂದ ಅದನ್ನು ಸಾರಿಸಿರಿ. ಗುಂಡಿಯಲ್ಲಿ ಪಾಲಿಥಿನ್ ಹಾಳೆ ಹಾಸಿ. ಜೀವಾಮೃತದ ಮಿಶ್ರಣ ಮಾಡಿರಿ. ಈ ಮಿಶ್ರಣ ೭ ದಿನಗಳವರೆಗೆ ಇರಲಿ. ೩ ರಿಂದ ೭ ದಿನದೊಳಗೆ ನೀವು ಯಾವಾಗ ಬೇಕಾದರೂ ಇದನ್ನು ಒಂದು ಎಕ್ರೆ ಭೂಮಿಗೆ ಸಿಂಪಡಿಸಬಹುದು. ಜೀವಾಮೃತದ ಮಿಶ್ರಣವನ್ನು ಪ್ರತಿದಿನ ೩ ಬಾರಿ ಬೆಳಗ್ಗೆ - ಮಧ್ಯಾಹ್ನ - ಸಂಜೆ ರಾಡಿ ಮಾಡಿ. ವಿರುದ್ಧ ದಿಕ್ಕಿನಿಂದ ಕೋಲು ತಿರುಗಿಸಬೇಡಿ. ಇಲ್ಲಿ ಪ್ರತಿ ೨೦ ಸೆಕೆಂಡಿಗೊಮ್ಮೆ PSB ಬ್ಯಾಕ್ಟೀರಿಯಾಗಳು ಅಂದರೆ ಜೀವಾಣುಗಳು ದ್ವಿಗುಣಗೊಳ್ಳುತ್ತವೆ. ಹಾಗೆ ದ್ವಿಗುಣಗೊಂಡು, ಗೊಂಡೂ ಒಂದೇ ದಿನದಲ್ಲಿ ಜೀವಾಣುಗಳ ಸಾಗರವೇ ಅಲ್ಲಿ ಏರ್ಪಡುತ್ತದೆ.

ಒಂದು ಎಕ್ರೆ ಭೂಮಿಯಲ್ಲಿ ಸಮೃದ್ಧ ಬೆಳೆ ಬೆಳೆಯಲು ಇಷ್ಟು ಮಾತ್ರ ಜೀವಾಮೃತ ಸಾಕು. ತಿಂಗಳಿಗೊಮ್ಮೆ ನಿಮ್ಮ ಯಾವುದೇ ಫಸಲಿಗೆ ಈ ಅಮೃತಾ ಕೊಡುತ್ತಾ ಬನ್ನಿ. ೧೫ ದಿವಸಕ್ಕೊಮ್ಮೆಯಂತೆಯೂ ಕೊಡಬಹುದು. ಆದರೆ ಗಮನಿಸಿ: ಜೀವಾಮೃತ ಗೊಬ್ಬರವಲ್ಲ, ಬೆಳೆಗೆ ಅನ್ನವೂ ಅಲ್ಲ. ತಿಪ್ಪೆಗೊಬ್ಬರ ಕೂಡ ಬೆಳೆಗೆ ಆಹಾರವಲ್ಲ ಹೆಪ್ಪು ಮಾತ್ರ. ಹಾಲು ಮೊಸರಾಗಲು ಎಷ್ಟು ಹೆಪ್ಪು ಬೇಕು ? ಅದೇ ರೀತಿ ಭೂಮಿಗೆ ಈ ಜೀವಾಮೃತ ಹೆಪ್ಪಿನಂತೆ. ಜೀವಾಮೃತ ಭೂಮಿಗೆ ಬಿದ್ದ ಕೂಡಲೆ ಹಾಲು ಮೊಸರಾದಂತೆ ಭೂಮಿ ಹದವಾಗುತ್ತದೆ. ಜಮೀನುಗಳಲ್ಲಿ ಹಾಲಿ ಸಂಗ್ರಹವಿರುವ ತಿಪ್ಪೆಗೊಬ್ಬರವಿದ್ದರೆ ಈ ನೈಸರ್ಗಿಕ ಕೃಷಿ ಆಧಾರಿತ ಭೂಮಿಗೆ ಹಾಕಬಹುದು. ಆದರೆ ಖರೀದಿಸಿ ಹಾಕಬೇಕಾದ ಪ್ರಮೇಯವೇನೂ ಇಲ್ಲ. ತಿಪ್ಪೆಗೊಬ್ಬರ ಹೆಚ್ಚು ಬಿದ್ದ ಜಾಗದ ಮಳೆ ಕಡಿಮೆಯಾದರೆ ಬೆಳೆ ಬಾಡುತ್ತದೆ. ಮಳೆ ಹೆಚ್ಚಾದರೆ ಹೆಚ್ಚು ಬೆಳೆದು ಎಲೆ ಉದುರಿ ಹೋಗಿ ಕಾಳು ಕಡಿಮೆಯಾಗುತ್ತವೆ. ಈ ಹಿನ್ನೆಲೆಯಲ್ಲಿ ಜೀವಾಮೃತವಿರುವೆಡೆಯಲ್ಲಿ ಇತರ ಯಾವ ಗೊಬ್ಬರಗಳೂ ಸುಳಿಯುವ ಅಗತ್ಯವಿರುವುದಿಲ್ಲ. ಮಳೆ ಆಶ್ರಿತ ಜಮೀನು ಹೊಂದಿರುವವರು ಬೆಳೆ ಬಿತ್ತುವ ಮುನ್ನ ಎಕರೆಗೆ ಒಂದು ಕ್ವಿಂಟಾಲ್‌ನಷ್ಟು ತಿಪ್ಪೆಗೊಬ್ಬರವನ್ನು ಒಣಗಿಸಿ ಇಟ್ಟುಕೊಳ್ಳಿ. ಬೀಜ ಬಿತ್ತುವಾಗ ಆ ಗೊಬ್ಬರಕ್ಕೆ ೧೦ ರಿಂದ ೧೫ ಲೀಟರ್ ಜೀವಾಮೃತ ಬೆರೆಸಿ ನೀಡಿ.

ಯಾವುದೇ ಬೆಳೆ ಬೆಳೆಯಲು ಯಾವುದೇ ಸಿದ್ಧ ಗೊಬ್ಬರದ ಅಗತ್ಯವಿಲ್ಲ. ಸಾವಯವ, ಎರೆಗೊಬ್ಬರ.. ಇತ್ಯಾದಿ ಯಾವುದೂ ಕೂಡ. ಯಾಕೆಂದರೆ ಸಿದ್ಧಗೊಬ್ಬರ ಮಣ್ಣಿಗೆ ಮತ್ತು ಗಿಡಗಳ ಬೇರಿಗೆ ಕೆಲಸ ಕೊಡುವುದಿಲ್ಲ. ನಮ್ಮ ಈ ಬೇಸಾಯ ಕ್ರಮದ ಮುಖ್ಯ ಉದ್ದೇಶವಿರುವುದು ಮಣ್ಣಿನ ಪ್ರತಿ ಕಣ ಕಣಗಳನ್ನು ಆಕ್ಟಿವೇಟ್ ಮಾಡುವುದರಲ್ಲಿ ಮತ್ತು ಬೇರುಗಳನ್ನು ಜಾಗೃತಗೊಳಿಸುವುದರಲ್ಲಿಯೇ ಹೊರತು ಅವೆರಡನ್ನು ಜಡಗೊಳಿಸುವುದರಲ್ಲಿ ಅಲ್ಲ. ಜೀವಾಮೃತ ಬಿದ್ದ ತಿಂಗಳೊಳಗಾಗಿಯೇ ನಿಮ್ಮ ಕೃಷಿ ಭೂಮಿಯಲ್ಲಿ ಎರೆಹುಳು ಕಾಣಿಸಿಕೊಳ್ಳುತ್ತವೆ. ಮೂರು ತಿಂಗಳಿನಷ್ಟೊತ್ತಿಗೆ ನಿಮ್ಮ ಭೂಮಿ ಎರೆಹುಳುಗಳಿಂದ ಸಮೃದ್ಧಿ ಹೊಂದುತ್ತದೆ. ಎರೆ ಹುಳುಗಳು ಸ್ವಾಭಾವಿಕವಾಗಿಯೇ ಸೃಷ್ಟಿಯಾಗುವಾಗ ಅವುಗಳನ್ನು ಕೃತಕ ರೀತಿಯಲ್ಲಿ ಸಾಕಿ ಎರೆಗೊಬ್ಬರ ಮಾಡುವ ಪರಿಶ್ರಮವಾದರೂ ಯಾಕೆ ಹೇಳಿ?

ಒಂದು ನಾಡ ಹಸು ದಿನಕ್ಕೆ ೧೨ ರಿಂದ ೧೫ ಕೆ.ಜಿ ಸಗಣಿ ಹಾಕುತ್ತದೆ. ೧೨ರಿಂದ ೧೫ ಲೀಟರ್ ಗಂಜಳ ನೀಡುತ್ತದೆ. ಸರಾಸರಿ ೧೦ ಕೆ.ಜಿ. ಸಗಣಿ ೧೦ ಲೀಟರ್ ಗಂಜಳ ಅಂದುಕೊಂಡರೂ ಒಂದು ಹಸುವಿನಿಂದ ೩೦ ಎಕ್ರೆಗೆ ಬೇಕಾಗುವಷ್ಟು ಜೀವಾಮೃತ ಮಾಡಿಕೊಳ್ಳಬಹುದಲ್ಲವೆ ?

ಪಾಳೇಕರರ ನೈಸರ್ಗಿಕ ಕೃಷಿಯಲ್ಲಿ ಬೀಜಾಮೃತ, ಜೀವಾಮೃತ, ಹೊದಿಕೆ ಮತ್ತು ಆದ್ರತೆ ಈ ನಾಲ್ಕು ಅಂಶಗಳಿಗೆ ಭಾರೀ ಮಹತ್ವ. ಯಾವುದೇ ಬೀಜ ಬಿತ್ತಿ ಅಥವಾ ಗಿಡ

ಕೃಷಿ ಭೂಮಿಯಲ್ಲಿ ಪವಾಡ ಜರುಗಿಸುತ್ತಿರುವ ಸಗಣಿ ಮತ್ತು ಗಂಜಳದ ಮಿಶ್ರಣಕ್ಕೆ ಪಾಳೇಕರ್ ಇಟ್ಟಿರುವ ಹೆಸರು 'ಜೀವಾಮೃತ'. ಈ ಜೀವಾಮೃತಕ್ಕೆ ನಾಡ ಹಸುವಿನ ಸಗಣಿ, ಗಂಜಳಗಳೇ ಆಗಬೇಕು. ಹಸು ಮಾತ್ರವೇ ಆಗಬೇಕೆಂತೇನೂ ಇಲ್ಲ. ನಾಡ ತಳಿಯ ಎತ್ತು, ಎಮ್ಮೆ ಕೂಡ ಆಗಬಹುದು.

ಜೀವಾಮೃತ ಸಿದ್ಧಪಡಿಸುತ್ತಿರುವ ಬನ್ನೂರು ಕೃಷ್ಣಪ್ಪ, ಸುಭಾಷ್ ಪಾಳೇಕರ್ ಮತ್ತು ಬಸವರಾಜ ತಂಬಾಕೆ

ಭೂಮಿ ನಿಜಕ್ಕೂ ಅನ್ನಪೂರ್ಣೆಯಾಗಿದ್ದಾಳೆ. ಬೆಳೆಗಾಗಿ ಬೇಕಾಗುವ ಎಲ್ಲ ತತ್ವಗಳು ಭೂಮಿ ಮತ್ತು ಪರಿಸರದಲ್ಲಿವೆ. ಜೀವಾಣು ಗಳು ಮಾತ್ರ ಆಹಾರ ಸಿದ್ಧಪಡಿಸಿ ಒದಗಿಸುತ್ತವೆ. ಅದಕ್ಕೆ ತಕ್ಕ ವಾತಾವರಣ ವನ್ನು ನಾವು (ರೈತರು) ಮಾತ್ರ ಕಲ್ಪಿಸುವುದು ಸಾಧ್ಯ ಅನ್ನುತ್ತಾರೆ ಪಾಳೇಕರ್. ನೀವೀಗ ಈಗಿಂದೀಗಲೆ ಈ ಕೃಷಿಗೆ ಬನ್ನಿ. ಮಹಾರಾಷ್ಟ್ರದ ಲಕ್ಷಾಂತರ ರೈತರು ಈ ಕೃಷಿಯ ಮೂಲಕ ಮಾದರಿ ರೈತರಾಗಿದ್ದಾರೆ.

ಜೀವಾಮೃತದಿಂದ ಬೆಳೆದ ಕಬ್ಬು

ನೆಡಿ – ಬೀಜೋಪಚಾರ ಖಡ್ಡಾಯ. ಕೃಷಿ ವಿ.ವಿ.ಯವರು ಬೀಜೋಪಚಾರಕ್ಕಾಗಿ ಬಾವಿಸ್ಟನ್ ರಾಸಾಯನಿಕವನ್ನು ಶಿಫಾರಸ್ಸು ಮಾಡುತ್ತಾರೆ. ಇದು ಹಾನಿಕಾರಕ ವಿಷ. ನೀವು ಬೆಳೆ ಬಿತ್ತುವ ಹಿಂದಿನ ದಿನ ಸಂಜೆ ಬೀಜಾಮೃತ ಅಣಿ ಮಾಡಿಕೊಳ್ಳಿ. ಆ ಹಿಂದಿನ ದಿನವೆ ನೀವು ಬೆಳೆ ಬಿತ್ತಲಿರುವ ಭೂಮಿಗೆ ಜೀವಾಮೃತ ನೀಡಿರಿ. ಈ ಜೀವಾಮೃತವನ್ನು ತೇವವಿರುವಾಗ, ಮಳೆ ಬಿದ್ದಾಗ, ನೀರು ಹಾಯಿಸುವಾಗ, ಇಬ್ಬನಿ ಬೀಳುವಾಗ– ಈ ಯಾವ ಸಮಯದಲ್ಲಾದರೂ ನೀಡ ಬಹುದು. ಮುಖ್ಯವಾಗಿ ತೇವ ನಿಮ್ಮ ಗಮನದಲ್ಲಿರಬೇಕು. ಜೀವಾಮೃತವನ್ನು ಪ್ರತಿ ಇಂಚಿಂಚು ಭೂಮಿಗೂ ಅತ್ಯಂತ ವ್ಯವಸ್ಥಿತವಾಗಿ ನೀಡಬೇಕೆಂತೇನೂ ಇಲ್ಲ. ಸುಮ್ಮನೆ ತೇವವಿರುವೆಡೆಯಲ್ಲೆಲ್ಲಾ ಚಿಮಿಕಿಸುತ್ತಾ ಬನ್ನಿ ಸಾಕು.

ಬೀಜಾಮೃತಕ್ಕಾಗಿ ೧ ಎಕರೆಗೆ ೫ ಕೆ.ಜಿ. ಸಗಣಿ, ೫ ಲೀಟರ್ ಗಂಜಳ, ೨೫೦ ಗ್ರಾಂ ಸುಣ್ಣ, ೧ ಲೀಟರ್ ಹಾಲು ಇವಿಷ್ಟನ್ನು ೫೦ ಲೀಟರ್ ನೀರಿನಲ್ಲಿ ಮಿಶ್ರಣ ಮಾಡಿ – ರಾಡಿಗೊಳಿಸಿ. ಮರು ದಿನ ಮುಂಜಾನೆ ನೆಡಲಿರುವ ಗಿಡದ ಬೇರುಗಳನ್ನು ಒಂದು ನಿಮಿಷದವರೆಗೆ ಮಾತ್ರ ನೆನೆಹಾಕಿ. ಯಾವುದೇ ಬಿತ್ತನೆ ಭೂಮಿಯ ಆಳಕ್ಕೆ ಹೋಗಬಾರದು. ಗಿಡಗಳಾದರೆ ಅವುಗಳ ಬೇರಿನ ಉದ್ದ ಗಮನಿಸಿ ಬೇರುಗಳು ಮುಳುಗುವಷ್ಟು ಗುಳಿ ಮಾಡಿ ನೆಟ್ಟರೆ ಸಾಕು. ತೆಂಗು, ಬಾಳೆ, ಅಡಿಕೆ ಇತ್ಯಾದಿ ತೋಟಗಾರಿಕಾ ಬೆಳೆಗಳೇ ಇರಲಿ ಗಿಡದ ಬೊಡ್ಡೆ ಬೇರು ಮುಳುಗುವಷ್ಟು ಮಾತ್ರ ಗುಂಡಿ ಮಾಡಿದರೆ ಸಾಕು. ಗುಂಡಿ ಆಳವಾದಷ್ಟು ಗಿಡದ ಬೆಳವಣಿಗೆ ಕುಂಠಿತಗೊಳ್ಳುತ್ತದೆ.

ನೆನಪಿಡಿ : ಮಣ್ಣಿನಲ್ಲಿ ಬೆಳೆಗೆ ಬೇಕಾದ ಎಲ್ಲ ಬಗೆಯ ಸಾರಗಳಿರುವುದು ೪.೫ ಇಂಚಿನಿಂದ ೯ ಇಂಚಿನವರೆಗೆ ಮಾತ್ರ. ಈ ಭೂಮಿಯ ಮೇಲೆ ಒಂದು ಇಂಚು ಮಣ್ಣು ರೂಪುಗೊಳ್ಳಲು ೨೦೦ ರಿಂದ ೫೦೦ ವರ್ಷಗಳು ಬೇಕು. ಭೂಮಿಯ ಮೇಲ್ಮಣ್ಣು ಮಾತ್ರವೆ ಯಾವುದೇ ಬೆಳೆಗೆ ಜೀವ. ಆಳವಾದ ಗುಂಡಿಗಳು ಮತ್ತು ಆಳವಾದ ಉಳುಮೆ ಮೇಲ್ಮಣ್ಣಿನ ಸಾರವನ್ನು ಇಲ್ಲವಾಗಿಸುತ್ತವೆ. ಬೇಸಾಯ ಜೀವನದಲ್ಲಿ ಟ್ರ್ಯಾಕ್ಟರ್ ಪ್ರವೇಶಾಥಿಯನ್ನು ವಿಧ್ವಂಸ, ರಾಕ್ಷಸೀ ಕೃತ್ಯ ಅನ್ನುತ್ತಾರೆ ಪಾಳೇಕರ್.

ಬೀಜಾಮೃತದಿಂದ ಬೀಜೋಪಚಾರ ಮಾಡಿ ಬೀಜ ಬಿತ್ತಿ. ಈ ಕ್ರಮದಿಂದಾಗಿ ಬೀಜಕ್ಕೆ ರೋಗ ತಗುಲಿದ್ದರೂ ಹೋಗುತ್ತದೆ. ಬೇರು ತಿನ್ನುವ ಕೀಟಗಳು, ರೋಗ ಸೃಷ್ಟಿಸುವ ಬ್ಯಾಕ್ಟೀರಿಯಾಗಳು ದೂರ ಸರಿಯುತ್ತವೆ. ಒಂದು ಹನಿ ಬೀಜಾಮೃತದಲ್ಲಿ ೫೦೦ ಕೋಟಿಗೂ ಮೀರಿ ಜೀವಾಣು ಗಳಿರುತ್ತವೆ. ಈ ಜೀವಾಣುಗಳು ಬೀಜ ಅಥವಾ ಗಿಡದ ರಕ್ಷಣೆಗಾಗಿ ಭೂಸೇನೆಯ ಮಾದರಿಯಲ್ಲಿ ಕಾರ್ಯನಿರ್ವಹಿ ಸುತ್ತವೆ. ಬೀಜ ಬಿತ್ತಿದ ನಂತರ ಜೀವಾಮೃತ ಹನಿಸಿ. ಪ್ರಪಂಚದ ಯಾವುದೇ ಭೂಮಿಗೆ ಸಗಣಿಯಲ್ಲಿರುವ PSB ಬ್ಯಾಕ್ಟೀರಿಯಾಗಳು ಜೀವಾಮೃತದ ಮೂಲಕ ಹೆಚ್ಚಾಗುವುದಷ್ಟೇ ಸಾಕು. ಭೂಮಿ ಬ್ಯಾಕ್ಟೀರಿಯಾಗಳ ಹೆಚ್ಚಳದಿಂದ ತನ್ನ ಆಹಾರ ತಾನೇ ಸಿದ್ಧಪಡಿಸಿಕೊಳ್ಳುತ್ತದೆ. ರಾಸಾಯನಿಕಗಳ ಪ್ರವೇಶವಾದರೆ ಭೂಮಿ ತನ್ನ ಕ್ರಿಯಾಶೀಲತೆಯನ್ನು ಕಳೆದುಕೊಂಡು ಕ್ರಮೇಣ ಶಕ್ತಿ ಹೀನವಾಗುತ್ತಾ ಹೋಗುತ್ತದೆ.

ಬೆಳೆಯ ಆಳದಲ್ಲಿ ಅಡಕವಾಗಿರುವ ತತ್ವಗಳು

ಜಲಜನಕ, ಆಮ್ಲಜನಕ ಮತ್ತು ಕಾರ್ಬನ್ ಇವುಗಳನ್ನೆಲ್ಲ ಯಾವುದೇ ಬೆಳೆ ಇರಬಹುದು, ನಿಸರ್ಗದಿಂದಲೇ ಪಡೆಯುತ್ತವೆ. ಇನ್ನು ಸಾರಜನಕ (ನೈಟ್ರೋಜನ್) ಇದು ವಾತಾವರಣದಲ್ಲಿ ಶೇಕಡ ೭೮.೬ ರಷ್ಟಿದೆ. ಒಂದು ಎಕರೆಯಲ್ಲಿ ಬೆಳೆ ಬೆಳೆಯಲು ೨೦೦ ಕೆ.ಜಿ. ಸಾರಜನಕ ಪೂರೈಸಬೇಕೆಂದು ಕೃಷಿ ವಿ.ವಿಗಳು ನಂಬಿಕೊಳ್ಳುತ್ತವೆ. ವಾಸ್ತವವಾಗಿ ಕೊರತೆ ಬೀಳುವ ಸಾರಜನಕ ೩೧ ಕೆ.ಜಿ.ಯಷ್ಟು ಮಾತ್ರ. ಇದನ್ನು ವಾತಾವರಣದಿಂದ ನೇರವಾಗಿ ಪಡೆಯಲಾಗುವುದಿಲ್ಲ. ಹೆಚ್ಚುವರಿ ಸಾರಜನಕ ಉತ್ಪಾದನೆಗೆ ರೈಜೋಬಿಯಂ ಜೀವಾಣು ಬೇಕು. ಇವು ಯಾವುದೇ ದ್ವಿದಳ ಧಾನ್ಯಗಳ ಬೇರುಗಳ ಗಂಟುಗಳಲ್ಲಿರುತ್ತವೆ. ಅವುಗಳಿಂದ ಗಾಳಿಯಲ್ಲಿರುವ ಸಾರಜನಕವನ್ನು ಭೂಮಿಗೆ ಒದಗಿಸಲು ಸಾಧ್ಯ. ಅದಕ್ಕಾಗಿ ಮರ, ಗಿಡಗಳ ಬಳ್ಳಿ, ಬಾಳೆ, ಕಬ್ಬುಗಳ ಸಾಲಿನಲ್ಲಿ ದ್ವಿದಳ ಧಾನ್ಯ ಬೆಳೆಯಬೇಕು. ಬಯಲು ಹೊಲಗಳಲ್ಲು ಬೆಳೆ ಬದಲಾಯಿಸಿ ಬೇಳೆ ಕಾಳುಗಳ ಬೆಳೆ ಬೆಳೆಯುತ್ತಿರಬೇಕು. ಹೀಗಾದಾಗ ನಾವು ಸಾರಜನಕಕ್ಕಾಗಿ ಗೊಬ್ಬರದ ಕಂಪನಿಯನ್ನು ಅವಲಂಬಿಸಬೇಕಾಗಿಲ್ಲ. ರಂಜಕ (ಫಾಸ್ಪೇಟ್) ಕೂಡ ನಮ್ಮ ಭೂಮಿಯಲ್ಲೇ ಇದೆ. ಆದರಿದು ಸಲೀಸಾಗಿ ಬೆಳೆಗಳಿಗೆ ಲಭಿಸುವುದಿಲ್ಲ. ರಂಜಕದ ಕಣಗಳು ಜಮೀನುಗಳಲ್ಲಿ ಏಕದಳ, ದ್ವಿದಳ, ತ್ರಿದಳ, ರೂಪಗಳಲ್ಲಿರುತ್ತವೆ. ದ್ವಿದಳ, ತ್ರಿದಳ ರೂಪದಲ್ಲಿ ಅವುಗಳನ್ನು ಬಳಸಲು ಬರುವುದಿಲ್ಲ. ಈ ಕಣಗಳನ್ನು PSB ಬ್ಯಾಕ್ಟೀರಿಯಾಗಳು ಮಾತ್ರ ಬೇರ್ಪಡಿಸುತ್ತವೆ. ಜೀವಾಮೃತದಲ್ಲಿರುವ PSB ಬ್ಯಾಕ್ಟೀರಿಯಾಗಳು ರಂಜಕದ ಒಂದೊಂದು ಕಣವನ್ನು ಬೇರ್ಪಡಿಸಿ ಬೇರುಗಳ ಮುಖಾಂತರ ಎಲೆಗಳಿಗೆ ರವಾನಿಸುತ್ತವೆ.

ಪೊಟ್ಯಾಶ್ ಕೂಡ ಅಷ್ಟೆ. ಪೊಟ್ಯಾಶ್ ಅನ್ನು ಬೇಸಿಲ್ಲಸ್ ಸೈಲಿಕೆಸಸ್ (B.S) ಬ್ಯಾಕ್ಟೀರಿಯಾ ಒದಗಿಸುತ್ತವೆ. ಈ ಜೀವಾಣುಗಳು ಕೂಡ ದೇಸೀ ಆಕಳ ಕರುಳುಗಳಲ್ಲಿದ್ದು, ಸಗಣಿ ಮೂಲಕ ಹೊರಬರುತ್ತವೆ. ಭೂಮಿಯಲ್ಲಿರುವ ಸಿಲಿಕೋಟ ಅನ್ನುವ ಲವಣಗಳನ್ನು ವಿಭಜಿಸಿ ಪೊಟ್ಯಾಶ್ ಅನ್ನು ಬೇರುಗಳ ಮುಖಾಂತರ ಸಸ್ಯಗಳಿಗೆ ಒದಗಿಸುತ್ತವೆ.

ಇಲ್ಲಿಗೆ ಬರುವಷ್ಟೊತ್ತಿಗಾಗಲೆ NPK ಹೆಸರಿನ ಜಗತ್ಪ್ರಸಿದ್ಧ ರಾಸಾಯನಿಕ ಗೊಬ್ಬರಗಳು ಈ ಕೃಷಿ ವಿಧಾನದಲ್ಲಿ ತಮ್ಮ ಅಸ್ತಿತ್ವ ಕಳೆದುಕೊಳ್ಳುತ್ತವೆ. ಹೀಗೆಯೆ ಸಲ್ಫರ್ (ಗಂಧಕ), ಕಾಪರ್–ಸಲ್ಫೇಟ್, ಝಿಂಕ್ ಸಲ್ಫೇಟ್ (ಸತುವು) ಫೆರೋಸ್ ಸಲ್ಫೇಟ್ (ಕಬ್ಬಿಣ) ಇವು ಕೂಡ ಬೆಳೆಗಳಿಗೆ ಬೇಕು. ಇವುಗಳೆಲ್ಲ ಸಗಣಿಯಲ್ಲಿರುವ Thio oxidants (T.O) ಮೈಕೊ ರೈಸಾ ಬ್ಯಾಕ್ಟೀರಿಯಾಗಳು ಒದಗಿಸುತ್ತವೆ.

ಭೂಮಿ ನಿಜಕ್ಕೂ ಅನ್ನಪೂರ್ಣೆಯಾಗಿದ್ದಾಳೆ. ಬೆಳೆಗಾಗಿ ಬೇಕಾಗುವ ಎಲ್ಲ ತತ್ವಗಳು ಭೂಮಿ ಮತ್ತು ಪರಿಸರದಲ್ಲಿವೆ. ಜೀವಾಣುಗಳು ಮಾತ್ರ ಆಹಾರ ಸಿದ್ಧಪಡಿಸಿ ಒದಗಿಸುತ್ತವೆ. ಅದಕ್ಕೆ ತಕ್ಕ ವಾತಾವರಣವನ್ನು ನಾವು (ರೈತರು) ಮಾತ್ರ ಕಲ್ಪಿಸುವುದು ಸಾಧ್ಯ ಅನ್ನುತ್ತಾರೆ ಪಾಳೇಕರ್.

ನೀವೀಗ ಈಗಿಂದೀಗಲೆ ಈ ಕೃಷಿಗೆ ಬನ್ನಿ. ನಮ್ಮಲ್ಲಿ ಬನ್ನೂರು ಕೃಷ್ಣಪ್ಪ ಸೇರಿದಂತೆ ಕರ್ನಾಟಕದ ಸಹಸ್ರಾರು ರೈತರು ಈ ಕೃಷಿ ಪ್ರಯೋಗದಲ್ಲಿ ಯಶಸ್ವಿಯಾಗಿದ್ದಾರೆ. ಮಹಾರಾಷ್ಟ್ರದ ಲಕ್ಷಾಂತರ ರೈತರು ಈ ಕೃಷಿಯ ಮೂಲಕ ಮಾದರಿ ರೈತರಾಗಿದ್ದಾರೆ. ಬೆಳೆಗೆ ತಗಲುವ ರೋಗ, ಕೀಟಗಳ ಉಪಟಳಗಳ ಕುರಿತು ಚಿಂತಿಸಬೇಡಿ. ಅವೂ ಕೂಡ ಬಾಳಲು ಅನುವು ಮಾಡಿಕೊಡಿ. ಕಳೆ ಕುರಿತು ಪರಿತಾಪ ಬೇಡ. ಅವುಗಳ ಉಪಯುಕ್ತತೆಯನ್ನು ಮುಂದಿನ ಸಂಚಿಕೆಯಲ್ಲಿ ಗಮನಿಸಿ.

(ಮುಂದುವರಿಯುವುದು)

ಶೂನ್ಯ ಬಂಡವಾಳ – ಸಮೃದ್ಧ ಬೆಳೆ

ಶೂನ್ಯ ಬಂಡವಾಳ - ಸಮೃದ್ಧ ಬೆಳೆ

ಜಗತ್ತಿನ ಕೃಷಿಲೋಕದ ದಿಕ್ಕನ್ನೆ ಬದಲಿಸಲು ಹೊರಟು ನಿಂತಿರುವ ಸುಭಾಷ್ ಪಾಳೇಕರ್ ಮೊನ್ನೆ ಕರ್ನಾಟಕದಲ್ಲೂ ಆ ಬಗೆಯ ಹವಾ ಸೃಷ್ಟಿಸಿ ಹಿಂದಿರುಗಿದ್ದಾರೆ. ಮತ್ತೆ ಜೂನ್ ತಿಂಗಳ ಮುಂಗಾರಿನೊಂದಿಗೆ ಇಲ್ಲಿನ ಕರಾವಳಿ, ಮಲೆನಾಡು, ಬೆಂಗಾಡುಗಳಲ್ಲಿ ಅವರು ಕಾಣಿಸಿಕೊಳ್ಳಲಿದ್ದಾರೆ. ಮೊನ್ನಿನ ಶಿವಮೊಗ್ಗ, ಮೈಸೂರು, ಬೆಂಗಳೂರಿನ ಅವರ ಅಧ್ಯಯನ ಶಿಬಿರಗಳಲ್ಲಿ ಭಾಗವಹಿಸಿದ್ದ ರೈತರಿನ್ನೂ ಪಾಳೇಕರರ ಗುಂಗಿನಿಂದ ಹೊರಬಂದಿಲ್ಲ. ಬಹುಶಃ ಅವರ್‍ಯಾರೂ ಇನ್ನೆಂದೆಂದಿಗೂ ಆ ಗುಂಗಿನಿಂದ ಹೊರಬರುವ ಪ್ರಯತ್ನ ಮಾಡುವುದಿಲ್ಲ. ಆ ಮಟ್ಟಿಗೆ ಅವರೆಲ್ಲರಿಗೂ ಪಾಳೇಕರ್ ಕುರಿತು ಭರವಸೆ ಮೂಡಿದೆ.

ಸುಭಾಷ್ ಪಾಳೇಕರ್ ಸರಳರಲ್ಲಿ ಸರಳ. ಹಾಗೆಯೇ ಅವರ ನೈಸರ್ಗಿಕ ಕೃಷಿಯೂ ಕೂಡ. ಭೂಮಿಗೆ, ವ್ಯವಸಾಯಕ್ಕೆ ಯಾವುದೆಲ್ಲ ಬೇಡ ಅನ್ನುವುದರ ಕುರಿತು ಅವರಲ್ಲಿ ಅಪಾರವಾದ ತಿಳುವಳಿಕೆ ಇದೆ. ಹಾಗೆಯೇ ಭೂಮಿಗೆ ಏನು ಬೇಕು ಅನ್ನುವುದರ ಕುರಿತಾಗಿಯೂ ಕೂಡ.

ಶಿವಮೊಗ್ಗದ ಶಿಬಿರ ಮುಗಿಸಿ, ರಾತ್ರಿಯೆಲ್ಲ ಪ್ರಯಾಣ ಬೆಳೆಸಿ ಮೈಸೂರಿಗೆ ಬಂದ ಪಾಳೇಕರರನ್ನು ರೈಲ್ವೆ ಸ್ಟೇಷನ್‌ನಲ್ಲೆ ಹಸಿರು ಶಾಲು ಹೊದಿಸಿ ಸಂಭ್ರಮದಿಂದ ಬರಮಾಡಿಕೊಂಡವರು ರೈತಸಂಘದವರು. ಬೀಳ್ಕೊಡುವಾಗಲು ಅಷ್ಟೆ. ಘನತೆಯ ಬೀಳ್ಕೊಡುಗೆ. ಮೈಸೂರು ಪೇಟ ತೊಡಿಸಿ ಶ್ರೀಗಂಧದ ಹಾರ ಹಾಕಿ, ಶಾಲು ಹೊದಿಸಿ 'ಅಪೂರ್ವ ಕೃಷಿಕ್ರಾಂತಿಯ ಹರಿಕಾರ' ಎಂಬ ಬಿರುದು ನೀಡಿ ಹೃದಯಸ್ಪರ್ಶಿ ಬೀಳ್ಕೊಡುಗೆ. ಪಾಳೇಕರರ ಸತತ ಮೂರು ದಿನಗಳ ಅಧ್ಯಯನ ಶಿಬಿರದಲ್ಲಿ, ಶಿಳರ ಅವರ ದೇಹ – ಮನಸ್ಸುಗಳಲ್ಲಿ ದಣಿವಿನ ಛಾಯೆ ಕಾಣಿಸಿಕೊಳ್ಳಲಿಲ್ಲ.

ಬೇಕು. ಆಗ ಮಾತ್ರ ಒಟ್ಟು ಸಮಾಜದ ನಡಿಗೆ ಸುಗಮ' ಅನ್ನುವುದು ಪಾಳೇಕರರ ತಿಳುವಳಿಕೆ. ಹೀಗೆಂದವರು ಅವರನ್ನು ಆಳವಾಗಿ ಬಲ್ಲ ಕಿಶೋರ್ ಮುಖರ್ಜಿ. ಅಂಥ ವ್ಯಕ್ತಿತ್ವದ ನಿಜ ದರ್ಶನ ಆದವರ ಅಭಿಪ್ರಾಯಗಳೂ ಇಲ್ಲಿವೆ.

ಜೊತೆಗೆ ಪಾಳೇಕರ್ ಮೈಸೂರಿನ ನೈಸರ್ಗಿಕ ಕೃಷಿ ಅಧ್ಯಯನ ಶಿಬಿರದ ಸಮಾರೋಪದಲ್ಲಿ ಆಡಿದ ಮಾತುಗಳನ್ನೂ ಇಲ್ಲಿ ದಾಖಲಿಸಲಾಗಿದೆ.

ಕೃಷಿಯಿಂದಲೇ ಕ್ರಾಂತಿ

ಮಿತ್ರರೆ, ನೀವೀಗ ತುದಿಗಾಲಲ್ಲಿ ನಿಂತಿರುವಿರಿ. ನಾಳೆ ಮುಂಜಾವಿನಲ್ಲಿ ಉದಯವಾಗಲಿರುವ ಎಂದಿನ ಸೂರ್ಯ

ಮೈಸೂರಿನಲ್ಲಿ ನಡೆದ ಅಧ್ಯಯನ ಶಿಬಿರದಲ್ಲಿ, ಕೆ.ರಾಮದಾಸ್, ದೇವನೂರು ಮಹಾದೇವ, ಸುಭಾಷ್ ಪಾಳೇಕರ್, ಬಸವರಾಜ ತಂಬಾಕೆ, ಮತ್ತು ಕೆ.ಎಸ್. ಪುಟ್ಟಣ್ಣಯ್ಯ, ಬನ್ನೂರು ಕೃಷ್ಣಪ್ಪ ಮತ್ತಿತರರು.

ಪೂರ್ಣ ಮಟ್ಟದಲ್ಲಿ ಸ್ವಾವಲಂಬಿಗಳಾಗೋಣ

ಪುಟಿಯುವ ಉತ್ಸಾಹ, ಕಮಾಂಡಿಂಗ್ ಆದ ವಾಗ್ಝರಿ, ಜಗತ್ತಿನ ಜ್ಞಾನಸಾಗರವೇ ಪಾಳೇಕರ್ ರೂಪದಲ್ಲಿ ಆ ಇಡೀ ವೇದಿಕೆಯನ್ನು ಆವರಿಸಿಕೊಂಡ ಭಾವ. ಈ ಎಲ್ಲಕ್ಕಿಂತ ಮಿಗಿಲಾಗಿ 'ಇನ್ನೇನು ದಾರಿಯೇ ಇಲ್ಲ, ಬದುಕುವ ಅವಕಾಶಗಳೇ ಇಲ್ಲ, ಎಲ್ಲವೂ ಮುಗಿದೇ ಹೋಯಿತು' ಎಂದು ಹತಾಶೆಯ ಕೊನೆ ಅಂಚು ತಲುಪಿದ್ದ ವ್ಯಕ್ತಿಯಲ್ಲೂ 'ಇನ್ನು ಗೆದ್ದೆ' ಎಂಬ ಭಾವ ರೂಪಿಸುವುದಿದೆಯಲ್ಲ–ಅದು ದೊಡ್ಡದು. ಅಂಥದೊಂದು ವಿದ್ಯಮಾನ ಪಾಳೇಕರ್ ಇದ್ದೆಡೆಯಲ್ಲೆಲ್ಲ, ಹೋದೆಡೆಯಲ್ಲೆಲ್ಲ ಜರುಗುತ್ತಿದೆ. ಅವರ ಮೂರನೇ ದಿನದ ಶಿಬಿರದೊತ್ತಿಗೆ ಅವರ ಘಾಟಿ ಹಿಂದಿ ಕನ್ನಡದಷ್ಟೇ ಆಪ್ತವಾಗಿಬಿಡುವುದು ಸೋಜಿಗ.

'ಪಾಳೇಕರ್ ಕೇವಲ ರೈತರಲ್ಲ, ಕೃಷಿ ವಿಜ್ಞಾನಿಯೂ ಅಲ್ಲ. ಆತನೊಬ್ಬ ಅಪ್ಪಟ ದಾರ್ಶನಿಕ. ಅದೊಂದು ಮೇರೆಯೇ ಇಲ್ಲದ ಮೇರುಕೃತಿ. ಆತನಿಗೆ ಒಳ್ಳೆಯವರಿರಲಿ, ಕೆಟ್ಟವರಿರಲಿ ಎಲ್ಲರ ಕುರಿತೂ ಕಾಳಜಿ ಇದೆ. ಗಾಂಧಿ, ಬುದ್ಧ, ಅಂಬೇಡ್ಕರ್, ಲೋಹಿಯಾ, ವಿನೋಬಾ... ಈ ಯಾರೂ ಆದರ್ಶ ಆದರಿಯ ಕೊನೆ ಬಿಂದುಗಳಲ್ಲ. ಅವರು ತೋರಿದ ಬೆಳಕಲ್ಲಿ ಬೆಳಕಿರುವವರೆಗೆ ನಡೆಯೋಣ. ಆಮೇಲೆ ನಾವೇ ಬೆಳಕಾಗೋಣ. ಪ್ರತಿಯೊಬ್ಬರೂ ಇಲ್ಲಿ ಸ್ವಯಂ ಪ್ರಕಾಶಿಸ

ಜಗತ್ತಿನ ಕೃಷಿಲೋಕದ ದಿಕ್ಕನ್ನೆ ಬದಲಿಸಲು ಹೊರಟು ನಿಂತಿರುವ ಸುಭಾಷ್ ಪಾಳೇಕರ್ ಮೊನ್ನೆ ಕರ್ನಾಟಕದಲ್ಲೂ ಆ ಬಗೆಯ ಹವಾ ಸೃಷ್ಟಿಸಿ ಹಿಂದಿರುಗಿದ್ದಾರೆ. ಮೊನ್ನಿನ ಶಿವಮೊಗ್ಗ, ಮೈಸೂರು, ಬೆಂಗಳೂರಿನ ಅವರ ಅಧ್ಯಯನ ಶಿಬಿರಗಳಲ್ಲಿ ಭಾಗವಹಿಸಿದ್ದ ರೈತರಿನ್ನೂ ಪಾಳೇಕರರ ಗುಂಗಿನಿಂದ ಹೊರಬಂದಿಲ್ಲ. ಬಹುಶಃ ಅವರ್‍ಯಾರೂ ಇನ್ನೆಂದೆಂದಿಗೂ ಆ ಗುಂಗಿನಿಂದ ಹೊರಬರುವ ಪ್ರಯತ್ನ ಮಾಡುವುದಿಲ್ಲ. ಆ ಮಟ್ಟಿಗೆ ಅವರೆಲ್ಲರಿಗೂ ಪಾಳೇಕರ್ ಕುರಿತು ಭರವಸೆ ಮೂಡಿದೆ.

ನನ್ನು ಹೊಸ ಕಣ್ಣುಗಳಿಂದ ನೋಡಲೆಂದು. ಈ ನಡುವೆ ನಾನು ಕೆಲವು ಮಾತುಗಳನ್ನು ನಿಮಗಾಗಿ ಹೇಳಲು ಇಚ್ಛಿಸುವೆ. ಈ ವ್ಯವಸ್ಥೆಯನ್ನು ನಾವು ಆಮೂಲಾಗ್ರವಾಗಿ ಬದಲಾಯಿಸಬೇಕು. ಅದಕ್ಕಾಗಿ ಇಲ್ಲಿ ಬಹುದೊಡ್ಡ ಕ್ರಾಂತಿಯೇ ಜರುಗಬೇಕು. ಆ ಕ್ರಾಂತಿ ಆಗಬೇಕಾಗಿರುವುದು ದೆಹಲಿಯಲ್ಲಿ, ರಾಜಧಾನಿಗಳಲ್ಲಿ ಅಲ್ಲ ! ಬದಲಿಗೆ ನಮ್ಮ ಅಂತರ್ಯದಲ್ಲಿ, ನಮ್ಮ ಹೃದಯದಾಳದಲ್ಲಿ ಜರುಗುವ ಕ್ರಾಂತಿಯೆ ನಿಜವಾದ ಕ್ರಾಂತಿ.

ಐವತ್ತು ವರ್ಷಗಳ ಹಿಂದೆ ಹಸಿರು ಕ್ರಾಂತಿಯ ಬೀಜಾಂಕುರವಾದದ್ದು ದೆಹಲಿಯಲ್ಲಿ. ಅದು ಪಂಜಾಬ್, ಹರ್ಯಾಣ ಸೇರಿದಂತೆ ಇಡೀ ದೇಶವನ್ನು ವ್ಯಾಪಿಸಿತು. ಕ್ರಾಂತಿಗಾಗಿ ಆತ್ಮಸಮರ್ಪಣೆ, ಬಲಿದಾನಗಳೆಲ್ಲ ಆಗಬೇಕು. ಹಸಿರು ಕ್ರಾಂತಿಯಿಂದ ಇಡೀ ದೇಶ ಇವತ್ತು ವಿನಾಶದ ಹೊಸ್ತಿಲಲ್ಲಿ ನಿಂತಿದೆ. ರೈತರು ಸರಣಿಯೋಪಾದಿಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಡಾ॥ ಸ್ವಾಮಿನಾಥನ್ ಮತ್ತು ಜವಹರಲಾಲ್ ನೆಹರೂರವರ ಅಪೇಕ್ಷಿತ ಹಸಿರು ಕ್ರಾಂತಿ ಈ ಬಗೆಯಲ್ಲಿ ಬಲಿದಾನಗಳನ್ನು ಸ್ವೀಕರಿಸುತ್ತಾ ಸಾಗಿದೆ.

ಹಸಿರು ಕ್ರಾಂತಿಯ ಆರಂಭದಲ್ಲಿ ಪಂಜಾಬ್, ಹರ್ಯಾಣಗಳಲ್ಲಿ ರಾಸಾಯನಿಕ ಗೊಬ್ಬರಗಳನ್ನು ಬಳಸಿ ಎಕರೆಗೆ ೫೦ ರಿಂದ ೬೦ ಕ್ವಿಂಟಾಲ್ ಭತ್ತ, ಗೋಧಿಗಳನ್ನು

ಬೆಳೆದರು. ಇದು ಜಾಗತಿಕ ಮಟ್ಟದ ದಾಖಲೆ. ಆದರಿಂದು ಅದೇ ಪ್ರದೇಶದಲ್ಲಿ ೫೦ ರಿಂದ ೬೦ ಕ್ವಿಂಟಾಲ್ ರಾಸಾಯನಿಕ ಗಳನ್ನು ಚೆಲ್ಲಿದರೂ ೧೫ ರಿಂದ ೨೦ ಕ್ವಿಂಟಾಲ್ ಧಾನ್ಯ ಬೆಳೆಯುವುದಿಲ್ಲ. ಅಲ್ಲಿನ ರೈತ ಎಂಡೊಸಲ್ಫಾನ್ ಕುಡಿದು ಸಾಯುತ್ತಿದ್ದಾನೆ. ಇದು ಹಸಿರು ಕ್ರಾಂತಿಯ ಪರಿಣಾಮ.

ನಾವೀಗ ಈ ಕ್ರಾಂತಿಯನ್ನು ಧೂಳೀಪಟ ಮಾಡಬೇಕಾಗಿದೆ. ದೆಹಲಿಯಲ್ಲಿ ರಾಜಧಾನಿಗಳಲ್ಲಿ ಕ್ರಾಂತಿ ಜರುಗುವುದಿಲ್ಲ. ಕ್ರಾಂತಿ ಬುಲೆಟ್ ಮತ್ತು ಬ್ಯಾಲೆಟ್‌ಗಳಿಂದಲೂ ಜರುಗುವುದಿಲ್ಲ. ಬ್ಯಾಲೆಟ್‌ನಿಂದ ರಾಜಕೀಯ ಅಧಿಕಾರ ಬದಲಾಗಬಹುದೇ ಹೊರತು ಆಡಳಿತ ಯಂತ್ರ ಅಲ್ಲ. ಯಾಕಂದ್ರೆ ಅಂತಹ ಆಡಳಿತ ವ್ಯವಸ್ಥೆಗೆ ಸ್ಥಿತಿಸ್ಥಾಪಕ ಗುಣವಿರುತ್ತದೆ. ಕ್ರಾಂತಿಯ ಯಾವುದೇ ನೆಲೆಗಟ್ಟನ್ನು ಅದಕ್ಕೆ ಅರ್ಥೈಸಲು ಆಗುವುದಿಲ್ಲ. ಕ್ರಾಂತಿಯಾಗೋದು ಜಾಗೃತಗೊಂಡ ನಮ್ಮ ರೈತರ, ಕಾರ್ಮಿಕರ, ಸಾಮಾನ್ಯ ಜನರ ಅಭೀಪ್ಸೆಯಿಂದಾಗಿಯೆ ಹೊರತು ಬುಲೆಟ್, ಬ್ಯಾಲೆಟ್‌ಗಳಿಂದಲ್ಲ. ಆ ಅಭೀಪ್ಸೆ ಅನ್ನು ವಂಥದ್ದು ಹೊರಗಿನ ಯಾವುದನ್ನೂ ಬದಲಾಯಿಸಲು, ಮಾರ್ಪಡಿಸಲು ಹೊರಡುವಂಥದ್ದಲ್ಲ. ಬದಲಾಗಿ ನಮ್ಮನ್ನೆ, ಅಂದರೆ ನಮ್ಮ ಅಂತರ್ಯವನ್ನೆ ಬದಲಾಯಿಸಿಕೊಳ್ಳು ವಂಥದ್ದು. ಚಕ್ರವರ್ತಿ ಅಶೋಕ ಇದನ್ನು ಕಂಡುಕೊಂಡ. ಬುದ್ಧ, ಗಾಂಧೀಜಿಯವರಿಂದಲೂ ಕ್ರಾಂತಿಯಾಯಿತು. ಅವರ ಬಳಿ ಅಸ್ತ್ರಗಳಿದ್ದವೆ ? ಅಧಿಕಾರಗಳಿದ್ದವೆ?

ಕೈಯಲ್ಲಿ ತ್ರಿಶೂಲ ಹಿಡಿದು ಆರ್ಭಟಿಸುವುದರಿಂದಾಗಲಿ, ಕೇಸರಿ ಬಾವುಟ ಹಿಡಿದು ಕೂಗಾಡುವುದರಿಂದಾಗಲಿ ಕ್ರಾಂತಿ ಆಗುವುದಿಲ್ಲ. ಇಂಥ ಹುಡುಗರನ್ನು ಕಂಡು ನನಗೆ ದಿಗಿಲಾಗುತ್ತದೆ. ನಮ್ಮ ಯುವಕರಲ್ಲಿ ಅದೆಂಥ ಶಕ್ತಿ ಅಡಗಿದೆ ? ಅದೂ ಜಗತ್ತಿನ ಬದಲಾವಣೆಗೆ ಪೂರಕವಾಗಬಲ್ಲ ಶಕ್ತಿ ಅಂತಹ ಶಕ್ತಿವಂತ, ತಾಕತ್ತುಳ್ಳ ಯುವಕರ ಕೈಯಲ್ಲಿ ತ್ರಿಶೂಲ ಗಳನ್ನು ನೀಡುವುದು ಎಷ್ಟು ಸರಿ ? ಅವರ ಕೈಗಳಿಗೆ ಹಾರೆ, ಗುದ್ದಲಿಗಳನ್ನು ಕೊಡಿ. ಅವರ ಮುಷ್ಟಿಯಲ್ಲೊಂದಿಷ್ಟು ಬೀಜ ಗಳನ್ನು ತುಂಬಿ. ಅವರು ನಿರ್ಮಿತಿ ಮತ್ತು ಸೃಷ್ಟಿಕ್ರಿಯೆಗಳಲ್ಲಿ ತಲ್ಲೀನರಾಗಲಿ. ನಿರ್ಮಿತಿ ಮತ್ತು ಸೃಷ್ಟಿಕ್ರಿಯೆಗಳಲ್ಲಿ ತೊಡಗುವ ಹುಡುಗರಲ್ಲಿ ವಿಕಾರಗಳಿರುವುದಿಲ್ಲ.

ಮೊನ್ನೆ ನನ್ನ ಆಪ್ತರೊಬ್ಬರು ಕೇಳಿದರು 'ಪಾಳೇಕರ್‌ಜೀ ನಿಮ್ಮ ಈ ಆಂದೋಲನ ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧವೆ?' ಅಂತ. ನಾನು ಹೇಳಿದೆ. ನಾವು ಯಾರ ವಿರುದ್ಧವೂ ಅಲ್ಲ. ನಾವು ಯಾರಿಗೂ ವೈರಿಗಳಲ್ಲ ಮತ್ತು ನಮಗೆ ಯಾರೂ ವೈರಿಗಳಲ್ಲ. ಬಹುರಾಷ್ಟ್ರೀಯ ಕಂಪನಿಗಳು ನಮ್ಮ ಮೇಲೆ ಯಾವುದೇ ಕಾನೂನುಗಳನ್ನು ಮಾಡಿಲ್ಲ. ಅವರ ಉತ್ಪನ್ನಗಳನ್ನು ಕೊಳ್ಳುವ –ಕೊಳ್ಳದಿರುವ ಎರಡೂ ಬಗೆಯ ಸ್ವಾತಂತ್ರ್ಯ ನಮಗಿದ್ದೇ ಇದೆ. ಇಂತಿರುವಾಗ ನಾವು ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ ಯಾಕೆ ಹೋರಾಟ ಮಾಡಬೇಕು ಹೇಳಿ? ಕೊಳ್ಳುವುದು ರೈತ ಸಂಸ್ಕೃತಿ ಅಲ್ಲ, ಸೃಷ್ಟಿಸುವುದು ರೈತ ಸಂಸ್ಕೃತಿ. ನಿಮ್ಮ ಮುಂದೆ ಆಯ್ಕೆಗಳೇ ಇಲ್ಲವಾದಾಗ ನೀವು ಯಾರಿಗೇ ಬೇಕಾದರೂ ಶರಣಾಗುತ್ತೀರಿ, ಗುಲಾಮರಾಗುತ್ತೀರಿ, ಅವಲಂಬನ ಬೆಳೆಸಿಕೊಳ್ಳುತ್ತೀರಿ. ನೀವು ದಯಮಾಡಿ ನಿಮ್ಮ ಆಯ್ಕೆಯನ್ನು ಈ ಮಣ್ಣಿನಲ್ಲಿ, ಈ ನಿಸರ್ಗದಲ್ಲಿ ಕಾಣಿರಿ. ನಿಮ್ಮನ್ನು ಆಹ್ಲಾದದಿಂದ ನರ್ತಿಸುವಂತೆ ಮಾಡುವ ಶಕ್ತಿ ನಿಜಕ್ಕೂ ನಿಸರ್ಗ ದಲ್ಲಿದೆ. ಆಯ್ಕೆಗಳೇ ಇಲ್ಲವಾದಾಗ, ನಿರ್ಮಿತಿಯ ಮನಸ್ಸೇ ನಿಮ್ಮಲ್ಲಿಲ್ಲ ದಾದಾಗ ಎಷ್ಟೇ ಹೋರಾಡಿದರೂ ಅಷ್ಟೆಲ್ಲ ಪೂರ್ತಿ ವ್ಯರ್ಥ. ನಾವು ನಮ್ಮ ಈ ಆಂದೋಲನದಲ್ಲಿ ರಾಸಾಯನಿಕ ಗೊಬ್ಬರ, ಕಳೆನಾಶಕ, ಕ್ರಿಮಿನಾಶಕ ಉತ್ಪಾದಿಸು ವವನು, ಮಾರುವವನು, ಕೊಳ್ಳುವವನು... ಹೀಗೆ ಈ ಎಲ್ಲರನ್ನೂ ಸೇರಿಸಿಕೊಳ್ಳುತ್ತೇವೆ. ಯಾಕೆಂದರೆ ರಾಸಾಯನಿಕ ಗಳನ್ನು ಉತ್ಪಾದಿಸುವ ಕಾರ್ಖಾನೆ ಮಾಲೀಕನಿಗೂ ಕೂಡ ವಿಷಮುಕ್ತ ಅನ್ನ, ವಿಷಮುಕ್ತ ಗಾಳಿ, ವಿಷಮುಕ್ತ ಪರಿಸರ ಬೇಕಾಗಿದೆ. ನಮ್ಮ ನಿರ್ಮಿತಿ, ನಮ್ಮ ಉತ್ಪನ್ನ ಶ್ರೇಷ್ಠ ದರ್ಜೆಗೆ ಏರಿದಂತೆಲ್ಲ ಸಹಜವಾಗಿ ಅವನು ಇವತ್ತಲ್ಲ, ನಾಳೆ ನಮ್ಮ ಆಂದೋಲನದೊಂದಿಗೆ ಕೈ ಜೋಡಿಸಿ ನಿಲ್ಲಲೇಬೇಕಾಗುತ್ತದೆ. ಅವತ್ತಿಗೆ ಆತ ರಾಸಾಯನಿಕ ವಿಷವಸ್ತುಗಳನ್ನು ಉತ್ಪಾದಿಸುವ ಕಾರ್ಖಾನೆಗೆ ಮಾಲೀಕನಾಗಿರುವುದಿಲ್ಲ. ಬದಲಿಗೆ ತಾಜಾ ಹಣ್ಣು, ತರಕಾರಿಗಳನ್ನು ಬೆಳೆಯುವ ಸ್ವಾವಲಂಬಿ ರೈತನಾಗಿರುತ್ತಾನೆ.

ದೇಶಿ ಆಕಳ ಸಗಣಿ ಮತ್ತು ಗಂಜಳ ಇಷ್ಟು ಮಾತ್ರದಿಂದಲೇ ನಾವು ಜಾಗತಿಕ ಮಟ್ಟದ ಕ್ರಾಂತಿ ಮಾಡಬಹುದು. ಈ ಕ್ರಾಂತಿ ರೂಪುರೇಷೆ–ಅಹಿಂಸಾತ್ಮಕ. ಈ ಕ್ರಾಂತಿಗಿರುವ ಜಾಗತಿಕ ಹೆಸರು 'ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿ ಕ್ರಾಂತಿ'. ಎಲ್ಲ ಬಗೆಯ ವಯೋಮಾನದವರು, ಎಲ್ಲ ಬಗೆಯ ಜಾತಿ, ಧರ್ಮ, ಭಾಷೆ, ಸಂಸ್ಕೃತಿಯ ಜನರೂ ಇದರಲ್ಲಿ ಪಾಲ್ಗೊಳ್ಳಬಹುದು. ಪೇಟೆಯಿಂದ ಏನನ್ನೂ ಖರೀದಿಸದಿರುವುದು ಈ ಕ್ರಾಂತಿಯ ಮೊಟ್ಟಮೊದಲ ನಿಯಮ, ಬೀಜ, ಗೊಬ್ಬರ, ಕ್ರಿಮಿನಾಶಕ ಈ ಯಾವುದನ್ನೂ ನೀವು ಪೇಟೆಯಿಂದ ಖರೀದಿಸಕೂಡದು. ಹಾಗೆಯೇ ವಿದ್ಯುತ್ ಕೂಡ.

ಮಿತ್ರರೆ, ಇಡೀ ವಿಶ್ವದ ವ್ಯಾಪಾರ ವಹಿವಾಟುಗಳನ್ನು ಬಹುರಾಷ್ಟ್ರೀಯ ಕಂಪನಿಗಳ ಮೂಲಕ ಅಮೆರಿಕಾ ನಿಯಂತ್ರಿಸುತ್ತಿದೆ. ಜಾಗತೀಕರಣಗೊಳಿಸುವಂಥ ಆಡಳಿತ ವ್ಯವಸ್ಥೆ ಹೊಂದಿರುವ ಅಮೇರಿಕದಂಥ ದೇಶಗಳೊಂದಿಗೆ ನಮ್ಮಂಥ ಅನೇಕ ದೇಶಗಳು ಹೊಂದಿಕೊಂಡು ಹೋಗಲೇಬೇಕಾದಂಥ ಸ್ಥಿತಿ ನಿರ್ಮಾಣವಾಗಿದೆ. ಇಡೀ ಜಗತ್ತಿನ ಸೇನೆ, ಸಂಪತ್ತು ಇಂದು ಅಮೆರಿಕಾ ಬಳಿ ಇದೆ. ಅಮೆರಿಕಾವನ್ನು ಪ್ರತಿಭಟಿಸಿದ ಇರಾಕ್ ಪರಿಸ್ಥಿತಿ ಏನಾಯಿತು ? ಅಮೆರಿಕಾದ ಅಂತಹ ಸೇನೆ, ಸಂಪತ್ತಿನ ಮದವನ್ನು ಕಂಗೆಡಿಸುವ ದಾರಿ ಸರಳವಾಗಿದೆ. ಅವರ ಬಳಿ ಕೋಟ್ಯಾನುಕೋಟಿ ರೂ. ಬೆಲೆಬಾಳುವ ಕ್ಷಿಪಣಿಗಳಿರಬಹುದು. ನಮ್ಮ ಬಳಿ ಅವರಲ್ಲಿಲ್ಲದ ಅದ್ಭುತ ಶಕ್ತಿಯ ಕ್ಷಿಪಣಿ ಇದೆ. ಅದು ಸ್ವಾವಲಂಬನೆ. ದೇಶಿ ಆಕಳ ಸಗಣಿ ಮತ್ತು ಗಂಜಳ ಇಷ್ಟು ಮಾತ್ರದಿಂದಲೇ ನಾವು ಜಾಗತಿಕ ಮಟ್ಟದ ಕ್ರಾಂತಿ ಮಾಡಬಹುದು. ಈ ಕ್ರಾಂತಿ ರೂಪುರೇಷೆ– ಅಹಿಂಸಾತ್ಮಕ. ಈ ಕ್ರಾಂತಿಗಿರುವ ಜಾಗತಿಕ ಹೆಸರು 'ಶೂನ್ಯ ಬಂಡವಾಳದ ನೈಸರ್ಗಿಕ ಕೃಷಿ ಕ್ರಾಂತಿ'. ಎಲ್ಲ ಬಗೆಯ ವಯೋಮಾನದವರು, ಎಲ್ಲ ಬಗೆಯ ಜಾತಿ, ಧರ್ಮ, ಭಾಷೆ, ಸಂಸ್ಕೃತಿಯ ಜನರೂ ಇದರಲ್ಲಿ ಪಾಲ್ಗೊಳ್ಳಬಹುದು. ಪೇಟೆಯಿಂದ ಏನನ್ನೂ ಖರೀದಿಸದಿರುವುದು ಈ ಕ್ರಾಂತಿಯ ಮೊಟ್ಟಮೊದಲ ನಿಯಮ, ಬೀಜ, ಗೊಬ್ಬರ, ಕ್ರಿಮಿನಾಶಕ ಈ ಯಾವುದನ್ನೂ ನೀವು ಪೇಟೆಯಿಂದ ಖರೀದಿಸಕೂಡದು. ಹಾಗೆಯೇ ವಿದ್ಯುತ್ ಕೂಡ. ಮಹಾರಾಷ್ಟ್ರದ ನೈಸರ್ಗಿಕ ಕೃಷಿಕರು ತಮಗೆ ಬೇಕಾದ ವಿದ್ಯುತ್ ಅನ್ನು ತಾವೇ ಉತ್ಪತ್ತಿ ಮಾಡಿಕೊಳ್ಳುತ್ತಾರೆ. ನಮ್ಮ ಜೀವನಾವಶ್ಯಕ ವಸ್ತುಗಳನ್ನೆಲ್ಲ ನಾವೇ ನಿರ್ಮಿಸೋಣ. ಪೂರ್ಣ ಮಟ್ಟದಲ್ಲಿ ಸ್ವಾವಲಂಬಿಗಳಾಗೋಣ.

ಮುಂಬೈನಲ್ಲಿ ನಾನು ಭಾಗವಹಿಸಿದ್ದ ಸಮ್ಮೇಳನವೊಂದರಲ್ಲಿ ದೆಹಲಿಯ ವಿಖ್ಯಾತ ಸಮಾಜವಾದಿ ಗೆಳೆಯರೊಬ್ಬರು ಭಾಗವಹಿಸಿದ್ದರು. ಅವರು ಜಾಗತೀಕರಣದ ವಿರುದ್ಧ, ಶೋಷಣೆಯ ವಿರುದ್ಧ ದೊಡ್ಡ ದೊಡ್ಡ ಪದ ಬಳಸಿ ಭಾಷಣ ಮಾಡಿದರು. ಸಭೆಯ ನಂತರ ಇಬ್ಬರಿಗೂ ಒಂದೆಡೆಯೇ ವಸತಿ ವ್ಯವಸ್ಥೆ ಕಲ್ಪಿಸಲಾಗಿತ್ತು. ಅವರು ಮಾತಾಡಿದ್ದೆಲ್ಲ ಜಾಗತೀಕರಣದ ವಿರುದ್ಧ, ಆದರೆ ಸೇದುತ್ತಿದ್ದುದು ವಿದೇಶಿ ಸಿಗರೇಟು, ತೊಡುವ ಬಟ್ಟೆ ವಿದೇಶಿ, ಕಾಲಿಗೆ ಮೆಟ್ಟುವ ಚಪ್ಪಲಿ ವಿದೇಶಿ. ಕಡೆಗೆ ಶೇವ್ ಮಾಡಿಕೊಳ್ಳುವ ಬ್ಲೇಡ್ ಕೂಡ ವಿದೇಶಿಯದೆ. ಇಂಥವರು ಎಷ್ಟೇ ವಿರೋಧಿಸಿದರೂ, ಪ್ರತಿಭಟಿಸಿದರೂ ಅಮೇರಿಕಾದ ರೋಮ ಕೊಂಕಿಸಲಾಗುವುದಿಲ್ಲ. ನಿರ್ಮಿತಿಯ ಸೊಬಗೇ ತಿಳಿಯದ ಇಂಥವರು ಕಡೆಗೆ ವಿಷಾದದಲ್ಲಿ, ಹತಾಶೆಯಲ್ಲಿ, ದುಗುಡಗಳಲ್ಲಿ ಕಳೆದುಹೋಗುತ್ತಾರೆ.

ಆದ್ದರಿಂದ ಮಿತ್ರರೆ, ಬದಲಾವಣೆ ಎಂಬುದು ಮಾತುಗಳಲ್ಲಿ, ನುಡಿಗಟ್ಟುಗಳಲ್ಲಿ ಆದರೆ ಸಾಲದು. ಅದು ಅಮೂಲಾಗ್ರವಾಗಿ ಆಗಬೇಕು. ಆ ಬದಲಾವಣೆಯ ಪರಿಮಳ ಜಗದ್ ವ್ಯಾಪಿ ವಿಸ್ತರಿಸಬೇಕು. ನೈಸರ್ಗಿಕ ಕೃಷಿಯಲ್ಲಿ ಆಗುವ ಕ್ರಾಂತಿಗೆ ಒಂದು ವಿಶಿಷ್ಟ ಬಗೆಯ ನಾದ, ಲಯ ವಿನ್ಯಾಸಗಳೆಲ್ಲ ಪ್ರಾಪ್ತವಾಗುತ್ತವೆ. ಆ ನಾದ, ಲಯ ವಿನ್ಯಾಸಗಳು ನಿಮ್ಮ ನಿಮ್ಮ ಬಾಳುವೆಗಳಿಗೂ ಹರಿದುಬರಲಿ. ನಿರ್ಮಿತಿಯ ಪರಿಶ್ರಮ ನಿಮ್ಮದೇ ಆಗಿರುವುದರಿಂದ ಅದು ಸೂಸುವ ಗಂಧ ಹೆಚ್ಚು ಆಪ್ತವಾಗಿರುತ್ತದೆ. ನಿರ್ಮಿತಿಯ ಧನ್ಯತೆ ನಿಮ್ಮ ಜೀವನಕ್ಕೆ ಅಪಾರ ಬೆಲೆಯನ್ನು, ಗೌರವವನ್ನು, ಘನತೆಯನ್ನು ತಂದುಕೊಡುತ್ತದೆ.

ಬರುವ ಮಾನ್ಸೂನ್ ದಿನಗಳಿಗಾಗಿ ಬಹಳ ಹೊತ್ತು ಕಾಯಬೇಕಾಗಿಲ್ಲ. ನಾನೂ ಈ ಮೂರು ದಿನ ಹೇಳಿದ್ದೆಲ್ಲ ನಿಮ್ಮ ನೆನಪಲ್ಲಿರಲಿ, ಈಗಲೇ ಬೀಜಗಳನ್ನು ಅಣಿಮಾಡಿಕೊಳ್ಳಿರಿ. ನಿಮ್ಮ ನಡುವೆ ತ್ರಿಶೂಲ ಹಿಡಿದು ಓಡಾಡುವ ತಾಕತ್ತುಳ್ಳ ಹುಡುಗರನ್ನೆಲ್ಲ ಕರೆಯಿರಿ. ಅವರಿಗೂ ಅವರ ಬೊಗಸೆ ತುಂಬಾ ಬೀಜಗಳನ್ನು ತುಂಬಿ ನಿಸರ್ಗ ಕೃಷಿ ಹೇಳಿಕೊಡಿ. ಸೃಷ್ಟಿಯ ಅನಂತಾನಂತ ಸಾಧ್ಯತೆಗಳ ಬೆರಗು ಅವರೆದೆಗೂ ಇಳಿಯಲಿ. ನಿಸರ್ಗದ ಆಹ್ಲಾದ, ಸೊಬಗು, ಮಾರ್ದವತೆ, ಬಣ್ಣ, ಬಿನ್ನಾಣ, ಕಲರವಾದಿಗಳೆಲ್ಲ ಅವರನ್ನೂ ಸುತ್ತುವರಿಯಲಿ.

ಇಷ್ಟು ಹೇಳಿ ಸದ್ದಿಲ್ಲದ ಕ್ರಾಂತಿಗೆ ನಾಂದಿ ಹಾಡಿ ಹೋಗಿದ್ದಾರೆ ಪಾಳೇಕರ್ ! □

ಶೂನ್ಯ ಬಂಡವಾಳ - ಸಮೃದ್ಧ ಬೆಳೆ

ವಿಶ್ಲೇಷಣೆ

ಜಾಗತೀಕರಣ ಉದಾರೀಕರಣದಿಂದ ವಿಭಿನ್ನ ಸಮುದಾಯ ಗಳ ಮನಸ್ಸೆಲ್ಲ ಕಾಂಚಾಣಮಯವಾಗಿ ನಿಲ್ಲುವ ಕಾಲವಿದು. ಇದನ್ನರಿತು ಮರೆತು ಹಾಗೇ ಬಿಟ್ಟರೆ, ಮನುಷ್ಯ ಸಂಬಂಧಗಳು ಕ್ಷೀಣಿಸುತ್ತ ಹೋಗುತ್ತವೆ. ಮನಸ್ಸುಗಳು ಕಲ್ಲಾಗುತ್ತವೆ. ಭಾವ ಜಗತ್ತು ಸತ್ತು, ಮನುಷ್ಯನ ನೆಮ್ಮದಿ, ಶಾಂತಿಯ ಬದುಕು ಕಳೆದುಹೋಗುವ ಸ್ಥಿತಿಗೆ ಬಂದು ನಿಲ್ಲುತ್ತದೆ. ಕಿವಿ–ಕಣ್ಣುಗಳು ಹಣದ ಸದ್ದಿಗೆ ಸುಟ್ಟು ಸುಣ್ಣವಾಗುವ ಕಾಲಕ್ಕೆ ಆಹ್ವಾನವಿದ್ದಂತೆ, ಹಣವೆಂಬ ಬಿಸಿಲ್ಗುದುರೆಗೆ ಬೆನ್ನು ಹತ್ತಿದ ಮನಸ್ಸು ಅರಿತೋ ಅರಿಯದೆಯೋ ಭೌತ ಜಗತ್ತನ್ನು ಬೆಳೆಸುತ್ತದೆ.

○ ಡಾ|| ಅರವಿಂದ ಮಾಲಗತ್ತಿ

ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣ ಇಂದು ನಮ್ಮ ದೇಶದಲ್ಲಿ ಭರದಿಂದ ಸಾಗುತ್ತಿದೆ. ಒಂದು ದೇಶದಲ್ಲಿ ಯುದ್ಧ ನಡೆದರೆ, ಆ ಯುದ್ಧದ ಪರಿಣಾಮದಿಂದಾಗಿ ಯುದ್ಧ ನಡೆದಲ್ಲಿಯ ಜಾನಪದವೆಲ್ಲ ಸರ್ವನಾಶವಾಗಿ ಹೋಗುತ್ತದೆ. ಆದರೆ ಈ ಉದಾರೀಕರಣದ ನೀತಿ ಯುದ್ಧಕ್ಕಿಂತಲೂ ಭಯಾನಕವಾದುದು. ಯುದ್ಧದಿಂದ, ಯುದ್ಧ ನಡೆದಲ್ಲಿ ಮಾತ್ರ ಜಾನಪದ/ಸಂಸ್ಕೃತಿ ನಾಶವಾದರೆ, ಈ ಜಾಗತೀಕರಣದ ನೀತಿಯಿಂದಾಗಿ ಸಂಸ್ಕೃತಿಯು ನಾಶವಾಗಬಹುದು ಎನಿಸುತ್ತದೆ. ಹೀಗಾಗಿ ಇದು ಸಂಸ್ಕೃತಿಯ ಸಾವಿನ ಕಾಲ. ಇದರರ್ಥ ಎಲ್ಲವೂ ಸರ್ವನಾಶವಾಗಿ ಹೋಗುತ್ತದೆಂದಲ್ಲ. ಹಾವು ಪೊರೆಬಿಟ್ಟಂತೆ! ಪುನರ್‌ಸೃಷ್ಟಿಯ ಕ್ರಿಯೆಯಲ್ಲಿ ಎಲ್ಲದಕ್ಕೂ ಜೀವವಿರುವುದರಿಂದ ಎಲ್ಲವೂ ಸಾಯುವುದಿಲ್ಲ. ಇದನ್ನೇ ಸರಳವಾಗಿ ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ಇದು ಸಂಸ್ಕೃತಿಯ ಸಾವಿನ ಕಾಲ ಅಥವಾ ವಿಘಟನೆಯ ಕಾಲ ಎನ್ನುವ ಎಚ್ಚರ ನಮ್ಮಲ್ಲಿ ಇದ್ದುದೇ ಆದರೆ, ಅದು ಸಂಸ್ಕೃತಿಯ ಪುನರ್ ಸಂಘಟಿತ ಕಾಲವಾಗಿ ಅಥವಾ ಮರುಹುಟ್ಟಿನ ಕಾಲವಾಗಿ ಪರಿವರ್ತಿಸಬಹುದು.

ಸಂಸ್ಕೃತಿ ಸಮಾಜೋಧರ್ಮ ಮುಖಿಯಾದುದು. ಜಾಗತೀಕರಣ ಮತ್ತು ಉದಾರೀಕರಣದ ನೆಲೆ ಅರ್ಥಮುಖಿ (Money) ಯಾದುದು. ಇಲ್ಲಿ ಬುದ್ಧಿ ಮತ್ತು ವಸ್ತುವಿಗೆ (Material) ಮಹತ್ವವಿದ್ದರೆ, ಜಾನಪದದಲ್ಲಿ ಭಾವ ಮತ್ತು ಅರ್ಥಕ್ಕೆ (Meaning) ಹೆಚ್ಚು ಮಹತ್ವವಿರುತ್ತದೆ. ಅಭಿವೃದ್ಧಿ ಹೊಂದುತ್ತಿರುವ ಭಾರತದಂತಹ ದೇಶದಲ್ಲಿ ಜಾಗತೀಕರಣ ಮತ್ತು ಉದಾರೀಕರಣ, ಖಾಸಗೀಕರಣದ ಪ್ರವೇಶದಿಂದಾಗಿ ಮೂಲದ ವ್ಯವಸ್ಥೆಯಲ್ಲಿ ಬದಲಾವಣೆಗಳಾಗುತ್ತವೆ. ಇದರಲ್ಲಿ ಯಾವುದು ಸ್ವೀಕಾರಕ್ಕೆ ಅರ್ಹ, ಯಾವುದು ಸ್ವೀಕಾರಕ್ಕೆ ಅರ್ಹವಲ್ಲ ಎನ್ನುವುದರ ಸ್ಪಷ್ಟತೆ ನಮಗಿರಬೇಕು. ಹೀಗಾದಾಗ ಈ ಸಂಸ್ಕೃತಿಯ ಸಂರಕ್ಷಣೆಯೇ ಬದಲಾಯಿಸುವ ಕಾಲವಾಗುತ್ತದೆ. ಇಂಥ ಸಂದರ್ಭದಲ್ಲಿ ಸಾಮಾಜಿಕ ಸಂರಚನೆಗೆ ತಕ್ಕಂತೆ ಎಲ್ಲದರಲ್ಲಿಯೂ ಬದಲಾವಣೆಗಳಗುತ್ತವೆ. ಆಗ ಸಾಮಾಜಿಕ ಸಂರಚನೆಗೆ ತಕ್ಕಂತೆ ನಮ್ಮಲ್ಲಿಯೂ ಬದಲಾವಣೆ ಅಗತ್ಯ ಎನ್ನುವುದರ ಅರಿವು ನಮಗಿರಬೇಕು. ಈ ಸಂದರ್ಭದಲ್ಲಿ ಸಂಸ್ಕೃತಿ ವಿಘಟಿತವಾಗಿ ಮತ್ತೆ ಅದಕ್ಕೆ ಕೆಲ ಹೊಸ ಅಂಶಗಳನ್ನು ಸೇರಿಸಿಕೊಳ್ಳುತ್ತ ಸಂಘಟಿತವಾಗುತ್ತ, ಈ ಜೀವಜಲ ಎತ್ತೆತ್ತಲೋ ಹರಿದು ಹೋಗುವ ಸಂದರ್ಭದಲ್ಲಿ, ಈ ಪ್ರಕ್ರಿಯೆ ಕುರಿತು ನಮ್ಮಲ್ಲಿ ಎಚ್ಚರ ಇದ್ದುದೇ ಆದರೆ ಚದುರಿ ಬತ್ತಿಹೋಗುವ ನೀರಿಗೆ ಸರಿಯಾದ ದಿಕ್ಕು ತೋರಿಸಬಹುದು. ದಿಕ್ಕು ತೋರಿಸುವುದಕ್ಕೆ ಮಂತ್ರದಂಡದಂತೆ ಕೆಲಸ ಮಾಡಬಲ್ಲ ಸಾಮರ್ಥ್ಯ ಭಾರತೀಯ ಸಂಸ್ಕೃತಿಗಿದೆ !

ಜಾಗತೀಕರಣ ಉದಾರೀಕರಣದಿಂದ ವಿಭಿನ್ನ ಸಮುದಾಯಗಳ ಮನಸ್ಸೆಲ್ಲ ಕಾಂಚಾಣಮಯವಾಗಿ ನಿಲ್ಲುವ ಕಾಲವಿದು. ಇದನ್ನರಿತು ಮರೆತು ಹಾಗೇ ಬಿಟ್ಟರೆ, ಮನುಷ್ಯ ಸಂಬಂಧಗಳು ಕ್ಷೀಣಿಸುತ್ತ ಹೋಗುತ್ತವೆ. ಮನಸ್ಸುಗಳು ಕಲ್ಲಾಗುತ್ತವೆ. ಭಾವ ಜಗತ್ತು ಸತ್ತು, ಮನುಷ್ಯನ ನೆಮ್ಮದಿ, ಶಾಂತಿಯ ಬದುಕು ಕಳೆದುಹೋಗುವ ಸ್ಥಿತಿಗೆ ಬಂದು ನಿಲ್ಲುತ್ತದೆ. ಕಿವಿ–ಕಣ್ಣುಗಳು ಹಣದ ಸದ್ದಿಗೆ ಸುಟ್ಟು ಸುಣ್ಣವಾಗುವ ಕಾಲಕ್ಕೆ ಆಹ್ವಾನವಿದ್ದಂತೆ, ಹಣವೆಂಬ ಬಿಸಿಲ್ಗುದುರೆಗೆ ಬೆನ್ನು ಹತ್ತಿದ ಮನಸ್ಸು ಅರಿತೋ ಅರಿಯದೆಯೋ ಭೌತ ಜಗತ್ತನ್ನು ಬೆಳೆಸುತ್ತದೆ. ಆದರೆ ಅಭೌತ ಜಗತ್ತಿನೆಡೆಗೆ ಇದು ಕೈಚಾಚದು. ಏಕೆಂದರೆ ಇಲ್ಲಿ ಆರ್ಥಿಕ ಲಾಭವಿಲ್ಲದಿರುವುದೇ ಆಗಿದೆ. ಆಗ ಅಭೌತ ಜಗತ್ತು ಊನವಾಗಿಬಿಡುತ್ತದೆ. ಇದರಿಂದಾಗಿ ಭೌತ ಮತ್ತು ಅಭೌತ ಜಗತ್ತಿನಲ್ಲಿ ಅಸಮತೋಲನ ಉಂಟಾಗುತ್ತದೆ. ಈ ಅಸಮತೋಲನವು ಬರದಂತೆ ಕಾಪಾಡಿಕೊಳ್ಳುವ ಎಚ್ಚರ ನಮಗೆ ಅಗತ್ಯವಾಗಿದೆ. ಈ ಸಮತೋಲನಕ್ಕೆ ಸರಿಯಾದ ಮದ್ದೇ ಸೃಜನ ಜಾನಪದದೆಡೆಗೆ ಅಥವಾ ಸೃಜನ ಸಂಸ್ಕೃತಿಯೆಡೆಗೆ ಮುಖ ಮಾಡುವುದು ಎಂದರ್ಥ. ಇದರಿಂದಾಗಿ ಅರ್ಥ ಪ್ರಪಂಚದೊಂದಿಗೆ ಭಾವಪ್ರಪಂಚವನ್ನು ಸಾಂಸ್ಕೃತಿಕ ನೆಲೆಯಿಂದ ಬೆಳೆಸಿದಂತಾಗುತ್ತದೆ.

ಭೌತಕ್ಕೆ ಸಂಬಂಧಿಸಿದಂತೆ ಕುಂಬಾರಿಕೆ ವಸ್ತುಗಳು ಬಡಿಗತನದ ವಸ್ತುಗಳು ಕೈಮಗ್ಗದ ವಸ್ತು ಕಲಾತ್ಮಕ ವಸ್ತುಗಳಾಗಿ ಇಂದು ಹೊಸ

ಜಾಗತೀಕರಣ ಮತ್ತು ದೇಶೀದಂಗೆ

ಆವಿಷ್ಕಾರವನ್ನು ಪಡೆಯುತ್ತಿವೆ. ಕುಂಬಾರನ ಗಡಿಗೆಯಂಥವು ಮೊದಲು ದಿನನಿತ್ಯದ ಅತ್ಯಾವಶ್ಯಕ ವಸ್ತುಗಳಾಗಿ ಬಳಕೆಯಾಗುತ್ತಿದ್ದವು. ಈ ಉದಾರೀಕರಣ ಮತ್ತು ಜಾಗತೀಕರಣದ ಹಿನ್ನೆಲೆಯಲ್ಲಿ ಇವುಗಳಿಗೆ ಹೆಚ್ಚು ಮಹತ್ವ ದೊರೆತು ಹೊಸ ವೇಷ ತೊಟ್ಟು ಹೊರಬರುತ್ತಿದೆ. ಇಂದಿನ ಸಂದರ್ಭದಲ್ಲಿ ಇದು ಅನಿವಾರ್ಯ. ನಾವು ಬಯಸದಿದ್ದರೂ ಅರ್ಥಮುಖಿಯಾದ ಈ ವ್ಯವಸ್ಥೆಯಲ್ಲಿ ನಮಗರಿವಿಲ್ಲದಂತೆ ಇಂಥವು ಪುನರ್ ಜೀವನವನ್ನು ಪಡೆದುಕೊಳ್ಳುತ್ತವೆ. ಹೀಗೆಯೇ ಸಾಹಿತ್ಯ, ಸಂಗೀತ, ನೃತ್ಯ, ಕಲೆ ಇವುಗಳಲ್ಲಿಯೂ ಬದಲಾವಣೆ ತಂದುಕೊಳ್ಳುವ ಅಗತ್ಯವಿದೆ. ಇಲ್ಲದೆ ಹೋದಲ್ಲಿ ಅವು ನಿರ್ಜೀವವಾಗಿ ಬಿಡುತ್ತವೆ. ಅಲ್ಲದೆ ಅನ್ಯ ಸಂಸ್ಕೃತಿ ಸಂಗತಿಗಳು ನಮ್ಮ ಮೇಲೆ ಸವಾರಿ ಮಾಡುವುದರೊಂದಿಗೆ ನಮಗರಿಯದಂತೆ ನಮ್ಮನ್ನೇ ಬೌದ್ಧಿಕ ದಾಸರನ್ನಾಗಿಸುತ್ತವೆ.

ಜಾಗತೀಕರಣ : ಗ್ರಹಿಕೆ ವಿರೋಧಾಭಾಸಗಳು

ಜಾಗತೀಕರಣವನ್ನು ಒಪ್ಪುವುದು ಎಂದರೆ, ಏಕಸ್ವಾಮ್ಯದ ಜಾಗತಿಕ ಪ್ರಭುತ್ವವನ್ನು ಒಪ್ಪುವುದು ಎಂದು ಅರ್ಥ – 'ಜಾಗತಿಕ ಪ್ರಭುತ್ವದ ಪ್ರಜ್ಞೆ'ಯುಳ್ಳ ರಾಷ್ಟ್ರಗಳಿಗೆ ಜಾಗತೀಕರಣ ಎನ್ನುವುದೊಂದು ಮಂತ್ರವಾಗಿದೆ. ಈ ಮಂತ್ರವನ್ನು ಅಸ್ತ್ರವನ್ನಾಗಿ ಹೊಂದಿದ ರಾಷ್ಟ್ರಗಳಿಗೆ ಮಾತ್ರ ಈ ಪ್ರಜ್ಞೆ ಇದೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಈ ಪ್ರಜ್ಞೆಯಿಂದ ಅತೀತವಾಗಿದೆ. ಸಿಕ್ಕದ ದ್ರಾಕ್ಷಿಗೆ 'ಹುಳಿ' ಎಂದು ಹಿಂಜರಿಯುವ ಸ್ವರೂಪದ್ದು. ಅಭಿವೃದ್ಧಿ ಹೊಂದುತ್ತಿರುವ ತೃತೀಯ ಜಗತ್ತಿನ ರಾಷ್ಟ್ರಗಳು ಜಾಗತಿಕವಾಗುವುದಕ್ಕೆ ಕ್ಯೂ ನಿಲ್ಲುವ ಸ್ವರೂಪವೇ ವಿನಃ ಪ್ರಭುತ್ವದ ಪರಿಕಲ್ಪನೆಯನ್ನು ಅರಿಯದ ಭೌತಿಕ ಜೀವನಾನುಭವದಲ್ಲಿ ಭವಿಯಾಗಿ ಬದುಕುವ ಸ್ವರೂಪದವುಗಳಾಗುತ್ತವೆ. ಇಂಥ ರಾಷ್ಟ್ರಗಳು ಬೇಡುವುದರಲ್ಲಿ ತೃಪ್ತಿ ಹೊಂದುತ್ತವೆಯೇ ವಿನಃ ಇವುಗಳಿಗೆ ಪ್ರಭುತ್ವದ ಆಸೆ ಇರುವುದಿಲ್ಲ. ಇವು ಸಿಕ್ಕ ಸಂದರ್ಭದ ಲಾಭ ಪಡೆಯಲು ಹೋಗಿ ತನ್ನ ಬಲೆಯಲ್ಲಿ ತಾನೇ ಸಿಕ್ಕು ಸಾಯುವ ಜೇಡನ ಸ್ವರೂಪದ ಮಾರ್ಗವನ್ನು ಅರಿತು ಅರಿಯದೆ ಅನುಸರಿಸುತ್ತವೆ.

ತೃತೀಯ ಜಗತ್ತಿನ ರಾಷ್ಟ್ರಗಳು, ಪ್ರಭುತ್ವವಾದಿ ರಾಷ್ಟ್ರಗಳಲ್ಲಿ ಶರಗೊಡುವ ಬಗೆಯೇ? ಎಂದು ಪ್ರಶ್ನಿಸಿಕೊಂಡರೆ ತಮ್ಮ ಸ್ವಾವಲಂಬಿ ಜೀವನದ ಸ್ಥಿತಿಯನ್ನು ಮರೆತು ಅಭಿವೃದ್ಧಿ ಹೊಂದಿದ ಪ್ರಭುತ್ವವಾದಿ ರಾಷ್ಟ್ರದ ಜೀವನ ಕ್ರಮವನ್ನು ಅನುಸರಿಸಲು ಮುಂದಾಗುವುದೇ ಪ್ರಧಾನ ಕಾರಣವಾಗಿದೆ. ಹೊಟ್ಟೆಗೆ ಅನ್ನವಿಲ್ಲದವ ವಿಮಾನಯಾನಕ್ಕಾಗಿ ಕ್ಯೂ ನಿಂತಂತೆ ! ಆರ್ಥಿಕವಾಗಿ ದುರ್ಬಲವಾದ ಈ ರಾಷ್ಟ್ರಗಳು ಪ್ರಭುತ್ವವಾದಿ ರಾಷ್ಟ್ರದ ಜೀವನಕ್ರಮವನ್ನು ಅನುಸರಿಸಲು ಹೋಗಿ ಪೆಟ್ಟು ತಿನ್ನುವುದೇ ಆಗಿದೆ. ಈ ಪೆಟ್ಟಿನ ಪರಿಣಾಮದಿಂದಾಗಿಯೇ ಸಾಂಸ್ಕೃತಿಕ ರಾಜಕಾರಣಕ್ಕೆ ಮೊರೆಹೋಗಬೇಕಾದ ಸ್ಥಿತಿ ನಿರ್ಮಾಣವಾಗುತ್ತದೆ. ಈ ಪೆಟ್ಟು ತಿನ್ನುವ ಪರಿಕಲ್ಪನೆಗಳು ತೀರ ಭಿನ್ನವಾಗಿದ್ದು ಆಯಾ ದೇಶದ ಸ್ಥಳೀಯ ಸಮಸ್ಯೆಯೊಂದಿಗೆ ಅವು ಎದ್ದು ನಿಲ್ಲುತ್ತವೆ. ಹೀಗಾಗಿ ಆರ್ಥಿಕವಾಗಿ ದುರ್ಬಲವಾದ ರಾಷ್ಟ್ರಗಳು ಸಾಂಸ್ಕೃತಿಕ ರಾಜಕಾರಣವನ್ನೇ ಬಂಡವಾಳವನ್ನಾಗಿಸಿಕೊಳ್ಳುತ್ತವೆ. ಬಡವನ ಕೋಪ ದವಡೆಗೆ ಮೂಲ ಎನ್ನುವ ಹಾಗೆ ತೃತೀಯ ಜಗತ್ತಿನ ರಾಷ್ಟ್ರಗಳು ಪರಸ್ಪರ ಹೋರಾಡುತ್ತವೆ. ವಾಲಿ–ಸುಗ್ರೀವರ ಕದನದಲ್ಲಿ ರಾಮ ಬರುವಂತೆ ಪ್ರಭುತ್ವವಾದಿ ರಾಷ್ಟ್ರ ನಡುವೆ ಪ್ರವೇಶ ಮಾಡುತ್ತದೆ. ತನಗೆ ಬೇಕಾದವನ ಕಡೆಗೆ ನಿಂದು ಗೆಲ್ಲುತ್ತದೆ/ಗೆಲ್ಲಿಸುತ್ತದೆ. ಹೀಗಾಗಿ ಇಂಥ ಸ್ಥಿತಿಯಲ್ಲಿ ತೃತೀಯ

'ಜಾಗತಿಕ ಪ್ರಭುತ್ವದ ಪ್ರಜ್ಞೆ'ಯುಳ್ಳ ರಾಷ್ಟ್ರಗಳಿಗೆ ಜಾಗತೀಕರಣ ಎನ್ನುವುದೊಂದು ಮಂತ್ರವಾಗಿದೆ. ಈ ಮಂತ್ರವನ್ನು ಅಸ್ತ್ರವನ್ನಾಗಿ ಹೊಂದಿದ ರಾಷ್ಟ್ರಗಳಿಗೆ ಮಾತ್ರ ಈ ಪ್ರಜ್ಞೆ ಇದೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಈ ಪ್ರಜ್ಞೆಯಿಂದ ಅತೀತವಾಗಿದೆ. ಸಿಕ್ಕದ ದ್ರಾಕ್ಷಿಗೆ 'ಹುಳಿ' ಎಂದು ಹಿಂಜರಿಯುವ ಸ್ವರೂಪದ್ದು. ಅಭಿವೃದ್ಧಿ ಹೊಂದುತ್ತಿರುವ ತೃತೀಯ ಜಗತ್ತಿನ ರಾಷ್ಟ್ರಗಳು ಜಾಗತಿಕವಾಗುವುದಕ್ಕೆ ಕ್ಯೂ ನಿಲ್ಲುವ ಸ್ವರೂಪವೇ ವಿನಃ ಪ್ರಭುತ್ವದ ಪರಿಕಲ್ಪನೆಯನ್ನು ಅರಿಯದ ಭೌತಿಕ ಜೀವನಾನುಭವದಲ್ಲಿ ಭವಿಯಾಗಿ ಬದುಕುವ ಸ್ವರೂಪದವುಗಳಾಗುತ್ತವೆ.

ಜಗತ್ತಿನ ರಾಷ್ಟ್ರಗಳು 'ಸಾಂಸ್ಕೃತಿಕ ರಾಜಕಾರಣ' ಮತ್ತು 'ಸಾಂಸ್ಕೃತಿಕ ಜಾಗತೀಕರಣ'ವನ್ನು ನೆಚ್ಚುವುದು ಅನಿವಾರ್ಯವಾಗುತ್ತದೆ.

ಜಾಗತಿಕ ಪ್ರಭುತ್ವವಾದಿ ರಾಷ್ಟ್ರಗಳು ಕೇವಲ ಆರ್ಥಿಕ ಬೆಳವಣಿಗೆಯೇ ಮಹತ್ವದ್ದೆಂದು ನಂಬುತ್ತವೆ. ಹಾಯಗಾರಿಕೆಯನ್ನು ನೆಚ್ಚದೇ ಏಕಪ್ರಕಾರವಾಗಿ ಬೆಳೆಸಬೇಕು ಎಂದು ಸಾರುತ್ತವೆ ಎಂದರೆ ಇದರ ಚಿಂತನೆ ಅಧೋಮುಖಿ ಚಲನೆಯ ಸ್ವರೂಪದ್ದು. ಆದರೆ ತೃತೀಯ ಜಗತ್ತಿನ ರಾಷ್ಟ್ರಗಳು ಊರ್ಧ್ವಮುಖಿ ಚಲನೆಯ ಆರ್ಥಿಕ ಚಿಂತನೆಯ ಕ್ರಮವನ್ನು ನೆಚ್ಚಿದಂಥವು. ಈ ವಿರೋಧಾಭಾಸದ ಆರ್ಥಿಕ ಚಿಂತನ ಕ್ರಮದ ಬದುಕಿನ ಸ್ವರೂಪದೊಂದಿಗೆ ನಡೆಯುವ ಪಯಣ ದಿಕ್ಕು ದೆಸೆಯಿಲ್ಲದ ಸ್ವರೂಪದ್ದಾಗಿರುತ್ತದೆ. ನಡೆದದ್ದೇ ದಾರಿ ಎಂದು ಭಾವಿಸುವ ಮನೋಭಾವ ಬೇರೂರಿರುತ್ತದೆ.

ತೃತೀಯ ಜಗತ್ತಿನ ರಾಷ್ಟ್ರಗಳು ಸಮಾಜ ಕಲ್ಯಾಣ, ಸರ್ವೋದಯ, ಸಾಮಾನ್ಯನ ಬೆಳವಣಿಗೆ ಈ ನೆಲೆಯ ಅಭಿವೃದ್ಧಿಯೇ ದೇಶದ ಅಭಿವೃದ್ಧಿ ಎಂದು ನೆಚ್ಚಿದ ರಾಷ್ಟ್ರಗಳಾಗಿವೆ ಎಂದರೆ 'ಶ್ರೀ ಸಾಮಾನ್ಯನ ಅಭಿವೃದ್ಧಿಯೇ ದೇಶದ ಅಭಿವೃದ್ಧಿ' ಎಂದು ನಂಬುತ್ತವೆ. ಮತ್ತು ಭಾವನಾತ್ಮಕವಾಗಿರುತ್ತವೆ. ಹೀಗಾಗಿ ಧರ್ಮಕೇಂದ್ರಿತ ಚಿಂತನೆಯೂ ಪ್ರಧಾನವಾಗುತ್ತದೆ. ಆದರೆ ಪ್ರಭುತ್ವವಾದಿ ರಾಷ್ಟ್ರಗಳಲ್ಲಿ ಆರ್ಥಿಕ ಅಭಿವೃದ್ಧಿಯೇ ದೇಶದ ಅಭಿವೃದ್ಧಿ ಎಂದು ನಂಬಿದ ತಾತ್ವಿಕತೆಯೇ ಸಂಜೀವಿನಿಯಾಗಿರುತ್ತದೆ.

ತೃತೀಯ ಜಗತ್ತಿನ ರಾಷ್ಟ್ರಗಳು ಸಮಾಜ ಕಲ್ಯಾಣ ಪರಿಕಲ್ಪನೆಯ ರಾಷ್ಟ್ರಗಳಾಗಿ, ತಾತ್ವಿಕವಾಗಿ ಘೋಷಣಾತ್ಮಕವಾಗಿ ಇವುಗಳನ್ನು ಸ್ಪಷ್ಟಪಡಿಸಿದಾಗಲೂ ಪ್ರಭುತ್ವವಾದಿ ಪರಿಭಾಷೆಯ ಮಾನದಂಡಗಳನ್ನೇ ಅನುಸರಿಸುತ್ತವೆ. ಇದು ಸಮರ್ಥನೀಯವಲ್ಲ. ಏಕೆಂದರೆ ಅರ್ಥಶಾಸ್ತ್ರದ ನೆಲೆಯಲ್ಲಿ ಒಂದು ದೇಶದ ಅಭಿವೃದ್ಧಿಯನ್ನು ತಲಾವರಮಾನದಿಂದ ಅಳೆಯುವ ಪರಿಕಲ್ಪನೆಯೇ ನ್ಯಾಯ ಸಮ್ಮತವಾದುದ್ದಲ್ಲ – ಈ ಪರಿಭಾಷೆಯಲ್ಲಿ ದೇಶದ ಬೆಳವಣಿಗೆಯನ್ನು ಮಾತನಾಡಲು ಸಾಧ್ಯವಾಗುವುದು ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಸುಲಭವಾದದ್ದು. ಅಭಿವೃದ್ಧಿ ಹೊಂದುತ್ತಿರುವ ಅಥವಾ ತಟಸ್ಥ ರಾಷ್ಟ್ರಗಳ ಸಂದರ್ಭದಲ್ಲಿ ತಲಾವರಮಾನವೇ ಸಮಗ್ರ ದೇಶದ ಅಭಿವೃದ್ಧಿ ಮಾನದಂಡವಾಗಲಾರದು. ಈ ಮಾನದಂಡವನ್ನು ನಿರಾಕರಿಸುವ ಅನಿವಾರ್ಯತೆಗೆ ತೃತೀಯ ಜಗತ್ತಿನ ರಾಷ್ಟ್ರಗಳು ಮುಂದಾಗಬೇಕು. ಆರ್ಥಿಕ (ಹಣದ) ಬೆಳವಣಿಗೆಯೇ ಬೆಳವಣಿಗೆಯಲ್ಲ. ಸಾಮಾಜಿಕ, ಧಾರ್ಮಿಕ, ಮಾನಸಿಕ, ಬೌದ್ಧಿಕ ಬೆಳವಣಿಗೆಯನ್ನು ವರಮಾನದಲ್ಲಿ ಸೇರುತ್ತವೆಯೆ ? ಇಂಥವುಗಳನ್ನು ಅಳೆಯುವುದು ಹೇಗೆ ? ಇವುಗಳಿಂದ ಹೊರತಾದ ಅಳೆಯುವಿಕೆ ಅಳಿಯುವಿಕೆಯೆ ? ಇಂಥ ಸಂದಿಗ್ಧ ಇರುವಿಕೆಯಿಂದ ಹೊರತಾದ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ವರಮಾನದ ಮಾನದಂಡ ಮಹತ್ವದ್ದಾಗಿ ಕಾಣುತ್ತದೆ. ಏಕೆಂದರೆ ಅಲ್ಲಿ ಅಭಿವೃದ್ಧಿಯೇ ತಟಸ್ಥ ಸ್ವರೂಪದ್ದಾಗಿರುತ್ತದೆ. ಹೀಗಾಗಿ ಈ ಮಾನದಂಡವೇ ಮಹತ್ವದ್ದೆನಿಸುತ್ತದೆ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳು ಮುಕ್ತಮಾರುಕಟ್ಟೆಯನ್ನು ಬಯಸುತ್ತವೆ. ಸರಕಾರದ ನಿಯಂತ್ರಣದಿಂದ ಮೊದಲು ಈ ವಾಣಿಜ್ಯ ಕ್ಷೇತ್ರಕ್ಕೆ ಮುಕ್ತಗೊಳಿಸಬೇಕೆಂದು ಹೇಳುತ್ತದೆ ಹಾಗೂ ಶ್ರಮಕ್ಕೆ ಲಿಂಗಭೇದವಿಲ್ಲ, ಪ್ರಾದೇಶಿಕ ಭೇದವಿಲ್ಲ. ಮಾರುಕಟ್ಟೆ ಭೇದವಿಲ್ಲ. ಪ್ರಪಂಚವೇ ನಮ್ಮ ಮಾರುಕಟ್ಟೆ, ಪ್ರಪಂಚವೇ ನಮ್ಮ ಉತ್ಪಾದನಾ ಕ್ಷೇತ್ರ ಎಂದು ಹೇಳುತ್ತದೆ. ಬದಲಾಗಿ ಶ್ರಮಿಕ ವರ್ಗವೇ ನಮ್ಮ ಪ್ರಪಂಚ ಎಂದು ಗ್ರಹಿಸಲು ಇಲ್ಲಿ ಆಸ್ಪದವೇ ಇಲ್ಲ !

ಈ ಮುಕ್ತ ಮಾರುಕಟ್ಟೆ ಪರಿಕಲ್ಪನೆ, ಶ್ರಮಕ್ಕೆ ಲಿಂಗಭೇದವಿಲ್ಲ ಎನ್ನುವ ಪರಿಕಲ್ಪನೆ ತೃತೀಯ ಜಗತ್ತಿನ ರಾಷ್ಟ್ರಗಳಿಗೆ ಅಪಾಯಕಾರಿ ನೆಲೆಗಳಾಗಿ ಕಾಡುತ್ತವೆ. ಇವು ನಮ್ಮ ಧರ್ಮವನ್ನು ನಮ್ಮ ಸಂಸ್ಕೃತಿಗಳನ್ನು ಹಾಳುಗೆಡಹುತ್ತವೆ, ಕೆಡಿಸುತ್ತವೆ. ಜನತೆಯನ್ನು ದಾರಿ ತಪ್ಪಿಸುತ್ತವೆ ಎಂದು ವ್ಯಾಖ್ಯಾನಿಸುತ್ತವೆ. ತಾಲಿಬಾನಗಳಂಥವು ಶಸ್ತ್ರವನ್ನು ಎತ್ತುವುದಕ್ಕೆ ಇದೇ ಮೂಲ ಕಾರಣ, ಭಗವತ್‌ಗೀತೆ ಹೇಳುವಂತೆ – 'ಧರ್ಮೋ ರಕ್ಷತಿ ರಕ್ಷಿತಃ' ಎನ್ನುವ ಪರಿಭಾಷೆಯನ್ನು ಸಾಂಪ್ರದಾಯಿಕ ವರ್ಗ ನೆಚ್ಚುವುದು ಅನಿವಾರ್ಯ ಎನಿಸಿಬಿಡುತ್ತದೆ. 'ಹೊಟ್ಟೆಗೆ ಅನ್ನವಿಲ್ಲದಿದ್ದರೂ ಕೈಯಲ್ಲಿ ಗನ್ನಿರಲಿ' ಎನ್ನುವುದು ಸರಿಯಲ್ಲವೆನಿಸಿದರೂ ಇಂಥ ವಾತಾವರಣವನ್ನು ನಿರ್ಮಾಣವಾಗಲು ಅಪ್ರತ್ಯಕ್ಷವಾಗಿ ಪ್ರೇರೇಪಿಸುತ್ತದೆ !

ತೃತೀಯ ಜಗತ್ತಿನ ರಾಷ್ಟ್ರಗಳು ಶುಭ್ರ ಭೌತವಾದಿಗಳಲ್ಲ. ಅರೆಭೌತವಾದಿಗಳು ಕೆಲವೊಮ್ಮೆ ಅಧಿಕೃತವಾಗಿ ಅಭೌತವಾದಿಗಳೇ ಆಗಿರುತ್ತಾರೆ. ಹೀಗಾಗಿ ಇಲ್ಲಿ ಹಣಕ್ಕಿಂತ ಗುಣಕ್ಕೂ, ಗುಣಕ್ಕಿಂತ ನೈತಿಕತೆಗೂ ಹೆಚ್ಚಿನ ಬೆಲೆ ಇರುತ್ತದೆ. ಈ ಕಾರಣದಿಂದಾಗಿಯೇ ತಾಲಿಬಾನ್‌ಗಳು ಅಮೇರಿಕಾಕ್ಕೆ ಆರ್ಥಿಕ ನೀತಿಯನ್ನು ಬದಲಾಯಿಸಿಕೊಳ್ಳಲು ಸೂಚಿಸಿದವು. 'ಜಾಗತಿಕ ಪ್ರಜ್ಞೆ'ಗಿಂತ 'ಸಾಂಸ್ಕೃತಿಕ ಪ್ರಜ್ಞೆ' ಬಲಿಷ್ಠವಾದುದು ಎಂಬುದರ ಅರಿವಿರುವ ಅಮೇರಿಕಾ ಅಭೌತದ ಚಿಂತನೆಯ ಮೇಲೆ ಯುದ್ಧ ಸಾರಿದೆ. ಅಮೇರಿಕಾ ತಾಲಿಬಾನ ಯುದ್ಧ : ಅಭೌತದ ಮೇಲೆ ಭೌತದ ಯುದ್ಧವಾಗಿದೆ !

'ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಬೇಕು' ಎನ್ನುವಂತೆ ತೃತೀಯ ಜಗತ್ತಿನ ಕೆಲ ರಾಷ್ಟ್ರದ ಸರಕಾರಗಳು ಈ ಸ್ವರೂಪದ ಕನಸು ಕಾಣುತ್ತಿವೆ. ರೆಕ್ಕೆ ಹುಳು ಬೆಳಕೆಂದು ಹಾರಿ ರೆಕ್ಕೆ ಸುಟ್ಟುಕೊಂಡ ಅನುಭವವನ್ನು ಅನುಭವಿಸುತ್ತಿವೆ. ಕನಸನ್ನು ನನಸು ಮಾಡಿಕೊಳ್ಳುವುದಕ್ಕಾಗಿ ಸರಕಾರಿ ಒಡೆತನವನ್ನು ಸರಕಾರವೇ ಮಾರಾಟ ಮಾಡಿ ಬದುಕುವ ಮಾರ್ಗವನ್ನು ಅನುಸರಿಸುತ್ತಿದೆ. ಇದು ಪ್ರಜಾಪ್ರಭುತ್ವದ ದೊಡ್ಡ

ದುರಂತವೇ ಆಗಿದೆ. ಸರಕಾರಗಳು ಸಂಪನ್ಮೂಲಗಳನ್ನು ದುರ್ಬಳಕೆ ಮಾಡುತ್ತವೆ. ಇದನ್ನು ತಪ್ಪಿಸಲು ಖಾಸಗೀಕರಣವೇ ಮದ್ದು ಎಂದು ಪ್ರಭುತ್ವವಾದಿ ದೇಶಗಳು ಸಾರುತ್ತವೆ. ಇದನ್ನು ನೆಚ್ಚಿದ ಬಾಡಿಗೆ ಚಿಂತನೆಯ ಸರಕಾರಗಳು ಬೀದಿಗೆ ಬೀಳಲು ಸಿದ್ಧತೆ ನಡೆಸಿದಂತೆ ಕಾಣುತ್ತವೆ ಮತ್ತು ಪೂರ್ವ ಸಿದ್ಧತೆ ಇಲ್ಲದ ನಿರ್ಣಯಗಳು ದಿಕ್ಕು ತಪ್ಪಿಸುತ್ತವೆ. ಹೀಗಾಗಿ ಇಲ್ಲಿ ವಿರೋಧಿಸಬೇಕಾದುದು ಸರಕಾರವನ್ನಲ್ಲ, ಬದಲಾಗಿ ಪ್ರಬುದ್ಧ ಚಿಂತನೆಗಳಿಲ್ಲದ ರಾಜಕೀಯ ಶಕ್ತಿ/ವ್ಯಕ್ತಿಗಳನ್ನು ಎನ್ನುವುದು ಮರೆಯಬಾರದು.

ದೇಶೀ–ದೇಶೀಯತೆ–ದೇಶೀವಾದ–ಪ್ರತಿಸಂವಾದ

ಈ ಹಿಂದೆಯೇ ನಾನು ದೇಶೀವಾದದ ಕುರಿತು ಬರೆದಾಗ[1] ಅದಕ್ಕೆ ಬಂದ ಪ್ರತಿಕ್ರಿಯೆಗಳು ಹಲವಾರು. ಅಂಥ ವಿಚಾರಗಳನ್ನು ಚರ್ಚಿಸುವುದರೊಂದಿಗೆ ಇತರೆ ಕೆಲವು ಗ್ರಹಿಕೆಗೆ ದಕ್ಕಿದ ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸಬಯಸುವೆ.[2] ದೇಶೀ, ದೇಶೀಯತೆ, ದೇಶೀವಾದ ಈ ಪದಗಳು, ಪರಂಪರೆಯಲ್ಲಿ ಬಳಕೆಯಾದ ಅರ್ಥಕ್ಕೆ ಕಟ್ಟಿಹಾಕಿ ಬಳಸುವ ಮಾರ್ಗಸೂಚಿಗಿಂತ ಈ ಪದಗಳು ನವವಸಾಹತುಶಾಹಿಗೆ ಪ್ರತಿಯಾಗಿ ಎದ್ದುಬಂದ ಪದಗಳೆಂದು ಗುರುತಿಸಿಕೊಳ್ಳುವ ಅಗತ್ಯತೆ ನಮ್ಮಲ್ಲಿ ಬರಬೇಕಾಗಿದೆ. ಹೀಗಾದಾಗ ವರ್ತಮಾನದ ಬದುಕಿಗೆ ಅರ್ಥವಿದೆ ಹಾಗೂ ರೂಪಿಸಬಯಸುವ ಚಳವಳಿಗೆ ಅರ್ಥವಿದೆ. ಇಲ್ಲದೆ ಹೋದರೆ ಹೂತ ಹೆಣ ಹೊರತೆಗೆದು ಹಾಡಿಕೊಂಡು ಅತ್ತಂತೆ ಆಗುತ್ತದೆ. ಇದರರ್ಥ ಪರಂಪರೆಯ ಬಳಕೆಯ ಸಾಧ್ಯತೆಗಳನ್ನು ನಿರ್ಲಕ್ಷಿಸಬೇಕು ಎಂದಲ್ಲ, ಅದರ ಅರಿವು ನಮಗಿರಲೇಬೇಕು.

ಆದರೆ ನಾವು ಇಂದು ಯಾವ ಅರ್ಥದಲ್ಲಿ ಈ ಪದಗಳನ್ನು ಬಳಸುತ್ತಿದ್ದೇವೆ. ಹೊಸ ಸ್ಪರ್ಶ ಎಲ್ಲಿ ಕೊಡುತ್ತಿದ್ದೇವೆ ಎನ್ನುವ ಎಚ್ಚರವಹಿಸುವ ಅಗತ್ಯವಿದೆ. ಸಂಸ್ಕೃತದಲ್ಲಿ ಹೀಗೆ ಬಳಕೆಯಾಗದೆ, ಇಂಗ್ಲಿಷಿನಲ್ಲಿ ಹೀಗೆ ಬಳಕೆಯಾಗಿದೆ. ಆದ್ದರಿಂದ ಇದೇ ಅರ್ಥದಲ್ಲಿಯೇ ಈ ಪದವನ್ನು ಬಳಸಬೇಕು ಎಂದು ನಿರ್ದೇಶಿಸುವುದು, ಈ ಶಬ್ದಗಳ ಬಳಕೆ ಅನಗತ್ಯವೆಂದು ಸಾರುವುದು ಇಂಥ ಧೋರಣೆಗಳು ಸಾರ್ವತ್ರಿಕವಾಗಿ ಬದುಕುವ ಸಾಮರ್ಥ್ಯ ಹೊಂದಿರುವುದಿಲ್ಲ ಎನ್ನುವುದು ನಮ್ಮ ವಿದ್ವಾಂಸರು ಅರಿಯಬೇಕಿದೆ.

ರಾಷ್ಟ್ರ, ರಾಷ್ಟ್ರೀಯತೆ, ಉಪರಾಷ್ಟ್ರೀಯತೆ; ಭಾರತ, ಭಾರತೀಯತೆ, ಭಾರತೇಯ ಇಂಥ ಪದಗಳು ನವೋದಯದ ಸಂದರ್ಭದಲ್ಲಿ ಬಳಕೆಯಲ್ಲಿದ್ದವು. ಈ ಪದಗಳು ಅಂದು ರಾಷ್ಟ್ರೀಯತೆಯ ಹೋರಾಟದ ಹಿನ್ನೆಲೆಯಲ್ಲಿ ರೂಪ ಪಡೆದವು. ಅಂದಿನ ವಸಾಹತುಶಾಹಿಗೆ ಪ್ರತಿಕ್ರಿಯೆಯಾಗಿ ಒಂದು ವೈಚಾರಿಕ ಅಲೆಯನ್ನು ಎಬ್ಬಿಸಿ ದೇಶಕ್ಕೆ ಹೊಸ ಸಂರಚನೆಯನ್ನು ತಂದುಕೊಟ್ಟವು. ಈ ಶಬ್ದಗಳನ್ನು ಇಂದು ಅದೇ ಅರ್ಥದಲ್ಲಿ ಬಳಸುವುದು ಸಾಧ್ಯವಾಗದು. ಏಕೆಂದರೆ ಆ ಸಾಂಸ್ಕೃತಿಕ ಸಂದರ್ಭದಲ್ಲಿ ಈ ಪದಗಳಿಗೆ ಕೊಟ್ಟ ಅರ್ಥವ್ಯಾಪ್ತಿ, ಇಂದಿನ ಆಲೋಚನಾ ಕ್ರಮಕ್ಕೆ ಒಗ್ಗುವಂತಹದ್ದಲ್ಲ. ಒಂದು ಹೊಸ ಸಾಂಸ್ಕೃತಿಕ ಸಂದರ್ಭ ಹೊಸ ವಿಚಾರಗಳೊಂದಿಗೆ ಹೊಸ ಶಬ್ದಗಳ ಅಥವಾ ಶಬ್ದದ ಪುನರ್‌ವ್ಯಾಖ್ಯಾನಕ್ಕೆ ಆವಿಷ್ಕಾರ ಕೊಡುತ್ತದೆ ಮತ್ತು ಅದರ ಅರ್ಥ ವ್ಯಾಪ್ತಿಯನ್ನೂ ಸಾರುತ್ತದೆ. ಹೀಗಾಗಿ ಎಷ್ಟೋ ಬಾರಿ ಪರಂಪರೆಯ ಪದಗಳು ಮರುಹುಟ್ಟನ್ನು ಪಡೆಯುತ್ತವೆ. ಈ ಮರುಹುಟ್ಟಿನಲ್ಲಿ ಹೊಸ ಸ್ಪರ್ಶವೂ ದಕ್ಕುತ್ತದೆ. ಹಾಗೂ ಅದರ ಮುಂದುವರಿಕೆಯ ಪದಗಳು ಹೊಸ ಶರೀರವನ್ನು ಧಾರಣ ಮಾಡಿಕೊಳ್ಳುತ್ತವೆ. ಇದೊಂದು ಸಹಜ ಪ್ರಕ್ರಿಯೆ ಎಂದು ಭಾವಿಸಬೇಕು. ಪದಗಳ

> **'ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಬೇಕು' ಎನ್ನುವಂತೆ ತೃತೀಯ ಜಗತ್ತಿನ ಕೆಲ ರಾಷ್ಟ್ರದ ಸರಕಾರಗಳು ಈ ಸ್ವರೂಪದ ಕನಸು ಕಾಣುತ್ತಿವೆ. ರೆಕ್ಕೆ ಹುಳು ಬೆಳಕೆಂದು ಹಾರಿ ರೆಕ್ಕೆ ಸುಟ್ಟುಕೊಂಡ ಅನುಭವವನ್ನು ಅನುಭವಿಸುತ್ತಿವೆ. ಕನಸನ್ನು ನನಸು ಮಾಡಿಕೊಳ್ಳುವುದಕ್ಕಾಗಿ ಸರಕಾರಿ ಒಡೆತನವನ್ನು ಸರಕಾರವೇ ಮಾರಾಟ ಮಾಡಿ ಬದುಕುವ ಮಾರ್ಗವನ್ನು ಅನುಸರಿಸುತ್ತಿದೆ.**

ಅರ್ಥೈಸುವಿಕೆ ವ್ಯಾಖ್ಯಾನಿಸುವಿಕೆಯ ಸಂದರ್ಭದಲ್ಲಿ ವಾಗ್ವಾದಗಳೂ, ಅಷ್ಟೇ ಸಹಜವಾದುವು.

ಈ ವಾಗ್ವಾದಗಳು ಸಾಮಾನ್ಯವಾಗಿ ಮೂರು ಸ್ವರೂಪದವು.

೧. ನವಪಂಥ : ಸಮಕಾಲೀನ ಸಂದರ್ಭದ ವೈಚಾರಿಕ ನೆಲೆಯಿಂದ ಹುಟ್ಟುವ ವಾಗ್ವಾದಗಳು ಇವು ಆರಂಭದಲ್ಲಿ ಗ್ರಹಿಕೆ ಸ್ವರೂಪದವುಗಳಾಗಿದ್ದು, ಭವಿಷ್ಯತ್ತಿನ ವಿಚಾರಕ್ಕೆ ಹೆಚ್ಚಿನ ಒಲವನ್ನು ತೋರುವ ಸ್ವರೂಪದವು.

೨. ಪರಂಪರೆ ಪಂಥ : ಪರಂಪರೆಯೊಂದಿಗೆ ಸಂಬಂಧವನ್ನು ಸಾಧಿಸಿ ಇದು ಹೊಸತಲ್ಲ ಮೊದಲೆ ಇದ್ದುದು ಎಂದು ಹಿಂದಕ್ಕೆ ಎಳೆದುಕೊಂಡು ಹೋಗುವ ವಾಗ್ವಾದಗಳು.

೩. ಒಡಂಬಡಿಕೆ ಪಂಥ : ಈ ಎರಡೂ ಬಗೆಯ ಪಂಥದ ವಾಗ್ವಾದಗಳು ಬೆಳೆಯುತ್ತಿರುವಂತೆ ಇವುಗಳ ನಡುವೆ ಇನ್ನೊಂದು ವಾಗ್ವಾದ ರೂಪ ತಾಳುತ್ತದೆ. ಅದೇ 'ಒಡಂಬಡಿಕೆ ಪಂಥ'. ಇದಕ್ಕೆ ಆರಂಭದಲ್ಲಿ ಅಸ್ತಿತ್ವವಿರುವುದಿಲ್ಲ. ನವಪಂಥ ಮತ್ತು ಪರಂಪರೆ ಪಂಥಗಳ ಅನಂತರದಲ್ಲಿ ಕಾಣಿಸಿಕೊಂಡರೂ ಒಡಂಬಡಿಕೆಯ ಪಂಥದ ವಾಗ್ವಾದವೇ ಆ ಸಾಂಸ್ಕೃತಿಕ ಸಂದರ್ಭದಲ್ಲಿ ಹಿಡಿತವನ್ನು ಸಾಧಿಸುತ್ತದೆ. ಬಹುಸಂಖ್ಯಾತ ವರ್ಗ ಇದರ ದುಂಬಾಲು ಬೀಳುತ್ತದೆ. ಕಾರಣ ಮನುಷ್ಯನ ಮನಸ್ಸು ಸಂಪೂರ್ಣ ಪಲ್ಲಟದ ಸ್ಥಿತಿಯನ್ನು ಒಮ್ಮೆಲೆ ಸ್ವೀಕರಿಸುವ ಸ್ವರೂಪದ್ದಾಗಿರುವುದಿಲ್ಲ. ಹೀಗಾಗಿ ಮೇಲಿನ ಎರಡೂ ವಾಗ್ವಾದಗಳ ಸಹ್ಯ ಸಂಗತಿಗಳನ್ನು ಎತ್ತಿಕೊಂಡು ಒಡಂಬಡಿಕೆಯನ್ನು ಸಾಧಿಸುವುದರೊಂದಿಗೆ ಹೊಸ ಸಂರಚನೆಗೆ ಚಾಲನೆಯನ್ನು ನೀಡುವಂತಹದ್ದಾಗಿರುತ್ತದೆ.

ಹೀಗಾಗಿ ಪದಗಳ ಅರ್ಥ ಕಟ್ಟುವಿಕೆಗಾಗಿಯೇ ವ್ಯರ್ಥಶ್ರಮ ಹಾಕುವುದು ಸರಿಯಲ್ಲವೆನಿಸಿದರೂ ಇವು ಸ್ಥಾಯಿಭಾವದಿಂದ ನಿಲ್ಲುವ ಸ್ವರೂಪದವುಗಳಲ್ಲ ಮತ್ತು ಅವುಗಳನ್ನು ಹಾಗೆ ಕಟ್ಟಿಹಾಕಿ ನಿಲ್ಲಿಸುವುದೂ ಸರಿಯಲ್ಲ. ಆದರೆ ಒಂದು ಹೊಸ ಎಚ್ಚರದ ಚಳವಳಿಯನ್ನು ಅಪ್ರತ್ಯಕ್ಷವಾಗಿ ಈ ವಾಗ್ವಾದಗಳು ಜೀವಂತವಾಗಿಡಲು ಸಹಕರಿಸುತ್ತವೆ.

ಸಮಕಾಲೀನ ಸಂದರ್ಭದ ವೈಚಾರಿಕ ನೆಲೆಯಲ್ಲಿ ಹುಟ್ಟುವ ನವಪಂಥದ ವಾಗ್ವಾದಗಳು ಹೆಚ್ಚಿನವು ಊಹಾತ್ಮಕ ಸ್ವರೂಪದವು. ಈ ಊಹೆ ಆಧಾರರಹಿತವಾಗಿರುವ ಸಾಧ್ಯತೆಗಳು ಕಡಿಮೆ. ಆದರೆ ವೈಚಾರಿಕ ವಿದ್ಯುತ್ ಸಂಚಾರ ಇಲ್ಲಿ ಹೆಚ್ಚು ತೀಕ್ಷ್ಣ ಸ್ವರೂಪದ್ದಾಗಿರುತ್ತದೆ. ಇದು ಭವಿಷ್ಯತ್ತಿನ ಬಗ್ಗೆ ಹೆಚ್ಚು ಕಾಳಜಿ ಹೊಂದಿದ್ದು, ಇಲ್ಲಿ ಆತಂಕಕಾರಿ ಮನೋಭಾವ ಪ್ರಧಾನವಾಗಿ ಒಡೆದು ಕಾಣುತ್ತಿರುತ್ತದೆ ಮತ್ತು ಇವು ಹೆಚ್ಚು ಪ್ರಭಾವಶಾಲಿಯಾಗಿರುತ್ತವೆ. ಆದರೆ ಇವುಗಳಿಗೆ ನಿರ್ದಿಷ್ಟ ರೂಪ ದಕ್ಕುವುದು ತುಂಬ ನಿಧಾನ. ಅಮೂರ್ತತೆಯೇ ಇದರ ಪ್ರಧಾನ ಲಕ್ಷಣವಾಗಿದ್ದು, ಮೂರ್ತತೆಯ ಎಡೆಗೆ ತುಡಿಯುವಂತಹದ್ದಾಗಿರುತ್ತದೆ.

ಪದ ಅಥವಾ ವಿಚಾರವನ್ನು ಭೂತಕ್ಕೆ ಎಳೆದುಕೊಂಡು ಹೋಗಿ 'ಇದು ಹೊಸತಲ್ಲ' ಎಂದು ಪರಂಪರೆ/ಸಂಸ್ಕೃತಿಯೊಂದಿಗೆ ಸಂಬಂಧ ಸಾಧಿಸುತ್ತ ವ್ಯಾಖ್ಯಾನಿಸುವ/ಅರ್ಥೈಸುವ ಪರಂಪರೆ ಪಂಥದ ವರ್ಗವು, ಸನಾತನೀಯ ವಿಚಾರಕ್ಕೆ ವಾಲುವಂತಹದ್ದಾಗಿರುತ್ತದೆ ಮತ್ತು ಆ ವಿಚಾರ ಕ್ರಮವನ್ನು ಎಂದರೆ ಚಳವಳಿಯನ್ನು ಆ ಕಡೆಗೆ ಎಳೆದುಕೊಂಡು ಹೋಗುವಂತಹದ್ದಾಗಿರುತ್ತದೆ. ಇಲ್ಲಿ ವೈಚಾರಿಕತೆಗಿಂತ ಕಸಿ ಮಾಡುವ, ನಿರ್ದೇಶಿಸುವ ಹಿಂದಿನದೇ ಶ್ರೇಷ್ಠವೆಂದು ಸಾಧಿಸುವ ಮತ್ತು 'ನಾನೆಲ್ಲ ಬಲ್ಲೆವು' ಎಂಬ ಧೋರಣೆಯಿದ್ದು ಅದು ಮುಗ್ಧ ಮನೋಭಾವದಿಂದ ರೂಪ ತಾಳುವಂತಹದ್ದಾಗಿರುತ್ತದೆ. ಇಂಥಲ್ಲಿ ಪಾಂಡಿತ್ಯ ಪ್ರದರ್ಶನ ಪ್ರಧಾನವಾಗಿರುತ್ತದೆ ಮತ್ತು ಮೂರ್ತತೆಯ ಕುರಿತು ಅಧಿಕಾರವಾಣಿಯಿಂದ ಹೇಳುವ ಧ್ವನಿಯೇ ಹೆಚ್ಚು.

ಇಷ್ಟೆಲ್ಲ ಇದ್ದಾಗಲೂ ಇವೆರಡರ ಉದ್ದೇಶಗಳು ರಾಷ್ಟ್ರವನ್ನು ಕಟ್ಟುವುದಕ್ಕಾಗಿ ತುಡಿಯುವಂಥವುಗಳಾಗಿರುತ್ತವೆ. ಹೊಸ ವಾದ ಸಿದ್ಧಾಂತಗಳು ಜನತೆಯ ನಡುವೆ ಕ್ರಿಯಾಶೀಲತೆಯನ್ನು ಜೀವಂತವಾಗಿಡಲು ಪ್ರಯತ್ನಿಸುತ್ತವೆ. ಇದರಲ್ಲಿ ಯಾವುದೂ ಹೆಚ್ಚಲ್ಲ, ಯಾವುದೂ ಕಡಿಮೆಯಲ್ಲ. ನವಪಂಥದಲ್ಲಿ ಯುವ ಚಿಂತಕರು ಪ್ರಧಾನವಾದರೆ, ಪರಂಪರೆ ಪಂಥದಲ್ಲಿ ವಯಸ್ಕರ ಶಕ್ತಿಯೇ ಪ್ರಧಾನವಾಗಿರುತ್ತದೆ. ಆದರೆ ವ್ಯರ್ಥ ಗುದ್ದಾಟಗಳೂ ಚಳವಳಿಗೆ ಕೆಲವೊಮ್ಮೆ ಪ್ರಯೋಜನಕಾರಿ ಎಂಬುದು ಮನಗಾಣಬೇಕಿದೆ.

ಪ್ರಾದೇಶಿಕತೆ ಮತ್ತು ದೇಶೀಯತೆ ಎರಡೂ ಒಂದೇ ಎಂಬಂತೆ ಕೆಲವರು ಬಳಸುತ್ತಿದ್ದಾರೆ. ಇವು ಎರಡೂ ಒಂದೇ ಸ್ವರೂಪದವು ಅಲ್ಲ. ಪ್ರಾದೇಶಿಕತೆ ಎನ್ನುವುದು ಒಂದು ಪ್ರದೇಶಕ್ಕಿಂತ ಇನ್ನೊಂದು



ಪ್ರದೇಶದಲ್ಲಿರುವ ಭೌಗೋಳಿಕ ಚಾರಿತ್ರಿಕ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ನೆಲೆಯಲ್ಲಿ ಇರುವ ಅಂತರಗಳನ್ನು ಸಾರುವ ಮೊತ್ತ ಅಥವಾ ಇವೆಲ್ಲವುಗಳಿಂದ ಕೂಡಿದ ಜನವರ್ಗದ ಹುಟ್ಟುವಳಿಯ ರೂಪ ಎಂದು ಹೇಳಬಹುದು.

ಪ್ರಾದೇಶಿಕತೆಯು ವಿಭಿನ್ನ ಸಂಸ್ಕೃತಿಗಳ ನಡುವೆ ಭಿನ್ನತೆ ಇದ್ದು ಬದುಕುವ ಸಾಮಾನ್ಯ ಸೂತ್ರಗಳೇ ದೇಶೀಯತೆಯನ್ನು ಪ್ರತಿಪಾದಿಸುವಂಥವುಗಳಾಗಿರುತ್ತವೆ. ಈ ದೇಶೀಯತೆ ಆಧುನಿಕ ಪ್ರಜ್ಞೆ, ಧರ್ಮಪ್ರಜ್ಞೆ, ರಾಜಕೀಯ ಸ್ಥಿತ್ಯಂತರಗಳ ಮೂಲಕ ತನ್ನ ಸೂತ್ರಗಳಲ್ಲಿ ಪರಿಷ್ಕರಣ, ಸ್ವೀಕರಣ ಹಾಗೂ ನಿರಾಕರಣ ತತ್ವಗಳ ಮೂಲಕ ತನ್ನ ಸ್ವರೂಪವನ್ನು ಬದಲಾಯಿಸಿಕೊಳ್ಳುತ್ತ ಸದಾ ಜೀವಂತವಾಗಿರುತ್ತದೆ. ಬದಲಾಗುವ ಸಾಂಸ್ಕೃತಿಕ ರಾಜಕೀಯ ಸಂದರ್ಭಗಳು ದೇಶೀಯತೆಯ ನಿರ್ಣಯ ಅಥವಾ ನಿಲುವುಗಳನ್ನು ರೂಪಿಸುತ್ತಿರುತ್ತವೆ ಯಾದರೂ ಇದು ತುಂಬ ಮಂದಗತಿಯದ್ದು.

'ದೇಶೀಯತೆ' ಎನ್ನುವುದು ಬಹುಮುಖಿ ಅಸ್ತಿತ್ವವನ್ನು ಪ್ರತಿಪಾದಿಸುವಂತಹದು. ಈ ಬಹುಮುಖಿ ಅಸ್ತಿತ್ವಗಳ ನಡುವೆಯೇ ತಮ್ಮ ತಮ್ಮ ಅಸ್ತಿತ್ವವನ್ನು ಕಾಯ್ದುಕೊಳ್ಳಲು ಅವಕಾಶವಿದ್ದು ಪರಸ್ಪರ ಸಹಬಾಳ್ವೆಯಿಂದ ಬದುಕುವ ಪರಿಕ್ರಮವೂ ಇದೆ. ಈ ಸ್ವರೂಪದ ದೇಶೀಯತೆಗೆ ಆಘಾತ ವನ್ನು ತರುವ ಯಾವುದೇ 'ಹೊರ ಶಕ್ತಿ'ಯನ್ನು ಸಹಿಸಿಕೊಳ್ಳ ಲಾರದು. ಅಂತಹ ಅನ್ಯಶಕ್ತಿಯ ಬರುವಿಕೆಯನ್ನು ಆಹ್ವಾನ ವನ್ನಾಗಿ ಸ್ವೀಕರಿಸುತ್ತದೆ. ತಮ್ಮ ಒಳ ಅಸ್ತಿತ್ವದ ಭೇದಗಳನ್ನು ವೈರುಧ್ಯ-ವಿರೋಧಾಭಾಸಗಳನ್ನು ಮರೆತು ಎದುರಿಸಲು ಮುಂದಾಗುತ್ತವೆ.

ಈ ಸಂದರ್ಭದಲ್ಲಿಯೇ 'ದೇಶೀವಾದ' ಕಾಣಿಸಿಕೊಳ್ಳು ತ್ತದೆ. ಯಾವುದನ್ನು ಹೊರಶಕ್ತಿ, ಅನ್ಯದೇಶೀಯತೆಯಿಂದ ಸ್ವೀಕರಿಸಬೇಕು. ಯಾವುದನ್ನು ಸ್ವೀಕರಿಸಬಾರದು ಮತ್ತು ಯಾವುದನ್ನು ಪರಿಷ್ಕರಿಸಿ ಸ್ವೀಕರಿಸಬೇಕು ಎಂದು ಹೇಳುತ್ತಾ ತನ್ನ ದೇಶೀಯತೆಯನ್ನು ಒಡೆದು ಪುನರ್ ಕಟ್ಟುವಿಕೆ ಯಲ್ಲಿಯೂ ತೊಡಗುತ್ತದೆ. ಎಂದರೆ, ದೇಶೀವಾದ ಎನ್ನುವುದು ಒಂದನ್ನು ಒಡೆದು ಇನ್ನೊಂದನ್ನು ಕಟ್ಟುವ ಕೆಲಸವನ್ನು ಮಾಡುತ್ತದೆ. ಹೀಗಾಗಿ ದೇಶೀವಾದ ಎನ್ನುವುದು ಒಂದು 'ವಿಚಾರ ಕ್ರಮ'ವಾಗುತ್ತದೆ. ಇದು ಯಾವಾಗಲೂ ಒಂದೇ ಸ್ವರೂಪದ್ದಾಗಿರುವುದಿಲ್ಲ.

'ದೇಶೀ' ಎನ್ನುವುದು 'ದೇಶೀಯತೆ' ಮತ್ತು 'ದೇಶೀವಾದ'ಕ್ಕಿಂತ ಭಿನ್ನವಾದುದು. ಎಂದರೆ ದೇಶೀಯತೆ ಯಲ್ಲಿ ಒಳಗೊಂಡಿರುವ ಬಹುಮುಖಿ ಅಸ್ತಿತ್ವದ ಪ್ರತ್ಯೇಕ ಘಟಕವೆಂದಿಟ್ಟುಕೊಳ್ಳುವುದು ಅನಿವಾರ್ಯ. ಇನ್ನೂ ಸ್ಪಷ್ಟಪಡಿಸುವುದೆಂದರೆ, ತನ್ನತನವನ್ನು ಕಾಪಾಡಿಕೊಂಡು ಹೋಗುವ ಒಂದು ಅಸ್ತಿತ್ವ. ಇಂಥ ಭಿನ್ನ ಅಸ್ತಿತ್ವಗಳು ಇದ್ದಾಗಲೂ ನಾವೆಲ್ಲ ಒಂದೆಂದು ಬೆಸೆಯುವ ಶಕ್ತಿಗಳನ್ನು ಒಳಗೊಂಡಿದ್ದು 'ದೇಶೀಯತೆ'ಯಾಗುತ್ತದೆ.

'ದೇಶೀ' ಎನ್ನುವುದು ಒಂದು ಅಸ್ತಿತ್ವ ಅಥವಾ ಒಂದು ಘಟಕ ಎಂದು ಕರೆದಾಗಲೂ ಅದು ತುಂಬ ಸಂಕೀರ್ಣ ವಾದುದು. ಎಷ್ಟೋ ಬಾರಿ ಇದರ ಅಂತರಂಗದಲ್ಲಿಯೂ ಬಹುಮುಖಿತ್ವ ಅಡಗಿರುತ್ತದೆ. ಯಾವುದೇ ಒಂದು ಧರ್ಮವನ್ನು ದೇಶಿ ಎಂದು ಪರಿಗಣಿಸಿದಾಗ, ಅದರ ಒಳ ಮತಗಳು, ಪಂಥಗಳು ವಿಭಾಗ-ಒಳವಿಭಾಗ-ಉಪವಿಭಾಗ ಹೀಗಾಗುತ್ತ ಬಂದಾಗಲೂ ಕೂಡ ಅದು ದೇಶಿಯೇ ಆಗಿರುತ್ತದೆ. ಒಂದು ಧರ್ಮದ ಒಂದು ಜಾತಿಯೂ ದೇಶಿ ಎಂದು ಪರಿಗಣಿತವಾಗುತ್ತದೆ. ('ಜಾತಿ' ದೇಶಿ ಎಂದು ಕರೆದರೂ, ಈ ಹಿಂದೆ ಚರ್ಚಿಸಿದಂತೆ ದೇಶೀವಾದದಲ್ಲಿ ಸ್ವೀಕರಣ, ನಿರಾಕರಣ, ಪರಿಷ್ಕರಣ ಎಂಬ ಮಾನದಂಡಗಳಿದ್ದು ಆತನು ಎತ್ತಿಕೊಳ್ಳುವ ಮಾನದಂಡ ಆತನ ಅಸ್ತಿತ್ವವನ್ನು ಬಿಂಬಿಸುತ್ತದೆ. ಇಂಥ ಭಿನ್ನ ಅಸ್ತಿತ್ವಗಳು ಒಂದು ಸಮಾಜದಲ್ಲಿ ಇರಲು ಸಾಧ್ಯ.) ಒಂದು ಧರ್ಮದ ಒಳಗಡೆ 'ಬಹುಮುಖಿತ್ವ'ಗಳು ಇದ್ದಾಗಲೂ ಒಂದಾಗಿ ಬದುಕುವ ಸಹಶಕ್ತಿ/ಸಾಮರ್ಥ್ಯವನ್ನು ಹೊಂದಿರುತ್ತವೆ. ಈ ಶಕ್ತಿಯೇ 'ದೇಶೀಯತೆ'ಯಾಗುತ್ತದೆ. ಒಂದು ಧರ್ಮದ ಒಳಗಡೆ ಬೆಸುಗೆಯನ್ನು ತರುವ ಶಕ್ತಿ/ಸಾಮರ್ಥ್ಯ ಇರುವಂತೆಯೇ ಭಿನ್ನ ಧರ್ಮಗಳನ್ನು ಬೆಸೆವ ಶಕ್ತಿ/ಸಾಮರ್ಥ್ಯವೂ ಇರುತ್ತದೆ. ಆಗ ಅದೂ ದೇಶೀಯತೆ ಎಂದೇ ಕರೆಯಿಸಿಕೊಳ್ಳುತ್ತದೆ. 'ದೇಶೀಯತೆ' 'ದೇಶಿ' 'ದೇಶಿವಾದ' ಎನ್ನುವಂಥವು ಯಾವುದೇ ಒಂದು ಧರ್ಮ – ಮತ – ಜಾತಿಗೆ ಸಂಬಂಧಿಸಿ ಗುರುತಿಸುವ ಪದಗಳಲ್ಲ. ಈ ಶಬ್ದಗಳು ಜಾತ್ಯಾತೀತವಾದವು-ಧರ್ಮಾತೀತ ವಾದವು ಮತ್ತು ಸೀಮಾತೀತವಾದವು. ಹೀಗಾಗಿ ಇವು ವಿಭಿನ್ನ ಸಂರಚನೆಯ ಪರಿಕ್ರಮಗಳನ್ನು ವಿಚಾರ ಕ್ರಮಗಳನ್ನು ಗುರುತಿಸುವಂಥವುಗಳಾಗಿವೆ.

ಇಲ್ಲಿಯೇ ಇನ್ನೊಂದು ಶಬ್ದದ ಪರಿಕಲ್ಪನೆಯ ಕುರಿತು ಹೇಳುವುದು ಅಗತ್ಯವೆಂದುಕೊಳ್ಳುವೆ. ಅದು 'ದೇಶಿತ್ವ'. ಈ ದೇಶಿತ್ವ ಎನ್ನುವುದು ದೇಶಿ, ದೇಶೀಯತೆ, ದೇಶಿವಾದ ಭಿನ್ನ ಸಂರಚನೆಗಳನ್ನು ಒಂದಾಗಿ ಗುರುತಿಸುವ ನೆಲೆಯಾಗಿದೆ. ಸಮಗ್ರತೆಯ ಪ್ರತೀಕವಾಗಿದೆ. ಈ 'ದೇಶಿತ್ವ' ಎನ್ನುವುದು ಜೀವಿಗೆ ಸಂಬಂಧಿಸಿದ್ದಾಗಿದೆ. ಇನ್ನೂ ವಿವರಿಸುವುದಾದರೆ, ಇದು ಕೇವಲ ಮನುಷ್ಯ ಕೇಂದ್ರಿತವಲ್ಲ, ಜೀವ ಕೇಂದ್ರಿತ ವಾದುದು. ಜೀವ ಸ್ವಾಸ್ಥ್ಯವನ್ನು ನಿರೀಕ್ಷಿಸುವಂತಹುದು.

ವಿಭಿನ್ನ ಪ್ರಾದೇಶಿಕತೆಗಳು ಇರುವಂತೆ ಭಿನ್ನ ದೇಶೀಯತೆಗಳು ಇರುತ್ತವೆ. ಈ ದೇಶೀಯತೆಯು ಬಹು ಮುಖಿ ಅಸ್ತಿತ್ವದ ಒಂದು ಸಾಂಸ್ಕೃತಿಕ ಸಂಘರ್ಷದ ಕಾಲಘಟ್ಟ ದಲ್ಲಿ ಭಿನ್ನ ದೇಶೀಯತೆಗಳ ಚಿಂತನದ ನೆಲೆಗಟ್ಟುಗಳೇ ದೇಶೀವಾದದ ಆಲೋಚನಾ ಕ್ರಮಕ್ಕೆ ರೂಪಕೊಡುತ್ತವೆ. ದೇಶಿವಾದಕ್ಕೆ ದೇಶೀಯತೆ ಮೂಲ ಸೆಲೆಯಾದಂತೆ, ದೇಶೀಯತೆಗೆ ಪ್ರಾದೇಶೀಕತೆಯೇ ಮೂಲ ಸೆಲೆಯಾಗಿರುತ್ತದೆ.

'ದೇಶೀಯತೆ' ಎನ್ನುವುದು ಬಹುಮುಖಿ ಅಸ್ತಿತ್ವವನ್ನು ಪ್ರತಿಪಾದಿಸುವಂತಹದು. ಈ ಬಹುಮುಖಿ ಅಸ್ತಿತ್ವಗಳ ನಡುವೆಯೇ ತಮ್ಮ ತಮ್ಮ ಅಸ್ತಿತ್ವವನ್ನು ಕಾಯ್ದು ಕೊಳ್ಳಲು ಅವಕಾಶವಿದ್ದು ಪರಸ್ಪರ ಸಹಬಾಳ್ವೆಯಿಂದ ಬದುಕುವ ಪರಿಕ್ರಮವೂ ಇದೆ. ಈ ಸ್ವರೂಪದ ದೇಶೀಯತೆಗೆ ಆಘಾತವನ್ನು ತರುವ ಯಾವುದೇ 'ಹೊರ ಶಕ್ತಿ'ಯನ್ನು ಸಹಿಸಿಕೊಳ್ಳಲಾರದು. ತಮ್ಮ ಒಳ ಅಸ್ತಿತ್ವದ ಭೇದಗಳನ್ನು ವೈರುಧ್ಯ-ವಿರೋಧಾಭಾಸಗಳನ್ನು ಮರೆತು ಎದುರಿಸಲು ಮುಂದಾಗುತ್ತವೆ.

ದೇಶಿವಾದ ದೇಶದಾದ್ಯಂತ ಪ್ರಭಾವ ಬೀರುವಂತಹದು ಮತ್ತು ತುಂಬ ತೀಕ್ಷ್ಣ ಚಲನೆಯುಳ್ಳದ್ದಾಗಿರುತ್ತದೆ. ಈ ಕಾರಣದಿಂದಾಗಿಯೇ ದೇಶೀವಾದ ಎನ್ನುವುದು ಸ್ವಯಂ ವ್ಯವಸ್ಥೆಯನ್ನುಳ್ಳದ್ದೆಂದು ಬೇರೆ ಬೇರೆ ಸಂದರ್ಭದಲ್ಲಿ ಹೇಳಿದ್ದೇನೆ.

ಸದ್ಯದ ಸಂದರ್ಭದಲ್ಲಿ 'ದೇಶಿ' ಎಂದರೆ 'ಜಾನಪದ ಎನ್ನುವುದಕ್ಕೆ ಮತ್ತೊಂದು ಪರ್ಯಾಯ ಪದ ಎಂಬಂತೆ ಬಳಕೆಯಾಗುತ್ತಿದೆ' ಇನ್ನು ಕೆಲವರು ಜಾನಪದದಲ್ಲಿ ಇರುವಂತಹದ್ದು ಮತ್ತು ಶಿಷ್ಟ ಕ್ಷೇತ್ರದಲ್ಲಿ ಪ್ರವೇಶ ಪಡೆದುಕೊಂಡದ್ದಕ್ಕೆ 'ದೇಶಿ' ಎಂದು ವಿಸ್ತರಿಸುವ ಕೆಲಸ ಮಾಡುತ್ತಿದ್ದಾರೆ. ಒಂದು ರೀತಿಯಲ್ಲಿ ಶಿಷ್ಟಕ್ಕೆ ಕಾಲಿಟ್ಟ ಜಾನಪದ 'ವಾಙ್ಮಯ' ಕೃತಿಗಳ ವಿಶ್ಲೇಷಣೆ. ಪರಂಪರಾಗತವಾಗಿ ವಾಙ್ಮಯದಲ್ಲಿ ಇದು ವ್ಯಕ್ತವಾದ ಬಗೆ ಹಾಗೂ ಅರ್ಥ/ ವ್ಯಾಪ್ತಿಗಳನ್ನು ಗಮನದಲ್ಲಿಟ್ಟುಕೊಂಡು ವಿಶ್ಲೇಷಿಸುತ್ತದೆ. 'ವಾಙ್ಮಯ' ಎಂದರೆ ಬರಹದಲ್ಲಿ ದಾಖಲಾದ ಎಲ್ಲ ಬಗೆಯ ಸಾಹಿತ್ಯ, ಸಂಗೀತ, ನೃತ್ಯ, ಗೀತೆ, ಛಂದಸ್ಸು, ರಾಜಕೀಯ, ಧಾರ್ಮಿಕ, ಆರ್ಥಿಕ, ತಾತ್ವಿಕ, ಸಾಮಾಜಿಕ ಇಂಥ ಎಲ್ಲ ವಿಷಯಗಳನ್ನು ಒಳಗೊಂಡಿರುತ್ತದೆ. ಇದಕ್ಕೆ ನಾವು ಸಾಹಿತ್ಯದಲ್ಲಿ ವ್ಯಕ್ತವಾದ 'ದೇಶಿ' ಮತ್ತು 'ಮಾರ್ಗ' ಪರಿಕಲ್ಪನೆಗಳ ಹಿನ್ನೆಲೆಯಲ್ಲಿ ಮುಂದುವರಿದ ವಿಶ್ಲೇಷಣಾ ಕ್ರಮವೆಂದು ಪರಿಗಣಿಸುವುದು ಸೂಕ್ತ.

ಒಂದು ಹೊಸ ಅಲೆಯ ಸಾಂಸ್ಕೃತಿಕ ಸಂದರ್ಭ ಎದುರುಗೊಂಡಾಗ ಬಳಸಿದ ಶಬ್ದಗಳಿಗೆ ಪರ್ಯಾಯವಾಗಿ ಇನ್ನೊಂದು ಪದವನ್ನು ನಿಲ್ಲಿಸುವುದು ಅಥವಾ ಪರಂಪರೆ ಯಲ್ಲಿ ಬಳಕೆಯಾದ ಅರ್ಥಕ್ಕೆ ಕಟ್ಟಿಹಾಕುವುದು – ಈ ಎರಡೂ ಬಗೆಯ ಆಲೋಚನೆಗಳು ಹೊಸ ಸಾಂಸ್ಕೃತಿಕ ಸಂದರ್ಭದ ಎಚ್ಚರಕ್ಕೆ ಅಧಿಕೃತವಾಗಿ ಪ್ರೇರಕ ಅಥವಾ ಪೂರಕವೆನಿಸಲಾರವು. ಇವು ಮೇಲುನೋಟಕ್ಕೆ ಹಾಗೆನಿಸಿದರೂ ಅವು ಕ್ಷಣಿಕವಾದುವು ಅಥವಾ ಮೇಲ್ಪದರಿನ ಸ್ವರೂಪದ್ದವು. ಅಥವಾ ಒಂದು ಹೊಸ ಎಚ್ಚರವನ್ನು ಕಾಯ್ದುಕೊಂಡು ಹೋಗಲು ಸಹಕರಿಸು ವಂತಹದ್ದೇ ವಿನಃ ಅದರ ತಾತ್ವಿಕ ಚಲನೆಗೆ ಕೇಂದ್ರ ಶಕ್ತಿಯಾಗಿ ಸಹಕರಿಸುವಂಥವುಗಳಲ್ಲ. ಹೀಗಾಗಿ ಹೊಸ ಎಚ್ಚರದ ಸಾಂಸ್ಕೃತಿಕ ಸಂದರ್ಭದಲ್ಲಿ ಶಬ್ದಗಳ ಅರ್ಥ/ವ್ಯಾಖ್ಯಾನ ಬದಲಾಗುವುದು ಸಾಮಾನ್ಯ. ಆ ನೆಲೆಯಲ್ಲಿ ಅವುಗಳನ್ನು ಬಳಸಿದರೆ, ವ್ಯಾಪ್ತಿ ಹೆಚ್ಚಿಸಿಕೊಳ್ಳುವುದರೊಂದಿಗೆ ಮರು ಚಿಂತನೆಗೆ ಮತ್ತು ತೀವ್ರ ಚಲನೆಗೆ ಸಹಕರಿಸಿದಂತಾಗುತ್ತದೆ. ಕೆಲವರು 'ದೇಶಿ' ಎಂಬ ಶಬ್ದದ ಅರ್ಥ ವಿವರಣೆ ಕೊಟ್ಟು ಅದರ ಕುರಿತು ತಟಸ್ಥ ಧೋರಣೆ ತಾಳಿದ್ದು ಇದೆ. ಇದೂ ಸಮರ್ಥನೀಯವಲ್ಲ. ಇಂದಿನ ಜಾಗತಿಕ ಸಂದರ್ಭದಲ್ಲಿ 'ದೇಶೀಯತೆ' 'ದೇಶೀವಾದ' ಪದಗಳ ಬಳಕೆಗೆ ಚಲನಶೀಲತೆಯನ್ನು ತಂದುಕೊಟ್ಟದ್ದೇ 'ದೇಶೀ' ಎಂಬ ಪದ. ಆದ್ದರಿಂದ ಆ ಪದವನ್ನು ಒಂದು ಹೊಸ ಎಚ್ಚರದೊಂದಿಗೆ ಬಳಸಬೇಕಿದೆ. 'ದೇಶೀ' 'ಪ್ರಾದೇಶಿಕತೆ' ಇಂಥವು ದೇಶದ ವಸ್ತುಸ್ಥಿತಿಯನ್ನು ಇವು ಒಂದನ್ನೊಂದು ಬಿಟ್ಟಿಲ್ಲ. ಆದರೆ ಅವು ಭಿನ್ನ ಅವಸ್ಥಾಂತರ ಮತ್ತು ಆಲೋಚನಾ ಕ್ರಮಗಳನ್ನು ಸಾರುವಂಥವುಗಳಾಗಿವೆ.

(ಹೆಚ್ಚಿನ ವಿವರಕ್ಕಾಗಿ ಗಮನಿಸಿ : ೧. ಪುರಾಣ – ಜಾನಪದ ಮತ್ತು ದೇಶೀವಾದ – ಅರವಿಂದ ಮಾಲಗತ್ತಿ – ೧೯೯೯. ೨. ಪಾಶ್ಚಾತ್ಯ ಸಿದ್ಧಾಂತಗಳು ಮತ್ತು ದೇಶೀವಾದ – ಸಂ. ಅರವಿಂದ ಮಾಲಗತ್ತಿ – ೧೯೯೮)

(ಮುಂದುವರಿಯುತ್ತದೆ) □

ಹಿಂಸಾತ್ಮಕ ದಲಿತ ಪ್ರತಿಭಟನೆ

ಭಾರತೀಯ ಗಣರಾಜ್ಯವು ತನ್ನ ೫೬ ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವಾಗಲೇ ಆಂಧ್ರ ಮತ್ತು ಉತ್ತರ ಪ್ರದೇಶದಲ್ಲಿ ಇಬ್ಬರು ಎಂ.ಎಲ್.ಎಗಳನ್ನು ಗುಂಡಿಟ್ಟು ಕೊಲ್ಲಲಾಗಿದೆ. ಎಲ್ಲರಿಗೂ ತಿಳಿದಿರುವಂತೆ ಈ ಕೊಲೆಗಳ ಹಿಂದೆ ರಾಜಕೀಯ ಪಿತೂರಿ ಅಡಗಿದೆ. ಹಾಗೆಯೇ ಕೊಲೆಯಾದ ಎಂ.ಎಲ್.ಎ ಗಳ ನಡಾವಳಿಯೂ ಸಹ ಅಂತಹದ್ದೇ ದಾಖಲೆಯನ್ನು ಹೊಂದಿತ್ತು. ಈ ಘಟನೆಗಳು ಪ್ರಚುರಪಡಿಸುವ ಒಂದು ಪ್ರಧಾನ ಸಂಗತಿಯೆಂದರೆ ಎಂ.ಪಿ.ಗಳು ಮತ್ತು ಎಂ.ಎಲ್.ಎ.ಗಳು ತಮ್ಮದೇ ಕ್ಷೇತ್ರಗಳಲ್ಲಿ ಸುರಕ್ಷಿತವಾಗಿ/ಸ್ವತಂತ್ರವಾಗಿ ಸಂಚರಿಸಲಾಗದು. ಪೊಲೀಸ್ ರಕ್ಷಣೆಯ ಹೊರತಾಗಿಯೂ ಅನೇಕರು ತಮ್ಮದೇ ಆದ ಖಾಸಗೀ ಭದ್ರತೆಯನ್ನು ಹೊಂದಿದ್ದಾರೆ. ಭಾರತದಲ್ಲಿ ಪೊಲೀಸ್ ಪಹರೆಯಿಲ್ಲದೆ ಯಾವುದೇ ಮತಪೆಟ್ಟಿಗೆಯೂ ಸಹ ಸುರಕ್ಷಿತವಾಗಿರಲಾಗದು. ಅಲ್ಲದೆ ಮತ ಚಲಾಯಿಸುವಾಗ ಜನರನ್ನೂ ಸಹ ಪೊಲೀಸ್ ಪಹರೆಯಲ್ಲೇ ತರುವಂತಹ ಸನ್ನಿವೇಶಗಳಿಗೇನೂ ಕೊರತೆಯಿಲ್ಲ. ದೂರದರ್ಶನ ಚಾನೆಲ್‌ಗಳು ಚರ್ಚೆಗಳನ್ನು ಏರ್ಪಡಿಸುವಾಗಲೂ ಪೊಲೀಸ್ ರಕ್ಷಣೆಯನ್ನು ಹೊಂದಿರುತ್ತವೆ. ಅಲ್ಲದೆ, ಹಿರಿಯ ಪೊಲೀಸ್ ಅಧಿಕಾರಿಗಳು ಬರುವಾಗಲೂ ಅಂಗರಕ್ಷಕರ ಕಾವಲಲ್ಲೇ ಬರಬೇಕಾಗಿದೆ.

ಭಾರತ ತನ್ನ ಪ್ರಥಮ ಪಾರ್ಲಿಮೆಂಟನ್ನು ಚುನಾಯಿಸಿ ೫೩ ವರ್ಷಗಳ ನಂತರವೂ ಸಹ ಹೀಗೇಕೆ ಆಗುತ್ತಿದೆ ? ಲಾಲೂಪ್ರಸಾದ್, ಮುಲಾಯಂ ಸಿಂಗ್, ದೇವೇಗೌಡರ ಬಣಕ್ಕೆ ಸೇರಿರುವ ರಾಜಕೀಯ ಶಾಸ್ತ್ರಜ್ಞರು ಹೇಳುವ ಪ್ರಕಾರ ಭಾರತೀಯ ಸಮಾಜ ಪರಿವರ್ತನೆಯ ಹಾದಿಯಲ್ಲಿದ್ದು, ಅದು ರಾಜಕೀಯದಲ್ಲೂ ಪ್ರತಿಫಲನಗೊಳ್ಳುತ್ತಿದೆ.

೬೦ರ ದಶಕದಲ್ಲಿ ಸರ್ಕಾರಿ ಟೆಂಡರ್‌ಗಳು ಗೋಪ್ಯವಾಗಿದ್ದವು. ಈಗಲೂ ಅದೇ ರೀತಿಯ ಪ್ರಸಂಗಗಳಿದ್ದರೂ ಇಂದಿನಂತೆ ಆಗ ಹಿಂಸಾತ್ಮಕವಾಗಿ ಗುತ್ತಿಗೆಗಳನ್ನು ಕಸಿಯುತ್ತಿರಲಿಲ್ಲ. ಇಂದು ಯಾರು ಅಪರಾಧಿ ದಾಖಲೆಗಳನ್ನು ಹೊಂದಿದ್ದಾರೋ ಅವರೇ ಸರ್ಕಾರಿ ಗುತ್ತಿಗೆಗಳನ್ನು ಹಿಡಿಯಬಹುದಾಗಿದೆ.

ಭಾರತೀಯ ರಾಜ್ಯಾಂಗದ ಒಂದು ಚಾರಿತ್ರಿಕ ನೀತಿಯೆಂದರೆ ಜಮೀನ್ದಾರಿ ಪದ್ಧತಿಯನ್ನು ಯಶಸ್ವಿಯಾಗಿ ನಿಷೇಧಿಸಿದ್ದು. ಗುಜರಾತ್‌ನ ಕೆಲವು ಪ್ರದೇಶಗಳನ್ನು ಬಿಟ್ಟರೆ ಉಳಿದೆಡೆಗಳಲ್ಲಿ ಹಿಂಸಾತ್ಮಕ ಪ್ರತಿರೋಧಗಳೇನೂ ಇರಲಿಲ್ಲ. ನಯವಂಚಕತನ ಅಥವಾ ಕಾನೂನು ಕ್ರಮಗಳಂಥ ತಂತ್ರಗಳನ್ನು ಮಾತ್ರ ಜಮೀನ್ದಾರರು ಬಳಸಿದ್ದರು. ಹಾಗೆಯೇ ಮಂಡಲ್ ಜಾರಿಯೂ ಸಹ ಒಂದು ಚಾರಿತ್ರಿಕ ಘಟನೆಯೇ. ಕಳೆದುಕೊಂಡವರು ಅದನ್ನು ವಿರೋಧಿಸಿದರು. ಬೀದಿ ಪ್ರತಿಭಟನೆಗಳು, ಸಾರ್ವಜನಿಕ ಆಸ್ತಿಯ ಹಾನಿ ಮತ್ತು ಆತ್ಮಹತ್ಯೆಯಂಥ ಮಾರ್ಗಗಳನ್ನು ಮಂಡಲ್ ವಿರೋಧಿಗಳು ಅನುಸರಿಸಿದರು.

ತುರ್ತು ಪರಿಸ್ಥಿತಿಯನ್ನು ಹೇರದೆ, ಸೈನ್ಯವನ್ನು ಕರೆಯದೆ ಭಾರತವು ಭೂ ಸುಧಾರಣೆ ನೀತಿಯನ್ನು ಜಾರಿಯಾಗಿಸಲು ಸಾಧ್ಯವಿಲ್ಲವೇಕೆ ? ಮಂಡಲ್ ಮೀಸಲಾತಿಯನ್ನು ನಿಷೇಧಿಸಿದೆಯಾದಲ್ಲಿ ಅದರ ಪ್ರಯೋಜನ ಪಡೆದವರು, ೧೯೯೦ರಲ್ಲಿ ದ್ವಿಜ ಜಾತಿಗಳು ಪ್ರತಿಭಟಿಸಿದಂತೆ ಹೋರಾಟ ಮಾಡುವರೇ ಅಥವಾ ಹಿಂಸೆಯು ದ್ವಿಗುಣಗೊಳ್ಳುವುದೇ? ಭೂ ಮಿತಿ ಕಾಯ್ದೆಗೆ ವಿರೋಧವಾಗಿ ಪ್ರತಿಯೊಂದು ಹಳ್ಳಿಯಲ್ಲೂ ಡಜನ್ ಕುಟುಂಬಗಳು ಅತಿಯಾದ ಭೂಮಿಯನ್ನು ಹೊಂದಿದ್ದಾರೆ.

ಅಲ್ಲದೆ, ಅವರು ಮತ್ತು ಹೇಳುವುದೇನೆಂದರೆ ರಾಜಕೀಯ ಅಧಿಕಾರ ದ್ವಿಜರಿಂದ ಕೆಳಜಾತಿಗಳಿಗೆ ಹಸ್ತಾಂತರಗೊಳ್ಳುತ್ತದೆ, ಆದ್ದರಿಂದ ಹಿಂಸೆ ! ಇದು ಸುಳ್ಳೇನೂ ಅಲ್ಲ. ಅಧಿಕಾರದ ಗದ್ದುಗೆಯಿಂದ ದ್ವಿಜರನ್ನು ಕೆಳಜಾತಿಗಳು ಕೆಳಗಿಳಿಸುತ್ತಿವೆ. ಆದರೆ ಈ 'ಕೆಳಜಾತಿಗಳು' ಎನ್ನುವ ಪರಿಭಾಷೆ ಅಂತ್ಯಜರನ್ನು ಮತ್ತು ಆದಿವಾಸಿಗಳನ್ನು ಒಳಗೊಳ್ಳುತ್ತಿಲ್ಲ.

ಆದರೆ ಇಲ್ಲಿರುವ ಮುಖ್ಯ ಪ್ರಶ್ನೆಯೆಂದರೆ ಕೆಳಜಾತಿಗಳ ಶಕ್ತಿ ಪ್ರದರ್ಶನವೇಕೆ ಹಿಂಸಾತ್ಮಕ ರೀತಿಯಲ್ಲಿ ವ್ಯಕ್ತವಾಗುತ್ತಿದೆ. ಸಾಮಾಜಿಕ ಪರಿವರ್ತನೆ ಹಿಂಸೆಯ ಹಿಂದಿನ ತರ್ಕವೆಂದರೆ ಯಾರು ಅಧಿಕಾರ ಕಳೆದುಕೊಳ್ಳುತ್ತಾರೋ ಅವರು ಹಿಂಸೆಯನ್ನು ಪ್ರಚೋದಿಸುತ್ತಿರಬೇಕಲ್ಲವೇ ?

ಹಿಂಸಾ ಮಾರ್ಗದಿಂದ ಸಾಮಾಜಿಕ ಮಾನ್ಯತೆಯನ್ನು ಪಡೆದುಕೊಳ್ಳುವುದು ಇತರೆ ಪರಿಣಾಮಗಳಿಗೂ ಕಾರಣವಾಗುತ್ತದೆ. ತಾಲೂಕು ಮಟ್ಟದ ಒಬ್ಬ ರಾಜಕಾರಣಿ ಪೊಲೀಸ್ ಅಧಿಕಾರಿಯನ್ನು ಸಾರ್ವಜನಿಕವಾಗಿ ಹೀಯಾಳಿಸಬಲ್ಲ. ಒಬ್ಬ ಚುನಾಯಿತ ಎಂಎಲ್ಎ ಪೊಲೀಸ್ ಅಧಿಕಾರಿಯ ಕೆನ್ನೆಗೆ ಬಾರಿಸಬಲ್ಲ. ಜಗತ್ತಿನಾದ್ಯಂತವೂ ಪೊಲೀಸ್ ಸಿಬ್ಬಂದಿ ಅವಮಾನಿತರಾಗಿರುತ್ತಾರೆಂದರೆ ಅತಿಶಯೋಕ್ತಿಯೇನಲ್ಲ. ಅವರೆಲ್ಲ ಲಂಚಕೋರರಾಗಿದ್ದು ಕಾನೂನು ಉಲ್ಲಂಘಿಸುವವರಾಗಿದ್ದಾರೆಂದೆ ಬಿಂಬಿಸಲಾಗಿದೆ.

೬೦ರ ದಶಕದ ಭಾರತದಲ್ಲಿ ಒಬ್ಬ ಪೊಲೀಸ್ ಪೇದೆಯು ಇಡೀ ಒಂದು ಸ್ಥಳೀಯ ಸಮುದಾಯವನ್ನು ಹೆದರಿಸುತ್ತಿತ್ತು. ಆದ್ದರಿಂದ ಒಬ್ಬ ರಾಜಕಾರಣಿ ಇಡೀ ಪೊಲೀಸ್ ಪಡೆಯನ್ನೇ ಬೆದರಿಸುತ್ತಾನೆ.



ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಭಾರತದಲ್ಲಿ ಕಾನೂನು ಭಂಜಕರನ್ನು ಅಭಿನಂದಿಸಲಾಗುತ್ತದೆ. ಅಪರಾಧಿ ಹಿನ್ನೆಲೆಯವರ ವಿಜಯವನ್ನು ಸಾರ್ವಜನಿಕವಾಗಿ ಕೊಂಡಾಡಲಾಗುತ್ತದೆ. ಮೂರು ಹಂತದ ಪಂಚಾಯತ್‌ರಾಜ್ ವ್ಯವಸ್ಥೆಯಡಿ ಪ್ರತಿಯೊಂದು ಹಂತದಲ್ಲೂ ಈ ಕಾನೂನು ಭಂಜಕರೇ ಸ್ಪರ್ಧಿಗಳಾಗಿರುತ್ತಾರೆ. ಉತ್ತರ ಭಾರತದಲ್ಲಿ ಯುವಜನರ ರಾಜಕೀಯವೆಂದರೆ ಈ ಕಾನೂನು ಭಂಜಕರು ಅವರನ್ನು ತಮ್ಮ ರಾಜಕಾರಣಕ್ಕೆ ತರುವುದೇ ಆಗಿದೆ. ವಿದ್ಯಾರ್ಥಿ ಯೂನಿಯನ್‌ಗೆ ಸ್ಪರ್ಧಿಸಬೇಕೆಂದರೆ ಅವರಿಗೆ ಅಪರಾಧ ಹಿನ್ನೆಲೆಯಿರಬೇಕೆಂಬುದು ಅಘೋಷಿತ ನಿಯಮವೇ ಆಗಿದೆ.

ಆದ್ದರಿಂದ ಒಬ್ಬ ಪೊಲೀಸ್ ಪೇದೆಯ ಕೆನ್ನೆಗೆ ಒಬ್ಬ ಸ್ಥಳೀಯ ರಾಜಕಾರಣಿ ಬಾರಿಸುವುದೆಂದರೆ ಪ್ರಜಾಪ್ರಭುತ್ವದ ವಿಜಯವೇನೂ ಅಲ್ಲ. ಬದಲಿಗೆ ಭಾರತೀಯ ಗಣರಾಜ್ಯಕ್ಕೆ ಬಾರಿಸಿದಂತೆ ! ಆದರೂ ಭಾರತೀಯ ಗಣರಾಜ್ಯದ ಕೆನ್ನೆಗೆ ಬಾರಿಸುವ ಮೂಲಕ ಚುನಾವಣಾ ಕಣದಲ್ಲಿ ಗೆಲ್ಲುವುದಕ್ಕೆ ಪಾಸ್‌ಪೋರ್ಟ್ ಸಿಕ್ಕಿದಂತಾಗುತ್ತದೆ. ಚುನಾವಣೆ ಗೆಲ್ಲುವ ಅನೇಕ ಅಪರಾಧಿಗಳು 'ಲೋಕಾದಲಿತ್'ಗಳ ಬಗ್ಗೆ ಮಾತನಾಡುತ್ತಾರೆ.

ಪ್ರಜಾಪ್ರಭುತ್ವದಲ್ಲಿ ಜನರ ತೀರ್ಪು ನ್ಯಾಯಾಂಗದ ಕಾನೂನಿಗಿಂತ ಪವಿತ್ರವಾದುದು. ಅಂದರೆ ಜನರೇ ಕಾನೂನು ಆಗಿದ್ದಾರೇನು ? ದ್ವಿಜರು ಅಧಿಕಾರದ ಗದ್ದುಗೆಯಿಂದ ನಾಜೂಕಾಗಿ ಕೆಳಗಿಳಿದಿದ್ದಾರೆ. ಆದರೆ ಕೆಳಜಾತಿಗಳ ವಿಜಯ ಹಿಂಸಾತ್ಮಕವಾದುದು. ಈ ಹೊಸ ವಿದ್ಯಮಾನವನ್ನು ವಿವರಿಸುವುದಾದರೂ ಯಾರು ?

ದಲಿತ್ ಡೈರಿ

ಭಾರತದಲ್ಲಿ ಪೊಲೀಸ್ ಪಹರೆಯಿಲ್ಲದೆ ಯಾವುದೇ ಮತಪೆಟ್ಟಿಗೆಯೂ ಸಹ ಸುರಕ್ಷಿತವಾಗಿರಲಾಗದು. ಅಲ್ಲದೆ ಮತ ಚಲಾಯಿಸುವಾಗ ಜನರನ್ನೂ ಸಹ ಪೊಲೀಸ್ ಪಹರೆಯಲ್ಲೇ ತರುವಂತಹ ಸನ್ನಿವೇಶಗಳಿಗೇನೂ ಕೊರತೆಯಿಲ್ಲ. ದೂರದರ್ಶನ ಚಾನೆಲ್‌ಗಳು ಚರ್ಚೆಗಳನ್ನು ಏರ್ಪಡಿಸುವಾಗಲೂ ಪೊಲೀಸ್ ರಕ್ಷಣೆಯನ್ನು ಹೊಂದಿರುತ್ತವೆ. ಅಲ್ಲದೆ, ಹಿರಿಯ ಪೊಲೀಸ್ ಅಧಿಕಾರಿಗಳು ಬರುವಾಗಲೂ ಅಂಗರಕ್ಷಕರ ಕಾವಲಲ್ಲೇ ಬರಬೇಕಾಗಿದೆ. ಭಾರತ ತನ್ನ ಪ್ರಥಮ ಪಾರ್ಲಿಮೆಂಟನ್ನು ಚುನಾಯಿಸಿ ೫೩ ವರ್ಷಗಳ ನಂತರವೂ ಸಹ ಹೀಗೇಕೆ ಆಗುತ್ತಿದೆ ?

❍ ಅನು : ಡಿ. ಡೊಮಿನಿಕ್

ದಲಿತ್ ಡೈರಿ

ಬಿಹಾರಿನ ದಲಿತರನ್ನು ಪಾಸ್ವಾನ್ ರಕ್ಷಿಸಬಲ್ಲ



ಪಸ್ವಾನ್ ದ್ವಂದ್ವದಲ್ಲಿದ್ದಾರೆ. ಆತನ ಪ್ರಕಾರ ಬಿಹಾರವೆಂದರೆ ಜಾತಿ ಮತ್ತು ಆತ ದಲಿತರ ವಿಮೋಚಕ. ಆದ್ದರಿಂದಲೇ ಆತ ೩೭ ಮಂದಿ ಬಿಜೆಪಿಗಳ ಸಖ್ಯವನ್ನು ಒಪ್ಪುತ್ತಿಲ್ಲ. ಹಾಗೇನಾದ್ರು ಆದಲ್ಲಿ ಕೋಮುವಾದಕ್ಕೆ ಪ್ರಚೋದನೆ ಕೊಟ್ಟಂತಾಗುತ್ತದೆ. ಆದರೆ ಆತ ಜೆಡಿ(ಯು) ಬಣದ ೫೫ ಎಂ.ಎಲ್.ಎಗಳ ಬೆಂಬಲವನ್ನು ಪಡೆಯಲು ಸಿದ್ಧನಿದ್ದಾನೆ. ಇಲ್ಲಿಯ ದುರಂತವೆಂದರೆ ಜೆ.ಡಿ(ಯು)ಗೆ ಬಿಜೆಪಿಯ ಗಣ್ಯರು ಪ್ರಚಾರ ಮಾಡಿದ್ದರು.
ಅಂದರೆ ಪಸ್ವಾನ್ ಎರಡು ವ್ಯಕ್ತಿತ್ವಗಳೊಡನೆ ಜೀವಿಸಬೇಕಾಗಿದೆ. ಆತ ಒಬ್ಬ ದಲಿತನಾಗಿ ಅಧಿಕಾರ ಗದ್ದುಗೆಯನ್ನು ಹಿಡಿದು ದಲಿತರಿಗೆ ಒಳಿತನ್ನು ಮಾಡಬೇಕಿದೆ. ಅದೇ ಸಮಯದಲ್ಲಿ ಆತ ಸೆಕ್ಯುಲರ್ ಆಗಿ ರಾಜಕೀಯ ಸಿದ್ಧಾಂತಿಯಾಗಬೇಕಿದೆ.
ಅಂದರೆ ಆತ ಬಿಹಾರದ ಮುಖ್ಯಮಂತ್ರಿಯಾಗಬಾರದು.

ಉತ್ತರ ಪ್ರದೇಶದಂತೆ ಬಿಹಾರದಲ್ಲೂ ಯಾವ ಪಕ್ಷಕ್ಕೂ ಬಹುಮತ ದೊರೆತಿಲ್ಲ. ಉತ್ತರ ಪ್ರದೇಶದಂತೆಯೇ ಬಿಹಾರದಲ್ಲೂ ಸಮಾಜವು ತ್ರಿಭುಜದಂತೆ ವಿಭಜನೆಗೊಂಡಿದ್ದು ಅಲ್ಪಸಂಖ್ಯಾತರೆಲ್ಲರೂ ೪ನೇ ವೇದಿಕೆಯನ್ನು ರಚಿಸಿಕೊಂಡಿದ್ದಾರೆ. ಅಲ್ಲದೆ, ಉತ್ತರ ಪ್ರದೇಶವನ್ನು ಅನುಸರಿಸಿದೆಯೋ ಎಂಬಂತೆ ಬಿಹಾರದಲ್ಲೂ ಮೂರು ರೀತಿ ರಾಜಕೀಯ ಧ್ರುವೀಕರಣ ನಡೆದಿದ್ದು ಮೂರು ನಿರ್ದಿಷ್ಟ ಸಾಮಾಜಿಕ ವಿಭಾಗಗಳು ಎದ್ದು ಕಾಣುತ್ತವೆ. ಮಂಡಲ್‌ನ ಮುಖ್ಯ ಪ್ರತಿಪಾದಕನಾಗಿರುವ ಮುಲಾಯಂ ಸಿಂಗ್ ಯಾದವ್‌ನ ಸಮಾಜವಾದಿ ಪಕ್ಷವು ಕ್ಲಾಸಿಕಲ್ ಜಾತಿ ಸರ್ವಾಧಿಕಾರತ್ವದ ಪ್ರತಿಪಾದಕರಾದ ದ್ವಿಜರಿಂದ ಅಧಿಕಾರವನ್ನು ಕಿತ್ತುಕೊಂಡಿದೆ. ದ್ವಿಜರು ಭಾ.ಜ.ಪ ದಡಿ ಹೇಗಾದರೂ ಮಾಡಿ ತಮ್ಮ ಅಧಿಕಾರವನ್ನು ಉಳಿಸಿಕೊಳ್ಳಲು ಶತಾಯಗತಾಯ ಶ್ರಮಿಸುತ್ತಿದ್ದಾರೆ. ಬಿ.ಎಸ್.ಪಿ.ಯು ದಲಿತರನ್ನು ಪ್ರತಿನಿಧಿಸುತ್ತಾ ತನ್ನ ರಾಜಕೀಯ ಅಧಿಕಾರ-ಅವಕಾಶಕ್ಕಾಗಿ ಚೌಕಾಸಿ ನಡೆಸಿದೆ.

ಈ ಮೂರು ಮುಖ್ಯ ಸಾಮಾಜಿಕ ತಂಡಗಳು : ದ್ವಿಜರು, ಶೂದ್ರರು ಮತ್ತು ದಲಿತರು ಅಧಿಕಾರದ ಗದ್ದುಗೆಗೆ ಓಟದಲ್ಲಿ ತೊಡಗಿದ್ದಾರೆ. ಯಾವುದೇ ಸಾಂಪ್ರದಾಯಿಕ ದಲಿತ ಚಳವಳಿಯಂತೆ ದಲಿತ ಮತ್ತು ಶೂದ್ರರು ವರ್ಣ ವ್ಯವಸ್ಥೆಯಿಂದ ಶೋಷಿತರೆಂದು ಬಿ.ಎಸ್.ಪಿ.ಯು ಪ್ರತಿಪಾದಿಸುತ್ತಾ ಜಾತಿ ವ್ಯವಸ್ಥೆಯ ವಿರುದ್ಧ ಸಾಮಾಜಿಕ ಹೊಂದಾಣಿಕೆಯನ್ನು ಬಯಸಿತ್ತು. ಆದರೆ ಶೂದ್ರರು ಬ್ರಾಹ್ಮಣರ ಅಧಿಕಾರ ಗದ್ದುಗೆಯನ್ನು ವಶಪಡಿಸಿಕೊಳ್ಳಲಷ್ಟೇ ಕಾಯುತ್ತಿದ್ದಾರೆಂಬ ಮುಖ್ಯ ಸಾಮಾಜಿಕ ಚಲನೆಯನ್ನು ಅರಿಯಲಾರದ ದಲಿತರು ಬ್ರಾಹ್ಮಣ ಸಾಮಾಜಿಕ ವ್ಯವಸ್ಥೆಯನ್ನು ಬುಡಮೇಲು ಮಾಡಲು ಪಣ ತೊಟ್ಟಿದ್ದಾರೆ. ಯಾವಾಗ ದಲಿತರನ್ನು ತಮ್ಮ ಅಡಿಯಾಳುಗಳೆಂದು ಶೂದ್ರರು ಕಾಣತೊಡಗಿದರೋ ಆಗ ಈ ದ್ವಂದ್ವವು ಬಹಿರಂಗವಾಗಿ ಮೈತ್ರಿಯು ೧೮ ತಿಂಗಳಲ್ಲೇ ಕಡಿದುಬಿತ್ತು.

ಈ ಸಾಮಾಜಿಕ ಚಲನೆ ತನ್ನದೇ ಹಾದಿಯನ್ನು ಹಿಡಿಯಿತು. ಬಿಜೆಪಿಯಡಿ ದ್ವಿಜರು ಹಾಗೂ ಬಿಎಸ್‌ಪಿಯಡಿ ದಲಿತರು ಹತ್ತಿರ ಬಂದರು. ವಾಸ್ತವವಾಗಿ ಶೂದ್ರರು ಎದುರಾಳಿಗಳಾದಾಗ ದ್ವಿಜರು ಮತ್ತು ದಲಿತರು ಒಂದಾದರು.

ಯಾವಾಗ ಮಾಯಾವತಿ ಅಧಿಕಾರದ ಗದ್ದುಗೆಯೇರಿದರೋ ದ್ವಿಜರನ್ನು ನಿರ್ಲಕ್ಷಿಸಿದರು. ದ್ವಿಜರು ಇನ್ನೊಂದೆಡೆ ದ್ವಿಜರು ತಮ್ಮ ಹಳೇ ಪೂರ್ವಗ್ರಹಗಳಿಂದ ಮುಕ್ತರಾಗದೆ ಮಾಯಾವತಿಯನ್ನು ವಿರೋಧಿಸತೊಡಗಿದರು. ಭೂತ ಮತ್ತು ವರ್ತಮಾನಗಳೊಡನೆ ತೀವ್ರವಾಗಿ ಗುದ್ದಾಟ ಶುರುವಾಗಿ ದ್ವಿಜರು ತಮ್ಮ ಹಳೇ ಚಾಳಿಯನ್ನು ಬಿಡದೆ ಏನನ್ನೋ ಹುಡುಕುವಂತೆ ವರ್ತಿಸಿದರು. ದಲಿತರು ತಮ್ಮೆಲ್ಲ ಶಕ್ತಿಯನ್ನು ಒಂದುಗೂಡಿಸಿ, ಅಗತ್ಯಕ್ಕಿಂತ ಹೆಚ್ಚಾಗಿ ಪ್ರತಿರೋಧ ವ್ಯಕ್ತಪಡಿಸಿದರು.

ಬಿಹಾರವೂ ಉತ್ತರಪ್ರದೇಶವನ್ನು ಅನುಸರಿಸುತ್ತಿದೆ. ಇತ್ತೀಚಿನವರೆಗೆ ಪಸ್ವಾನ್ ಒಬ್ಬ ಸಭ್ಯ ರಾಜಕಾರಣಿಯಾಗಿದ್ದವ. ಈಗ ಆತ ತನ್ನ ಸ್ವತಂತ್ರ ಲೋಕಜನ ಶಕ್ತಿ ಪಕ್ಷದೊಂದಿಗೆ ಮಾಯಾವತಿಯ ಅವತಾರವೆಂದೇ ಹೇಳಬೇಕು. ಬಿ.ಎಸ್.ಪಿಯಂತೆ ಆತ ತೃತೀಯ ಶಕ್ತಿಯಾಗಿ ಹೊರಹೊಮ್ಮಿದ್ದಾನೆ. ಬಿಹಾರದ ಚುನಾವಣೆ ಯಾದವ ಪ್ರಾಬಲ್ಯವನ್ನು ತಿರಸ್ಕರಿಸಿದೆ. ಬಿಹಾರದ ಎನ್.ಡಿ.ಎ ಉತ್ತರ ಪ್ರದೇಶ ಬಿಜೆಪಿಯಂತಾಗಿದೆ. ಆದರ ಪ್ರಧಾನ ಬೆಂಬಲಿತ ಪಕ್ಷವೆಂದರೆ ಸಂಯುಕ್ತ ಜನತಾದಳವೇ. ಇದೂ ಸಹ ಮಂಡಲ್‌ನ ಪ್ರತಿನಿಧಿಯೇ ಆಗಿತ್ತು. ಬಿಜೆಪಿ ಎನ್‌ಡಿಎನ ಸಣ್ಣ ಪಕ್ಷವಾಗಿತ್ತು. ಸತೀಶ್‌ಕುಮಾರ್‌ನನ್ನು ಮುಖ್ಯಮಂತ್ರಿಯನ್ನಾಗಿ ಬಿಂಬಿಸಿದ್ದರಿಂದ ಯಾದವೇತರ ಶೂದ್ರರ ಮತಗಳನ್ನು ಎನ್‌ಡಿಎ ಬಾಚಿಕೊಂಡಿತು. ಇದರಿಂದ ದ್ವಿಜರಿಗೇನು ಖುಷಿಯಾಗಿಲ್ಲ. ಅವರಿಗೆ ಮತ್ತೊಬ್ಬ ಮಂಡಲ್ ಪ್ರತಿನಿಧಿ ಅವರನ್ನು ಅಧಿಕಾರದಿಂದ ದೂರವಿಡುತ್ತಾನಷ್ಟೆ

ರಾಮ್ ವಿಲಾಸ್ ಪಸ್ವಾನ್ ಇದನ್ನು ಸರಿಯಾಗಿಯೇ ಊಹಿಸಿ ದಲಿತ ದ್ವಿಜರ ಹೊಂದಾಣಿಕೆಯನ್ನು ಮುಂದಿಟ್ಟ ಎಲ್.ಜೆ.ಪಿ ಯಿಂದ ಗೆದ್ದ ೨೯ ಎಂ.ಎಲ್.ಎ.ಗಳಲ್ಲಿ ೨೦ ದ್ವಿಜರೇ ಆಗಿದ್ದಾರೆ. ಇಬ್ಬರು ದಲಿತರು ಮತ್ತು ಇಬ್ಬರು ಯಾದವರನ್ನು ಹೊರತುಪಡಿಸಿದಲ್ಲಿ ಉಳಿದವರೆಲ್ಲರೂ ಇತರ ಶೂದ್ರರೇ ಆಗಿದ್ದಾರೆ. ಈ ಪಟ್ಟಿಯಲ್ಲಿ ಮುಸ್ಲಿಮರ್‍ಯಾರೂ ಇಲ್ಲ.

ಪಸ್ವಾನ್ ದ್ವಂದ್ವದಲ್ಲಿದ್ದಾರೆ. ಆತನ ಪ್ರಕಾರ ಬಿಹಾರವೆಂದರೆ ಜಾತಿ ಮತ್ತು ಆತ ದಲಿತರ ವಿಮೋಚಕ. ಆದ್ದರಿಂದಲೇ ಆತ ೩೭ ಮಂದಿ ಬಿಜೆಪಿಗಳ ಸಖ್ಯವನ್ನು ಒಪ್ಪುತ್ತಿಲ್ಲ. ಹಾಗೇನಾದ್ರು ಆದಲ್ಲಿ ಕೋಮುವಾದಕ್ಕೆ ಪ್ರಚೋದನೆ ಕೊಟ್ಟಂತಾಗುತ್ತದೆ. ಆದರೆ ಆತ ಜೆಡಿ(ಯು) ಬಣದ ೫೫ ಎಂ.ಎಲ್.ಎಗಳ ಬೆಂಬಲವನ್ನು ಪಡೆಯಲು ಸಿದ್ಧನಿದ್ದಾನೆ. ಇಲ್ಲಿಯ ದುರಂತವೆಂದರೆ ಜೆ.ಡಿ(ಯು)ಗೆ ಬಿಜೆಪಿಯ ಗಣ್ಯರು ಪ್ರಚಾರ ಮಾಡಿದ್ದರು.

ಅಂದರೆ ಪಸ್ವಾನ್ ಎರಡು ವ್ಯಕ್ತಿತ್ವಗಳೊಡನೆ ಜೀವಿಸಬೇಕಾಗಿದೆ. ಆತ ಒಬ್ಬ ದಲಿತನಾಗಿ ಅಧಿಕಾರ ಗದ್ದುಗೆಯನ್ನು ಹಿಡಿದು ದಲಿತರಿಗೆ ಒಳಿತನ್ನು ಮಾಡಬೇಕಿದೆ. ಅದೇ ಸಮಯದಲ್ಲಿ ಆತ ಸೆಕ್ಯುಲರ್ ಆಗಿ ರಾಜಕೀಯ ಸಿದ್ಧಾಂತಿಯಾಗಬೇಕಿದೆ. ಅಂದರೆ ಆತ ಬಿಹಾರದ ಮುಖ್ಯಮಂತ್ರಿಯಾಗಬಾರದು.

ದಲಿತರಿಗೆ ಎರಡು ರೀತಿಯಲ್ಲಿ ಅಧಿಕಾರ ಸಿಗಬಹುದು. : ೧. ತನ್ನ ಸ್ವಾಭಿಮಾನವನ್ನು ಕಳೆದುಕೊಂಡು ಮತ್ತೊಬ್ಬರಿಗೆ ವಿಧೇಯತೆಯನ್ನು ವ್ಯಕ್ತಪಡಿಸುವ ಮೂಲಕ, ೨. ಸಮುದಾಯದ ಪ್ರತಿರೋಧವನ್ನು ಸಂಘಟಿಸುತ್ತಲೇ ಚುನಾವಣೆಯಲ್ಲಿ ತನ್ನ ಶಕ್ತಿಯನ್ನು ಪ್ರದರ್ಶಿಸುವುದು ಮತ್ತು ಹೊಂದಾಣಿಕೆಯನ್ನು ಮಾಡಿಕೊಳ್ಳುತ್ತಾ ಅಸ್ಥಿರತೆಯನ್ನುಂಟು ಮಾಡುವುದು. ಪ್ರಸ್ತುತ ಸ್ಥಿತಿಯಲ್ಲಿ ದಲಿತರು ಆಸ್ತಿ ಇಲ್ಲದೆ, ಸಾಂಸ್ಥಿಕ ಮಾಧ್ಯಮಗಳಿಲ್ಲದೆ ಸ್ವಶಕ್ತಿಯಿಂದಲೇ ಅಧಿಕಾರವನ್ನು ಪಡೆಯಲು ಸಾಧ್ಯವಿಲ್ಲ.

ಒಂದು ಬಿಕ್ಕಟ್ಟಿನ ಸ್ಥಿತಿಯಲ್ಲಿ ದಲಿತರು ಲಾಭ ಪಡೆಯಬಹುದು. ಇಂಥ ಸಂದರ್ಭದಲ್ಲಿ ಹೊಂದಾಣಿಕೆ-ಮರುಹೊಂದಾಣಿಕೆಗಳು ಆಗುತ್ತಿರುತ್ತವೆ. ಬಿಹಾರ್‌ನಲ್ಲಿ ಅತಂತ್ರ ಸ್ಥಿತಿಯಿರುವುದರಿಂದ ಪಸ್ವಾನ್‌ಗೊಂದು ಅವಕಾಶವಿದೆ. ತನ್ನ ಶಕ್ತಿಯನ್ನು ಪ್ರದರ್ಶಿಸಿ ತನ್ನ ನಿಲುವನ್ನು ಆತ ಸ್ಪಷ್ಟಪಡಿಸಿದ್ದಾನೆ. ಆತ ತನ್ನ ಪ್ರಾಬಲ್ಯವನ್ನು ಜಾಗರೂಕವಾಗಿ ಗಟ್ಟಿಪಡಿಸಿಕೊಳ್ಳಬೇಕಾಗಿದೆ. ಮಿತಿಗಳನ್ನು ಕುರಿತು ಚಿಂತಿಸುವ ಸಮಯ ಇದಲ್ಲ. ಆರ್.ಜೆ.ಡಿ/ಸಂಯುಕ್ತ ರಂಗದ ಮೈತ್ರಿಯನ್ನು ಸಾಧಿಸಿ ಅಧಿಕಾರ ಹಿಡಿದು ಬಿಹಾರದನೊಂದ ದಲಿತರಿಗೆ ಆಸರೆಯಾಗಬೇಕಿದೆ.

ದಲಿತ್ ಡೈರಿ

ಅಸಡ್ಡೆಗೊಳಗಾಗಿರುವ ನಮ್ಮ ಹಕ್ಕುಗಳು

ದಲಿತರು ಚರಿತ್ರೆಯ ಮಿತಿಯೊಂದಿಗೆ ಜೀವಿಸಲು ಇರುವವರೇ? ಎಡಪಂಥ ಯುಪಿಎ ಅನ್ನು ನಿಂದಿಸುತ್ತಿದೆ. ಹಾಗೆಯೇ ಎನ್.ಡಿ.ಎ. ಸಹ ಮಾಡುತ್ತಿದೆ. ಹಾಗೆಯೇ ಸರ್ಕಾರದ ಕಾರ್ಯದಕ್ಷತೆಯನ್ನು ಪರಿಶೀಲಿಸಲು ಇರುವ ಬುದ್ಧಿಜೀವಿಗಳು ಟೀಕೆ ಮಾಡುವ ಯಾವುದೇ ಅವಕಾಶವನ್ನು ಬಿಡಲು ತಯಾರಿಲ್ಲ. ಇವರ್‍ಯಾರೂ ಖಾಸಗೀ ವಲಯದಲ್ಲಿ ಮೀಸಲಾತಿಯನ್ನು ಉತ್ತೇಜಿಸುವುದಿಲ್ಲ. ಅಲ್ಲದೆ ಸರ್ಕಾರ ಅದರ ಬಗ್ಗೆ ಅಸಡ್ಡೆ ವ್ಯಕ್ತಪಡಿಸುವಾಗಲೂ, ಅದರ ಬಗ್ಗೆ ಚಕಾರ ಎತ್ತುವುದಿಲ್ಲ. ಹಾಗೆಯೇ ಇವರ್‍ಯಾರೂ ಕೇಂದ್ರ ಬಜೆಟ್‌ನಲ್ಲಿ ದಲಿತರಿಗೆ ಅಲ್ಪ ಮೊತ್ತವನ್ನು ನಿಗದಿಪಡಿಸಿದಾಗಲೂ ಟೀಕೆ ಮಾಡುವುದಿಲ್ಲ. ಏಕೆ? ಚಾರಿತ್ರಿಕವಾಗಿ ದಲಿತರಿಗೆ ಸಾಮಾಜಿಕ ಸ್ನೇಹಿತನ್ಯಾರು ಇಲ್ಲ. ಗಣರಾಜ್ಯ ಅವರ ಒಳಿತನ್ನು ಬಯಸುವಂತೆ ಬಂದಿತು. ಒಬ್ಬ ದಲಿತ ಇಂದು ನಗುಮೊಗದಿಂದ ಇದ್ದಾನೆಂದರೆ ಅದಕ್ಕೆ ಗಣರಾಜ್ಯದ ಕೊಡುಗೆ ಇದೆ.

ಖಾಸಗಿ ವಲಯದಲ್ಲಿ ದಲಿತರಿಗೆ ಮೀಸಲಾತಿ ಒದಗಿಸಬೇಕೆನ್ನುವ ಸಂಗತಿ ಹಿಂಬದಿಗೆ ಸರಿದುಬಿಟ್ಟಿದೆ. ನನ್ನ ಮಾಧ್ಯಮ ಸ್ನೇಹಿತರ ಪ್ರಕಾರ ಸರ್ಕಾರ ಅದರ ಬಗ್ಗೆ ಆಸಕ್ತಿ ವಹಿಸದಿದ್ದಲ್ಲಿ ಏನೂ ಸಾಧ್ಯವಾಗದು. ಮಹಾರಾಷ್ಟ್ರದ ಚುನಾವಣೆಯಲ್ಲಿ ಪ್ರಧಾನಮಂತ್ರಿ ಡಾ|| ಮನಮೋಹನ್ ಸಿಂಗ್ ಅದರ ಬಗ್ಗೆ ಧ್ವನಿ ಎತ್ತಿದಾಗ ಅದಕ್ಕೆ ವ್ಯಾಪಕ ಪ್ರತಿಕ್ರಿಯೆ ಬಂದಿತ್ತು. ಇತ್ತೀಚಿನ ವರದಿಗಳ ಪ್ರಕಾರ ೪ ದೊಡ್ಡ ಉದ್ಯಮ ಸಂಘಟನೆಗಳನ್ನು ಸರ್ಕಾರ ಸಮಾಲೋಚನೆಗೆ ಆಹ್ವಾನಿಸಿದೆ. ಹಾಗೆಯೇ ವರದಿಗಳು ಹೇಳುವಂತೆ ಸಾಮಾಜಿಕ ನ್ಯಾಯ ಮತ್ತು ಸಶಕ್ತೀಕರಣ ಸಚಿವರಾದ ಕು. ಮೀರಾಕುಮಾರ್ ಕೈಗಾರಿಕಾ ಉದ್ದಿಮೆಗಳಿಗೆ ಕರೆ ಕಳುಹಿಸಿದ್ದಾರೆ. ಕೆಲವರು ಅದಕ್ಕೆ ಸ್ಪಂದಿಸಿದರೆ ಅನೇಕರು ಅದಕ್ಕೆ ಪ್ರತಿಕ್ರಿಯೆ ವ್ಯಕ್ತಪಡಿಸಿಲ್ಲ.

ಟಾಟಾದವರು ಅದರ ಬಗ್ಗೆ ಸ್ವಲ್ಪ ಆಸಕ್ತಿ ತೋರಿದ್ದಾರೆ. ಸರ್ಕಾರ ಮೀಸಲಾತಿ ಕುರಿತಂತೆ ಸಚಿವರ ಒಂದು ಗುಂಪನ್ನು ರಚಿಸಿದೆ. ಶರದ್‌ಪವಾರ್ ಆ ಸಮಿತಿಯ ಮುಖ್ಯಸ್ಥರಾಗಿದ್ದು ಪಸ್ವಾನ್, ಲಾಲು ಪ್ರಸಾದ್ ಯಾದವ್ ಅದರ ಸದಸ್ಯರುಗಳಲ್ಲಿ ಸೇರ್ಪಡೆಯಾಗಿದ್ದಾರೆ. ಈ ಸಂಗತಿಯಲ್ಲಿ ಪ್ರಧಾನ ಮಂತ್ರಿ ಅಥವಾ ಯುಪಿಎ ಅಧ್ಯಕ್ಷೆ ಸೋನಿಯಾಗಾಂಧಿ ವೈಯಕ್ತಿಕ ಆಸಕ್ತಿ ತೆಗೆದುಕೊಳ್ಳದಿದ್ದಲ್ಲಿ ಅದನ್ನು ಪರಿಹರಿಸಲಾಗುವುದಿಲ್ಲ. ಅಥವಾ ದಲಿತರು ತಮ್ಮ ವಿಧಿಯನ್ನು ಶಪಿಸಿಕೊಂಡು ಜೀವಿಸಬೇಕಾಗಿದೆ.

ಈ ಎಲ್ಲಾ ಬೆಳವಣಿಗೆಗಳೊಳಗೊಂದು ಸೂತ್ರ ಕಾಣಿಸುತ್ತಿದೆ. ಒಬ್ಬ ದಲಿತನಾದ ಸುಶೀಲ್‌ಕುಮಾರ್ ಶಿಂಧೆಯನ್ನು ಮಹಾರಾಷ್ಟ್ರದ ಮುಖ್ಯಮಂತ್ರಿಯನ್ನಾಗಿ ಉಳಿಸಿಕೊಳ್ಳಬೇಕಿತ್ತು. ಆಂಧ್ರಾದಲ್ಲಿ ಕಾಂಗ್ರೆಸ್ ಪಕ್ಷ ಒಬ್ಬ ದಲಿತನನ್ನು ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡಬಹುದಿತ್ತು. ಸೋನಿಯಾ ಗಾಂಧಿಯ ತ್ಯಾಗದೆದುರು ಯಾರು ಬಾಯಿ ಬಿಡದ ಅಂಥ ನಿರ್ಧಾರಗಳನ್ನು ಒಪ್ಪಿಕೊಳ್ಳುತ್ತಿದ್ದರು.

ಹರಿಯಾಣ ಇನ್ನೊಂದು ಕಣ್ಣೆದುರಿಸುವಂಥ ಉದಾಹರಣೆ. ರಾಜ್ಯದ ಅಧಿಕಾರವನ್ನು ಹಿಡಿಯಲು ಜಾಟ್‌ರಿಂದ ಮತ್ತು ಬೇರೆಯವರಿಂದ ಸಾಕಷ್ಟು ಸೆಣಸಾಟ ನಡೆದಿತ್ತು. ಆಂಧ್ರಾದಲ್ಲಿದ್ದಂತೆ ಹರಿಯಾಣದಲ್ಲೂ ಸರ್ವಾನುಮತದ ಮುಖ್ಯಮಂತ್ರಿ ಅಭ್ಯರ್ಥಿ ಇರಲಿಲ್ಲ. ದಲಿತರಾದ ಸೆಲ್ಜಾ ತನ್ನ ಅಧಿಕ ಅನುಭವದಿಂದ ಹರಿಯಾಣದ ಮುಖ್ಯಮಂತ್ರಿಯಾಗಬಹುದಿತ್ತು. ಆದರೆ ಆಕೆಯನ್ನು ಕಡೆಗಣಿಸಲಾಯಿತು. ಅಂತಿಮವಾಗಿ ಒಬ್ಬ ಜಾಟ್‌ಗೆ ಆ ಸ್ಥಾನ ದಕ್ಕಿತು.

ಬಿಹಾರದಲ್ಲಿಯೂ ವಿಚಿತ್ರವಾದ ಸನ್ನಿವೇಶ ಎದುರಾಗಿದೆ. ಅಲ್ಲಿನ ಚುನಾವಣಾ ಮೈತ್ರಿಯಲ್ಲಿ ಆರ್.ಜೆ.ಪಿ. ಮತ್ತು ಪಸ್ವಾನ್‌ನ ಲೋಕ ಜನ ಶಕ್ತಿಯೊಡನೆ ಕಾಂಗ್ರೆಸ್ ಹೊಂದಾಣಿಕೆ ಮಾಡಿ ಸಾಧಿಸಿದ್ದರೂ, ಲೋಕ ಶಕ್ತಿ ಕಾಂಗ್ರೆಸ್‌ನ ನಿಜವಾದ ಮೈತ್ರಿಕೂಟವೆಂದು ಕರೆಯಬಹುದಾಗಿತ್ತು. ತನ್ನ ಪ್ರಚಾರದ ವೇಳೆ ಹೆಮ್ಮೆಯಿಂದ ಪಸ್ವಾನ್ ಅದನ್ನು ಘೋಷಿಸಿದ್ದ. ಅದಕ್ಕೆ ಕಾಂಗ್ರೆಸ್‌ನಿಂದ ವಿರೋಧವೇನೂ ಇರಲಿಲ್ಲ. ಚುನಾವಣೆಯ ನಂತರ ಕಾಂಗ್ರೆಸ್ ಆರ್.ಜೆ.ಪಿಗೆ ತನ್ನ ಬೆಂಬಲವನ್ನು ಸೂಚಿಸಿ, ಗೌರ್ನರ್‌ಗೆ ಪತ್ರ ಬರೆಯಿತು. ಪಸ್ವಾನ್ ಈಗ ಅನೇಕ ತಿರುವುಗಳಲ್ಲಿದ್ದಾರೆ. ಸೆಕ್ಯುಲರ್ ಆರ್.ಜೆ.ಡಿ. ಆತನಿಗೆ ಬೆಂಬಲ ನೀಡಲು ತಯಾರಿಲ್ಲ. ಹಾಗೆಯೇ ಆತನೂ ಸಹ ಆರ್‌ಜೆಡಿಯೊಡನೆ ವ್ಯವಹರಿಸಲು ಇಷ್ಟಪಡುತ್ತಿಲ್ಲ. ಆತ ಚುನಾವಣಾ ವೇಳೆ ಹೇಳಿದಂತೆ ತನ್ನ ಪ್ರಾಮಾಣಿಕತೆಯನ್ನು ಉಳಿಸಿಕೊಂಡಿದ್ದ ಆತ ಎನ್‌ಡಿಎನಿಂದ ಯಾವುದೇ ಬೆಂಬಲ ಪಡೆಯಲು ತಯಾರಿಲ್ಲ. ಹೀಗಿದ್ದರೂ ಜೆ.ಡಿ. (ಯು) ನೊಡನೆ ಮೃದುವಾಗಿ ಅದರ ಬೆಂಬಲ ಬಯಸಿದ್ದ. ಕುರ್ಮಿ ಜನಾಂಗದ ಶಕ್ತಿಯನ್ನು ಜೆ.ಡಿ. (ಯು) ಹೊಂದಿದೆ. ಯಾದವರಂತೆ ಅವರೂ ಸಹ ಕ್ರೂರಿಗಳೇ. ಇದು ಆಂಧ್ರದಲ್ಲಿ ರೆಡ್ಡಿಗಳ ವಿರೋಧವಾಗಿ ಕಮ್ಮಾಗಳ ಬೆಂಬಲವನ್ನು ಒಬ್ಬ ದಲಿತ ಬಯಸಿದಂತಿದೆ. ಪಸ್ವಾನ್ ಬಿಹಾರದ ಮುಖ್ಯಮಂತ್ರಿಯಾಗಬಹುದು. ಆದರೆ ಅದಕ್ಕೆ ಎನ್.ಡಿ.ಎ.ನ ಮೈತ್ರಿ ಅಗತ್ಯವಿದೆ. ಆದರೆ ಬಿಜೆಪಿಯು ಎನ್.ಡಿ.ಎ.ನ ಭಾಗವಾಗಿದೆ. ಯಾವುದೇ ದಲಿತ ಬಿಜೆಪಿಗೆ ತನ್ನ ಬೆಂಬಲ ವ್ಯಕ್ತಪಡಿಸುವಂತಿಲ್ಲ ಅಥವಾ ಬಯಸುವಂತಿಲ್ಲ. ಕಾರಣ ಅದು ಭೂತವನ್ನು ವೈಭವೀಕರಿಸುತ್ತಾ ಹಳೆಯ ಮೌಲ್ಯ ವ್ಯವಸ್ಥೆಯನ್ನೇ ಬಯಸುತ್ತದೆ. ಆದ್ದರಿಂದ ಪಸ್ವಾನ್‌ನ್ನು ಈ ನಿಟ್ಟಿನಲ್ಲಿ ಆರೋಪಿಸುವಂತಿಲ್ಲ. ಆದರೆ ಬಿಹಾರ್ ಅಥವಾ ಯು.ಪಿ.ಯ ಗತಿಯೇನು? ಇಲ್ಲಿ ಬ್ರಾಹ್ಮಣ - ಬನಿಯಾಗಳ ಮೈತ್ರಿಯು ಹಿಂದೂ ಮೂಲಭೂತವಾದಿಗಳಿಗಿಂತ ಗಟ್ಟಿಯಾದುದು. ಇದು ನಿಜವೇ ಆಗಿದ್ದಲ್ಲಿ ಪಸ್ವಾನ್ ಎನ್.ಡಿ.ಎನೊಂದಿಗೆ ಮೈತ್ರಿಯನ್ನು ಒಪ್ಪಿಕೊಂಡು ಯಾದವ ಪ್ರಾಬಲ್ಯಕ್ಕೆ ಪೆಟ್ಟು ನೀಡಬಹುದು. ಏಕೆಂದರೆ ದಲಿತರು ಮತ್ತು ದ್ವಿಜರು ಯಾದವರಿಂದ ಪೆಟ್ಟು ತಿಂದವರೇ ಆಗಿದ್ದಾರೆ.



ಆದರೆ ಪಸ್ವಾನ್ ಎನ್‌ಡಿಎ ನೊಂದಿಗೆ ಹೋದಲ್ಲಿ ಆತನನ್ನು ರಾಕ್ಷಸೀಕರಿಸಲಾಗುತ್ತದೆ. ಎಡಪಂಥ, ಸೆಕ್ಯುಲರ್, ಸಮಾಜವಾದಿಗಳು ಹಾಗೂ ಉದಾರವಾದಿಗಳೆಲ್ಲ ಆತನನ್ನು ಸೈದ್ಧಾಂತಿಕ ಹಿಂಸೆಗೊಳಪಡಿಸುತ್ತಾರೆ. ಇವರ್‍ಯಾರು ಎಂದೂ ಒಬ್ಬ ದಲಿತ ನಾಯಕನನ್ನು ಬೆಳೆಯಲು ಬಿಟ್ಟಿಲ್ಲ. ಹಾಗೆಯೇ ಬೇರೆಯವರು ದಲಿತನಿಗೆ ಅಧಿಕಾರ ಪಡೆಯಲು ಸಹಕರಿಸುವುದನ್ನು ಒಪ್ಪುವುದಿಲ್ಲ.

ದಲಿತರೊಬ್ಬರಿಂದಲೇ ರಾಜಕೀಯ ಅಧಿಕಾರ ಪಡೆಯಲಾಗುವುದಿಲ್ಲ. ಬಿಜೆಪಿಯು ಬಂಗಾರುಲಕ್ಷ್ಮಣ್ ಮತ್ತು ಮಾಯಾವತಿಯೊಡನೆಯ ಒಡನಾಟ ಮುಗಿದಾಕ್ಷಣ ಅದು ಜನಸಂಘದ ಯುಗಕ್ಕೆ ಮರಳಿಬಿಟ್ಟಿದೆ. ಈಗ ದಲಿತರನ್ನು ಮುಕ್ತವಾಗಿ ನಿಂದಿಸಲಾಗುತ್ತಿದೆ.

ದಲಿತರು ಚರಿತ್ರೆಯ ಮಿತಿಯೊಂದಿಗೆ ಜೀವಿಸಲು ಇರುವವರೇ? ಎಡಪಂಥ ಯುಪಿಎ ಅನ್ನು ನಿಂದಿಸುತ್ತಿದೆ. ಹಾಗೆಯೇ ಎನ್.ಡಿ.ಎ. ಸಹ ಮಾಡುತ್ತಿದೆ. ಹಾಗೆಯೇ ಸರ್ಕಾರದ ಕಾರ್ಯದಕ್ಷತೆಯನ್ನು ಪರಿಶೀಲಿಸಲು ಇರುವ ಬುದ್ಧಿಜೀವಿಗಳು ಟೀಕೆ ಮಾಡುವ ಯಾವುದೇ ಅವಕಾಶವನ್ನು ಬಿಡಲು ತಯಾರಿಲ್ಲ.

ಇವರ್‍ಯಾರೂ ಖಾಸಗೀ ವಲಯದಲ್ಲಿ ಮೀಸಲಾತಿಯನ್ನು ಉತ್ತೇಜಿಸುವುದಿಲ್ಲ. ಅಲ್ಲದೆ ಸರ್ಕಾರ ಅದರ ಬಗ್ಗೆ ಅಸಡ್ಡೆ ವ್ಯಕ್ತಪಡಿಸುವಾಗಲೂ, ಅದರ ಬಗ್ಗೆ ಚಕಾರ ಎತ್ತುವುದಿಲ್ಲ. ಹಾಗೆಯೇ ಇವರ್‍ಯಾರೂ ಕೇಂದ್ರ ಬಜೆಟ್‌ನಲ್ಲಿ ದಲಿತರಿಗೆ ಅಲ್ಪ ಮೊತ್ತವನ್ನು ನಿಗದಿಪಡಿಸಿದಾಗಲೂ ಟೀಕೆ ಮಾಡುವುದಿಲ್ಲ. ಏಕೆ?

ಚಾರಿತ್ರಿಕವಾಗಿ ದಲಿತರಿಗೆ ಸಾಮಾಜಿಕ ಸ್ನೇಹಿತನ್ಯಾರು ಇಲ್ಲ. ಗಣರಾಜ್ಯ ಅವರ ಒಳಿತನ್ನು ಬಯಸುವಂತೆ ಬಂದಿತು. ಒಬ್ಬ ದಲಿತ ಇಂದು ನಗುಮೊಗದಿಂದ ಇದ್ದಾನೆಂದರೆ ಅದಕ್ಕೆ ಗಣರಾಜ್ಯದ ಕೊಡುಗೆ ಇದೆ. ಇತ್ತೀಚಿನ ಬೆಳವಣಿಗೆಗಳನ್ನು ಗಮನಿಸಿದರೆ ದಲಿತರನ್ನು ಈ ಗಣರಾಜ್ಯವೂ ಸಹ ಸಮಾಜದ ಕ್ರೂರ ಕೈಗೆ ಒಪ್ಪಿಸಿಬಿಟ್ಟಂತೆ ಕಾಣುತ್ತದೆ. □

ಹೊಸ ಬಾನಂಗಳದಿ
ಹೊಸ ರಾಗವ ಹಾಡುತ
ಮೈಮನ ಪುಳಕಿತ
ಸಮರಸ ಬದುಕಿಗೆ ಸಂತಸ ತರುತ
ಮತ್ತೆ ಬಂದಿತು **ಯುಗಾದಿ**

ಶ್ರೀ ಪಾರ್ಥಿವನಾಮ ಸಂವತ್ಸರದ ಈ ಶುಭ ಸಂದರ್ಭದಲ್ಲಿ ಸುಖ, ಶಾಂತಿ, ನೆಮ್ಮದಿಯ ಬದುಕಿಗಾಗಿ ಮೂಡಿಬಂದ ಯೋಜನೆಗಳು :

★ ಪ್ರಕೃತಿ ಮಾತೆಯೊಂದಿಗೆ ಮಿಳಿತಗೊಂಡು ಎಲ್ಲರಿಗೂ ಅನ್ನದಾತನಾಗಿರುವ ರೈತನ ಕುಶಲತೆಯೇ ಸರ್ಕಾರದ ಸಫಲತೆ. ಈ ದಿಶೆಯಲ್ಲಿ ನಮ್ಮ ಹೊಲ- ನಮ್ಮ ತೋಟ, ಗಂಗಾ ಕಲ್ಯಾಣ, ಯಶಸ್ವಿನಿ, ಬೆಳೆ ವಿಮೆ ಯೋಜನೆಗಳ ಸಾಕಾರ.

★ ನಮ್ಮ ಮೈಗೆ ಹಿತವಾದ ಉಡುಪು ನೀಡುತ್ತಾ ನೇಯ್ಗೆಯಲ್ಲಿ ನಿರತನಾಗಿರುವ ನೇತಾರ ನಮ್ಮ ನೇಕಾರ. ನೇಯ್ಗೆ ನಿರಾತಂಕವಾಗಿರಲು ವಿದ್ಯುತ್ ಸಹಾಯಧನ, ಆರೋಗ್ಯ ರಕ್ಷಣೆ, ಕಚ್ಚಾ ವಸ್ತುಗಳ ಪೂರೈಕೆ ನೆರವು.

★ ಅಭಿವೃದ್ಧಿಯಲ್ಲಿ ಸಮತೋಲನ ತರಲು ಅತ್ಯಂತ ಹಿಂದುಳಿದ ೩೯ ತಾಲ್ಲೂಕುಗಳಲ್ಲಿ ಕೈಗಾರಿಕ ವಿಕಾಸ ಸೇವೆ. ಹೊಸ ವರ್ಷದ ಮುಂಬರುವ ದಿನಗಳಲ್ಲಿ ೩೦,೦೦೦ ಜನರಿಗೆ ಉದ್ಯೋಗವಕಾಶ.

★ ಇಂದಿನ ಮಕ್ಕಳೇ ನಾಳಿನ ನಾಗರಿಕರಲ್ಲವೇ. ಅವರಿಗಾಗಿ ಶಾಲೆಗಳಲ್ಲಿ ಇಕೋ ಕ್ಲಬ್‌ಗಳು, ಪರಿಸರ ಸಂರಕ್ಷಣೆಯ ಪಾಠ.

★ ಪ್ರವಾಸವೆಂದರೇ ಆನಂದಾನುಭವ ಎನ್ನುವಂತಾಗಲು ಸುವರ್ಣ ಕರ್ನಾಟಕ ಪ್ರವಾಸಿ ತಾಣ ಯೋಜನೆ. ಆಯ್ದ ಸ್ಥಳಗಳಲ್ಲಿ ಮೂಲ ಸೌಕರ್ಯ ತಾಣ.

★ ಸುವರ್ಣ ಕರ್ನಾಟಕ - ಕರ್ನಾಟಕ ರಾಜ್ಯದ ೫೦ ಸಾರ್ಥಕ ಸಂವತ್ಸರಗಳ ಕುರುಹು. ಇದರ ಸವಿನೆನಪಿನಲ್ಲಿ ರಾಷ್ಟ್ರಕವಿ ಕುವೆಂಪು ಸಾಂಸ್ಕೃತಿಕ ಕೇಂದ್ರದ ಸ್ಥಾಪನೆ, ಖ್ಯಾತ ಕನ್ನಡ ಸಾಹಿತಿಗಳ ಕೃತಿಗಳ ಭಾಷಾಂತರ.

★ ಗ್ರಾಮೀಣ ಬದುಕು ಸರ್ವಾಂಗ ಸುಂದರವಾಗಿಸಲು ಪಂಚಸೂತ್ರದ ಸ್ವಚ್ಛ ಗ್ರಾಮ, ಕುಗ್ರಾಮ-ಸುಗ್ರಾಮ, ಗ್ರಾಮೀಣ ರಸ್ತೆಗಳ ನಿರ್ವಹಣೆಗಾಗಿ ಮುಖ್ಯಮಂತ್ರಿಗಳ ರಸ್ತೆ ಅಭಿವೃದ್ಧಿ ನಿಧಿ.

★ ಅಲ್ಪಸಂಖ್ಯಾತರಿಗಾಗಿ ಶಾದಿ ಮಹಲ್, ನಿರುದ್ಯೋಗಿ ಮಹಿಳೆಯರಿಗಾಗಿ ಕೌಶಲ್ಯ. ಹಿಂದುಳಿದ ವರ್ಗಗಳಿಗಾಗಿ ಶ್ರಮ ಶಕ್ತಿ

ಯುಗಾದಿಯ ಬೇವು-ಬೆಲ್ಲ ತಿಂದು
ನಮ್ಮಾಶಯಗಳಿಗೆ ಯಶ ತರಲೆಂದು ಹಾಡೋಣ ಬಂಧು

ಸುವರ್ಣ ಕರ್ನಾಟಕ ವರ್ಷ : 2006-07

ಕರ್ನಾಟಕ ವಾರ್ತೆ

‘ಕುಲಂ’

ಜಾಗತೀಕರಣವನ್ನೂ ನಾಚಿಸುವ ಕುಲದ ಅನುರಣನ

ವಿಮರ್ಶೆ

ಸಮಕಾಲೀನ ಅಧಿಕಾರ ಶಾಹಿ, ರಾಜಕಾರಣ ಮುಂತಾದ ಕ್ಷೇತ್ರಗಳಲ್ಲಿ ಜಾತಿಯ ದೌರ್ಬಲ್ಯವು ಎಂತಹ ಅರ್ಹತೆಯ ನ್ನಾದರೂ ದುರ್ಬಲ ಗೊಳಿಸುವ ಹುನ್ನಾರಗಳನ್ನು ಈ ನಾಟಕವು ಪ್ರಸ್ತುತ ಪಡಿಸುತ್ತಿದೆ. ಹಾಗಾಗಿ ವರ್ತಮಾನ ಮತ್ತು ಪಾರಂಪರಿಕವಾದ ಜಾತಿ ಮೂಲ ವಾಸ್ತವವನ್ನು ಅದರ ಕ್ರೌರ್ಯಕ್ಕೆ ಒಡ್ಡಿದ ಸಮರ್ಥ ನಾಟ್ಯ ಪ್ರತಿಮೆಯಾಗಿ ಇದು ನಿಲ್ಲುತ್ತದೆ. ಇದನ್ನು ರಂಗಮಂದಿರದಲ್ಲಿ ನೋಡುವಾಗ ಅನೇಕರು ತಮ್ಮ ಅನುಭವಗಳ ಹಿನ್ನೆಲೆಯಲ್ಲಿ ವರ್ತಮಾನವನ್ನು ಗ್ರಹಿಸುತ್ತಿದ್ದರೆ, ಇನ್ನೂ ಕೆಲವರು ಭಾರತದ ಸಾಮಾಜಿಕ ಮೂಲದ ಒಟ್ಟು ಚರಿತ್ರೆಯನ್ನು ಪ್ರಜ್ಞೆಯೊಳಕ್ಕೆ ತಂದುಕೊಳ್ಳುತ್ತಿದ್ದರು.

○ ಡಾ॥ ಕಾ.ವೆಂ. ಶ್ರೀನಿವಾಸಮೂರ್ತಿ

‘ಕುಲಂ’ -ಇದು ರಾಜಪ್ಪ ದಳವಾಯಿ ವಿರಚಿತ, ಸಿ. ಬಸವಲಿಂಗಯ್ಯ ನಿರ್ದೇಶನದ, ‘ಶಿವಸಂಚಾರ’ ಪ್ರಸ್ತುತಪಡಿಸಿದ ರಂಗಪಠ್ಯವಾಗಿದೆ. ಇದರ ಪ್ರಯೋಗವನ್ನು ಕಂಡಾಗ ಅನುರಣಿತವಾದ ತರಂಗಗಳ ದಾಖಲೀಕರಣ ಪ್ರಸ್ತುತ ಲೇಖನವಾಗಿದೆ.

ಜಗತ್ತಿನ ಒಂದೊಂದು ದೇಶಗಳಿಗೂ ಒಂದೊಂದು ವಿಶಿಷ್ಟತೆಯಿರಬಹುದು. ಅಂತಹ ವಿಶಿಷ್ಟತೆ ಭಾರತಕ್ಕೂ ಇದೆ. ಅದನ್ನು ಸಾಧ್ಯವಾಗಿಸಿರುವ ಸಂಗತಿಯಾಗಿ ‘ಜಾತಿ’ ಎಂಬ ಕಲ್ಪನೆಯಿದೆ. ಇದನ್ನು ಪಾರಂಪರಿಕವಾಗಿ ಕುಲ ಎಂದು ಕರೆಯಲಾಗುತ್ತಾ ಬರಲಾಗಿದೆ.

ಇವತ್ತು ಜಗತ್ತಿನಲ್ಲಿ ವರ್ಗ, ವರ್ಣ, ಜನಾಂಗ, ಲಿಂಗ ಮೊದಲಾದ ಅನೇಕ ಸಾಮಾಜಿಕ ನೆಲೆಗಳ ಸವಾಲುಗಳಿವೆ. ಇವೆಲ್ಲವನ್ನೂ ನಾಚಿಸುವಂತೆ ಜಾಗತೀಕರಣವು ಪ್ರವೇಶ ಮಾಡಿದೆ. ಇದನ್ನು ನಾಳೆಯಾದರೂ ಓಡಿಸಬಹುದು. ಆದರೆ ಜಾತಿಯನ್ನು ಸಹಸ್ರಾರು ವರ್ಷಗಳಿಂದ ನಾವು ಓಡಿಸಲು ಸಾಧ್ಯವಾಗಿಲ್ಲ. ಹಾಗಾಗಿ ಜಾಗತೀಕರಣವನ್ನೇ ನಾಚಿಸುವ ಸವಾಲಾಗಿ ‘ಕುಲ’ವಿದೆ. ಇದು ಭಾರತದ ಭವ್ಯ ಎನ್ನಿಸಲ್ಪಡುವ ಬಲೂನಿನ ರಂಧ್ರ!

ಇಂತಹ ಕುಲದ ಪ್ರಶ್ನೆಯನ್ನು ರಾಮಾಯಣ, ಮಹಾಭಾರತ ಗಳಾದಿಯಾಗಿ ಇದುವರೆಗಿನ ಕಾವ್ಯಗಳು ಅನುರಣಿಸುತ್ತಲೇ ಬಂದಿವೆ. ಇವುಗಳಲ್ಲೊಂದು ವ್ಯಾಸಭಾರತವಾಗಿದೆ. ಇದನ್ನು ಮೂಲವಾಗಿಸಿ ಕೊಂಡ ಪಂಪ, ರನ್ನ, ಕುಮಾರವ್ಯಾಸ, ಲಕ್ಷ್ಮೀಶ, ಕುವೆಂಪು ಮೊದಲಾದ ಅನೇಕರು ಮೂಲ ಕಥೆಯನ್ನು ಸಮಕಾಲೀನ ಸಂವೇದನೆಗಳ

ಮೂಸೆಯಲ್ಲಿ ಒಡೆದು ಕಟ್ಟುತ್ತಾ ಬಂದಿದ್ದಾರೆ. ಇದರ ಮೂಲಕ ತಮ್ಮ ಕಲಾಕೃತಿಗಳಿಗೆ ಘನತೆಯನ್ನು ಪ್ರಾಪ್ತವಾಗಿಸಿಕೊಂಡಿದ್ದಾರೆ. ಆದ್ದರಿಂದಲೇ ಇವೆಲ್ಲವೂ ಮಹಾಭಾರತವೇ ಆದರೂ ಒಂದೇ ಭಾರತವಾಗಿರದೇ ಅನೇಕ ಭಾರತ ಗಳೆನಿಸಿರುವುದು. ಇಲ್ಲಿ ವಸ್ತು, ತಂತ್ರ, ಭಾಷೆಯಲ್ಲಾದ ಬದಲಾವಣೆಗಳಲ್ಲದೇ ಕೃತಿಗಳ ಆಶಯದಲ್ಲಿಯೂ ಬದಲಾವಣೆಯಿದೆ. ಆದ್ದರಿಂದ ಇಲ್ಲಿ ಮೇಲ್ಪದರವಾಗಿ ಕಾಣುವ ಪುರಾಣವು ಅಂತರ್ಯದಲ್ಲಿ ಸಮಕಾಲೀನವಾಗಿ ನಮ್ಮ ಸಂದರ್ಭವನ್ನು ಅರ್ಥೈಸುವುದು ಈ ನೆಲೆಯಲ್ಲಿ ಮೂಡಿಬಂದ ಭಾರತ ಕಾವ್ಯಗಳು ಕವಿ-ಚಿಂತಕರಿಗೆ ಅಕ್ಷಯ ಪಾತ್ರೆಯಾಗಿ ಸೆಳೆಯುತ್ತಿದೆ.

ಹೀಗೆ ಪಾರಂಪರಿಕವಾಗಿ ವ್ಯತ್ಯಸ್ಥ ನೆಲೆಗಳಲ್ಲಿ ಕಾಣಿಸಿಕೊಂಡ ಭಾರತ ಕಾವ್ಯದಲ್ಲಿ ಎರಡು ಊಳಿಗಮಾನ್ಯ ಮನೆತನಗಳ ಕ್ಲೇಶವೇ ಅಂತಿಮವಾಗಿ ಕಾಣುತ್ತದೆ. ಅಲ್ಲಿ ಸಂಭವಿಸುವ ಯುದ್ಧವು ನಿಕೃಷ್ಟ ಸರ್ವಾಧಿಕಾರಿಯ ಜಾಗದಲ್ಲಿ ಧರ್ಮರಾಯನೆಂಬ ಉದಾರವಾದಿ ಸರ್ವಾಧಿಕಾರಿಯನ್ನು ಕೂರಿಸಿ, ತಾನು ಕೊನೆಗೊಳ್ಳುತ್ತದೆ. ಯುದ್ಧ ಮೂಲದ ಈ ಪಲ್ಲಟವು ಸರ್ವಾಧಿಕಾರಿಯನ್ನು ಬದಲಾಯಿಸಿತೇ ವಿನಃ ಸರ್ವಾಧಿಕಾರತ್ವವನ್ನು ಬದಲಾಯಿಸಲಿಲ್ಲ. ಆದ್ದರಿಂದ ಪಟ್ಟಭದ್ರರ ಸಾಮಾಜಿಕ ವ್ಯವಸ್ಥೆಯು ಯಥಾವತ್ತಾಗಿ ಉಳಿದು, ಮುಂದುವರೆಯಿತು. ಆದ್ದರಿಂದ ಪಟ್ಟಭದ್ರ ಹಿತಾಸಕ್ತಿ ಮೂಲದ ಯುದ್ಧವು ಬದಲಾವಣೆಯನ್ನು ತಾರದೆ ಜನತೆಯ ಸಿದ್ಧಾಂತ ಮೂಲದ ಸಾಂಘಿಕ ಹೋರಾಟ ಮಾತ್ರ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ತರಬಲ್ಲುದು. ಈ ಎಲ್ಲವನ್ನು ಇಲ್ಲಿ ಪ್ರಸ್ತಾಪಿಸುತ್ತಿರುವ ಹಿನ್ನೆಲೆಯಿಷ್ಟೇ : ಕುರುಕ್ಷೇತ್ರವು ಎರಡು ಸಮಾನ ಪಟ್ಟಭದ್ರ ಶಕ್ತಿಗಳ ನಡುವಿನ ಯುದ್ಧವೇ ಹೊರತು ಜನತೆಯ ಆಸಕ್ತಿಯನ್ನು ಬಿಂಬಿಸುವ ಎರಡು ವಿರುದ್ಧ ಶಕ್ತಿಗಳ ನಡುವಿನ ಹೋರಾಟವಲ್ಲ.

ಹೀಗೆ ವ್ಯವಸ್ಥೆಯ ಪರವಾದ ನೆಲೆಯಲ್ಲಿ ಸಮಾರೋಪಗೊಳ್ಳುವ ಕುರುಕ್ಷೇತ್ರವಾಗಲೀ ಅದಕ್ಕೆ ಮೂಲ ಭೂಮಿಕೆಯಾದ ಮಹಾಭಾರತ ವಾಗಲೀ ತನ್ನ ಆದ್ಯತೆಗಳನ್ನು ಈ ಮೂಲಕ ಸ್ಪಷ್ಟಗೊಳಿಸುತ್ತದೆ. ಇದು ಇದರ ಪ್ರಧಾನ ನೆಲೆ. ಅನುಷಂಗಿಕವಾಗಿ ಮಾತ್ರ ಸಮಕಾಲೀನ ರಾಜಕೀಯ, ಸಂಪತ್ತು, ವರ್ಣ, ಜಾತಿ ಮುಂತಾದ ವಿಚಾರಗಳನ್ನು ಕೇಂದ್ರೀಕರಿಸುತ್ತದೆ. ಈ ಮೂಲಕ ಭಾರತಕ್ಕೆ ‘ವರ್ಗ’ ಮೂಲವಾದ ಪ್ರಧಾನ ಕೇಂದ್ರವೊಂದಿದ್ದರೆ, ಅದಕ್ಕೆ ಅನುಷಂಗಿಕವಾಗಿ ಮೇಲೆ ಪ್ರಸ್ತಾಪಿಸಿದ ಅನೇಕ ಕೇಂದ್ರಗಳಿವೆ ಎಂಬುದು ಸ್ಪಷ್ಟ. ಹೀಗೆ ಅನೇಕ ಕೇಂದ್ರವನ್ನೊಳಗೊಂಡ ಕೇಂದ್ರವಾಗಿ ಮಹಾಭಾರತವು ಕಾಣುವುದ ರಿಂದಲೇ ತಾನು ಹೆಚ್ಚು ಸಂಕೀರ್ಣವಾಗಿ ಕಾಣುತ್ತಿರುವುದು. ರಾಮಾಯಣವು ಇದರ ಮುಂದೆ ಹೆಚ್ಚು ಸರಳೀಕೃತ ಕೃತಿಯಾಗಿ ಕಾಣುತ್ತದೆ. ಲೋಹಿಯಾ ಅವರು ಗುರುತಿಸು ವಂತೆ ರಾಮನಿಗಿಂತ ಕೃಷ್ಣನೇ ಹೆಚ್ಚು ವೈವಿಧ್ಯಮಯ ಮತ್ತು ಸಂಕೀರ್ಣ ಪಾತ್ರಧಾರಿ.

ಒಟ್ಟಾರೆ ‘ವರ್ಗ’ವನ್ನು ಪ್ರಧಾನ ಕೇಂದ್ರವನ್ನಾಗಿ ಉಳ್ಳ ಮಹಾಭಾರತವು ಜಾತಿಯನ್ನು ಉಪಕೇಂದ್ರವನ್ನಾಗಿ ಒಳಗೊಂಡಿದೆ. ಇದನ್ನು ಈಗಾಗಲೇ ಪ್ರಸ್ತಾಪಿಸಲ್ಪಟ್ಟಿರುವ ವ್ಯಾಸ, ಪಂಪ, ರನ್ನ, ಕುಮಾರವ್ಯಾಸ ಮುಂತಾದ ಅನೇಕ ಪ್ರಾಚೀನ ಕವಿಗಳ ಸಂದರ್ಭದಲ್ಲಿ ಗುರುತಿಸುತ್ತೇವೆ.

ಇವರಿಗೆ ಜಾತಿಯ ಪ್ರಶ್ನೆಯು ತಮ್ಮ ಕೃತಿಗಳ ಅನುಷಂಗಿಕ ಕೇಂದ್ರವಾಗಿ ಬರಲು ತಮ್ಮ ಕುಲ ಮೂಲದ ಹಾಗೂ ಮೇಲ್ಜಾತಿಗಳ ಜನರಿಗೆ ಮಾತ್ರ ಅಕ್ಷರ ದೊರೆತು, ಅವರಿಂದ ಮಾತ್ರ ಕಾವ್ಯರಚನೆಗೊಳ್ಳುತ್ತಿದ್ದುದು ಹಿನ್ನೆಲೆ ಯಾಗಿದೆ. ಆದರೆ ಇವರು ಸಹ ತಮ್ಮ ಸಮಕಾಲೀನ ಸಮಾಜವನ್ನು ಬಿಡುಗಣ್ಣಿನಿಂದ ನೋಡಿರುವ ಹಿನ್ನೆಲೆಯಲ್ಲಿ ಕುಲದ ಪ್ರಶ್ನೆಯೂ ತಮ್ಮ ಕಾವ್ಯಗಳಲ್ಲಿ ಪ್ರವೇಶ ಮಾಡಿದೆ; ಆದರೆ ಅದು ಕಾವ್ಯದ ಅಗತ್ಯತೆಯ ವಸ್ತುವಾಗಿಯೇ ವಿನಃ ಆದ್ಯತೆಯ ವಸ್ತುವಾಗಿ ಅಲ್ಲ. ಇದು ಕೇವಲ ಮಹಾಭಾರತವನ್ನು ವಸ್ತುವನ್ನಾಗಿಸಿಕೊಂಡ ಒಟ್ಟು ಕನ್ನಡ ಮತ್ತು ಭಾರತೀಯ ಕಾವ್ಯ ಪರಂಪರೆಗಷ್ಟೇ ಸೀಮಿತವಾದ ಮಾತಲ್ಲ; ಒಟ್ಟು ಅಕ್ಷರ ಮೂಲದ ಕಾವ್ಯಕ್ಕೇ ಸಂಬಂಧಿಸಿದ ಮಾತು. ಇಂತಹ ಪರಂಪರೆಯ ಪ್ರಯಾಣದಲ್ಲಿ ವಚನಗಳು ಓಯಸಿಸ್‌ಗಳಾಗಿ ಕಾಣುತ್ತವೆ. ಜಾತಿಯೇ ಪರಮೋಚ್ಛ ಹಿಂಸೆಯನ್ನಾಗಿ ಅನುಭವಿಸುತ್ತ ಬಂದ ಜನತೆ ಇಲ್ಲಿ ಮಾತನಾಡುತ್ತದೆ.

ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ಅಂಬಿಗರ ಚೌಡಯ್ಯ ಮುಂತಾದವರು ನಮಗೆ ಕೇಳಿಸುವುದು ಈ ಶಾಬ್ದಿಕ ವಿನ್ಯಾಸದಲ್ಲಿಯೇ. ಇವರ ವ್ಯಾಕರಣ ಮತ್ತು ಮೀಮಾಂಸೆಯೂ ಅಕ್ಷರ ಸಂಸ್ಕೃತಿಗೆ ಹೊರತಾದ ಮತ್ತು ಬಹುಜನ ಮೂಲದ ನೋವಿನ ಶಾಯಿಯಲ್ಲಿ ಅದ್ದಿ ತೆಗೆದ ಮೌಖಿಕ ಲೇಖನಿಯೂ ರೂಪಿಸಿದ ಬರಹವಾಗಿದೆ.

ಹೀಗೆ ವಚನಕಾರರನ್ನುಳಿದರೆ ಇಂತಹ ಧ್ವನಿ ಮತ್ತೆ ಪ್ರಧಾನವಾಗಿ ಕೇಳಿಬರುವುದು ಕಳೆದ ಶತಮಾನದ ಎಪ್ಪತ್ತರ ದಶಕದ ಈಚೆಗಷ್ಟೇ. ಜಗಜೀವನರಾಂ ಉಪಪ್ರಧಾನಿ ಯಾಗಬಹುದು. ಆದರೆ ಕ್ಷುಲ್ಲಕ ಬ್ರಾಹ್ಮಣನೆದುರು ಅವರು ವಾಮನನಾಗಿ ಕಂಡುಬಿಡುತ್ತಾರೆ. ಇದು ಭಾರತದ ಸಾಮಾಜಿಕ ಸಂದರ್ಭದ ದೊಡ್ಡ ವ್ಯಂಗ್ಯ. ಎಲ್ಲ ಅರ್ಹತೆಗಳನ್ನು ತುಚ್ಛಗೊಳಿಸುವ ಮಾಂತ್ರಿಕ ಶಕ್ತಿ ಪಡೆದ ಕುಲದ ವಿಕೃತ ನಗೆಯಿದು. ಈ ನೆಲೆಯಲ್ಲಿ ಕಳೆದ ಮೂರು ದಶಕಗಳಿಂದೀಚೆಗೆ ದೊಡ್ಡ ಪ್ರಮಾಣದ ಸಾಹಿತ್ಯ ಸೃಷ್ಟಿ ನಮ್ಮಲ್ಲಿ ಆಗುತ್ತಿದೆ. ಸಮಾಜವಾದೀ ನೆಲೆಯಲ್ಲಿ ನಡೆದ ಸಾಂಘಿಕ ಹೋರಾಟ ಮತ್ತು ಚಿಂತನೆಗಳು ಮಾಡಿದ ಗುಣಾತ್ಮಕ ಬದಲಾವಣೆಯಿದು. ಈ ನೆಲೆಯಲ್ಲಿ ಮೂಡಿದ ಎಲ್ಲ ಪ್ರಕಾರಗಳ ಕಲಾಸೃಷ್ಟಿ ಮತ್ತು ಅದರ ಭಾಗವಾಗಿ ಬಂದ ಸಾಹಿತ್ಯ-ನಾಟಕ ಸೃಷ್ಟಿ ನಮ್ಮ ನಡುವೆ ಬೆಳೆದು ನಿಂತಿದೆ. ಈ ನೆಲೆಯಲ್ಲಿಯೇ ವ್ಯಾಸ, ವಾಲ್ಮೀಕಿಯರ ಕಾವ್ಯದಂಚಿನಲ್ಲಿ ಕುಬ್ಜವಾಗಿ ಮುದುಡಿದ್ದ ಶಂಭೂಕ, ಕರ್ಣ, ಏಕಲವ್ಯ, ಮಂಥರೆ ಮುಂತಾದ ಅನೇಕರು ನಮ್ಮ ಇವತ್ತಿನ ಕೃತಿಗಳಾಗಿ ನಾಯಕರಾಗಿ ಹೊಮ್ಮುತ್ತಿರುವುದು. ಆ ಮೂಲಕವಾಗಿ ಇತಿಹಾಸದ ಬಗೆಗಿನ ಹಲವು ಒಳನೋಟಗಳನ್ನು ಪ್ರಕಟಿಸುತ್ತಿರುವುದಲ್ಲದೇ ವರ್ತಮಾನದಲ್ಲಿಯೂ ಮುಂದುವರೆಯುತ್ತಿರುವ ಸಾಮಾಜಿಕ ಕ್ರೌರ್ಯಗಳನ್ನು ಪರಿಣಾಮಕಾರಿಯಾಗಿ ಬಿಂಬಿಸುತ್ತಿರುವುದು. ಈ ನೆಲೆಯಲ್ಲಿ ಕುವೆಂಪು, ಸಿದ್ದಲಿಂಗಯ್ಯ, ಎಲ್. ಹನುಮಂತಯ್ಯ ಮುಂತಾದ ಅನೇಕರು ನಿಂತಿದ್ದಾರೆ. ಇವರ ಜೊತೆಯಲ್ಲಿ 'ಕುಲಂ' ನಾಟಕದ ಮೂಲಕ ರಾಜಪ್ಪ ದಳವಾಯಿಯವರು ಸಹ ಪ್ರವೇಶ ಮಾಡಿನಿಂತಿರುವುದು ಈಗ ಕಂಡುಬಂದಿದೆ.

ಇತಿಹಾಸ ಅಥವಾ ಪುರಾಣ ಮೂಲದ ವಸ್ತುವೊಂದನ್ನು ಆಯ್ದುಕೊಂಡು ಹೊರಟ ಲೇಖಕನಿಗೆ ವಸ್ತು ಸಂಬಂಧಿತ ಸವಾಲು ಗೈರುಹಾಜರಾಗುತ್ತದೆ; ನಿಜ. ಆದರೆ ಈ ಅನುಕೂಲವೇ ಸವಾಲಾಗಿ ಪರಿಣಮಿಸಿಬಿಡುತ್ತದೆ. ಹೇಗೆಂದರೆ; ಇರುವ ವಸ್ತುವನ್ನು ಯಥಾವತ್ತಾಗಿ ಅಭಿನವ ಕೃತಿಯನ್ನಾಗಿ ಮಾಡಿದರೆ ಅದರಿಂದ ತನ್ನ ಕಲಾಕೃತಿಗೆ ಯಾವುದೇ ಘನತೆ ಪ್ರಾಪ್ತವಾಗುವುದಿಲ್ಲ. ಬದಲಿಗೆ, ಆ ಮೂಲಕ ಆ ಕೃತಿ ಕಾವ್ಯ ಸಂಪ್ರದಾಯದ ಭಾಗವಾಗಿ ರಚನೆಗೊಂಡಿತೇ ಹೊರತು ಕಾವ್ಯ ಪರಂಪರೆಯ ವಿಸ್ತರಣೆಯಾಗಿ ಅಲ್ಲ ಎಂಬುದು ವಿದಿತಗೊಳ್ಳುತ್ತದೆ. ಹಾಗಾಗಿ ಹಳೆಯ ವಸ್ತು ಎಂಬ ಬಾಟಲಿಗೆ ಸಮಕಾಲೀನತೆ ಎಂಬ ಹೊಸ ಔಷಧವನ್ನು ತುಂಬಬೇಕು. ಆಗ ಮಾತ್ರ ಆ ಬಾಟಲಿಗೆ ಮೌಲ್ಯ; ಇಲ್ಲವಾದಲ್ಲಿ ಕಸದ ಬುಟ್ಟಿ ಎಂಬ ಗ್ರಂಥಾಲಯದ ಧೂಳು ಹಿಡಿದ ಕಪಾಟಿಗೆ ಅದು ಸರಿದು ನಿಂತುಬಿಡುತ್ತದೆ. ಇಂತಹ ಸವಾಲಿನ ನೆಲೆಯಲ್ಲಿ ಜೈಸಿರುವುದು ರಾಜಪ್ಪನವರ ಕೃತಿಯ ಮೊದಲ ಮೌಲಿಕ ನೆಲೆಯಾಗಿದೆ.

ಸಮಕಾಲೀನ ಅಧಿಕಾರಶಾಹಿ, ರಾಜಕಾರಣ ಮುಂತಾದ ಕ್ಷೇತ್ರಗಳಲ್ಲಿ ಜಾತಿಯ ದೌರ್ಬಲ್ಯವು ಎಂತಹ ಅರ್ಹತೆಯನ್ನಾದರೂ ದುರ್ಬಲಗೊಳಿಸುವ ಹುನ್ನಾರಗಳನ್ನು ಈ ನಾಟಕವು ಪ್ರಸ್ತುತಪಡಿಸುತ್ತಿದೆ. ಹಾಗಾಗಿ ವರ್ತಮಾನ ಮತ್ತು ಪಾರಂಪರಿಕವಾದ ಜಾತಿ ಮೂಲ ವಾಸ್ತವವನ್ನು ಅದರ ಕ್ರೌರ್ಯಕ್ಕೆ ಒಡ್ಡಿದ ಸಮರ್ಥ ನಾಟ್ಯ ಪ್ರತಿಮೆಯಾಗಿ ಇದು ನಿಲ್ಲುತ್ತದೆ. ಇದನ್ನು ರಂಗಮಂದಿರದಲ್ಲಿ ನೋಡುವಾಗ ಅನೇಕರು ತಮ್ಮ ಅನುಭವಗಳ ಹಿನ್ನೆಲೆಯಲ್ಲಿ ವರ್ತಮಾನವನ್ನು ಗ್ರಹಿಸುತ್ತಿದ್ದರೆ, ಇನ್ನೂ ಕೆಲವರು ಭಾರತದ ಸಾಮಾಜಿಕ ಮೂಲದ ಒಟ್ಟು ಚರಿತ್ರೆಯನ್ನು ಪ್ರಜ್ಞೆಯೊಳಕ್ಕೆ ತಂದುಕೊಳ್ಳುತ್ತಿದ್ದರು. ರಂಗದ ಮೇಲಿನ ಪ್ರಯೋಗ ಮತ್ತು ರಂಗದ ಮುಂದಿನ ಸಭಾವಲಯ; ಎರಡನ್ನೂ ಏಕಕಾಲಕ್ಕೆ ವೀಕ್ಷಿಸುತ್ತಿದ್ದಾಗ ಕಂಡುಬಂದ ಅನುಭವವಿದು. ರಾಜಪ್ಪ ದಳವಾಯಿಯವರು ಪ್ರಸ್ತುತ ನಾಟಕದ ಕರ್ತೃ. ಆದರೆ ನಾನು ಆ ನಾಟಕವನ್ನು ಓದಿಲ್ಲ, ಆ ನಾಟಕವನ್ನೂ ಒಳಗೊಂಡ ಪಾತ್ರವರ್ಗ, ಸಂಗೀತ, ಹಾಡು, ಬೆಳಕು, ನೃತ್ಯ, ಧ್ವನಿ ಮುಂತಾದ ಅನೇಕ ಕಲಾ ಪರಿಕರಗಳು ಸಾವಯವ ಸಂಬಂಧದಲ್ಲಿ ಒಡಗೂಡಿ ಬಂದ ರಂಗಪಠ್ಯ ಎಂಬ ಪ್ರಯೋಗವನ್ನು ನೋಡಿ ಬರೆಯುತ್ತಿರುವ ಮಾತುಗಳಿವು. ಈ ಪ್ರಯೋಗ ಅಥವಾ ರಂಗಪಠ್ಯದ ಕರ್ತೃ ಅಥವಾ ತನ್ನದೇ ಆದ ಪರಿಭಾಷೆಯನ್ನು ಬಳಸಿ ಹೇಳುವುದಾದರೆ ನಿರ್ದೇಶಕ ಸಿ. ಬಸವಲಿಂಗಯ್ಯ ಅವರು ಕಲೆ ಮತ್ತು ಸಾಮಾಜಿಕತೆ ಎರಡರೊಂದಿಗೂ ಏಕಕಾಲಕ್ಕೆ ಉಳಿಸಿಕೊಳ್ಳುವ ಸಮಾನ ಬದ್ಧತೆಯೇ ಇಲ್ಲಿ ರಾಜಪ್ಪ ಮತ್ತು ಬಸವಲಿಂಗಯ್ಯನವರನ್ನು ಒಂದೆಡೆಗೆ ತಂದಿರುವುದು. ಈ ನೆಲೆಯಲ್ಲಿ ರಾಜಪ್ಪನವರ ನಾಟಕವು ಬಸವಲಿಂಗಯ್ಯನವರ ಮೂಲಕ ರಂಗಪಠ್ಯ ಅಥವಾ ಪ್ರಯೋಗವಾಗಿ ವಿಸ್ತರಣೆಗೊಂಡಿದೆ ಎಂದು ಹೇಳಬೇಕು. ಈ ನೆಲೆಯಲ್ಲಿ ಬಸವಲಿಂಗಯ್ಯನವರು ತಮ್ಮ ನಿರ್ದೇಶನಾ ನೈಪುಣ್ಯವನ್ನು ಇಲ್ಲಿ ಸಮರ್ಥವಾಗಿ ಅಭಿವ್ಯಕ್ತಿಸಿದ್ದಾರೆ. ನೃತ್ಯ, ಸಂಗೀತ, ರಂಗಸಜ್ಜಿಕೆ, ಬೆಳಕು, ಧ್ವನಿ ಮುಂತಾದ ಎಲ್ಲ ಪರಿಕರಗಳ ಸಾಧ್ಯತೆಗಳನ್ನು ಅರ್ಥಪೂರ್ಣವಾಗಿ ದುಡಿಸಿಕೊಂಡಿದ್ದಾರೆ. ಇಲ್ಲಿಯ ಪಾತ್ರಧಾರಿಗಳು ಗ್ರಾಮೀಣ ಹಿನ್ನೆಲೆಯವರು ಎಂಬುದು ಅವರ ಭಾಷೆ ಮತ್ತು ಭಾವಾಭಿವ್ಯಕ್ತಿಯ ಸೂಕ್ಷ್ಮತೆಗಳು ದೃಢಪಡಿಸುತ್ತವೆ.

ಈ ಪ್ರಯೋಗ ಅಥವಾ ರಂಗಪಠ್ಯದ ಕರ್ತೃ ಅಥವಾ ತನ್ನದೇ ಆದ ಪರಿಭಾಷೆಯನ್ನು ಬಳಸಿ ಹೇಳುವುದಾದರೆ ನಿರ್ದೇಶಕ ಸಿ. ಬಸವಲಿಂಗಯ್ಯ ಅವರು ಕಲೆ ಮತ್ತು ಸಾಮಾಜಿಕತೆ ಎರಡರೊಂದಿಗೂ ಏಕಕಾಲಕ್ಕೆ ಉಳಿಸಿಕೊಳ್ಳುವ ಸಮಾನ ಬದ್ಧತೆಯೇ ಇಲ್ಲಿ ರಾಜಪ್ಪ ಮತ್ತು ಬಸವಲಿಂಗಯ್ಯನವರನ್ನು ಒಂದೆಡೆಗೆ ತಂದಿರುವುದು. ಈ ನೆಲೆಯಲ್ಲಿ ರಾಜಪ್ಪನವರ ನಾಟಕವು ಬಸವಲಿಂಗಯ್ಯನವರ ಮೂಲಕ ರಂಗಪಠ್ಯ ಅಥವಾ ಪ್ರಯೋಗವಾಗಿ ವಿಸ್ತರಣೆಗೊಂಡಿದೆ ಎಂದು ಹೇಳಬೇಕು. ಈ ನೆಲೆಯಲ್ಲಿ ಬಸವಲಿಂಗಯ್ಯನವರು ತಮ್ಮ ನಿರ್ದೇಶನಾ ನೈಪುಣ್ಯವನ್ನು ಇಲ್ಲಿ ಸಮರ್ಥವಾಗಿ ಅಭಿವ್ಯಕ್ತಿಸಿದ್ದಾರೆ.

ಅವರ ಸಾಮಾಜಿಕ ವಾಸ್ತವಗಳ ಹಿಂಸಾ ಮೂಲದ ಅನುಭವವೂ ತಮ್ಮ ಶಕ್ತಿಯುತ ನಾಟ್ಯಾಭಿವ್ಯಕ್ತಿಗೆ ಜೀವಶಕ್ತಿಯಾಗಿದ್ದಿರಬಹುದು. ಇಂತಹ ಅಭಿವ್ಯಕ್ತಿಯು ಭಾರತೀಯ ವಾಸ್ತವಗಳನ್ನು ಸರಿಯಾಗಿ ಅರ್ಥೈಸಿಕೊಳ್ಳದ ಕಾನ್ವೆಂಟ್ ಕಲ್ಚರ್‌ನ ಉತ್ಪಾದನಾ ಸರಕು (ವಿದ್ಯಾರ್ಥಿಗಳು) ಗಳಿಂದ ನಿರೀಕ್ಷಿಸುವುದು ಕಷ್ಟಸಾಧ್ಯ. ಹಾಗೊಮ್ಮೆ ಅದು ಸಾಧ್ಯವಾದರೂ ಅದು ಕೇವಲ ಅಣಕ ಮಾತ್ರವಾಗಿರುತ್ತದೆ. ಈ ನೆಲೆಯಲ್ಲಿ ಇಲ್ಲಿಯ ಪ್ರತಿಯೊಬ್ಬ ಪಾತ್ರಧಾರಿಯೂ ಪಾತ್ರಗಳಿಗೆ ಜೀವ ತುಂಬಿದ್ದಾರೆ. ಇದು ಸಾಧ್ಯವಾದ ನೆಲೆಯಲ್ಲಿ 'ಶಿವಸಂಚಾರ' ತಂಡದ ಪೋಷಕ ಸಂಸ್ಥೆ ಸಾಣೇಹಳ್ಳಿಯ ತರಳಬಾಳು ಮಠವು ಅಭಿನಂದನೆಗೆ ಪಾತ್ರವಾಗುತ್ತದೆ. ಇದು ಕೇವಲ ಕಲಾ ಅಭಿನಂದನೆ ಅಲ್ಲ; ಸಾಮಾಜಿಕ ಅಭಿನಂದನೆ. ಇಂತಹ ಅಭಿನಂದನೆಗೆ ಪಾತ್ರವಾಗಬೇಕಿರುವ ನೂರಾರು ರಂಗಸಂಸ್ಥೆಗಳು, ಮಠಗಳು ಇವೆ. ಇವು ತಮ್ಮ ಅಸ್ತಿತ್ವದ ಬಗೆಗೆ ಚಿಂತಿಸದೆ ಸಮಾಜದ ಅಸ್ತಿತ್ವ ಮತ್ತು ಅದರ ಕಲ್ಯಾಣದ ಬಗೆಗೆ ಅಂತಿಮವಾಗಿ ಚಿಂತಿಸಬೇಕು. ಆಗ ಮಾತ್ರ ಐದು ಸಾವಿರ ವರ್ಷಗಳ ಸಮಾಜ ಸುಧಾರಕರು ನೆಮ್ಮದಿಯ ನಿಟ್ಟುಸಿರು ಬಿಡಲು ಸಾಧ್ಯ.

(ಒತ್ತಾಸೆ : ಸಾಣೇ ಹಳ್ಳಿಯ 'ಶಿವಸಂಚಾರ' ನಾಟಕ ತಂಡವು ದಿನಾಂಕ ೨೧.೪.೨೦೦೫ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರಸ್ತುತಪಡಿಸಿದ 'ಕುಲಂ' ನಾಟಕದ ವೀಕ್ಷಣೆಯ ಅನುಭವದಲ್ಲಿ ಬರೆದ ಲೇಖನವಿದು. ಪ್ರಸ್ತುತ ನಾಟಕದ ಕರ್ತೃ ರಾಜಪ್ಪ ದಳವಾಯಿ ಹಾಗೂ ನಿರ್ದೇಶಕರು ಸಿ. ಬಸವಲಿಂಗಯ್ಯನವರು.) □

ವರ್ತಮಾನ

ಎಲ್ಲಾ ರಂಗದಂತೆ ಶಿಕ್ಷಣ ರಂಗದಲ್ಲಿಯೂ ಪ್ರಾದೇಶಿಕ ಅಸಮಾನತೆ ಕಂಡುಬರುತ್ತಿದೆ. ಪ್ರಸ್ತುತ ಲೇಖನದಲ್ಲಿ ಕರ್ನಾಟಕವನ್ನು ದಕ್ಷಿಣ ಕರ್ನಾಟಕ ಮತ್ತು ಉತ್ತರ ಕರ್ನಾಟಕ ವೆಂದು ಪ್ರತ್ಯೇಕಿಸಲಾ ಗಿದ್ದು, ಉತ್ತರ ಕರ್ನಾಟಕವನ್ನು ಹೈದ್ರಾಬಾದ್ ಕರ್ನಾಟಕ ವೆಂದು ಮರು ವಿಂಗಡಿ ಸಲಾಗಿದೆ. ಶಿಕ್ಷಣವನ್ನು ನಿರ್ಧರಿಸುವ ಅಂಶ ಗಳಾದ, ಶಿಕ್ಷಣದ ಪ್ರಮಾಣ, ಶಾಲೆಗಳ ಸಂಖ್ಯೆ, ಶಿಕ್ಷಕರ ಸಂಖ್ಯೆ, ಶಾಲೆಯನ್ನು ಬಿಟ್ಟ ಮಕ್ಕಳ ಸಂಖ್ಯೆ, ಇವೆಲ್ಲವುಗಳನ್ನಾಧರಿಸಿ ಆಯಾ ಪ್ರದೇಶಕ್ಕನು ಗುಣವಾಗಿ ಹೊಂದಿ ರುವ ಅಸಮಾನತೆ ಯನ್ನು ವಿವಿಧ ಮೂಲ ಗಳಿಂದ ಸಂಗ್ರಹಿಸಲಾದ ದತ್ತಾಂಶಗಳ ಮೂಲಕ ವಿಶ್ಲೇಷಿಸಲಾಗಿದೆ.

○ಶಿವರಾಜ ಬಿ.ಕೆ.
ವಿಠೋಬ ಭೀಮಣ್ಣ

ಶಿಕ್ಷಣ ಮತ್ತು ಪ್ರಾದೇಶಿಕ ಅಸಮತೋಲನ

ಗುರಿಯಿಲ್ಲದ ಬದುಕು, ಚುಕ್ಕಾಣಿ ಇಲ್ಲದ ಹಡಗಿನಂತೆ ಎಂಬ ಗಾದೆಯಿದೆ. ಮಾನವನ ಬದುಕಿನ ಪ್ರತಿ ಚಟುವಟಿಕೆಗೆ ಒಂದು ಗುರಿ ಬೇಕು. ಶಿಕ್ಷಣ ಮಾನವನ ಜೀವನವನ್ನು ಅರ್ಥಪೂರ್ಣಗೊಳಿಸುವ ಒಂದು ಪ್ರಮಾಣ ಮಾಧ್ಯಮ. ವ್ಯಕ್ತಿಯ ವರ್ತನೆಯನ್ನು ಮಾರ್ಪಡಿಸಿ ಓರ್ವ ಉತ್ತಮ ನಾಗರಿಕನನ್ನಾಗಿ ಮಾರ್ಪಡಿಸುವುದು ಶಿಕ್ಷಣವಾಗಿದೆ. ಶಿಕ್ಷಣವು ಒಬ್ಬ ಉತ್ತಮ ನಾಗರಿಕನನ್ನು ಸೃಷ್ಟಿಸುವ ಗರಡಿಮನೆ ಎಂದರು ತಪ್ಪಾಗಲಿಕ್ಕಿಲ್ಲಾ (ಲೋಕಾಪೂರ ೧೯೯೪, ೧). ಹಲವಾರು ಸ್ವರೂಪದ ಸಮಸ್ಯೆಗಳನ್ನು ಎದುರಿಸುತ್ತಿರುವ ನಮ್ಮ ದೇಶದಲ್ಲಿ ನಿಯಂತ್ರಣಕ್ಕಾಗಿ, ನಿವಾರಣೆಗಳಿಗಾಗಿ ನೆರವಾಗುವ ರೀತಿಯಲ್ಲಿ ಸಮರ್ಪಕವಾದ ಶಿಕ್ಷಣದ ವ್ಯವಸ್ಥೆಯನ್ನು ಬಲಪಡಿಸಬೇಕಾದ ಅವಶ್ಯಕತೆ ನಮ್ಮ ದೇಶಕ್ಕಿದೆ.

'ಶಿಕ್ಷಣವೇ ಶಕ್ತಿ' ಎಂದು ಹೇಳುವಂತೆ, ಶಿಕ್ಷಣ ಮಾನವನ ನಿಪುಣತೆ ಮತ್ತು ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಪ್ರಮುಖವಾಗಿದೆ. ಯಾವುದೇ ದೇಶದ ಅಭಿವೃದ್ಧಿಗಾಗಿ ಶಿಕ್ಷಣವು ಮಹತ್ವ ಪಡೆದಿದೆ. ಒಟ್ಟಿನಲ್ಲಿ ಶಿಕ್ಷಣವು ಸಾಮಾಜಿಕ ಪರಿವರ್ತನೆಯ ಒಂದು ಪ್ರಮುಖ ಸಾಧನವಾಗಿದೆ. ಅಕ್ಷರ ಜ್ಞಾನವಿಲ್ಲದ ಮನುಷ್ಯ ಪಶುವಿಗೆ ಸಮಾನ ಎಂಬ ಮಾತು ಅಕ್ಷರಶಃ ಸತ್ಯವಾಗಿದೆ (ರಾಸೂರೆ ೨೦೦೪). ಶಿಕ್ಷಣ ಇಷ್ಟೆಲ್ಲಾ ಪ್ರಾಮುಖ್ಯತೆ ಪಡೆದಿದ್ದರೂ ಸಮಾನತೆ ಎಂಬುದು ಇಂದಿಗೂ ಕಂಡುಬಂದಿಲ್ಲ. ಎಲ್ಲಾ ರಂಗದಲ್ಲಿ ಪ್ರಾದೇಶಿಕ ಅಸಮಾನತೆ ಎದ್ದು ಕಂಡಂತೆ ಶಿಕ್ಷಣದಲ್ಲಿಯೂ ಪ್ರಾದೇಶಿಕ ಅಸಮಾನತೆ ಕಂಡುಬರುತ್ತಿದೆ.

ಪ್ರಸ್ತುತ ಲೇಖನದಲ್ಲಿ ಕರ್ನಾಟಕವನ್ನು ದಕ್ಷಿಣ ಕರ್ನಾಟಕ ಮತ್ತು ಉತ್ತರ ಕರ್ನಾಟಕವೆಂದು ಪ್ರತ್ಯೇಕಿಸಲಾಗಿದ್ದು, ಉತ್ತರ ಕರ್ನಾಟಕವನ್ನು ಹೈದ್ರಾಬಾದ್ ಕರ್ನಾಟಕವೆಂದು ಮರು ವಿಂಗಡಿಸಲಾಗಿದೆ. ಶಿಕ್ಷಣವನ್ನು ನಿರ್ಧರಿಸುವ ಅಂಶಗಳಾದ, ಶಿಕ್ಷಣದ ಪ್ರಮಾಣ, ಶಾಲೆಗಳ ಸಂಖ್ಯೆ, ಶಿಕ್ಷಕರ ಸಂಖ್ಯೆ, ಶಾಲೆಯನ್ನು ಬಿಟ್ಟ ಮಕ್ಕಳ ಸಂಖ್ಯೆ, ಇವೆಲ್ಲವುಗಳನ್ನಾಧರಿಸಿ ಆಯಾ ಪ್ರದೇಶಕ್ಕನುಗುಣವಾಗಿ ಹೊಂದಿರುವ ಅಸಮಾನತೆಯನ್ನು ವಿವಿಧ ಮೂಲಗಳಿಂದ ಸಂಗ್ರಹಿಸಲಾದ ದತ್ತಾಂಶಗಳ ಮೂಲಕ ವಿಶ್ಲೇಷಿಸಲಾಗಿದೆ.

ಶಿಕ್ಷಣದ ಪ್ರಕಾರಗಳು

ಭಾರತದಲ್ಲಿ ಪ್ರಸ್ತುತವಾಗಿ ಶಿಕ್ಷಣವು ಎರಡು ಪ್ರಕಾರಗಳಲ್ಲಿದೆ.

೧. ಔಪಚಾರಿಕ ಶಿಕ್ಷಣ

೨. ಅನೌಪಚಾರಿಕ ಶಿಕ್ಷಣ

ಔಪಚಾರಿಕ ಶಿಕ್ಷಣವೆಂದರೆ, ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಶಾಲಾ ಕಾಲೇಜುಗಳಲ್ಲಿ ನೇರವಾಗಿ ಶಿಕ್ಷಣ ನೀಡುವ ಪದ್ಧತಿಯಾಗಿದೆ. ನಿರ್ದಿಷ್ಟ ವಯಸ್ಸಿನ ಮಕ್ಕಳಿಗೆ ಗ್ರಂಥಾಲಯ, ಪ್ರಯೋಗ ಶಾಲೆ ಇತ್ಯಾದಿ ಸೌಲಭ್ಯಗಳ ಮೂಲಕ ವ್ಯವಸ್ಥಿತವಾಗಿ ನೀಡಲಾಗುತ್ತದೆ. ಸಂವಿಧಾನದ ೪೫ ವಿಧಿಯ ಪ್ರಕಾರ ೬ ರಿಂದ ೧೪ ವರ್ಷದ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಬೇಕೆಂಬುದನ್ನು ಹೇಳಲಾಗಿದ್ದು, ಇದನ್ನು ಭಾರತದಲ್ಲಿ ಇಂದಿಗೂ ವ್ಯವಸ್ಥಿತವಾಗಿ ಜಾರಿಗೆ ತರಲು ಸಾಧ್ಯವಾಗಿಲ್ಲ.

ಯಾವುದು ಕಡ್ಡಾಯ ಮತ್ತು ಕ್ರಮಬದ್ಧವಾಗಿರುವುದಿಲ್ಲವೋ, ಅದು ಅನೌಪಚಾರಿಕ ಶಿಕ್ಷಣವಾಗಿದೆ. ನಮ್ಮ ಭಾರತ ದೇಶದಲ್ಲಿ ವಯಸ್ಕರ ಶಿಕ್ಷಣ, ಸಾಕ್ಷರತಾ ಆಂದೋಲನಗಳು ಮತ್ತು ತರಬೇತಿ ಶಿಬಿರಗಳು ಅನೌಪಚಾರಿಕ ಶಿಕ್ಷಣಗಳಾಗಿವೆ. ಈ ಎರಡು ರೀತಿಯ ಶಿಕ್ಷಣದ ಪ್ರಕಾರಗಳು ಕರ್ನಾಟಕದಲ್ಲಿಯೂ ಅಸ್ತಿತ್ವದಲ್ಲಿವೆ.

ಭಾರತದ ಶಿಕ್ಷಣದಲ್ಲಿ ಕರ್ನಾಟಕದ ಸ್ಥಾನ

೨೦೦೧ರ ಜನಗಣತಿಯ ಪ್ರಕಾರ ಭಾರತದಲ್ಲಿ ಶೇ. ೬೫.೩೮ ರಷ್ಟು ಸಾಕ್ಷರತೆಯ ಪ್ರಮಾಣ ಇದೆ. ಇದು ಬೇರೆ ರಾಷ್ಟ್ರಗಳಿಗೆ ಹೋಲಿಕೆ ಮಾಡಿ ನೋಡಿದಾಗ ಅತ್ಯಂತ ಕಡಿಮೆಯೆನಿಸುತ್ತದೆ. ಇದಕ್ಕೆ ನಿರ್ದಿಷ್ಟ

ಗುರಿಯಿಲ್ಲದಿರುವುದೇ ಪ್ರಮುಖ ಕಾರಣವೆಂದು ಹಲವಾರು ಶಿಕ್ಷಣ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ರಾಜ್ಯವಾರು ಸಾಕ್ಷರತೆಯ ಪ್ರಮಾಣ ನೋಡಿದಾಗ, ಕೇರಳವು ಪ್ರಥಮ (೯೦.೯೨%) ಸ್ಥಾನದಲ್ಲಿದೆ. ಮಿಯೋಕಾಂ (೮೮.೪೯%) ದ್ವಿತೀಯ ಮತ್ತು ಗೋವಾವು (೮೨.೩೨%) ತೃತೀಯ ಸ್ಥಾನದಲ್ಲಿದ್ದರೆ, ಬಿಹಾರ ರಾಜ್ಯವು ಶೇ. ೪೭.೫೩ ರಷ್ಟು ಸಾಕ್ಷರತೆಯ ಪ್ರಮಾಣವನ್ನು ಹೊಂದಿ ಕೊನೆಯ ಸ್ಥಾನದಲ್ಲಿದೆ. ಆದರೆ ಕರ್ನಾಟಕವು ಶೇ. ೬೭.೦೪ ರಷ್ಟು ಸಾಕ್ಷರತೆ ಪ್ರಮಾಣ ಹೊಂದಿ ೧೭ನೇ ಸ್ಥಾನದಲ್ಲಿದೆ ಎಂಬುದಷ್ಟೇ ಸಂತೋಷದ ವಿಷಯವೆನಿಸುತ್ತದೆ.

ಕರ್ನಾಟಕದಲ್ಲಿ ಶಿಕ್ಷಣದ ಮಹತ್ವ

ಕರ್ನಾಟಕದಲ್ಲಿ ಶಿಕ್ಷಣದ ಅಸಮತೋಲನದ ಬಗ್ಗೆ ಚರ್ಚಿಸುವುದಕ್ಕಿಂತ ಮುಂಚೆ ಮಹತ್ವದ ಕುರಿತು ಚರ್ಚಿಸುವುದು ಪ್ರಮುಖವಾಗಿದೆ. ಜ್ಞಾನದ ಸಂಪಾದನೆಯಲ್ಲಿ, ನೈಪುಣ್ಯ ಮತ್ತು ಸಾಮರ್ಥ್ಯದ ವೃದ್ಧಿಯಲ್ಲಿ, ಅಜ್ಞಾನದ ಅಂಧಃಕಾರದ ನಿರ್ಮೂಲನೆಯಲ್ಲಿ ರಾಜಕೀಯ ಜಾಗೃತಿಯಲ್ಲಿ ಶೋಷಣೆಯ ವಿರುದ್ಧ ಸಂಸ್ಕೃತಿಯ ರಕ್ಷಣೆ, ವ್ಯಕ್ತಿಯ ವಿಕಾಸ ಮತ್ತು ವ್ಯಕ್ತಿಯ ನೈತಿಕ ಬೆಳವಣಿಗೆಯಲ್ಲಿ ಶಿಕ್ಷಣದ ಮಹತ್ವ ಪ್ರಮುಖವಾಗಿದೆ.

ಕರ್ನಾಟಕದಲ್ಲಿ ಸಾಕ್ಷರತೆಯ ಪ್ರಮಾಣ

ಇದಕ್ಕಿಂತ ಮುಂಚಿತವಾಗಿ ಪ್ರಾದೇಶಿಕ ಅಸಮತೋಲನ ಎಂದರೇನು? ಎಂಬುದರ ಬಗ್ಗೆ ತಿಳಿದುಕೊಳ್ಳುವುದು ಅವಶ್ಯವಾಗಿದೆ. ಸಾಮಾನ್ಯ ಅರ್ಥದಲ್ಲಿ ಪ್ರಾದೇಶಿಕ ಅಸಮತೋಲನ ಎಂದರೆ, ಯಾವುದೇ ರಂಗವನ್ನು ತೆಗೆದುಕೊಂಡಾಗ, ಫಲಿತಾಂಶಗಳು, ದರಗಳು, ಪ್ರತಿಶತಗಳು ಸಮಾನವಾಗಿ ಹಂಚಿಕೆಯಾಗಿರುವುದಿಲ್ಲ. ಉದಾಹರಣೆಗೆ, ಶಿಕ್ಷಣ ರಂಗ ತೆಗೆದು ಕೊಂಡಾಗ ಸಾಕ್ಷರತೆಯ ಪ್ರಮಾಣ ಗುಲ್ಬರ್ಗಾದಲ್ಲಿ ಪ್ರತಿಶತ ೫೦.೬೫ ರಷ್ಟಿದ್ದರೆ, ಬೆಂಗಳೂರಿನಲ್ಲಿ ಪ್ರತಿಶತ ೮೩.೯೧ ರಷ್ಟಿದೆ. ಹೀಗೆ ಶಿಕ್ಷಣ ಪ್ರಮಾಣವು ಪ್ರದೇಶದಿಂದ ಪ್ರದೇಶಕ್ಕೆ ಭೇರೆಯಾಗಿದೆ. ಇದಕ್ಕೆ ಅಸಮಾನತೆ ಪ್ರಮುಖ ಕಾರಣವಾಗಿದೆ. ಅದನ್ನು ಕೋಷ್ಟಕ-೧ ರ ಮೂಲಕ ತಿಳಿದುಕೊಳ್ಳಬಹುದು.

ಕೋಷ್ಟಕ-೧ ನ್ನು ವೀಕ್ಷಿಸಿದಾಗ ಹೈದರಬಾದ್ ಕರ್ನಾಟಕದಲ್ಲಿ ಶಿಕ್ಷಣದ ಪ್ರಗತಿ ಹೇಗಿದೆ ಎಂಬುದು ತಿಳಿದು ಬರುತ್ತದೆ. ರಾಜ್ಯದ ಒಟ್ಟು ಸಾಕ್ಷರತೆಯ ಪ್ರಮಾಣವು ಶೇ. ೫೭.೪೫ ರಷ್ಟಿದ್ದರೆ ಹೈದರಾಬಾದ್ ಕರ್ನಾಟಕದಲ್ಲಿ ಶೇ. ೪೧.೫೦ ರಷ್ಟಿದೆ. ಉಳಿದ ಭಾಗಗಳಿಗೆ ಹೋಲಿಸಿದರೆ ಹೈದರಾಬಾದ್ ಕರ್ನಾಟಕವು ಸಾಕ್ಷರತೆಯ ಪ್ರಮಾಣದಲ್ಲಿ ತೀರ ಹಿಂದುಳಿದಿದೆ. ದಕ್ಷಿಣ ಕರ್ನಾಟಕವು ಅತಿ ಹೆಚ್ಚು ಸಾಕ್ಷರರನ್ನು (೬೧.೫೦%) ಹೊಂದಿದ್ದು ರಾಜ್ಯದ ಪ್ರತಿಶತಕ್ಕಿಂತ ಹೆಚ್ಚು ಸಾಕ್ಷರರನ್ನು ಒಳಗೊಂಡಿದ್ದು ಪ್ರಥಮ ಸ್ಥಾನವನ್ನು ಪಡೆದಿದ್ದರೆ ಹೈದರಾಬಾದ್ ಕರ್ನಾಟಕವು ಅತಿ ಕಡಿಮೆ ಸಾಕ್ಷರರನ್ನು ಒಳಗೊಂಡಿದ್ದು ಕೊನೆಯ ಸ್ಥಾನದಲ್ಲಿದೆ.

ಕರ್ನಾಟಕದಲ್ಲಿ ಜಿಲ್ಲಾವಾರು ಸಾಕ್ಷರತೆಯ ಪ್ರಮಾಣ

೨೦೦೧ರ ಜನಗಣತಿಯ ಪ್ರಕಾರ ಭಾರತದಲ್ಲಿ ಕರ್ನಾಟಕವು ಸಾಕ್ಷರತೆಯ ಪ್ರಮಾಣದಲ್ಲಿ ೧೬ನೇ ಸ್ಥಾನದಲ್ಲಿದೆ (೬೭.೦೪%). ರಾಜ್ಯದಲ್ಲಿ ಅಸಮತೋಲನವಿದ್ದಂತೆ ರಾಷ್ಟ್ರದಲ್ಲಿಯೂ ಅಸಮತೋಲನವಿದೆ. ಇದು ಪ್ರತಿವರ್ಷ ಹೆಚ್ಚಾಗುತ್ತಲಿದೆಯೇ ಹೊರತು ಕಡಿಮೆಯಾಗುತ್ತಿಲ್ಲ. ಇದನ್ನು ಕೋಷ್ಟಕ-೨ ರ ಸಹಾಯದಿಂದ ಕರ್ನಾಟಕದಲ್ಲಿ ಸಾಕ್ಷರತೆಯ ಪ್ರಮಾಣವನ್ನು ತಿಳಿದುಕೊಳ್ಳಬಹುದು.

ಕೋಷ್ಟಕ -1 ಸಾಕ್ಷರತೆಯ ಪ್ರಮಾಣ (%)

ಪ್ರಾದೇಶಿಕ ಭಾಗಗಳು	ಪುರುಷ	ಮಹಿಳೆ	ಒಟ್ಟು
ಕರ್ನಾಟಕ	76.29	67.04	57.45
ದಕ್ಷಿಣ ಕರ್ನಾಟಕ	77.77	69.71	61.50
ಉತ್ತರ ಕರ್ನಾಟಕ	68.83	61.42	54.51
ಹೈದರಾಬಾದ್ ಕರ್ನಾಟಕ	66.75	54.29	41.50

ಮೂಲ – ಭಾರತದ ಜನಗಣತಿ, 2001.

ಕೋಷ್ಟಕ – 2 ಜಿಲ್ಲಾವಾರು ಸಾಕ್ಷರತೆಯ ಪ್ರಮಾಣ (2001 ಜನಗಣತಿ)

ಕ್ರ.ಸಂ.	ಜಿಲ್ಲೆಗಳ ಹೆಸರು	ಪುರುಷ	ಮಹಿಳೆ	ಒಟ್ಟು
I	ಕರ್ನಾಟಕ	76.29	57.45	67.04
II	ದಕ್ಷಿಣ ಕರ್ನಾಟಕ			
1.	ಬೆಂಗಳೂರು	88.36	78.98	83.91
2.	ಬೆಂಗಳೂರು (ಗ್ರಾ)	74.43	55.12	65.00
3.	ಚಿತ್ರದುರ್ಗ	47.69	54.62	64.88
4.	ದಾವಣಗೆರೆ	76.44	58.45	67.67
5.	ಕೋಲಾರ	73.14	52.81	63.14
6.	ಶಿವಮೊಗ್ಗ	82.32	67.24	74.86
7.	ತುಮಕೂರು	76.88	57.18	67.19
8.	ಚಿಕ್ಕಮಗಳೂರು	80.68	64.47	72.63
9.	ದಕ್ಷಿಣ ಕನ್ನಡ	89.74	77.39	83.47
10.	ಉಡುಪಿ	86.59	74.02	79.87
11.	ಹಾಸನ	78.29	59.32	68.75
12.	ಕೊಡಗು	83.80	72.53	78.17
13.	ಮಂಡ್ಯ	70.71	51.62	61.21
14.	ಮೈಸೂರು	71.30	55.81	63.69
15.	ಚಾಮರಾಜನಗರ	59.25	43.02	51.26
III	ಉತ್ತರ ಕರ್ನಾಟಕ			
16.	ಬೆಳಗಾವಿ	75.89	52.53	64.42
17.	ಬಿಜಾಪೂರ	68.10	46.19	57.46
18.	ಬಾಗಲಕೋಟೆ	71.31	44.10	57.81
19.	ಧಾರವಾಡ	81.04	62.20	71.87
20.	ಗದಗ	79.85	52.58	66.27
21.	ಹಾವೇರಿ	77.94	57.60	68.09
22.	ಉತ್ತರ ಕನ್ನಡ	84.48	68.48	76.59
23.	ಬಳ್ಳಾರಿ*	69.59	46.16	58.04
24.	ಬೀದರ*	73.29	50.01	61.98
25.	ಗುಲ್ಬರ್ಗಾ*	62.52	38.40	50.65
26.	ರಾಯಚೂರು*	62.02	36.84	49.54
27.	ಕೊಪ್ಪಳ*	69.15	40.76	55.02

ಮೂಲ – ಕರ್ನಾಟಕ ಅಂಕಿ – ಅಂಶಗಳ ನೋಟ, 2002 –03, p– 64.
ವಿ.ಸೂ.: * ಪ್ರತಿನಿಧಿಸುವ ಜಿಲ್ಲೆಗಳು ಹೈದರಾಬಾದ್ ಕರ್ನಾಟಕಕ್ಕೆ ಸೇರಿವೆ.

ಕೋಷ್ಟಕ-೨ ರಾಜ್ಯದಲ್ಲಿನ ಸಾಕ್ಷರತೆಯ ಪ್ರಮಾಣದಲ್ಲಿ ಪ್ರಾದೇಶಿಕ ಅಸಮತೋಲನವನ್ನು ತೋರಿಸಿಕೊಡುತ್ತದೆ. ಬೆಂಗಳೂರು ಜಿಲ್ಲೆಯ ಶೇ. ೮೩.೯೧ ರಷ್ಟು ಸಾಕ್ಷರತೆ ಪ್ರಮಾಣ ಹೊಂದಿ ಪ್ರಥಮ ಸ್ಥಾನದಲ್ಲಿದ್ದರೆ ರಾಯಚೂರು ಜಿಲ್ಲೆಯು ಶೇ. ೪೯.೫೪ ರಷ್ಟು ಹೊಂದಿ ಕೊನೆಯ ಸ್ಥಾನದಲ್ಲಿದೆ. ಇದಕ್ಕೆ ಸೂಕ್ತವಾದ ಕಾರಣಗಳೇ ಇರುತ್ತವೆ. ಪ್ರಾದೇಶಿಕವಾಗಿ ಎರಡು ಭಾಗಗಳಲ್ಲಿ ನೋಡಿದಾಗ ದಕ್ಷಿಣ ಕರ್ನಾಟಕವು ಉತ್ತರ ಕರ್ನಾಟಕಕ್ಕಿಂತ ಎಲ್ಲಾ ಅಂಶಗಳಲ್ಲಿ ಮುಂದಿದೆ ಎಂಬುದನ್ನು ಮುಂದಿನ ಕೋಷ್ಟಕಗಳ ಸಹಾಯದಿಂದ ತಿಳಿದುಕೊಳ್ಳ ಬಹುದಾಗಿದೆ.

ಶಾಲೆಗಳ ಸಂಖ್ಯೆ

ಸಾಕ್ಷರತೆಯ ಪ್ರಮಾಣವನ್ನು ಹೆಚ್ಚಿಸಬೇಕಾದಲ್ಲಿ ಶಾಲೆಗಳ ಸಂಖ್ಯೆಯು ಪ್ರಮುಖ ಕಾರಣವಾಗಿರುತ್ತದೆ. ಶಾಲೆಗಳ ಸಂಖ್ಯೆಯು ಒಟ್ಟು ಜನರ ಮೇಲೆ ಅವಲಂಬಿಸಿರುತ್ತದೆ. ಎಲ್ಲಿ ಜನಸಂಖ್ಯೆ ಹೆಚ್ಚಿರು ತ್ತದೆಯೋ ಅಲ್ಲಿ ಶಾಲೆಗಳ ಸಂಖ್ಯೆಯು ಹೆಚ್ಚಿರುತ್ತವೆ. ಇದರಲ್ಲಿಯೂ ಕೂಡಾ ಪ್ರಾದೇಶಿಕವಾಗಿ ಅಸಮತೋಲನ ಎದ್ದು ಕಾಣುತ್ತದೆ. ಪ್ರತಿ ಒಂದು ಲಕ್ಷ ಜನಸಂಖ್ಯೆಗೆ ಕರ್ನಾಟಕದಲ್ಲಿ ೯೪, ದಕ್ಷಿಣ ಕರ್ನಾಟಕದಲ್ಲಿ ೧೦೨, ಉತ್ತರ ಕರ್ನಾಟಕದಲ್ಲಿ ೮೪ ಮತ್ತು ಹೈದರಾಬಾದ್ ಕರ್ನಾಟಕದಲ್ಲಿ ೭೯ ಶಾಲೆಗಳಿವೆ (ಕರ್ನಾಟಕ ಅಂಕಿ–ಅಂಶಗಳ ನೋಟ, ೨೦೦೨–೦೩) ಎಂದು ತಿಳಿದು ಬಂದಿದೆ. ಇದರಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಸಂಖ್ಯೆಯನ್ನು ನೋಡಿದಾಗ ಹೈದರಾಬಾದ್ ಕರ್ನಾಟಕ ದಲ್ಲಿಯೇ ಕಡಿಮೆ ಶಾಲೆಗಳಿವೆ ಎಂಬುದು ದೃಢವಾಗುತ್ತದೆ. ಇದನ್ನು ಕೋಷ್ಟಕ–೩ರ ಸಹಾಯದಿಂದ ನೋಡಬಹು ದಾಗಿದೆ.

ಕೋಷ್ಟಕ – 3 ಶಾಲೆಗಳ ಸಂಖ್ಯೆ (1998)

ಪ್ರಾದೇಶಿಕ ವಿಭಾಗಗಳು	ಪ್ರಾಥಮಿಕ ಶಾಲೆಗಳು	ಪ್ರತಿಶತ	ಪ್ರೌಢ ಶಾಲೆಗಳು	ಪ್ರತಿಶತ
ಕರ್ನಾಟಕ	46900	100	8168	100
ದಕ್ಷಿಣ ಕರ್ನಾಟಕ	29543	62.99	5111	62.57
ಉತ್ತರ ಕರ್ನಾಟಕ	17357	37.01	3057	37.43
ಹೈದರಬಾದ್ ಕರ್ನಾಟಕ	5834	12.44	1061	12.98

ಮೂಲ – ಕರ್ನಾಟಕ ಅಂಕಿ – ಅಂಶಗಳ ನೋಟ, 2002 –03.

ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಒಂದು ನಾಲ್ಕಂಶದಷ್ಟು ಕೇವಲ ಹೈದರಾ ಬಾದ್ ಕರ್ನಾಟಕದಲ್ಲಿದೆ. ಆದರೆ ಶಾಲೆಗಳ ಸಂಖ್ಯೆಯನ್ನು ನೋಡಿದಾಗ ಕೇವಲ ಶೇ. ೧೩ ರಷ್ಟು ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿವೆ ಎಂಬುದು ಸೋಜಿಗದ ಸಂಗತಿಯಾಗಿರುತ್ತದೆ. ಆದರೆ ಬೇರೆ ಪ್ರದೇಶಗಳಲ್ಲಿ ನೋಡಿದಾಗ ಶೇ. ೬೩ ರಷ್ಟು ಶಾಲೆಗಳು ದಕ್ಷಿಣ ಕರ್ನಾಟಕದಲ್ಲಿದ್ದರೆ, ಶೇ. ೩೭ ರಷ್ಟು ಉತ್ತರ ಕರ್ನಾಟಕದಲ್ಲಿವೆ. ಇದರಿಂದ ಸಾಕ್ಷರತೆಯ ಪ್ರಮಾಣದಲ್ಲಿ ಕಡಿಮೆ ಯಾಗುತ್ತಿದೆ ಎಂಬುದರಲ್ಲಿ ಸಂಶಯವಿಲ್ಲ.

ಶೈಕ್ಷಣಿಕ ಸಂಸ್ಥೆಗಳು

ಶೈಕ್ಷಣಿಕ ಸಂಸ್ಥೆಗಳನ್ನು ಹೊಂದು ವುದರಲ್ಲಿಯೂ ಕರ್ನಾಟಕದಲ್ಲಿ ಅಸಮ ತೋಲನ ಕಂಡುಬರುತ್ತದೆ.

ಅದನ್ನು ಕೋಷ್ಟಕ–೪ ರಲ್ಲಿ ವೀಕ್ಷಿಸಬಹುದಾಗಿದೆ.

ಕೋಷ್ಟಕ-೪ ರಲ್ಲಿನ ಅಂಕಿ-ಅಂಶಗಳನ್ನು ವೀಕ್ಷಿಸಿದಾಗ ದಕ್ಷಿಣ ಕರ್ನಾಟಕ ಭಾಗದಲ್ಲಿ ಶೇ. ೬೧.೨೭ ರಷ್ಟು ಪ್ರಾಥಮಿಕ, ಶೇ. ೬೫.೭೬ರಷ್ಟು ಪಾಲಿಟೆಕ್ನಿಕ್, ಶೇ. ೭೫ರಷ್ಟು ಇಂಜಿನಿಯರಿಂಗ್ ಮತ್ತು ವೈದ್ಯಕೀಯ, ಶೇ. ೭೨.೯೭ ರಷ್ಟು ದಂತ-ವೈದ್ಯಕೀಯ ಮತ್ತು ಶೇ. ೬೪.೭೦ ರಷ್ಟು ವಿಶ್ವವಿದ್ಯಾಲಯಗಳಿವೆ. ಆದರೆ ಉತ್ತರ ಕರ್ನಾಟಕದಲ್ಲಿ ಇದರ ಎರಡು ಪಟ್ಟರಷ್ಟು ಕಡಿಮೆಯಿದೆ. ಅದರಲ್ಲಿ ಶೇ. ೧೫ ಕ್ಕಿಂತ ಶೈಕ್ಷಣಿಕ (ಪ್ರಾಥಮಿಕದಿಂದ ವಿಶ್ವವಿದ್ಯಾಲಯಗಳವರೆಗೆ) ಸಂಸ್ಥೆಗಳಿವೆ. ಇದರಿಂದಾಗಿ ಹೈದರಾಬಾದ್ ಕರ್ನಾಟಕದ ಶಿಕ್ಷಣದ ಪ್ರಗತಿಯಲ್ಲಿ ಹಿನ್ನೆಡೆಯುಂತಾಗಿದೆ. ಪರಿಣಾಮವಾಗಿ ಶೈಕ್ಷಣಿಕ ಸೂಚ್ಯಾಂಕದಲ್ಲಿಯ ವ್ಯತ್ಯಾಸ ಕಂಡುಬರುತ್ತದೆ ಎಂಬುದನ್ನು ಈ ಕೆಳಗಿನ ಕೋಷ್ಟಕದ ಸಹಾಯದಿಂದ ತಿಳಿದುಕೊಳ್ಳಬಹುದು.

ಕೋಷ್ಟಕ - 4 ಕರ್ನಾಟಕದಲ್ಲಿ ಶೈಕ್ಷಣಿಕ ಸಂಸ್ಥೆಗಳು

ಪ್ರಾದೇಶಿಕ ಭಾಗಗಳು	ಪ್ರಾಥಮಿಕ	ಪಾಲಿಟೆಕ್ನಿಕ್	ಇಂಜಿನಿ-ಯರಿಂಗ್	ವೈದ್ಯಕೀಯ	ದಂತ-ವೈದ್ಯಕೀಯ	ವಿಶ್ವವಿದ್ಯಾಲಯ
ಕರ್ನಾಟಕ	2084	784	92	24	37	17
ದಕ್ಷಿಣ ಕರ್ನಾಟಕ	1277	121	69	18	27	11
ಉತ್ತರ ಕರ್ನಾಟಕ	0807	063	23	06	10	06
ಹೈದರಾಬಾದ್ ಕರ್ನಾಟಕ	0313	025	09	02	05	02

ಮೂಲ - ಕರ್ನಾಟಕ ಅಂಕಿ - ಅಂಶಗಳ ನೋಟ, 2002 -03.

ಶಿಕ್ಷಕ ಮತ್ತು ಶಿಕ್ಷಕಿಯರ ಪ್ರಮಾಣ

ಮಕ್ಕಳ ಭವಿಷ್ಯವನ್ನು ರೂಪಿಸುವಲ್ಲಿ ಆಧಾರ ಸ್ತಂಭವಾಗಿರುವ ಶಿಕ್ಷಕ-ಶಿಕ್ಷಕಿಯರ ಪ್ರಮಾಣದಲ್ಲಿ ಸಮತೋಲನ ಕಳೆದುಕೊಂಡು, ಪ್ರತಿ ನೂರು ಶಿಕ್ಷಕರ ಪ್ರಮಾಣಕ್ಕೆ ಶಿಕ್ಷಕಿಯರ ಪ್ರಮಾಣವನ್ನು ನೋಡಿದಾಗ ಪ್ರದೇಶವಾರು ಅಸಮತೋಲನವಾಗಿರುವುದನ್ನು ಕೋಷ್ಟಕ-೫ ರಿಂದ ತಿಳಿದುಕೊಳ್ಳಬಹುದಾಗಿದೆ.

ಪ್ರದೇಶಗಳ ಮಧ್ಯದ ಅಸಮತೋಲನವನ್ನು ವೀಕ್ಷಿಸಿದಾಗ ಸೌಲಭ್ಯ ವಂಚಿತವಾದ ಹೈದರಾಬಾದ ಕರ್ನಾಟಕದಲ್ಲಿ ಸುಮಾರು ಶೇ. ೪೦ ರಷ್ಟು ಬಾಲಕಿಯರು ಶಾಲೆಯಿಂದ ಹೊರಗುಳಿದಿದ್ದಾರೆ.

ಕೋಷ್ಟಕ -5 ಪ್ರತಿ ನೂರು ಶಿಕ್ಷಕರಿಗೆ ಶಿಕ್ಷಕಿಯರ ಪ್ರಮಾಣ

ಪ್ರಾದೇಶಿಕ ಭಾಗಗಳು	ಪ್ರಾಥಮಿಕ ಶಾಲೆ	ಮಾಧ್ಯಮಿಕ ಶಾಲೆ	ಪ್ರೌಢ ಶಾಲೆ
ಕರ್ನಾಟಕ	58	61	54
ದಕ್ಷಿಣ ಕರ್ನಾಟಕ	63	60	58
ಉತ್ತರ ಕರ್ನಾಟಕ	54	58	53
ಹೈದರಾಬಾದ್ ಕರ್ನಾಟಕ	49	52	48

ಮೂಲ - ಭಾರತದ ಜನಗಣತಿ, 2001.

ಭಾರತದ ಅಂಕಿ - ಸಂಖ್ಯೆಗಳ ಜೊತೆಗೆ ತುಲನೆ ಮಾಡಿದಾಗ, ಕರ್ನಾಟಕದಲ್ಲಿ ಶಿಕ್ಷಕಿಯರ ಪ್ರಮಾಣ ಹೆಚ್ಚಿರುವುದು ಸಂತೋಷದ ವಿಷಯವಾದರೆ, ಹೈದರಾಬಾದ್ ಕರ್ನಾಟಕದಲ್ಲಿ ಶಿಕ್ಷಕಿಯರ ಪ್ರಮಾಣ ಪ್ರತಿ ನೂರು ಶಿಕ್ಷಕರಿಗೆ ಐವತ್ತಕ್ಕಿಂತ ಕಡಿಮೆಯಿದೆ. (ಪ್ರಾಥಮಿಕ ೪೯, ಪ್ರೌಢ ೪೮) ಇದು ಸಂಕುಚಿತ ವಿಷಯವಾಗಬಹುದಾಗಿದೆ. ಆದರೆ ದಕ್ಷಿಣ ಕರ್ನಾಟಕ ಮತ್ತು ಉತ್ತರ ಕರ್ನಾಟಕಗಳ ಮಧ್ಯೆ ನೋಡಿದಾಗ ವ್ಯತ್ಯಾಸ ಕಂಡುಬರುತ್ತದೆ. ಪ್ರಾಥಮಿಕ ತರಗತಿಯಲ್ಲಿ ಪ್ರತಿ ನೂರು ಶಿಕ್ಷಕರಿಗೆ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕದಲ್ಲಿ ೯ ರಷ್ಟು ಶಿಕ್ಷಕಿಯರು ಹೆಚ್ಚಿದ್ದಾರೆ. ಮಾಧ್ಯಮಿಕ ಮತ್ತು ಪ್ರೌಢ ತರಗತಿಗಳಲ್ಲಿಯೂ ಕೂಡಾ ಕರ್ನಾಟಕದಲ್ಲಿಯೇ ಹೆಚ್ಚಿದ್ದಾರೆ. ಹೈದರಾಬಾದ್ ಕರ್ನಾಟಕದಲ್ಲಿ ಶಿಕ್ಷಕಿಯರ ಪ್ರಮಾಣ ಕಡಿಮೆಯಿರುವುದು, ಶಾಲೆಯಿಂದ ಹೊರಗುಳಿಯುವ ಮಕ್ಕಳ ಸಂಖ್ಯೆ ಹೆಚ್ಚಾಗಿದೆ ಎಂದು ಹಲವಾರು ವರದಿಗಳು ಅಂದಾಜಿಸಿವೆ.

ಕೋಷ್ಟಕ -6 ಶಾಲೆಯಿಂದ ಹೊರಗುಳಿಯುವ ಮಕ್ಕಳ ಸಂಖ್ಯೆ (%)

ಪ್ರಾದೇಶಿಕ ಭಾಗಗಳು	ಬಾಲಕರು	ಬಾಲಕಿಯರು	ಒಟ್ಟು
ಕರ್ನಾಟಕ	22.7	33.8	28.2
ದಕ್ಷಿಣ ಕರ್ನಾಟಕ	22.0	30.5	27.7
ಉತ್ತರ ಕರ್ನಾಟಕ	23.4	35.9	29.7
ಹೈದರಾಬಾದ್ ಕರ್ನಾಟಕ	22.8	38.0	30.4

ಮೂಲ - ಕರ್ನಾಟಕ ಅಂಕಿ - ಅಂಶಗಳ ನೋಟ, 2002 -03.

ಕೋಷ್ಟಕ -7 ತರಗತಿವಾರು ಶಾಲೆಯಿಂದ ಹೊರಗುಳಿಯುವ ಮಕ್ಕಳ ಸಂಖ್ಯೆ (%)

ಪ್ರಾದೇಶಿಕ ಭಾಗಗಳು	1 ರಿಂದ 5ನೇ ತರಗತಿ		1 ರಿಂದ 8ನೇ ತರಗತಿ		1 ರಿಂದ 10ನೇ ತರಗತಿ	
	ಬಾಲಕರು	ಬಾಲಕಿಯರು	ಬಾಲಕರು	ಬಾಲಕಿಯರು	ಬಾಲಕರು	ಬಾಲಕಿಯರು
ಕರ್ನಾಟಕ	33.62	38.68	46.28	51.51	56.42	62.32
ದಕ್ಷಿಣ ಕರ್ನಾಟಕ	30.38	34.41	42.39	47.71	49.27	54.62
ಉತ್ತರ ಕರ್ನಾಟಕ	37.81	41.20	48.33	54.71	59.42	65.32
ಹೈದರಾಬಾದ್ ಕರ್ನಾಟಕ	41.62	47.31	49.62	58.53	63.71	70.28

ಮೂಲ - ಕರ್ನಾಟಕ ಅಂಕಿ - ಅಂಶಗಳ ನೋಟ, 2002 -03.

ಶಾಲೆಯಿಂದ ಹೊರಗುಳಿಯುವ ಮಕ್ಕಳು

ಸಮಾಜದಲ್ಲಿ ಹಲವು ಸ್ತರದ ಮಕ್ಕಳು ಶಾಲೆಗೆ ಹೋಗುತ್ತಿರುತ್ತಾರೆ. ಅದರಲ್ಲಿ ಬಡವ-ಶ್ರೀಮಂತರೆಂಬ ಭೇದ - ಭಾವ ಇರುವುದಿಲ್ಲ. ಆದರೆ ಆರ್ಥಿಕವಾಗಿ ಹಿಂದುಳಿದ ಕುಟುಂಬದಿಂದ ಬರುವ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ. ಇದಕ್ಕೆ ಹಲವಾರು ಕಾರಣಗಳಿವೆ. ಕೆಲವೊಂದು ಸಮಯದಲ್ಲಿ ಸೌಲಭ್ಯ ವಂಚಿತ ಶಾಲೆಗಳೇ ಕಾರಣವಾಗಬಹುದು. ಅಂತಹ ಮಕ್ಕಳ ಸಂಖ್ಯೆಯಲ್ಲಿಯು ಕೂಡಾ ಏರು - ಪೇರಾಗಿದೆ. (ಹೈದರಾಬಾದ್ ಕರ್ನಾಟಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ) ಎಂಬುದನ್ನು ಕೋಷ್ಟಕ-೬ ದೃಢಪಡಿಸುತ್ತದೆ.

ಪ್ರದೇಶಗಳ ಮಧ್ಯದ ಅಸಮತೋಲನವನ್ನು ವೀಕ್ಷಿಸಿದಾಗ ಸೌಲಭ್ಯ ವಂಚಿತವಾದ ಹೈದರಾಬಾದ ಕರ್ನಾಟಕದಲ್ಲಿ ಸುಮಾರು ಶೇ. ೪೦ ರಷ್ಟು ಬಾಲಕಿಯರು ಶಾಲೆಯಿಂದ ಹೊರಗುಳಿದಿದ್ದಾರೆ. ಈ ಭಾಗದಲ್ಲಿ ಸರ್ಕಾರಿ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳು ಪ್ರಾಥಮಿಕ ಶಿಕ್ಷಣದ ಪ್ರಗತಿಗಾಗಿ ಹಾಕಿಕೊಂಡ ಯೋಜನೆಗಳು ವಿಫಲವಾಗುತ್ತಿವೆ. ಇದಕ್ಕೆ ಆಡಳಿತ ಯಂತ್ರದ ಕೊರತೆಯಿರಬಹುದು. ರಾಜಕೀಯ ಪ್ರಭಾವಗಳಂತಹ ಹಲವಾರು ಕಾರಣಗಳಿರಬಹುದು. ಸೌಲಭ್ಯಯುತ ಭಾಗಗಳಲ್ಲಿ ಶಾಲೆಯಿಂದ ಹೊರಗುಳಿಯುವ ಮಕ್ಕಳ ಸಂಖ್ಯೆ ಕಡಿಮೆಯಿರುತ್ತದೆ. ಯಾವ ತರಗತಿಯಲ್ಲಿ ಶಾಲೆಯಿಂದ ಹೊರಗುಳಿಯುವ ಮಕ್ಕಳ ಸಂಖ್ಯೆ ಎಷ್ಟಿದೆ ಎಂಬುದನ್ನು ಕೋಷ್ಟಕ-೭ ರ ಸಹಾಯದಿಂದ ತಿಳಿಯಬಹುದು.

ಕೋಷ್ಟಕ -8 ಶೈಕ್ಷಣಿಕ ಸೂಚ್ಯಾಂಕ

ಪ್ರಾದೇಶಿಕ ಭಾಗಗಳು	ಸೂಚ್ಯಾಂಕ
ಕರ್ನಾಟಕ	0.596
ದಕ್ಷಿಣ ಕರ್ನಾಟಕ	0.630
ಉತ್ತರ ಕರ್ನಾಟಕ	0.527
ಹೈದರಾಬಾದ್ ಕರ್ನಾಟಕ	0.452

ಮೂಲ: ಮಾನವ ಅಭಿವೃದ್ಧಿ ಕರ್ನಾಟಕ, 1999.

ಹೈದರಾಬಾದ್ ಕರ್ನಾಟಕದಲ್ಲಿ ಶೇ. ೭೦ ರಷ್ಟು ಬಾಲಕಿಯರು ಒಂದರಿಂದ ಹತ್ತನೆಯ ತರಗತಿಯಲ್ಲಿ ಶಾಲೆಯಿಂದ ಹೊರಗುಳಿದಿದ್ದಾರೆ. ಒಂದರಿಂದ ಐದನೆಯ ತರಗತಿ ಮತ್ತು ಎಂಟನೆಯ ತರಗತಿಯಲ್ಲಿಯೂ ಕೂಡಾ ಬಾಲಕಿಯರ ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಯಿಂದ ಹೊರಗುಳಿದಿದ್ದಾರೆ. (ಹೈದರಾಬಾದ್ ಕರ್ನಾಟಕದಲ್ಲಿ) ಎಂದರೆ ವಿಪರ್ಯಾಸವೆನಿಸಬಹುದು. ಒಟ್ಟಾರೆಯಾಗಿ ನೋಡಿದಾಗ ಉತ್ತರ ಕರ್ನಾಟಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಶಾಲೆಯಿಂದ ಹೊರಗುಳಿಯುವವರಾಗಿದ್ದರೆ, ದಕ್ಷಿಣ ಕರ್ನಾಟಕದಲ್ಲಿ ಒಟ್ಟು ರಾಜ್ಯದ ಅಂಕಿ-ಅಂಶಗಳಿಗಿಂತ ಕಡಿಮೆ ದರದಲ್ಲಿ ಶಾಲೆಯಿಂದ ಹೊರಗುಳಿಯುತ್ತಿರುವ ಮಕ್ಕಳ ಸಂಖ್ಯೆ ಕಂಡುಬರುತ್ತದೆ. ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ, ಶಾಲೆಯಿಂದ ಹೊರಗುಳಿಯುವವರ ಸಂಖ್ಯೆಯನ್ನು ನೋಡಿದಾಗ ಶೇ. ೬೫ ರಷ್ಟು ಬಾಲಕ-ಬಾಲಕಿಯರು ಹೈದರಾಬಾದ್ ಕರ್ನಾಟಕದಲ್ಲಿ ಕಂಡುಬರುತ್ತಾರೆ. ಇದಕ್ಕೆ ಆರ್ಥಿಕ ಸಮಸ್ಯೆ ಪ್ರಮುಖ ಕಾರಣವಾದರೆ ಇತರೆ ಕಾರಣಗಳು ಸಾಮಾನ್ಯವಾಗಿವೆ.

ಅಸಮತೋಲನಕ್ಕೆ ಕಾರಣಗಳು

ಕರ್ನಾಟಕದಲ್ಲಿನ ಪ್ರಾದೇಶಿಕ ಅಸಮತೋಲನಕ್ಕೆ ಹಲವಾರು ಕಾರಣಗಳು ಅವುಗಳನ್ನು ಸಾಮಾಜಿಕ, ಆರ್ಥಿಕ, ನೈಸರ್ಗಿಕ ಮತ್ತು ರಾಜಕೀಯ ಕಾರಣಗಳೆಂದು ವಿಂಗಡಿಸಲಾಗಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ೧. ನೈಸರ್ಗಿಕ ಸಂಪನ್ಮೂಲಗಳ ಅಸಮರ್ಪಕ ಹಂಚಿಕೆ, ೨.



ದೋಷಪೂರಿತ ಆರ್ಥಿಕ ನೀತಿ, ೩. ದಕ್ಷ ಆಡಳಿತದ ಕೊರತೆ, ೪. ಬಂಡವಾಳದ ಕೊರತೆ, ೫. ಜಾತಿ ವ್ಯವಸ್ಥೆ, ೬. ಅಸಮರ್ಪಕ ಆರ್ಥಿಕ ಯೋಜನೆಗಳು, ೭. ಬಡತನ ಮತ್ತು ಮಿತಿಮೀರಿದ ಜನಸಂಖ್ಯೆ (ಎಚ್ಚಾರ್ಕೆ – ೧೯೯೯. ಪುಟ–೧೦೦)

ಪರಿಹಾರ ಕ್ರಮಗಳು

ಕರ್ನಾಟಕದಲ್ಲಿ ಶಿಕ್ಷಣದಲ್ಲಿನ ಪ್ರಾದೇಶಿಕ ಅಸಮತೋಲನದ ನಿವಾರಣೆಗೆ ಅನೇಕ ಪರಿಹಾರ ಕ್ರಮಗಳನ್ನು ಸೂಚಿಸಬಹುದಾಗಿದೆ.

* ಶಿಕ್ಷಣದಲ್ಲಿ ಹಿಂದುಳಿದ ಪ್ರದೇಶಗಳನ್ನು ಗುರುತಿಸಿ, ಅಭಿವೃದ್ಧಿಗೆ ಬೇಕಾದ ಪೂರಕ ವಾತಾವರಣವನ್ನು ನಿರ್ಮಿಸಿ, ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಬೇಕು.
* ಆಯಾ ಪ್ರದೇಶಗಳ ಅವಶ್ಯಕತೆಗಳಿಗೆ ತಕ್ಕಂತೆ ಯೋಜನೆಗಳನ್ನು ರೂಢಿಸಬೇಕು.
* ಶಿಕ್ಷಣದಲ್ಲಿ ಹಿಂದುಳಿದ ಪ್ರದೇಶಗಳಿಗೆ ವಿಶೇಷವಾಗಿ ಹಣಕಾಸಿನ ಸಂಪನ್ಮೂಲವನ್ನು ಒದಗಿಸಿಕೊಡಬೇಕು.
* ಶಿಕ್ಷಣದಲ್ಲಿ ಹಿಂದುಳಿದ ಪ್ರದೇಶಗಳ ಅಧ್ಯಯನಕ್ಕೋಸ್ಕರ ರಚಿಸುವ ಸಮಿತಿಯಲ್ಲಿ ಕೇವಲ ಶಿಕ್ಷಣ ತಜ್ಞರು ಮಾತ್ರ ಇರಬೇಕು.
* ಆಡಳಿತ ಯಂತ್ರ ಸುಭದ್ರತೆಯನ್ನು ಕಾಯ್ದುಕೊಳ್ಳಬೇಕು.
* ಶಿಕ್ಷಣಕ್ಕೆ ಸಂಬಂಧಿಸಿದ ಹಲವಾರು ಯೋಜನೆಗಳನ್ನು ಯಶಸ್ವಿಗೊಳಿಸುವುದರ ಮೂಲಕ ಪ್ರದೇಶಗಳ ಆಯ್ಕೆ ಸಮರ್ಪಕವಾಗಿರಬೇಕು.

ಶಿಕ್ಷಣದಲ್ಲಿ ಅಸಮತೋಲನವು ಕೇವಲ ಕರ್ನಾಟಕದಲ್ಲಿ ಅಷ್ಟೇ ಅಲ್ಲದೆ ದೇಶದ ಎಲ್ಲಾ ರಾಜ್ಯಗಳಲ್ಲಿ ವ್ಯಾಪಕವಾಗಿದೆ. ಆದರೆ ಕರ್ನಾಟಕದಲ್ಲಿ ಎಲ್ಲಾ ರಾಜ್ಯಗಳಿಗಿಂತ ಅಸಮತೋಲನ ಕೇವಲ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢ ಶಿಕ್ಷಣದಲ್ಲಿ ಅಷ್ಟೇ ಅಲ್ಲಾ ವಿಶ್ವವಿದ್ಯಾಲಯದಂತಹ ಉನ್ನತ ಶಿಕ್ಷಣದಲ್ಲಿಯೂ ವ್ಯಾಪಕವಾಗಿ ಕಂಡುಬರುತ್ತದೆ. ಇದೆ ರೀತಿಯಾಗಿ ಮುಂದುವರೆದರೆ ಸೌಲಭ್ಯದಿಂದ ವಂಚಿತವಾದ ಜಿಲ್ಲೆಗಳು ಹಿಂದುಳಿಯುತ್ತಾ ಹೋದರೆ, ಸೌಲಭ್ಯ ಪಡೆದುಕೊಂಡ ಜಿಲ್ಲೆಗಳು ಹಾಗೆಯೇ ಮುಂದುವರೆಯುತ್ತಾ ಹೋಗುತ್ತವೆ. ಇದರ ಬಗ್ಗೆ ಗಮನಹರಿಸಬೇಕಾದದ್ದು ಸರ್ಕಾರ ಮತ್ತು ಆಡಳಿತ ಯಂತ್ರದ ಕರ್ತವ್ಯವಾಗಿದೆ.

ಆಧಾರ ಗ್ರಂಥಗಳು

೧. ಡಾ|| ಲೋಕಾಪೂರ ಐ.ಎ. (೧೯೯೪). 'ಪ್ರೌಢ ಶಿಕ್ಷಣ ಹಾಗೂ ಶಿಕ್ಷಕನ ಕಾರ್ಯಗಳು'. ಪುಟ-೧ -೧೦
೨. ಎಚ್ಚಾರ್ಕೆ (೧೯೯೯). 'ಭಾರತದ ಆರ್ಥಿಕ ವ್ಯವಸ್ಥೆ'. ಪುಟ - ೧೦೦
೩. ಸೋಮಶೇಖರ ನೇ.ತಿ. (೨೦೦೩). 'ಕರ್ನಾಟಕದ ಅರ್ಥಶಾಸ್ತ್ರ', ಪುಟ - ೪೨೮ - ೪೫
೪. ಡಾ|| ರಾಸೂರೆ ಕೆ.ಎ. (೨೦೦೪). 'ಆರ್ಥಿಕಾಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರ', ಯೋಜನೆ ನವೆಂಬರ್, ಪುಟ - ೨೧ -೨೫
೫. ಡಾ|| ಹಿರೇಮಠ ಎಸ್.ಎಲ್. (೨೦೦೪) 'ಸೋಷಿಯಲ್ ಇಂಡಿಕೇಟರ್ಸ್ ಆಫ್ ರೀಜನಲ್ ಇಂಬ್ಯಾಲೇನ್ಸ್ ಇನ್ ಕರ್ನಾಟಕ.'
೬. ಭಾರತದ ಜನಗಣತಿ - ೨೦೦೧
೭. ಕರ್ನಾಟಕ ಅಂಕಿ - ಅಂಶಗಳ ಪಕ್ಷಿನೋಟ - ೨೦೦೨ -೦೩
೮. ಗುಲಬರ್ಗಾ ಜಿಲ್ಲೆಯ ಅಂಕಿ - ಅಂಶಗಳ ಪಕ್ಷಿನೋಟ - ೨೦೦೩ □

ಕುವೆಂಪು ಹೀಗೆನ್ನುತ್ತಾರೆ...



'...ಹಾಗೆ ನೋಡಿದರೆ, ನಾನು ಹಿಂದೂ ಅಂತ ಹೇಳಿಕೊಳ್ಳೋದೇ ಇಲ್ಲ, ನಾನು ಹಿಂದೂ ಅಲ್ಲ. ಹಿಂದೂ ಅಂದರೆ ಗಂಗಾ-ಗಾಯತ್ರಿ-ಗೋ- ಇವು ಪವಿತ್ರ ಅಂತ ಭಾವಿಸೋದು. ಗಂಗಾ ಯಾಕೆ ಪವಿತ್ರ ? ನಮ್ಮ ಮಲೆನಾಡಿನ ತುಂಗಾ ಕೂಡ ಪವಿತ್ರವಲ್ಲವೇ? ಗಾಯತ್ರಿ ಒಂದು ಪ್ರಾರ್ಥನೆ ಆದರೆ ನಾನು ಹಾಡೋ ಪದ್ಯಾನೂ ಗಾಯತ್ರೀನೇ. ಇನ್ನು ಗೋವು ಕಡಿಬಾರದು ಅನ್ನೋದಾದ್ರೆ ಅದೊಂದೇ ಪ್ರಾಣೀನಾ? ಬೇರೆ ಪ್ರಾಣಿಗಳೇನು ಪಾಪ ಮಾಡಿದಾವೆ ? ಅವೂ ಇಷ್ಟೇ ಮುಖ್ಯ. ಪೂಜೆ, ಪುನಸ್ಕಾರ, ವಿಧಿ ಇಂಥವುಗಳನ್ನು ಮಾಡೋದು ಹಿಂದುಗಳಾದರೆ, ಇದಾವುದನ್ನೂ ನಾನು ಮಾಡೋದಿಲ್ಲ. ನೀವು ಹೇಳುವ ಹಿಂದುವಿನ ಯಾವ ಲಕ್ಷಣಗಳೂ ನನ್ನಲ್ಲಿಲ್ಲ, ಹಾಗಾದರೆ ನಾನೆಂಥ ಹಿಂದು ? ಎಂಥ ದೊಡ್ಡ ಸಾಹಿತಿನೇ ಆಗಿರಲಿ - ಅವನು ಅನುಷ್ಠಾನಕ್ಕೆ ತರೋದಕ್ಕೆ ಆಗದೇ ಇದ್ರೂ ಚಿಂತೆ ಇಲ್ಲ - ವಿಶ್ವಮಾನವತ್ವವನ್ನು ಭಾವದ ಮಟ್ಟದಲ್ಲಾದರೂ ಒಪ್ಪಿಕೊಳ್ಳದೇ ಹೋದರೆ, ಅಂಥವನನ್ನೂ ಮೂರನೇ ದರ್ಜೆ ಅಥವಾ ನಾಲ್ಕನೇ ದರ್ಜೆಯವನಂತಲೇ ತಿಳಕೊಳ್ಳಬೇಕು.' □

ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ :
ಸಂಪಾದಕರು, ' ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು - ೫೬೦ ೦೯೧
ದೂರವಾಣಿ : ೩೨೮ ೭೯೪೩ / ೯೪೪೮೦೪೮೩೦೬

ಬುದ್ಧಾಯಣ

೦

ಜನಕ್ಕೇ ಬೆಳಕಾದ ಬುದ್ಧನ ಕಥೆಗಳು ಅಪಾರ. ಬುದ್ಧ ತನ್ನ ಪ್ರವಾಸದ ಕಾಲದಲ್ಲಿ ಜನರ ಸಮಸ್ಯೆಗಳನ್ನು ಬಗೆಹರಿಸಲು ಹಾಗೂ ಅವರಿಗೆ ಮಾರ್ಗದರ್ಶನ ಮಾಡಲು ಕಥೆಗಳನ್ನು ಕೇಳುತ್ತಿದ್ದ. ಇದು ಜನರನ್ನು ತಿದ್ದಲು ಅತ್ಯಂತ ಸಮರ್ಥ ಮಾರ್ಗವೆಂದೇ ಇಂದಿಗೂ ಜನ ತಿಳಿದಿದ್ದಾರೆ. ಬುದ್ಧ ಹೇಳಿದ ಇಂಥ ನೂರಾರು ಕಥೆಗಳು ಇಂದು ವಿವಿಧ ರೂಪದಲ್ಲಿ ಲಭ್ಯವಿದೆ. ಸಿ.ಎಚ್. ರಾಜಶೇಖರ್ ಅಂಥ ಹಲವು ಕಥೆಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು 'ಸಂವಾದ' ಓದುಗರಿಗಾಗಿ ಈ ಸಂಚಿಕೆಯಿಂದ ನೀಡುತ್ತಿದ್ದೇವೆ.

೦ಸಿ.ಎಚ್.ರಾಜಶೇಖರ್

ಬಹುಜನರ ಹಿತಕ್ಕಾಗಿ, ಸುಖಕ್ಕಾಗಿ ಬದುಕಿದಾತನೆ ಮಹಾತ್ಮ

ಒಮ್ಮೆ ಬುದ್ಧನು ಮಗಧ ರಾಜ್ಯದ ರಾಜಗೃಹದ ಬಳಿಯ ವೇಣು ವನದಲ್ಲಿ ತನ್ನ ಶಿಷ್ಯರೊಂದಿಗೆ ತಂಗಿದ್ದ. ಆ ರಾಜ್ಯದ ದೊಡ್ಡ ಅಧಿಕಾರಿಯೂ, ವೈದಿಕ ಧರ್ಮದ ಪ್ರತಿನಿಧಿಯೂ ಮತ್ತು ಮಹಾಪಂಡಿತನೂ ಆದ ವಸ್ಸಕಾರ ಎಂಬುವನಿದ್ದ. ವಿಚಾರದಲ್ಲಿ ಬುದ್ಧನ ಬಗ್ಗೆ ಅಪಾರ ಭಿನ್ನಾಭಿಪ್ರಾಯವಿದ್ದರೂ ಕೂಡ ಆತನ ಆಕರ್ಷಕ ವ್ಯಕ್ತಿತ್ವಕ್ಕೆ ಮಾರು ಹೋಗಿದ್ದ. ಆತನ ಬಗ್ಗೆ ಆತನ ಸರಳ ಸತ್ಯಗಳ ಬಗ್ಗೆ ಅಪಾರವಾಗಿ ಕೇಳಿ ತಿಳಿದಿದ್ದ. ಬಹು ದಿನದಿಂದ ಆತನನ್ನು ಕಂಡು ತನ್ನ ಅನಿಸಿಕೆಗಳನ್ನು ಆತನಲ್ಲಿ ಚರ್ಚಿಸಬೇಕೆಂಬ ಮಹದಾಸೆ ಇತ್ತು. ಆದರೆ ಅನೇಕ ಕಾರಣಗಳಿಂದ ಅದು ಕೈಗೂಡಿರಲಿಲ್ಲ. ಈ ಭಾರಿ ಬುದ್ಧ ತನ್ನ ರಾಜ್ಯಕ್ಕೆ ಬಂದಿದ್ದಾನೆಂದು ತಿಳಿದ ವಸ್ಸಕಾರ ಸಂತೋಷಗೊಂಡ.

ಮರುದಿನ ಮುಂಜಾನೆ ವಸ್ಸಕಾರ ಬುದ್ಧನನ್ನು ಸಂಧಿಸಿದ. ತನ್ನ ಪರಿಚಯವನ್ನು ಮಾಡಿಕೊಂಡ. ಎಲ್ಲ ವ್ಯವಸ್ಥೆ ಸರಿ ಇದೆಯೇ ಎಂದು ಪರೀಕ್ಷಿಸಿದ. ಬಳಿಕ ಉಭಯ ಕುಶಲೋಪರಿ ನಡೆಯಿತು. ವಸ್ಸಕಾರ ತನ್ನ ಉದ್ದೇಶವನ್ನು ತಿಳಿಸಿದ. ಆ ನಂತರ ಬುದ್ಧನನ್ನು ಉದ್ದೇಶಿಸಿ :

'ಗುರು ಗೌತಮರೇ, ಬ್ರಾಹ್ಮಣರಾದ ನಾವು ವಿದ್ಯೆಯೇ ಮೌಲಿಕವೆಂದು ಭಾವಿಸಿದ್ದೇವೆ. ಆ ಬಗ್ಗೆ ತಮ್ಮ ಅಭಿಪ್ರಾಯವೇನು?'

'ಎಲೈ ವಸ್ಸಕರನೇ, ವ್ಯಕ್ತಿಗೆ ಶೀಲವೇ ಮೌಲಿಕ'. 'ಗುರು ಗೌತಮರೇ, ಪಾಂಡಿತ್ಯ ಮತ್ತು ವಿದ್ಯೆಗಿಂತ ಶೀಲ ಹೇಗೆ ಮೌಲಿಕ ?'

'ಎಲೈ ವಸ್ಸಕಾರನೇ, ಜ್ಞಾನಿಯೊಬ್ಬ ಅಮಾನವೀಯನಾಗಿದ್ದಾಗ ಆತನ ಪಾಂಡಿತ್ಯದಿಂದ ಯಾರಿಗೆ ಲಾಭ ? ವಿದ್ಯೆಯೊಂದಿಗೆ ಶೀಲ ಬೆರೆತಾಗಲೇ ಬಹುಜನರ ಹಿತ ಮತ್ತು ಬಹುಜನರ ಸುಖ ಅಡಗಿದೆ'.

'ಗುರು ಗೌತಮರೇ, ಹಾಗಾದರೆ ರಾಜ ತನ್ನ ದೇಶದಲ್ಲಿ ಮಾತ್ರ ದೊರೆ ಮತ್ತು ಗೌರವಾನ್ವಿತ. ಆದರೆ ಪಂಡಿತನಾದವನನ್ನು ಜಗತ್ತಿನಾದ್ಯಂತ ಮಾನ್ಯನೆಂಬ ವಾದ ಸುಳ್ಳೇ ? ರಾಜನಿಗಿಂತಲೂ ಪಂಡಿತ ಮೇಲೆಂಬ

'ಎಲೈ ವಸ್ಸಕಾರನೇ, ಆ ನಾಲ್ಕೂ ಗುಣಗಳು ಯಾವುವು ?'

'ಗುರು ಗೌತಮರೇ, ಮೊದಲು ಪಾಂಡಿತ್ಯ, ಎರಡನೆಯದು ಜ್ಞಾಪಕಶಕ್ತಿ. ಮೂರನೆಯದು ವ್ಯವಹಾರ ಕುಶಲತೆ. ನಾಲ್ಕನೇಯದು ಸಂಪನ್ಮೂಲ ಕ್ರೋಢೀಕರಣ ! ವಿದ್ವಾಂಸನಾದವನು ಯಾವುದನ್ನೇ ಕೇಳಲಿ ಆ ಬಗ್ಗೆ ವಾದಿಸುವನು. ಅದರ ಅರ್ಥವನ್ನು ಅರಿಯುವನು. ವ್ಯಾಖ್ಯಾನಿಸುವನು : 'ಇದು ಇದರ ಅರ್ಥ' ಎಂದು ಖಚಿತವಾಗಿ ಹೇಳುವನು. ಇದಕ್ಕೆ ಮೂಲವಾಗಿ ಬೇಕಾದದ್ದು ಪಾಂಡಿತ್ಯ. ಬಹಳ ಹಿಂದೆ ನಡೆದ, ಬಹಳ ಹಿಂದೆ ನುಡಿದ, ವಿಷಯವನ್ನು ನೆನೆಸಿಕೊಂಡು ಹೇಳಬಲ್ಲ. ಖಚಿತಪಡಿಸಬಲ್ಲ, ಅರ್ಥೈಸಬಲ್ಲ. ವಾದ ವಿವಾದವನ್ನು ಕೊನೆಗಾಣಿಸಬಲ್ಲ, ಇದಕ್ಕೆ ಮೂಲವೇ ಜ್ಞಾಪಕ ಶಕ್ತಿ. ಯಾವಾತ ತನ್ನ ಪಾಂಡಿತ್ಯವನ್ನೇ ಆಸ್ತಿಯನ್ನಾಗಿ ಮಾರ್ಪಡಿಸಿಕೊಳ್ಳಬಲ್ಲನೋ, ಅದನ್ನೆ ವ್ಯವಹಾರ ವನ್ನಾಗಿಯೂ, ವ್ಯಾಪಾರವನ್ನಾಗಿಯೂ ಕುಶಲತೆ ಪಡೆಯಬಲ್ಲನೋ ಅವನೇ ಕುಶಲಕರ್ಮಿ. ಯಾವಾತನು ತನ್ನ ಪಾಂಡಿತ್ಯದ ಮೂಲಕವೇ ಸಂಪತ್ತನ್ನು ಹೇಗೆ ಪಡೆಯಬಹುದು. ಹೇಗೆ ಸಂಗ್ರಹಿಸಬಹುದು, ಹೇಗೆ ಕ್ರೋಢೀಕರಿಸಬಹುದು ಎಂಬುದನ್ನು ಯೋಗ್ಯವಾಗಿ ಅರಿತು, ಸಮರ್ಥ ವಾಗಿ ವ್ಯವಸ್ಥೆ ಮಾಡುವನೋ ಅವನೇ ದೊಡ್ಡ ಮನುಷ್ಯ. ಮಹಾ ಜ್ಞಾನಿ ಗಾಗಲಿ, ದೊಡ್ಡ ಮನುಷ್ಯನಿಗಾಗಲಿ ವಿದ್ಯೆಯೇ ಮೂಲ. ಆದ್ದರಿಂದಲೇ 'ವಿದ್ವಾಂಸನು' ದೊರೆಗಿಂತ ಮಿಗಿಲು ಮತ್ತು ಲೋಕಮಾನ್ಯ ಎಂದದ್ದು'

'ಗುರು ಗೌತಮರೇ, ಈಗ ನಾನು ಪ್ರಶಂಸೆಗೆ ಯೋಗ್ಯನಾಗಿದ್ದರೆ ಪ್ರಶಂಸಿಸಿರಿ. ಇಲ್ಲವಾದರೆ ನಿಂದಿಸಿರಿ'.

'ಎಲೈ ವಸ್ಸಕಾರನೇ, ನಾನು ನಿನ್ನನ್ನು ಪ್ರಶಂಸಿಸುವುದೂ ಇಲ್ಲ. ನಾನು ನಿನ್ನನ್ನು ನಿಂದಿಸುವುದೂ ಇಲ್ಲ. ಏಕೆಂದರೆ, ನೀನು ಪ್ರಾಚೀನ ಪರಂಪರೆಯ ಪ್ರತಿನಿಧಿ. ರೂಢಿ ಮೂಲದ ಪ್ರತೀಕ. ನಾವು ಕಲಿಯ ಬೇಕಾದದ್ದು ಮೂಢನಂಬಿಕೆಯನ್ನಲ್ಲ. ಸಂಪ್ರದಾಯದ ಹೆಸರಿನಲ್ಲಿ ನಾವು

ತಮ್ಮ ಪ್ರಾಚೀನರ ವಾದವನ್ನು ತಾವು ಹೇಗೆ ತಪ್ಪೆಂದು ವಾದಿಸುವಿರಿ ? ಅಥವಾ ಧಿಕ್ಕರಿಸುವಿರಾ ?'

'ಎಲೈ ವಸ್ಸಕರನೇ, ಶೀಲವೆಂಬುದು ಕೇವಲ ಪಂಡಿತನಿಗಷ್ಟೇ ಅನ್ವಯಿಸುವ ವಿಷಯವಲ್ಲ. ದೊರೆಗೂ ಅನ್ವಯಿಸುತ್ತದೆ. ಹಾಗೆಯೇ ಶೂದ್ರನಿಗೂ ಅನ್ವಯಿಸುತ್ತದೆ ! ಸಕಲ ಒಳಿತು ಮತ್ತು ಕೆಡುಕಿನ ಮೂಲ ನಿಂತಿರುವುದೇ ಶೀಲದ ಮೇಲೆ. ಶೀಲವಿಲ್ಲದ ಪಾಂಡಿತ್ಯ, ತಳವಿಲ್ಲದ ದೋಣಿಯಂತೆ. ಆದ್ದರಿಂದಲೇ ನಾನು ವಿದ್ಯೆಯು ಶೀಲದೊಂದಿಗೆ ಬೆಸೆದಿರಬೇಕು ಎನ್ನುವುದು !'

'ಗುರು ಗೌತಮರೇ, ನಮ್ಮ ಪೂರ್ವಿಕರು ಎಲ್ಲದರ ಮೂಲ 'ವಿದ್ಯೆ' ಎಂದು, ವಿದ್ಯೆಯೂ ಜ್ಞಾನ ಮತ್ತು ಪ್ರಜ್ಞೆಗೆ ಮೂಲವೆಂದು ಸಾರಿದ್ದಾರೆ. ಹಾಗಾದರೆ ಯಾವುದು ಸರಿ ?'

'ಎಲೈ ವಸ್ಸಕಾರನೇ, ಶೀಲದೊಂದಿಗೆ ಕೂಡಿದ ವಿದ್ಯೆ ಮತ್ತು ಸೂಕ್ಷ್ಮ ಪರಿಜ್ಞಾನವೇ ಮುಖ್ಯ. ಇದನ್ನೆ ನಾನು 'ಪ್ರಜ್ಞೆ' ಎಂದು ಸಾರಿದ್ದು ! ಅನಾಚಾರಿ ಆದ ಪಂಡಿತನ ಕೈಯಿನ ವಿದ್ಯೆ, ಕ್ರೂರಿ ಒಬ್ಬನ ಕೈಯಿನ ಖಡ್ಗವೇ ಸರಿ !'

ಗುರು ಗೌತಮರೇ, ನಮ್ಮ ಪ್ರಾಚೀನರು ಪಂಡಿತನನ್ನು ಮಹಾಜ್ಞಾನಿ ಎಂತಲೂ, ದೊಡ್ಡ ಮನುಷ್ಯ ಎಂತಲೂ ಕರೆಯುತ್ತಾರೆ. ಅವರ ಪ್ರಕಾರ ಆ ವ್ಯಕ್ತಿಯೂ ನಾಲ್ಕು ಗುಣಗಳನ್ನು ಹೊಂದಿರಬೇಕೆಂದು ವಾದಿಸುತ್ತಾರೆ'

ಕಳೆದುಕೊಳ್ಳಬೇಕಾದದ್ದು ಚಿಂತನೆಯನ್ನಲ್ಲ. ಬದಲಿಗೆ ನಾವು ಯಾವುದಕ್ಕೂ ಜೋತು ಬೀಳಬಾರದು. ಚಿಂತಿಸದ ಹೊರತು, ವಿಮರ್ಶಿಸದ ಹೊರತು, ಸತ್ಯಾಸತ್ಯತೆಯನ್ನು ಕಂಡುಕೊಳ್ಳದ ಹೊರತು ನಾವು ಯಾವುದೇ ನಿರ್ಧಾರಕ್ಕೆ ಬರಬಾರದು. ನಮಗೆ ಉಚಿತವೆಂದುದ್ದನ್ನು ಒಪ್ಪಿಕೊಳ್ಳಬೇಕು. ಅನುಚಿತವಾದುದ್ದನ್ನು ಖಂಡಿಸಬೇಕು. ಪ್ರತಿಭಟಿಸ ಬೇಕು ಮತ್ತು ಸಂಸ್ಕರಣೆಗೆ ಒಳಪಡಿಸಬೇಕು. ಯಾವಾತ ಇವುಗಳನ್ನು ರೂಢಿಸಿಕೊಳ್ಳುತ್ತಾನೋ, ಆಚರಣೆಗೆ ತರುತ್ತಾನೋ ಆತನೇ ಪ್ರಶಂಸೆಗೆ ಅರ್ಹ.'

'ಗುರು ಗೌತಮರೇ, ನಿಮ್ಮ ಅಭಿಪ್ರಾಯದಲ್ಲಿ ಮನುಷ್ಯನೊಬ್ಬ ಮಹಾಜ್ಞಾನಿ ಅಥವಾ ದೊಡ್ಡ ಮನುಷ್ಯನಾಗಬೇಕಾದರೆ ಯಾವ ನಾಲ್ಕೂ ಮುಖ್ಯ ಗುಣಗಳನ್ನು ಹೊಂದಿರಬೇಕು ?'

'ಎಲೈ ವಸ್ಸಕಾರನೇ, ಯಾವಾತ ಬಹುಜನರ ಹಿತಕ್ಕಾಗಿ, ಬಹುಜನರ ಸುಖಕ್ಕಾಗಿ ತನ್ನ ಸ್ವಾರ್ಥ ಮತ್ತು ಸುಖಭೋಗವನ್ನು ತ್ಯಜಿಸುತ್ತಾನೋ ಆತನೇ ಮಹಾಜ್ಞಾನಿ !'

'ಯಾವಾತನು ವಿದ್ಯೆಯೊಂದಿಗೆ ಶೀಲವನ್ನೂ, ಶೀಲದೊಂದಿಗೆ ಜ್ಞಾನವನ್ನು, ಜ್ಞಾನದೊಂದಿಗೆ ಪ್ರಜ್ಞೆಯನ್ನೂ, ಪ್ರಜ್ಞೆಯೊಂದಿಗೆ ಸೂಕ್ಷ್ಮತೆಯನ್ನು, ಸೂಕ್ಷ್ಮತೆಯೊಂದಿಗೆ, ಪರಿಜ್ಞಾನವನ್ನು ಹೊಂದಿರುತ್ತಾನೋ ಆತನೇ ಮಹಾಜ್ಞಾನಿ !'

'ಯಾವಾತನು ಇಹಲೋಕದಲ್ಲಿಯೇ ಬಂಧಮುಕ್ತನಾಗುತ್ತಾನೋ ಮತ್ತು ಜ್ಞಾನದಿಂದ ವಿಮೋಚನೆ ಪಡೆದು ಆ ಜ್ಞಾನದಲ್ಲಿಯೇ ನೆಲೆ ನಿಲ್ಲುತ್ತಾನೋ ಆತನೇ ಮಹಾಜ್ಞಾನಿ !'

'ಎಲೈ ವಸ್ಸಕಾರನೇ, ವಿದ್ಯೆಯೊಂದಿಗೆ ಶೀಲವನ್ನು ಕಲಿತವನು ಇಲ್ಲಿಯೇ, ಇಹಲೋಕದಲ್ಲಿ ತನಗೇ ಉಪಾದಿ ಯಾಗಿದ್ದ ಎಲ್ಲ ವಿನಾಶಗಳನ್ನು ಅರ್ಥಮಾಡಿಕೊಂಡು ಅವುಗಳಿಂದ ಆತ ಬಂಧಮುಕ್ತನಾಗುವುದಿಲ್ಲವೇ ?'

'ಯಾವಾತನು ತನ್ನನ್ನು ಒಳ್ಳೆಯ ಉದ್ದೇಶಕ್ಕೆ ತೊಡಗಿಸಿಕೊಳ್ಳುತ್ತಾನೋ, ಆಲೋಚನೆಯ ಮೂಲಕ ಕೆಟ್ಟ ಸಂಕಲ್ಪದಿಂದ ಹೊರಬರುತ್ತಾನೋ ಆತನೇ, ಮಹಾಜ್ಞಾನಿ!'

'ಯಾವಾತನು ಇಹಲೋಕದಲ್ಲಿಯೇ ಬಂಧಮುಕ್ತನಾಗುತ್ತಾನೋ ಮತ್ತು ಜ್ಞಾನದಿಂದ ವಿಮೋಚನೆ ಪಡೆದು ಆ ಜ್ಞಾನದಲ್ಲಿಯೇ ನೆಲೆ ನಿಲ್ಲುತ್ತಾನೋ ಆತನೇ ಮಹಾಜ್ಞಾನಿ !'

'ಎಲೈ ವಸ್ಸಕಾರನೇ, ಒಬ್ಬ ಪ್ರಚಂಡ ವಿದ್ವಾಂಸನೆಂದೇ ತಿಳಿ ಆತ ತನ್ನ ಸ್ವಾರ್ಥಕ್ಕಾಗಿ, ತನ್ನ ಸ್ವಾವಲಂಬನೆಗಾಗಿ, ತನ್ನ ಸುಖಭೋಗಕ್ಕಾಗಿ ಬಹುಜನರ ಹಿತವನ್ನು, ಬಹುಜನರ ಸುಖವನ್ನು ಶೋಷಣೆ ಮಾಡುವುದಾದರೆ ಆತ ಮಹಾಜ್ಞಾನಿ ಹೇಗಾಗಲು ಸಾಧ್ಯ?'

'ಸಾಧ್ಯವಿಲ್ಲ ಗುರು ಗೌತಮರೇ'

'ಎಲೈ ವಸ್ಸಕಾರನೇ, ಅಂತವನಿಂದ ಅನೇಕರು ಉತ್ತಮ ವಿಧಾನವನ್ನು ಅನುಸರಿಸಲು ಸಾಧ್ಯವೇ? ಆತ ಮತ್ಯಾರಿಗಾದರೂ ಮಾದರಿ ಆಗಬಲ್ಲನೇ? ಮಾರ್ಗದರ್ಶಿ ಯಾಗಲಿ ಮಾರ್ಗದಾತನೇ ಆಗಲಿ ಆಗಲು ಸಾಧ್ಯವೆ?'

'ಗುರು ಗೌತಮರೇ, ಖಂಡಿತ ಸಾಧ್ಯವಿಲ್ಲ'

'ಎಲೈ ವಸ್ಸಕರರೇ, ಇಂತವನ ಸ್ವಭಾವವು ಸುಂದರವೆಂದಾಗಲಿ, ಲಾಭಕಾರವಾದದ್ದು ಎಂದಾಗಲಿ ಯಾರಾದರೂ ಬಗೆಯುವರೇ, ಆತನನ್ನು ಮಹಾಜ್ಞಾನಿ ಎಂದು ಅನುಸರಿಸುವರೇ?'

'ಗುರು ಗೌತಮರೇ, ಖಂಡಿತ ಸಾಧ್ಯವಿಲ್ಲ'

'ಎಲೈ ವಸ್ಸಕಾರನೇ, ನಾನೇಕೆ ವಿಚಾರಶೀಲತೆಯನ್ನು, ಆಲೋಚನೆಯನ್ನು ಎತ್ತಿ ಹಿಡಿಯುತ್ತೇನೆ ಎಂದರೆ ಮನುಷ್ಯನ ಆಸಕ್ತಿಗೆ ವಿಚಾರ ಸರಣಿಯೇ ಮೂಲ. ಅಂತವನು ಹೇಗೆ ಯಾವುದಾದರೂ ವಿಷಯದಲ್ಲಿ ಆಸಕ್ತಿ ತೋರುತ್ತಾನೋ ಹಾಗೆಯೇ ತನ್ನ ವಿಚಾರಕ್ಕೆ ವಿರುದ್ಧವಾದ ಆಸಕ್ತಿಯಿಂದ ಹೊರಬರುತ್ತಾನೆ. ಅನ್ವಯಿಸಿಕೊಳ್ಳುವಿಕೆ ಮತ್ತು ಅಂಟಿಕೊಳ್ಳದಿರುವಿಕೆ ಎರಡಕ್ಕೂ ವಿಚಾರಶೀಲತೆಯೇ ಮೂಲವಲ್ಲವೆ ?'

'ಗುರು ಗೌತಮರೇ, ಖಂಡಿತ ಹೌದು'

'ಎಲೈ ವಸ್ಸಕಾರನೇ, ಅದೇ ರೀತಿ ಅವನು ತನ್ನನ್ನು ಯಾವ ಉದ್ದೇಶದಲ್ಲಿ ಸಂಕಲ್ಪಿಸಿಕೊಳ್ಳುತ್ತಾನೋ ಆಗ ಅದರಲ್ಲಿ ಶ್ರದ್ಧೆ ಮತ್ತು ನಿಷ್ಠೆಯಿಂದ ತೊಡಗಿಸಿಕೊಳ್ಳುತ್ತಾನೆ. ಒಂದು ಪಕ್ಷ ತನ್ನ ಉದ್ದೇಶದ ಮೂಲದಲ್ಲಿ ಲೋಪವಿದೆ ಎಂದು ತಿಳಿದಾಗ ಆ ಸಂಕಲ್ಪದಿಂದ ತಕ್ಷಣ ಹೊರಬರುತ್ತಾನೆ. ಅಂದರೆ ಆಲೋಚನಾಪರ ವ್ಯಕ್ತಿತ್ವವುಳ್ಳವನು ತನ್ನ ಮನಸ್ಸಿನ ಒಡೆಯನಾಗುತ್ತಾನೆ ಅಲ್ಲವೆ ?'

'ಗುರು ಗೌತಮರೇ, ಖಂಡಿತ ಹೌದು'

'ಎಲೈ ವಸ್ಸಕಾರನೇ, ಅಂತವನು ಕಷ್ಟವಿಲ್ಲದೆ ತೊಂದರೆ ಇಲ್ಲದೆ ತನ್ನ ಸ್ವತಃ ಇಷ್ಟಾನುಸಾರ ಉನ್ನತ ಆಲೋಚನೆಗೆ ಸಂಬಂಧಿಸಿದ ನಾಲ್ಕೂ ಧ್ಯಾನಗಳನ್ನು ತಲುಪುತ್ತಾನೆ. ಅವು ಈ ಬದುಕಿನಲ್ಲಿ ಆನಂದಕರ ಸ್ಥಿತಿಗಳಲ್ಲವೆ ?'

'ಗುರು ಗೌತಮರೇ, ಖಂಡಿತ ಹೌದು'

'ಎಲೈ ವಸ್ಸಕಾರನೇ, ವಿದ್ಯೆಯೊಂದಿಗೆ ಶೀಲವನ್ನು ಕಲಿತವನು ಇಲ್ಲಿಯೇ, ಇಹಲೋಕದಲ್ಲಿ ತನಗೆ ಉಪಾದಿಯಾಗಿದ್ದ ಎಲ್ಲ ವಿನಾಶಗಳನ್ನು ಅರ್ಥಮಾಡಿಕೊಂಡು ಅವುಗಳಿಂದ ಆತ ಬಂಧಮುಕ್ತನಾಗುವುದಿಲ್ಲವೇ ?'

'ಗುರು ಗೌತಮರೇ, ಖಂಡಿತ ಇಲ್ಲಿಯೇ ಬಂಧಮುಕ್ತನಾಗುತ್ತಾನೆ'

'ಎಲೈ ವಸ್ಸಕಾರನೇ, ಈಗ ಹೇಳು : ಇಂತವನು ವಿದ್ಯೆಯಿಂದ, ಜ್ಞಾನದಿಂದ, ಶೀಲದಿಂದ ತನ್ನ ವಿಮೋಚನೆಯನ್ನು ತಾನೇ ಕಂಡುಕೊಳ್ಳುವನು ಅಲ್ಲವೆ ? ಅದಕ್ಕೆ ಪರಲೋಕದ ಹಂಗಾಗಲಿ, ದೇವರ ಹಂಗಾಗಲಿ, ಪುರೋಹಿತನ ಹಂಗಾಗಲಿ, ಮಕ್ತಿಯ ಹಂಗಾಗಲಿ ಅಗತ್ಯವಿದೆಯೇ ?'

'ಗುರು ಗೌತಮರೇ, ಖಂಡಿತ ಇಲ್ಲ !'

'ಎಲೈ ವಸ್ಸಕಾರನೇ, ಇಂತಹ ಶೀಲವಂತನು ಜ್ಞಾನದಲ್ಲಿಯೇ ನೆಲೆ ನಿಲ್ಲುವುದಿಲ್ಲವೆ ?'

'ಗುರು ಗೌತಮರೇ, ಖಂಡಿತ ನಿಲ್ಲುವನು'

'ಎಲೈ ವಸ್ಸಕಾರನೇ, ಈತನೇ ನಿಜಕ್ಕೂ ಮಹಾಜ್ಞಾನಿ ಅಲ್ಲವೆ? ಈತನೇ ಲೋಕದಲ್ಲಿ ದೊಡ್ಡ ಮನುಷ್ಯನಲ್ಲವೆ ?'

'ಗುರು ಗೌತಮರೇ, ಖಂಡಿತ ಹೌದು'

'ಎಲೈ ವಸ್ಸಕಾರನೇ, ಈಗ ಹೇಳು : ಇಂತವನು ತನ್ನ ಸ್ವಾರ್ಥಕ್ಕಾಗಿ, ತನ್ನ ಹಿತಕ್ಕಾಗಿ, ತನ್ನ ಸುಖಕ್ಕಾಗಿ ಮತ್ತೊಬ್ಬರ ಮುಗ್ಧತೆಯನ್ನು ಬಲಿಕೊಡುವನೇ ? ಮತ್ತೊಬ್ಬರ ದುಡಿತವನ್ನು ದುರುಪಯೋಗಪಡಿಸಿಕೊಳ್ಳುವನೇ ?'

'ಗುರು ಗೌತಮರೇ, ಖಂಡಿತ ಇಲ್ಲ....! ಅದ್ಭುತ ಗೌತಮರೇ...! ಪರಮಾಶ್ಚರ್ಯ ಗೌತಮರೇ....! ಈ ಅಮರ ಸತ್ಯವನ್ನು ಎಷ್ಟು ಸರಳವಾಗಿ, ನೇರವಾಗಿ ಮಾನ್ಯ ಮಾಡಿ ಹೇಳಿದಿರಿ ಗೌತಮರೇ, ತಾವು ಆಗಾಗ ಉಚ್ಚರಿಸುತ್ತೀರಿ : 'ನಮ್ಮ ದೃಷ್ಟಿಯಂತೆಯೇ ಸೃಷ್ಟಿ' ಎಂದು ! ಈ ಮಾತು ಅದೆಷ್ಟು ಸತ್ಯ ಎಂಬುದನ್ನು ನಿಮ್ಮ ಮಾತುಗಳು ಮತ್ತು ಬದುಕಿನಿಂದ ಅರ್ಥಮಾಡಿಕೊಂಡೆ. ಇದೇ ಈ ನಾಲ್ಕು ಗುಣಗಳನ್ನು ಮಾನ್ಯ ಗೌತಮರು ಪಡೆದಿರುವಿರೆಂದು ನಾನು ನಂಬುತ್ತೇನೆ. ಮಾನ್ಯ ಗೌತಮರು ಬಹುಜನ ಹಿತಾಯ, ಬಹುಜನ ಸುಖಾಯಕ್ಕಾಗಿ ತಮ್ಮನ್ನು ತೊಡಗಿಸಿಕೊಂಡವರೆಂದು ನಂಬುತ್ತೇನೆ. ತಮ್ಮಿಂದಾಗಿ ಬಹುಮಂದಿ ಉತ್ತಮ ವಿಧಾನ, ಸರಿದಾರಿ, ಸುಂದರ ಸ್ವಭಾವ ಮತ್ತು ಸಕಲ ಜೀವರಾಶಿಗಳಿಗೂ ಕ್ಷೇಮವನ್ನೇ ಬಯಸುವ ಮಾರ್ಗದಲ್ಲಿ ನೆಲೆಸುತ್ತಾರೆಂದು ನಂಬುತ್ತೇನೆ. ನಾನಿಂದು ಅರಿತೆ ಮಾನ್ಯ ಗೌತಮರು ತಮಗೆ ಆಸಕ್ತಿ ಇದ್ದಲ್ಲಿ ತಮ್ಮನ್ನು ಅನ್ವಯಿಸಿಕೊಳ್ಳುತ್ತಾರೆ ! ಇಲ್ಲವಾದರೆ ಅದಕ್ಕೆ ಅಂಟಿಕೊಳ್ಳುವುದಿಲ್ಲ! ಆ ಮೂಲಕ ತನ್ನ ಮನಸ್ಸಿನ ಒಡೆಯರಾಗಿದ್ದಾರೆ ಎಂಬುದು ಖಾತ್ರಿ ! ನಿಜಕ್ಕೂ ಮಾನ್ಯ ಗೌತಮರೇ, ತಮ್ಮ ಇಷ್ಟಾನುಸಾರ ತಾವು ನಾಲ್ಕು ಧ್ಯಾನ ಸ್ಥಿತಿಗಳನ್ನು ತಲುಪಿದ್ದೀರಿ. ಆಸವಗಳ ವಿನಾಶದಿಂದ ಹೃದಯದ ಬಿಡುಗಡೆ ಪಡೆದಿದ್ದೀರಿ. ಜ್ಞಾನದಿಂದ ವಿಮೋಚನೆ ಪಡೆದು ಅದರಲ್ಲಿ ನೆಲೆಸಿದ್ದೀರಿ' ಎಂದ ವಸ್ಸಕಾರ ಬುದ್ಧನನ್ನು ಉದ್ದೇಶಿಸಿ ಹೀಗೆ ನುಡಿದ :

'ಹೌದು ಗುರು ಗೌತಮರೇ, ತಾವು ಬಹುಜನ ಹಿತಾಯ, ಬಹುಜನ ಸುಖಾಯಕ್ಕಾಗಿ ನಿರತರಾದವರು....! ಪ್ರತಿ ಮನುಷ್ಯ ಬದುಕಿ ಇಲ್ಲೇ ಬಂಧಮುಕ್ತನಾಗಬೇಕಾದುದ್ದನ್ನು ಕಲಿಸುವ ಗುರುಗಳ ಗುರು ತಾವು.....!! ಎಲ್ಲ ದೃಷ್ಟಿಯಲ್ಲಿಯೂ ನಾನು ನಿಮ್ಮನ್ನು ಅನುರಸಿರುವುದೇ ಕ್ಷೇಮಕರ....!!!' □

ಸಂವಾದ

ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ- ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

-ವ್ಯವಸ್ಥಾಪಕರು

ಸಾಹಿತ್ಯ ಅಕಾದೆಮಿ
ದಕ್ಷಿಣ ಪ್ರಾದೇಶಿಕ ಕಛೇರಿ, ಸೆಂಟ್ರಲ್ ಕಾಲೇಜು ಆವರಣ,
ಡಾ|| ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು - 560 001

ಕನ್ನಡ ಪ್ರಕಟಣೆಗಳು

ಕಾದಂಬರಿಗಳು

1) **ಅಮೃತ ಮತ್ತು ವಿಷ** ರೂ. 300/-
(ಹಿಂದಿ ಮೂಲ: ಅಮೃತ್ ಲಾಲ್‌ನಾಗರ್, ಅನುವಾದ - ತಿಪ್ಪೇಸ್ವಾಮಿ)

2) **ರಾಜನಗರ** ರೂ. 185/-
(ಬಂಗಾಳಿ ಮೂಲ : ಅಮಿಯಭೂಷಣ್ ಮಜುಂದಾರ್,
ಅನುವಾದ: ಮೀರಾ ಚಕ್ರವರ್ತಿ)

3) **ಬೆಟ್ಟಕ್ಕೆ ಚೆಂಕಿ** ರೂ. 100/-
(ಇಂಗ್ಲಿಷ್ ಮೂಲ: ಅನಿತಾ ದೇಸಾಯಿ,
ಅನುವಾದ : ಎಚ್.ಆರ್. ಚಂದ್ರವದನ ರಾವ್)

4) **ಮುಕ್ತಿಬೋಧ** ರೂ. 80/-
(ಹಿಂದಿ ಮೂಲ: ಜೈನೇಂದ್ರ ಕುಮಾರ್,
ಅನುವಾದ: ಎಂ. ರಾಮಚಂದ್ರನ ರಾವ್)

5) **ಜೇರಿಗೆ ನೀರು** ರೂ. 95/-
(ತಮಿಳು ಮೂಲ: ರಾಜಂ ಕೃಷ್ಣನ್, ಅನುವಾದ: ಶೇಷನಾರಾಯಣ)

6) **ಭೀಮಾಯಣ** ರೂ. 100/-
(ಮಲಯಾಳಂ ಮೂಲ: ಎಂ.ಟಿ. ವಾಸುದೇವನ್ ನಾಯರ್,
ಅನುವಾದ: ಸಿ. ರಾಘವನ್)

7) **ನೀಲಿ ಚಂದಿರ** ರೂ. 350/-
(ಹಿಂದಿ ಮೂಲ: ಶಿವಪ್ರಸಾದ್ ಸಿಂಹ, ಅನುವಾದ: ಪಿ. ಶಶಿಕಲಾ)

ಕಥೆಗಳು

1) **ದಕ್ಷಿಣ ಕಾಮರೂಪದ ಒಂದು ಕಥಾನಕ** ರೂ. 180/-
(ಅಸ್ಸಾಮಿ ಮೂಲ: ಇಂದಿರಾ ಗೋಸ್ವಾಮಿ,
ಅನುವಾದ: ಆರ್.ಎಲ್. ಅನಂತರಾಮಯ್ಯ)

2) **ಸ್ವರ್ಣ ಕಮಲಗಳು** ರೂ. 300/-
(ತೆಲುಗು ಮೂಲ: ಇಲ್ಲಿಂದಲ ಸರಸ್ವತಿ ದೇವಿ, ಅನುವಾದ: ಪಿ. ವೇಣುಗೋಪಾಲ್)

ನಾಟಕಗಳು

1) **ಯಕೃತ್ತು** ರೂ. 50/-
(ಮರಾಠಿ ಮೂಲ: ಶ್ಯಾಮ ಮನೋಹರ, ಅನುವಾದ: ವೀಣಾ ಶಾಂತೇಶ್ವರ)

2) **ರವೀಂದ್ರನಾಥ್ ಟಾಗೋರ್ : ಎರಡು ನಾಟಕಗಳು** ರೂ. 50/-
(ಬಂಗಾಳಿ ಮೂಲ: ರವೀಂದ್ರನಾಥ್ ಟಾಗೋರ್,
ಅನುವಾದ: ಶ್ರೀನಿವಾಸ್ ವಿ. ಸುತ್ತಾವೆ)

ಕಾವ್ಯ

1) **ತೆಲುಗು ಕಾವ್ಯಮಾಲೆ** ರೂ. 125/-
(ಸಂಪಾದಕ: ದೇವುಲಪಲ್ಲಿ ರಾಮಾನುಜರಾವ್,
ಅನುವಾದ: ಗುರುಮೂರ್ತಿ ಪೆಂಡಕೂರು)

2) **ಜೀವಾನಂದರ ಕವಿತೆಗಳು** ರೂ. 70/-
(ಬಂಗಾಳಿ ಮೂಲ: ಸಮೀರ್ ರಾಯ್ ಚೌಧರಿ,
ಅನುವಾದ: ಗುರುಮೂರ್ತಿ ಪೆಂಡಕೂರು)

3) **ಅಯ್ಯಪ್ಪ ಪಣಿಕ್ಕರರ ಕೃತಿಗಳು** ರೂ. 85/-
(ಮಲಯಾಳಂ ಮೂಲ: ಅಯ್ಯಪ್ಪಪಣಿಕ್ಕರ್, ಅನುವಾದ: ಸಿ. ರಾಘವನ್)

ಭಾರತೀಯ ಸಾಹಿತ್ಯ ನಿರ್ಮಾಪಕರು

1) **ಮಹಾಕವಿ ಜಿ. ಶಂಕರ ಕುರುಪ್** ರೂ. 25/-
(ಲೇಖಕರು: ಎಂ. ಲೀಲಾವತಿ, ಅನುವಾದ: ನಾ. ದಾಮೋದರ ಶೆಟ್ಟಿ)

2) **ಆಪ್ಪರ್** ರೂ.-/-
(ಲೇಖಕರು: ಜಿ. ವನ್ಮೀಕನಾಥನ್, ಅನುವಾದ: ಎಸ್. ಬಿಳಿಗಿರಿವಾಸನ್)

3) **ಅಶ್ವಘೋಷ** ರೂ. 24/-
(ಲೇಖಕರು: ರೋಮಾ ಚೌಧುರಿ, ಅನುವಾದ: ಶ್ರೀರಾಮಭಟ್ಟರು)

4) **ಕೃಷ್ಣದೇವರಾಯ** ರೂ. 25/-
(ಲೇಖಕರು: ಅಡಪ ರಾಮಕೃಷ್ಣರಾವ್,
ಅನುವಾದ: ಪೂರ್ಣಿಮಾ ಕುಂತೂರ್)

5) **ಅಜ್ಞೇಯ** ರೂ. 25/-
(ಲೇಖಕರು: ರಮೇಶ ಚಂದ್ರ ಶಾಹ್, ಅನುವಾದ: ಬಿ.ವೈ.ಲಲಿತಾಂಬ)

ಇತರೆ

1) **ಸೌಗಂಧಿಕಾ ಪರಿಣಯ** ರೂ. 25/-
(ಲೇಖಕರು: 'ಕಲ್ಕಿ' ಗೋಪಾಲಕೃಷ್ಣನ್, ಅನುವಾದ: ಎ. ಚಂದ್ರಮ್ಮ)

2) **ಪದ ಚರಿತೆ** ರೂ. 75/-
(ಫ್ರೆಂಚ್ ಮೂಲ: ಜೀನ್ ಪಾಲ್‌ಸಾರ್ತ್‌ನ ಲೆ ಮೊ,
ಅನುವಾದ: ಕೆ.ಎಚ್. ಶ್ರೀನಿವಾಸ)

ರಿಯಾಯಿತಿ ವಿವರಣೆಗಳು	
ವ್ಯಕ್ತಿಗಳಿಗೆ	ಶೇಕಡ 10
ಗ್ರಂಥಾಲಯ ಮತ್ತು ವಿಶ್ವವಿದ್ಯಾಲಯಗಳಿಗೆ	ಶೇಕಡ 12.5

ಪುಸ್ತಕ ವಿತರಕರಿಗೆ

	ರಿಯಾಯಿತಿ
ರೂ. 500.00ರ ವರೆಗೆ	ಶೇಕಡ 25
ರೂ. 501.00 ಮೇಲ್ಪಟ್ಟು 5,000.00ರ ವರೆಗೆ	ಶೇಕಡ 33
ರೂ. 5,001.00 ಮೇಲ್ಪಟ್ಟು 15,000ರ ವರೆಗೆ	ಶೇಕಡ 38
ರೂ. 15,001.00 ಮೇಲ್ಪಟ್ಟು 25,000.00ರ ವರೆಗೆ	ಶೇಕಡ 40
ರೂ. 25,001.00 ಮೇಲ್ಪಟ್ಟು	ಶೇಕಡ 45

ಪೋಸ್ಟೇಜ್ /ಲಾರಿ, ರೈಲು, ಫ್ರೈಟೇಜ್ - ಅಕಾದೆಮಿ ಭರಿಸುತ್ತದೆ

ಹಣ ಪಾವತಿ ವಿವರಣೆಗಳು

ಒಟ್ಟು ಮೊಬಲಗಿನ ಶೇ. 50 ಮುಂಗಡ ಹಣವನ್ನು ಎಂ.ಓ. ಅಥವಾ ಡಿ.ಡಿ., ಮೂಲಕ ಪಾವತಿಸತಕ್ಕದ್ದು ಅಥವಾ ಬ್ಯಾಂಕ್ ಮೂಲಕ ಕೂಡ ತರಿಸಿಕೊಳ್ಳಬಹುದು.

ಪ್ರತಿಗಳು ಹಾಗೂ ವಿವರಕ್ಕಾಗಿ ಸಂಪರ್ಕಿಸಿ:
ಕೇಂದ್ರ ಸಾಹಿತ್ಯ ಅಕಾದೆಮಿ
ದಕ್ಷಿಣ ಪ್ರಾದೇಶಿಕ ಕಛೇರಿ , ಸೆಂಟ್ರಲ್ ಕಾಲೇಜು ಆವರಣ,
ಡಾ|| ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು - 560 001
ದೂರವಾಣಿ : 22245152